ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ (ಚಿತ್ರದುರ್ಗ) ದತ್ತಿನಿಧಿ ಪ್ರಕಟಣೆ

# ವಚನ ಚಳುವಳಿ ಕೆಲವು ಅಧ್ಯಯನಗಳು

ಡಾ. ಅಶೋಕ ನರೋಡೆ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ ಚಾಮರಾಜಪೇಟೆ
ಬೆಂಗಳೂರು-೫೬೦೦೧೮

BVP-1211- 27|2|17
1256-(6)

BVP CHECKED
DEC 2017

ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ (ಚಿತ್ರದುರ್ಗ) ದತ್ತಿನಿಧಿ ಪ್ರಕಟಣೆ

# ವಚನ ಚಳುವಳಿ
# ಕೆಲವು ಅಧ್ಯಯನಗಳು

ಡಾ. ಅಶೋಕ ನರೋಡೆ

ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

**VACHANA CHALUVALI - KELAVU ADHYANAGALU -**
(A Bounch of Nine Ariticals for Critisised, Researched, Analised) by:
Dr. Ashok Narode, Published by : Kannada Sahitya Parishat
Pampa Mahakavi Road Chamarajapet Bangalore - 560 018
Pages : 112 + vi , Price :**30-00,** 2000

ಮುದ್ರಣ : ೨೦೦೦

ಬೆಲೆ : ಮೂವತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ

ಪ್ರಕಟಣ ಸಮಿತಿ

ಅಧ್ಯಕ್ಷರು
ಎನ್. ಬಸವಾರಾಧ್ಯ

ಸಂಚಾಲಕರು
ಡಾ. ಸಿ. ವೀರಣ್ಣ

ಸದಸ್ಯರು
ಡಾ. ಕೆ.ವಿ. ಚಂದ್ರಣ್ಣಗೌಡ
ಬಿ.ಎನ್. ಸತ್ಯನಾರಾಯಣರಾವ್
ಅ.ರಾ. ಮಿತ್ರ
ಎಲ್ಲೇಗೌಡ ಬೆಸಗರಹಳ್ಳಿ
ಬಿ.ಆರ್. ಪೋಲೀಸ್ ಪಾಟೀಲ
ಶಾಂತಾದೇವಿ ಮಾಳವಾಡ
೬೮ನೆಯ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ ಚಾಮರಾಜಪೇಟೆ ಬೆಂಗಳೂರು - ೧೮

# ಮುನ್ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೫ ವರ್ಷಗಳ ದೀರ್ಘಕಾಲದ ಇತಿಹಾಸವಿರುವ ಪರಿಷತ್ತು ಅನೇಕ ರೀತಿಗಳಲ್ಲಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದೆ. ಅವುಗಳಲ್ಲಿ ಅತ್ಯುತ್ತಮ ಸಾಹಿತ್ಯ ಕೃತಿಗಳ ಪ್ರಕಟಣೆ ಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡದ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಈ ದಿಕ್ಕಿನಲ್ಲಿ ಅನೇಕ ದಾನಿಗಳು ಉತ್ತಮ ವೈಚಾರಿಕ ಕೃತಿಗಳ ಪ್ರಕಟಣೆಗಾಗಿ ಪರಿಷತ್ತಿನಲ್ಲಿ ದತ್ತಿಗಳನ್ನು ಸ್ಥಾಪಿಸಿ, ಆ ದತ್ತಿಯ ಮೂಲದಿಂದ ಬರುವ ಬಡ್ಡಿಯ ಹಣದಿಂದ ಪ್ರತಿವರ್ಷವೂ ಒಂದೊಂದು ಅತ್ಯುಪಯುಕ್ತ ಗ್ರಂಥವೊಂದನ್ನು ಪ್ರಕಟಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

ಪ್ರಸ್ತುತ ಡಾ. ಅಶೋಕ ನರೋಡೆ ಅವರು ಸಿದ್ಧಪಡಿಸಿರುವ **"ವಚನ ಚಳುವಳಿ-ಕೆಲವು ಅಧ್ಯಯನಗಳು"** ಎಂಬ ಈ ಕೃತಿಯು ವಚನ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಿಸಿದ ವಿಮರ್ಶಾತ್ಮಕ, ಸಂಶೋಧನಾತ್ಮಕ, ವಿಶ್ಲೇಷಣಾತ್ಮಕ ಲೇಖನಗಳನ್ನೊಳಗೊಂಡು ಅನೇಕ ಮೌಲಿಕ ವಿಚಾರಗಳನ್ನು ತಿಳಿಸುವಲ್ಲಿ ಯಶಸ್ವಿಯಾಗಿದೆ. ಶ್ರೀ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ, (ಚಿತ್ರದುರ್ಗ ಜಿಲ್ಲೆ) ಈ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದು ದತ್ತಿ ಸ್ಥಾಪಿತವಾಗಿದ್ದು, ಈ ದತ್ತಿನಿಧಿಯ ಬಡ್ಡಿ ಹಣದಿಂದ ಈ ಕೃತಿ ಪ್ರಕಟವಾಗಿದೆ. ದತ್ತಿಸ್ಥಾಪಕರಾದ ಶ್ರೀಮಠದ ಪೂಜ್ಯ ಸ್ವಾಮೀಜಿಯವರಿಗೆ ಪ್ರಣಾಮಗಳು. ಗ್ರಂಥವನ್ನು ಸಿದ್ಧಪಡಿಸಿದ ಲೇಖಕರಿಗೆ ಕೃತಜ್ಞತೆಗಳು. ಪ್ರಕಟಣೆಯ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಧನ್ಯವಾದಗಳು.

**ಎನ್. ಬಸವಾರಾಧ್ಯ**
ಅಧ್ಯಕ್ಷರು

# ನನ್ನ ನುಡಿ

ಈ ಗ್ರಂಥವು ವಚನಸಾಹಿತ್ಯ ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಒಂಬತ್ತು ಲೇಖನಗಳ ಸಂಕಲನವಾಗಿದೆ. ಕಳೆದ ಹದಿನೈದು ವರುಷಗಳ ಕಾಲಾವಧಿಯಲ್ಲಿ ನಾನು ಬರೆದ ಹಲವಾರು ಲೇಖನಗಳಲ್ಲಿ ಕೆಲವನ್ನು ಇಲ್ಲಿ ಆಯ್ದುಕೊಂಡಿರುವೆನು.

'ತೆಲುಗು ಜೊಮ್ಮಯ್ಯನ ರಗಳೆ: ಒಂದು ಸಾಂಸ್ಕೃತಿಕ ಅಧ್ಯಯನ' ಎಂ.ಎ. ವ್ಯಾಸಂಗ ಮಾಡುವಾಗ ಡಾ. ಬಿ.ಆರ್. ಹಿರೇಮಠರ ಮಾರ್ಗದರ್ಶನದಲ್ಲಿ 'ಸಂಶೋಧನೆ' ಪತ್ರಿಕೆಗೆ ಸಿದ್ಧಪಡಿಸಿದ ಪ್ರಬಂಧವಾಗಿದೆ. 'ವಚನ ಸಾಹಿತ್ಯಕ್ಕೆ ಬಿಜಾಪುರ ಜಿಲ್ಲೆಯ ಕೊಡುಗೆ' ಅಖಿಲ ಭಾರತ ೬೫ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ 'ರನ್ನಗನ್ನಡಿ'ಗೆ ಸಿದ್ಧಪಡಿಸಿದ ಲೇಖನದ ಪರಿಷ್ಕರಿಸಿದ ಭಾಗವಾಗಿದೆ. 'ಶಿವಶರಣರ ಕಾಯಕ'ವು ಬಸವಪಥ ಮತ್ತು ಅನುಭಾವ ಪಥದಲ್ಲಿ ಪ್ರಕಟಿತವಾದ ನನ್ನ ಲೇಖನಗಳ ಕ್ರೋಢೀಕರಣವಾಗಿದೆ.

'ಹರಿಶ್ಚಂದ್ರಕಾವ್ಯದಲ್ಲಿ ಬಂಡಾಯದ ಅಂಶಗಳು' ಲೇಖನವು ಬಿ.ಎ. ವಿದ್ಯಾರ್ಥಿಗಳಿಗೆ (ಮೂರುವರುಷ ಶಿಷ್ಟಪದ; ಮೂರುವರುಷ ಜಾನಪದ) ಪಾಠ ಮಾಡಿದ ಫಲಿತಾಂಶವಾಗಿದೆ. 'ತ್ರಿಷಷ್ಟಿ ಪುರಾತನ ಪುರಾಣ'ವು ಗದುಗಿನ ಪಂಡಿತ ಪುಟ್ಟರಾಜ ಗವಾಯಿಗಳ ಅಭಿನಂದನ ಗ್ರಂಥ ಜ್ಞಾನದೇಗುಲಕ್ಕೆ ಬರೆದ ಲೇಖನವಾಗಿದೆ. ವಚನ ಸಾಹಿತ್ಯವನ್ನು ನಿರಂತರ ಅಧ್ಯಯನಿಸಿ, ಅಧ್ಯಾಪನ ಮಾಡಿದ ಪರಿಣಾಮವಾಗಿ 'ಮಹಾಮೌಲ್ಯ ದಾಸೋಹ' ಮೂಡಿಬಂದಿದೆ.

'ಅಂಬಿಗರ ಚೌಡಯ್ಯನ ವಚನಗಳಲ್ಲಿ ಬಂಡಾಯ'ವು ನಾನು ೧೯೮೪-೮೫ರಿಂದ ೧೯೯೫-೯೬ರ ವರೆಗೆ ಜನಪರ ಚಳುವಳಿ, ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಓಡಾಡಿದ್ದರ ಪ್ರತಿಫಲವಾಗಿ ರೂಪುಗೊಂಡಿದೆ. ಬಸವಜಯಂತಿ ಆಚರಣೆಯಲ್ಲಿ ಮಂಡಿಸಿದ ಪ್ರಬಂಧ 'ವಚನ ಚಳುವಳಿ ವಚನ ರಚನೆ'. ಇದೇ ಲೇಖನವನ್ನು ಶೀರ್ಷಿಕೆಯಾಗಿ ಬಳಸಿಕೊಂಡಿರುವೆ.

ಇಲ್ಲಿಯ ಒಂಬತ್ತು ಲೇಖನಗಳಲ್ಲಿ ಎಂಟು ಲೇಖನಗಳು ಅಲ್ಲಲ್ಲಿ ಸಾಂದರ್ಭಿಕವಾಗಿ ಪ್ರಕಟವಾಗಿವೆ. ಆಯಾ ಲೇಖನಗಳ ಪ್ರಕಟನೆಗೆ ಕಾರಣೀಭೂತರಾದವರನ್ನು, ಪ್ರಕಟಿಸಿದ ಪತ್ರಿಕಾಬಳಗವನ್ನು ಸ್ಮರಿಸಿಕೊಳ್ಳುವೆನು. 'ಕೃಷಿಜ್ಞಾನ ಪ್ರದೀಪಿಕೆ'ಗೆ ಸಂಬಂಧಿಸಿದ ಲೇಖನ ಮಾತ್ರ ಇದೇ ಮೊಟ್ಟ ಮೊದಲ ಬಾರಿಗೆ ಬೆಳಕು ಕಾಣುತ್ತಿದೆ.

ಈ ಲೇಖನಗಳನ್ನು ಆಗಾಗ, ಪರಿಸ್ಥಿತಿಗನುಗುಣವಾಗಿ, ಸಾಂದರ್ಭಿಕವಾಗಿ ಬರೆದಿರುವುದರಿಂದ ಪುನರಾವರ್ತನೆಗಳು ಕಾಣಿಸಬಹುದು. ಎಲ್ಲ ವಿಚಾರಧಾರೆಗಳು ನನ್ನವು, ನಾನೇ ಪ್ರಥಮಬಾರಿಗೆ ಹೇಳುತ್ತಿರುವೆನೆಂಬ ಭ್ರಮೆ ನನಗಿಲ್ಲ. ನಾನು ಕೇಳಿದ, ಓದಿದ, ನನಗೆ ಹೊಸದಾಗಿ ಹೊಳೆದಿರುವ ವಿಚಾರಗಳು ಇಲ್ಲಿ ಮಡುಗಟ್ಟಿವೆ. ಅಲ್ಲಲ್ಲಿ ಚೆಲ್ಲುವರಿದು ಹೋದ ವಿಚಾರಗಳನ್ನು ಒಂದೆಡೆ ಸಂಕಲಿಸಿದ ಸಮಾಧಾನ ನನಗಿದೆ. ಕೆಲವಾದರೂ ಹೊಸ ವಿಚಾರಗಳಿಲ್ಲಿ ಗೋಚರಿಸಿದರೆ ನನ್ನ ಶ್ರಮ ಸಾರ್ಥಕ ವೆನಿಸುತ್ತದೆ.

ಈ ಕೃತಿಯನ್ನು ಪ್ರಕಟಿಸಿದ ಕನ್ನಡ ಸಾಹಿತ್ಯ ಪರಿಷತ್ತಿಗೆ ಎಷ್ಟು ಕೃತಜ್ಞತೆ ಹೇಳಿದರೂ ಕಡಿಮೆಯೆ. ಪರಿಷತ್ತಿನ ಪದಾಧಿಕಾರಿಗಳನ್ನು ಈಸಂದರ್ಭದಲ್ಲಿ ತುಂಬು ಹೃದಯದಿಂದ ನೆನೆಯುವೆನು.

**ಡಾ. ಅಶೋಕ ನರೋಡೆ**

# ಪರಿವಿಡಿ


| | | | |
|---|---|---|---|
| ೧. | ವಚನ ಚಳುವಳಿ - ವಚನದ ರಚನೆ | ..... | ೧ |
| ೨. | ವಚನ ಸಾಹಿತ್ಯಕ್ಕೆ ವಿಜಾಪುರ ಜಿಲ್ಲೆಯ ಕೊಡುಗೆ | ..... | ೯ |
| ೩. | ಶರಣರ ಕಾಯಕ | ..... | ೨೬ |
| ೪. | ಅಂಬಿಗರ ಚೌಡಯ್ಯನ ವಚನಗಳಲ್ಲಿ ಬಂಡಾಯ | ..... | ೪೯ |
| ೫. | ಮಹಾಮೌಲ್ಯ ದಾಸೋಹ | ..... | ೬೨ |
| ೬. | ತೆಲಗು ಜೊಮ್ಮಯ್ಯನ ರಗಳೆ<br>- ಒಂದು ಸಾಂಸ್ಕೃತಿಕ ಅಧ್ಯಯನ | ..... | ೭೫ |
| ೭. | ಹರಿಶ್ಚಂದ್ರಕಾವ್ಯದಲ್ಲಿ ಬಂಡಾಯದ ಅಂಶಗಳು | ..... | ೮೬ |
| ೮. | ಕೃಷಿಜ್ಞಾನ ಪ್ರದೀಪಿಕೆ - ಒಂದು ಅವಲೋಕನ | ..... | ೯೭ |
| ೯. | ತ್ರಿಷಷ್ಟಿ ಪುರಾತನರ ಪುರಾಣ - ಸಮೀಕ್ಷೆ | ..... | ೧೦೫ |

# ವಚನ ಚಳುವಳಿ ವಚನದ ರಚನೆ

**ಪ್ರವೇಶ:**

'ವಚನಸಾಹಿತ್ಯ'ವು ಕನ್ನಡ ಸಾಹಿತ್ಯವೇ ಅಭಿಮಾನಪಡುವ ಅಪೂರ್ವವಾದ ನಿಧಿಯಾಗಿದೆ. ವಿಶ್ವಸಾಹಿತ್ಯಕ್ಕೆ ಕನ್ನಡ ಸಾಹಿತ್ಯವು ನೀಡಿರುವ ಮಹೋನ್ನತವಾದ ಕೊಡುಗೆಯೆಂದರೆ ವಚನಸಾಹಿತ್ಯವೆಂದು ಅಭಿಮಾನದಿಂದ ಹೇಳಬಹುದಾಗಿದೆ. ದೇವರ ದಾಸಿಮಯ್ಯ ಜೇಡರ ದಾಸಿಮ್ಮರಿಂದ ಆರಂಭವಾದ ವಚನಸಾಹಿತ್ಯವು ಬಸವೇಶ್ವರ ಅಲ್ಲಮಪ್ರಭುದೇವ, ಚನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ, ಮುಕ್ತಾಯಕ್ಕ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ ಮೊದಲಾದ ಹಲವಾರು ಶಿವಶರಣರಿಂದ ಸಮೃದ್ಧಿಯಾಗಿ ಬೆಳೆಯಿತು. ಅದೇ ಕಾಲದಲ್ಲಿ ತನ್ನ ಸಾಧನೆಯ ಉತ್ತುಂಗ ಶಿಖರವನ್ನು ತಲುಪಿತು.

**ವಚನಚಳುವಳಿ:**

ಹನ್ನೆರಡನೆಯ ಶತಮಾನದಲ್ಲಿ ವಚನಕಾರರ ಚಳುವಳಿಯು ಸಮಸ್ತ ಸಮಾಜದ ಆಗು-ಹೋಗುಗಳನ್ನು ಆಮೂಲಾಗ್ರವಾಗಿ ಬದಲಾಯಿಸಿತು. ಮಡುಗಟ್ಟಿ ನಿಂತ ನೀರಾಗಿದ್ದ ಸಮಾಜದ ವ್ಯವಸ್ಥೆಯು ಸ್ವಚ್ಛಂದವಾಗಿ ಪ್ರವಹಿಸುವ ಮಹಾಪ್ರವಾಹದಂತಾಯಿತು.

ಸಾಮಾಜಿಕವಾಗಿ ರಾಜಕೀಯವಾಗಿ ಧಾರ್ಮಿಕವಾಗಿ ಆರ್ಥಿಕವಾಗಿ ಸಾಹಿತ್ಯಿಕ ವಾಗಿ ಸಾಂಸ್ಕೃತಿಕವಾಗಿ ಮುಂತಾದ ಎಲ್ಲ ನಿಟ್ಟುಗಳಲ್ಲಿಯೂ ಅಂದಿನ ಜನಾಂಗದ ಜೀವನ ವಿಧಾನವನ್ನೇ ಗಾಢವಾಗಿ ಅಲ್ಲಾಡಿಸಿ, ಹೊಸದೊಂದು ಸುವ್ಯವಸ್ಥಿತವಾದ ವ್ಯವಸ್ಥೆಗೆ ಹುಟ್ಟು ಹಾಕಿತು. ಕುಂಭಕರ್ಣನ ನಿದ್ರೆಯಲ್ಲಿದ್ದ ಆ ಸಮಾಜವು ತನ್ನ ನಿದ್ರೆಯನ್ನು ಕೊಡವಿಕೊಂಡದ್ದು, ಚೈತನ್ಯಶೀಲತೆಯನ್ನು ಮೈಗೂಡಿಸಿಕೊಂಡಿತು. ಪಾದರಸದ ಸ್ಪರ್ಶವನ್ನು ಪಡೆದುಕೊಂಡು, ಕುಣಿ-ಕುಣಿದು ಕುಪ್ಪಳಿಸುವ ಕಾರಂಜಿಯಾಯಿತು. ಜನರಲ್ಲಿ ಮನೆಮಾಡಿಕೊಂಡಿರುವ ಅಜ್ಞಾನ, ಅಂಧಕಾರ-ಅಂಧಾನುಕರಣೆಗಳನ್ನು ಹೋಗಲಾಡಿಸಲು ಪ್ರಯತ್ನಿಸಿ; ವೈಚಾರಿಕ, ಪ್ರಗತಿಪರ ದೃಷ್ಟಿಕೋನಗಳನ್ನು ಬಿತ್ತಲೆತ್ನಿಸಿತು. ಮೊಟ್ಟಮೊದಲ ಬಾರಿಗೆ ಜಾತಿ-ಮತ,ಕಾಲ-ಪಂಥ, ಪಕ್ಷ-ಪಂಗಡ, ಆಸ್ತಿ-ಅಂತಸ್ತು, ಮೇಲು-ಕೀಳು, ಬಡತನ-ಸಿರಿತನ,ದೇಶ-ಭಾಷೆ- ಪ್ರದೇಶ-ವಯಸ್ಸು, ವರ್ಗ-ವರ್ಣ, ಆಳು-ಅರಸು, ಅಧಿಕಾರ ಮುಂತಾದ ಏರು-ಪೇರುಗಳನ್ನು, ಪರಂಪರಾಗತವಾಗಿ ಬೇಡು- ಬಿಟ್ಟಿರುವ ಅನೇಕ ವೈಷಮ್ಯಗಳನ್ನು ಸಮಾಜದಿಂದ ಕಿತ್ತುಹಾಕಲು ಸಮಾರೋಪಾದಿಯಲ್ಲಿ ಜನರು ಒಂದಗೂಡಿದರು. ಅನ್ಯಾಯ, ಅಕ್ರಮ, ಶೋಷಣೆ-ದಬ್ಬಾಳಿಕೆ, ದೌರ್ಜನ್ಯಗಳನ್ನು ಉಗ್ರವಾಗಿ ಖಂಡಿಸಿದರು. ಉಸಿರುಗಟ್ಟಿಸುವ ಸಮಾಜದಲ್ಲಿ ಸ್ತ್ರೀಯರಿಗೆ ಸರ್ವರೀತಿಯ ಸ್ವಾತಂತ್ರ್ಯ ಲಭಿಸಿತು. ಪುರುಷರಷ್ಟೇ ಸರಿಸಮವಾದ ಸ್ಥಾನ-ಮಾನಗಳು ಅವಳಿಗೂ

ದೊರಕಿತು. ಸಾಹಿತ್ಯ ಲೋಕದಲ್ಲಿ ಧುಮುಕಿದ ಮಹಿಳೆಯರು ಎಲ್ಲರನ್ನೂ ತಲೆದೂಗಿಸುವ ರೀತಿಯಲ್ಲಿ,ಸಂಪ್ರದಾಯಿಗಳು ಬೆಚ್ಚಿಬೀಳುವಂತೆ- ಸಾಹಿತ್ಯ ರಚನೆ ಮಾಡಿದರು. "ದಲಿತರು ಶೋಷಿತರು ಕೆಳವರ್ಗದವರು ಮೊದಲ ಬಾರಿಗೆ ಸಾಹಿತ್ಯದ ಮುಖಾಂತರ ಮಾತನಾಡಿದ್ದು ಇದೇ ಸಂದರ್ಭದಲ್ಲಿ, ಅರಮನೆಗಳಿಂದ ಹೊರಬಂದು, ರಾಜಾಶ್ರಯದಿಂದ ದೂರ ನಿಂತು, ಪಂಡಿತರ ಕಪಿಮುಷ್ಟಿಯಿಂದ ಪಾರಾಗಿ ಬಂದ ಕನ್ನಡ ಸಾಹಿತ್ಯ ಸಹಜವಾಗಿ ಉಸರಾಡಿಸಿದ್ದು ನೆಲದ ಮಾತಿನಲ್ಲಿ ನಳನಳಿಸಿದ್ದು ವಚನಕಾರರಲ್ಲಿ ಮಾತ್ರ[೧] ಎಂಬ ಮಾತನ್ನಿಲ್ಲಿ ಗಮನಿಸಬಹುದಾಗಿದೆ.

ವಚನಕಾರರು ಮಾರ್ಗ ಸಂಪ್ರದಾಯವನ್ನು ಬಿಟ್ಟುಕೊಟ್ಟು, ಸಮಕಾಲೀನ ಸಮಾಜದಲ್ಲಿಯ ಜನರ ಆಡುವ ಭಾಷೆಯಲ್ಲಿಯೇ ತಮ್ಮ ವಚನಗಳನ್ನು ರಚಿಸಿದ್ದು ಬಹು ದೊಡ್ಡ ಸಾಧನೆಯಾಗಿದೆ. ಏಕೆಂದರೆ ಸಂಸ್ಕೃತ ಭೂಯಿಷ್ಠವಾದ, ಸಿದ್ಧ-ಶೈಲಿಯು ಆಸ್ಥಾನದ ಕವಿ- ಕೋವಿದರನ್ನು ಹಾಗೂ ಪಂಡಿತ ಮಂಡಲಿಯನ್ನು ಮೆಚ್ಚಿಸಬಹುದಾಗಿತ್ತೇ ಹೊರತು, ಜನಸಾಮಾನ್ಯರಿಗೆ ಅರ್ಥವಾಗುವಂತಿರಲಿಲ್ಲ. ಶಿವಶರಣರು 'ಸಂವಹನ'ದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ್ದು ಆಡುಭಾಷೆಯನ್ನೇ ತಮ್ಮ ವಿಚಾರವಾಹಿನಿಗೆ ವಾಹಕವನ್ನಾಗಿ ಬಳಸಿಕೊಂಡಿದ್ದು ಅವರ ಯಶಸ್ಸಿಗೆ ಮುಖ್ಯ ಕಾರಣವಾಯ್ತು. ಸಾಮಾನ್ಯ ಜನರಿಗೆ ವಿಚಾರ ಸರಣಿ ತಲುಪದೇ ಹೋದಾಗ, ಅವರು ಜಾಗೃತರಾಗುವುದಾದರೂ ಹೇಗೆ? ವಿಚಾರಗಳು ಎಷ್ಟೋ ಉದಾತ್ತವಾಗಿರಲಿ,ಉದ್ದೇಶ ಎಷ್ಟೇ ಮಹೋನ್ನತ ವಾಗಿರಲಿ,ಅದು ಜನರಿಗೆ ತಿಳಿಯದೇ ಹೋದಾಗ ಅದು ನಿರೂಪಯುಕ್ತವೇ ಅಲ್ಲವೆ? ಈ ಅಂಶಗಳನ್ನು ಜಿಜ್ಞಾಸೆಗೊಳಪಡಿಸಿದ ವಚನಕಾರರು ತಮ್ಮ ಚಳುವಳಿಗೆ ಪೂರಕವಾಗಿ ಸಾಹಿತ್ಯ ಸೃಷ್ಟಿಸುವ ಸಮಯದಲ್ಲಿ ಬಿಚ್ಚು ಮನಸ್ಸಿನಂದ ಅಚ್ಚಗನ್ನಡವನ್ನೇ ಆಯ್ದುಕೊಂಡರು. ಈ ಅಂಶವು ವಚನಕಾರರ ಜನಪದ ಧೋರಣೆಗೆ ಶ್ರೇಷ್ಠ ನಿದರ್ಶನವಾಗಿದೆ. ಸಮಾಜದ ಸಮಸ್ತ ಜನರ ಏಳ್ಗೆಯೇ ವಚನಕಾರರ ಉದ್ದೇಶವಾಗಿತ್ತು. ಈ 'ಜನಪರ ಚಳುವಳಿಗೆ ಪೂರಕವಾಗಿ ಮೊಟ್ಟ ಮೊದಲು ವಚನ ಸಾಹಿತ್ಯ ಸೃಷ್ಟಿಯಾಯಿತು[೨] ಎಂಬುದು ಗಮನಾರ್ಹ ಸಂಗತಿಯಾಗಿದ್ದೆ.

ವಚನಕಾರರ ವೈಚಾರಿಕ ನಿಲವಿನಿಂದಾಗಿ ಭಾಷೆ, ಛಂದಸ್ಸು, ಪ್ರಾಸ, ರೀತಿ, ರಸ, ಅಲಂಕಾರ, ಶೈಲಿ, ಅಭಿವ್ಯಕ್ತಿ ಕ್ರಮ ಇತ್ಯಾದಿಗಳು ಹೊಸ ರೂಪನ್ನು ಪಡೆದವು. ನವ-ನವೀನವಾದ ಪ್ರಯೋಗಳಾದುವು. "ಸಂಸ್ಕೃತದ ಹಿರಿಮೆ, ಸಡಿಲಿಸಿ ಕನ್ನಡದ ಹೆಚ್ಚಳ ಬೆಳೆದುದು ಈ ವಚನ ಸಾಹಿತ್ಯದಿಂದ ಪದ್ಯದ ವ್ಯಾಮೋಹ ಸರಿದು, ಗದ್ಯಕ್ಕೆ ಪುರಸ್ಕಾರ ದೊರೆತುದು ಈ ವಚನದಿಂದ ಬಹಳ ಕಾಲದಿಂದಲೂ ಪಂಡಿತರ ತುತ್ತಾಗಿದ್ದ, ವಿಶೇಷ ವರ್ಗದ ಸೊತ್ತಾಗಿದ್ದ, ರಾಜಲಕ್ಷ್ಮಿಯ ತೊತ್ತಾಗಿದ್ದ ಸರಸ್ವತಿಯು ಸಂಸ್ಕೃತ ಭಂಡಾರವನ್ನು

---

೧. ಡಾ|| ಬಸವರಾಜ ಸಬರದ 'ಸಾಹಿತ್ಯ ವಿಮರ್ಶೆ' (೧೯೮೬) ಪುಟ: ೧೧೩
೨. ಎಚ್. ದುಂಡಪ್ಪ 'ಅನ್ವೇಷಣೆ' ಸಂ: ೭; ಸಂ: ೪೨ ಪುಟ ೩೬.

ಕಡೆಗಣಿಸಿ, ತಮ್ಮ ಅನುಭವದ ಕಮ್ಮಟದಲ್ಲಿಯೇ ಅಚ್ಚೊತ್ತಿದ ವಚನ ನಾಣ್ಯಗಳನ್ನು ಜನಸಾಮಾನ್ಯರಲ್ಲಿ ಸಲ್ಲುವಂತೆ ಹರಡಿಸಿದವರು ವಚನಕಾರರು"[೩] ಎನ್ನುವ ಹಿರಿಯರ ಅಭಿಪ್ರಾಯವು ಸಮಯೋಚಿತವಾಗಿದೆ.

ಆಡುನುಡಿಯನ್ನು ವಚನಗಳಿಗೆ ಬಳಸಿಕೊಂಡಿರುವುದರಿಂದ ಮತ್ತು ಅಭಿವ್ಯಕ್ತಿಯು ಸಹಜ ಸರಳವಾದುದರಿಂದ ದುಡಿಯುವ ಜನಾಂಗ ಮಧ್ಯಮ ವರ್ಗ ಹಾಗೂ ಸಾಮಾನ್ಯ ಸ್ತರಗಳಿಂದ ಬಂದಿರುವ ದಾಸಿಮಯ್ಯ, ಕಕ್ಕಯ್ಯ, ಹರಳಯ್ಯ, ಮಾರಯ್ಯ, ಚೌಡಯ್ಯ, ಮಾಚಯ್ಯ, ಬೊಮ್ಮಯ್ಯ, ದಾಸಿಮಯ್ಯ, ಚಂದಯ್ಯ ಮೊದಲಾದ ಪುರುಷರು ಇವರ ಜೊತೆ ಜೊತೆಗೆ ಕಾಳವ್ವೆ, ರೆಮ್ಮವ್ವೆ, ಸಂಕವ್ವೆ ಗೊಗ್ಗವ್ವೆ, ಸೋಮವ್ವೆ, ರಾಯಮ್ಮ ಅಕ್ಕಮ್ಮ ಲಕ್ಕಮ್ಮ ಮುಂತಾದ ಸ್ತ್ರೀಯರು ತಮ್ಮ ಜೀವನಾನುಭವವನ್ನು ವಚನಗಳಲ್ಲಿ ದಾಖಲುಗೊಳಿಸಿದರು. ತಮ್ಮ ವಿಚಾರ, ಸರಿದೋರಿದ ತತ್ವಗಳನ್ನು ಸ್ವಾನುಭವವಾದ ಮೂಸೆಯಲ್ಲಿ ಅದ್ದಿ ತೆಗೆದು ನಿರ್ಭಿತಿಯಿಂದ ಪ್ರತಿಪಾದಿಸಿದರು. " ದೇವವಾಣಿಯು, ಜನವಾಣಿಯಾಗುವುದು ಅಸಾಧ್ಯವಾದಾಗ, ಜನವಾಣಿಯನ್ನು ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರದು"[೪] ಎಂಬ ಬಸವನಾಳರ ಮಾತು ಅಕ್ಷರಶಃ ಸತ್ಯವಾಗಿದೆ.

ವಚನಕಾರರು ಸಾಹಿತ್ಯ ರಚನೆಯನ್ನೇ ಪ್ರಮುಖ ಉದ್ದೇಶವಾಗಿಟ್ಟು ಕೊಂಡವರಲ್ಲವೆಂಬುದನ್ನು ಮರೆಯಲಾಗದ ಸಂಗತಿಯಾಗಿದೆ. ಶ್ರೇಷ್ಠ ಸಾಹಿತ್ಯ ಸೃಷ್ಟಿಸುವ ಹಂಬಲ ಅವರಿಗಿರಲಿಲ್ಲ. ತಮ್ಮ ಧರ್ಮ ತತ್ವಗಳ ಪ್ರಚಾರವೇ ಅವರ ಪ್ರಮುಖ ಧ್ಯೇಯವಾಗಿತ್ತು. ಆದಾಗ್ಯೂ ಕೇವಲ ಸ್ವಧರ್ಮದ ಪ್ರತಿಪಾದನೆಯೇ ಇದರಲ್ಲಿ ಸಾದ್ಯಂತವಾಗಿ ಸ್ಥಾನಗಿಟ್ಟಿಸಿ ಕೊಂಡಿಲ್ಲ. 'ಸಕಲರಿಗೆ ಲೇಸನ್ನೇ ಬಯಸಿದ' ವಚನಸಾಹಿತ್ಯದಲ್ಲಿ, ಶ್ರೇಷ್ಠ ಸಾಹಿತ್ಯದ ಉತ್ಕೃಷ್ಟ ಅಂಶಗಳೆಲ್ಲವೂ ತುಂಬಿ ತುಳುಕಾಡುತ್ತಿರುವುದು ಅಪೂರ್ವವಾಗಿದೆ. "ವಚನ ಸಾಹಿತ್ಯವೂ ಹೌದು, ಶಾಸ್ತ್ರವೂ ಹೌದು, ಅನುಭವವೂ ಹೌದು, ಅನುಭಾವವೂ ಹೌದು. ಮುಖ್ಯವಾಗಿ ವಚನ ಸಾಹಿತ್ಯ ಮೇಲ್ತರಗತಿಯ ಸಾಹಿತ್ಯ"[೫] ವಾಗಿದೆ ಎಂದಿರುವ ಡಾ|| ರಂ. ಶ್ರೀ. ಮುಗಳಿಯವರು ಮಾತುಗಳು ಮೌಲೀಕವಾಗಿವೆ. "ವಚನ ಸಾಹಿತ್ಯದಲ್ಲಿ ಕಾಳಜಿ ಮತ್ತು ಕಲೆ ಎರಡೂ ಶಕ್ತಿಯುತವಾಗಿ ಮೇಳೈಸಿ ಉತ್ಕೃಷ್ಟ ಸಾಹಿತ್ಯವಾಗಿದೆಯೆಂಬುದನ್ನು ಈಗಾಗಲೇ ಅನೇಕ ವಿಮರ್ಶಕರು ತಮ್ಮ ಅಧ್ಯಯನಗಳಲ್ಲಿ ಸಾಬೀತು ಪಡಿಸಿದ್ದಾರೆ.[೬]

---

೩. ಪ್ರೊ. ಶಿ. ಶಿ. ಬಸವನಾಳ "ಬಸವೇಶ್ವರರ ಷಟ್‌ಸ್ಥಲದ ವಚನಗಳು" ಪ್ರಸ್ತಾವನೆ-೧

೪. ಅದೇ, ಪ್ರಸ್ತಾವನೆ-೨

೫. ಕನ್ನಡ ಸಾಹಿತ್ಯ ಚರಿತ್ರೆ (೭ನೆಯ ಮುದ್ರಣ೧೯೮೪) ಪುಟ:೧೭೬

೬. ಎಚ್. ದುಂಡಪ್ಪ, 'ಅನ್ವೇಷಣೆ' ಸಂ-೨; ಸಂ-೪೨; ಪುಟ:೩೬

**ವಚನ:**

'ವಚನ' ಎನ್ನುವ ಪದಕ್ಕೆ ವಿಶಿಷ್ಠವಾದ ಮತ್ತು ವಿಶಾಲವಾದ ಅರ್ಥವಿದೆ ಮಾತು, ನುಡಿ, ಪ್ರಮಾಣ, ಪ್ರತಿಜ್ಞೆ, ಹಾಗೂ ಪ್ರಾಮೀಜ್ (promise) ಇತ್ಯಾದಿ ಅರ್ಥದ ಪದರುಗಳಿವೆ. ಮಾತು ಕೊಡವುದು, ಪ್ರಮಾಣ ಮಾಡುವುದು, ಆಣೆಯಿಡುವುದು, ಶಪಥಗೈವುದು, ಪ್ರತಿಜ್ಞೆಗೈವುದು, ಭಾಷೆ ಕೊಡುವುದು, ಮುಂತಾದ ವಿವಿಧ ಅರ್ಥದ ಪರಂಪರೆಯೂ 'ವಚನ' ಪದಕ್ಕಿರುವುದುಂಟು ಹಾಗೆಯೇ ಪ್ರಾಮಾಣಿಕವಾದದ್ದು, ನಿಷ್ಠೆಯಿಂದ ಕೂಡಿದ್ದು,ನಡೆ-ನುಡಿ ಒಂದಾದದ್ದು ಮೊದಲಾದ ಪೂರಕವಾದ ಅರ್ಥಗಳೂ ಇದಕ್ಕಿವೆ. ಖ್ಯಾತ ಸಂಶೋಧಕರಾದ ಡಾ|| ಎಂ.ಎಂ. ಕಲಬುರ್ಗಿಯವರು- "ವಚನ ಶಬ್ದಕ್ಕೆ ಇಲ್ಲಿ ಗದ್ಯ ಸಾಹಿತ್ಯ ಪ್ರಕಾರವೆಂದು ಅರ್ಥವಲ್ಲ; ಪ್ರತಿಜ್ಞೆ, ಆತ್ಮಸಾಕ್ಷಿಯ ಮಾತು ಎಂದು ಅರ್ಥ, ನಡೆ ಹೇಗೆ ಇರಲಿ, ನುಡಿ ಮಾತ್ರ ಕಲಾತ್ಮಕವಾಗಿದ್ದುದು 'ರಚನೆ'ಯಾದರೆ ನಡೆದಂತೆ ನುಡಿದ ಆತ್ಮಸಾಕ್ಷಿಯ ವಾಣಿ 'ವಚನ'; ವೆನಿಸಿಕೊಳ್ಳುತ್ತದೆ"[೭] ಎಂದು 'ವಚನ'ಕ್ಕೆ ಹೊಸ ಭಾಷ್ಯವನ್ನೇ ಬರೆದಿದ್ದಾರೆ.

**ವಚನದ ರಚನೆ:**

ವಚನದ ರಚನೆಯ ಕುರಿತಾಗಿ ವ್ಯಾಪಕವಾದ ಚಿಂತನ-ಮಂಥನ ನಡೆದಿರುವುದನ್ನು ಗುರುತಿಸಬಹುದಾಗಿದೆ. ಹನ್ನೆರಡನೆಯ ಶತಮಾನದಲ್ಲಿಯೇ ಶಿವಶರಣರು ವಚನ ರಚನೆಯ ಬಗೆಗೆ ಸಂದರ್ಭೋಚಿತವಾಗಿ ವಿವೇಚನೆ-ವಿಶ್ಲೇಷಣೆ ಮಾಡಿರುವುದು ಕಂಡು ಬರುತ್ತದೆ.

**ಮಹಾದೇವಿಯಕ್ಕ:**

"ವಚನಕ್ಕೆ ಶೃಂಗಾರ ಸತ್ಯವ ನುಡಿವುದು"[೮]

**ಪ್ರಭುದೇವ:**

"ವಚನ ರಚನೆಯೆಂಬುದು ಮಾತಿನ ಬಣ್ಣದ ಪರಿಯಲ್ಲ ನೋಡಾ"[೯]
ಎಂದು ಒಂದೆಡೆ ಹೇಳಿ, ಮತ್ತೊಂದೆಡೆಗೆ ಹೀಗೆ ಹೇಳಿದ್ದಾನೆ:
"ಅಱಿವಿಡಿದು ವಚನವಿದೆ, ವಚನವಿಡಿದು ತೋಱುವಲ್ಲಿ ಅಱಿವಿದೆ"[೧೦]

**ಸಿದ್ಧರಾಮ:**

"ವಚನ ರಚನೆಯೆಂಬುದು ಕರ್ನಾಟವಯ್ಯಾ"[೧೧]

---

೭. ಸಮಗ್ರ ವಚನ ಸಂಪುಟ-೧ 'ಸಂಪಾದಕೀಯ' ದಲ್ಲಿ.
೮. ಮಹಾದೇವಿಯಕ್ಕನ ವಚನಗಳು ಸಂ: ಡಾ|| ಆರ್. ಸಿ. ಹಿರೇಮಠ ವ-೧೮೧; ಪುಟ: ೭೧
೯. ಅಲ್ಲಮ್ಮ ವಚನ ಚಂದ್ರಿಕೆ ಸಂ: ಡಾ||ಎಲ್. ಬಸವರಾಜು. ವಚನ-೯೭೯, ಪುಟ: ೧೬೦,
೧೦. ಅದೇ, ವಚನ-೧೦೪೧, ಪುಟ: ೧೭೩
೧೧. ಸಿದ್ಧರಾಮನ ಉಪಮೆಗಳು "ಉಪನ್ಯಾಸ ಸಂಚಯ" ಪುಟ: ೪೮

ಈ ಮೇಲಿನ ಮಾತುಗಳನ್ನು ಗಮನಿಸಿದಾಗ ವಚನದ ರಚನೆ ವಿಶಿಷ್ಟವಾಗಿದೆ. ಅಷ್ಟೇ ಅಲ್ಲ. ಉಳಿದವುಗಳಿಗಿಂತ ಭಿನ್ನವಾಗಿರುವುದು ವೇದ್ಯವಾಗುತ್ತದೆ. ವಚನ ರಚನೆಯ ಕುರಿತಾಗಿ ಹನ್ನೆರಡನೆಯ ಶತಮಾನದಲ್ಲಿಯೇ ಜಿಜ್ಞಾಸೆ ನಡೆದಿತ್ತೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಜನಸಾಮಾನ್ಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಆಡು ನುಡಿಯ ಸೊಗಡನ್ನು ಸಮರ್ಪಕವಾಗಿ ಮತ್ತು ಸಮರ್ಥವಾಗಿ ಬಳಸಿಕೊಂಡ ವಚನಕಾರರು, ಮಾರ್ಗ ಸಾಹಿತ್ಯದ ಮತ್ತು ಮಹಾಕಾವ್ಯದ ಲಕ್ಷಣಗಳಾದ ಅಷ್ಟಾದಶ ವರ್ಣನೆಗಳು, ನವರಸಗಳು, ಮೂವತ್ತೆರಡು ಅಲಂಕಾರಗಳು, ಚಮತ್ಕೃತಿಗಳು ಪ್ರಾಸ, ರೀತಿ, ಬಂಧ, ಛಂದ, ಶೈಲಿ ಮುಂತಾದುವುಗಳನ್ನು ಸಾರಾ ಸಗಟಾಗಿ ನಿರಾಕರಿಸಿದರು. ಈ ಅಂಶವನ್ನು ಶ್ರೀ ಸಿದ್ಧರಾಮ ಶಿವಯೋಗಿಯು ತನ್ನ ವಚನವೊಂದರಲ್ಲಿ ಹೀಗೆ ಪ್ರತಿಪಾದಿಸಿದ್ದಾನೆ. ನೋಡಿರಿ;

**"ವಚನ ರಚನೆಯ ಬಿಟ್ಟು**
**ಕುತ್ಸಿತ ಕಾವ್ಯಾಲಂಕಾರ ನೋಡುವವರ ನೋಡಿ**
**ಹುಡಿಮಣ್ಣ ಹೊಯ್ಯದೆ ಮಾಣ್ಬನೆ**
**ಮಹಾದೇವ ಕಪಿಲಸಿದ್ಧಮಲ್ಲಿಕಾರ್ಜುನ"**[೧೨]

ಮತ್ತೆ ಕೆಲ ವಚನಗಳಲ್ಲಿ ಸಿದ್ಧರಾಮರು- ತಮ್ಮ ಪ್ರತಿಭೆ-ಪಾಂಡಿತ್ಯದ ಪ್ರದರ್ಶನಕ್ಕೋಸ್ಕರವಾಗಿ ಸಾಹಿತ್ಯವನ್ನು ಬಳಸಿಕೊಳ್ಳುವ ಜನರನ್ನು ತಮ್ಮ ಆಶ್ರಯದಾತರನ್ನು ಹಾಡಿ-ಹೊಗಳಿದ ಭಟ್ಟಂಗಿಗಳನ್ನು, ಶಾಸ್ತ್ರವನ್ನು ವಿಧಿವತ್ತಾಗಿ ಹೇರ ಹೊರಟಿರುವ ವೈಯ್ಯಾಕರಣಿಗಳನ್ನು ಕಟುವಾಗಿ ಟೀಕಿಸಿದ್ದಾನೆ. ಅಂಥವರ ನಿಲುವನ್ನು ಅಲ್ಲಗೆಳೆಯುವುದಲ್ಲದೆ; "ವಚಿಸಿ ಅನುಭಾವಿಯಾದವ ಪಿಶಾಚಿಯಯ್ಯಾ" ಎಂದು ನಿಂದಿಸಿದ್ದಾನೆ.

**ಮುಂದುವರೆದು ಮತ್ತೊಂದೆಡೆಯಲ್ಲಿ ಹೇಳಿದ್ದು ಹೀಗೆ:**
**"ಶಾಸ್ತ್ರವೆಂಬುದು ಮನ್ಮಥ ಶಸ್ತ್ರವಯ್ಯಾ**
**ವೇದಾಂತವೆಂಬುದು ಮೂಲ ಮನೋವ್ಯಾಧಿಯಯ್ಯಾ**
**ಪುರಾಣವೆಂಬುದು ಮೃತರ ಗಿರಾಣವಯ್ಯಾ**
**ಇತಿಹಾಸ ಎಂಬುದು ರಾಜರ ಕಥಾ ಭಾಗವಯ್ಯ**
**ಆಥ್ಯರ ವಚನವೆಂಬುದು ಬಹು ವೇದ್ಯವಯ್ಯಾ**
**ಕಪಿಲಸಿದ್ಧ ಮಲ್ಲಿಕಾರ್ಜುನಾ"**[೧೩]

ವೇದ ಶಾಸ್ತ್ರ ಇತಿಹಾಸಗಳು ಕೆಲವೇ ಕೆಲವರ ಸೊತ್ತಾಗಿದ್ದು, ವಿಶಿಷ್ಟ ವರ್ಗದವರ ಹಿತಾಸಕ್ತಿಯನ್ನು ಮಾತ್ರ ಕಾಪಾಡಿಕೊಳ್ಳಲು ಪ್ರಯತ್ನಿಸುತ್ತೇವೆ. ಜನಪರ

೧೨. ಅದೇ, ಪುಟ; ೪೯
೧೩. ಅದೇ, ಪುಟ; ೪೯
೧೪. ಕನ್ನಡ ಸಾಹಿತ್ಯ ಚರಿತ್ರೆ (೮ ನೆಯ ಮುದ್ರಣ ೧೯೯೦) ಪುಟ-೧೮೯.

ಧೋರಣೆಯಾಗಲಿ,"ಬಹುಜನ ಸುಖಾಯ, ಬಹುಜನ ಹಿತಾಯ"ವೆಂಬ ನಿಲುವು ಅವುಗಳಿಗಿರುವುದಿಲ್ಲ. ಪುರಾಣ ಇತಿಹಾಸಗಳಂತೂ ಕೆಲ ವ್ಯಕ್ತಿಗಳು ಮತ್ತು ಕೆಲ ವರ್ಗಕ್ಕೆ ಮಾತ್ರ ಸೀಮಿತವಾಗಿರುತ್ತವೆ. ಆದರೆ ವಚನಗಳು ಕೆಲವರ ಸೊತ್ತಾಗದೆ, ಸರ್ವರಿಗೆ ಆಸರೆಯಾಗಿರುತ್ತದೆ. ಜನಪರ ನಿಲುವನ್ನೊಳಗೊಂಡಿರುತ್ತವೆ. ವಚನಗಳಲ್ಲಿ ಜನಸಾಮಾನ್ಯರಿಗೆ ಹೆಚ್ಚಿನ ಪ್ರಾತಿನಿಧ್ಯತೆ ಇರುತ್ತದೆ. ಜೊತೆಗೆ ಸಮಸ್ತ ಸಮಾಜದ ಆಗು-ಹೋಗುಗಳು ಒಂದು ನಾಡಿನ ಜನಾಂಗದ ಸಂಪೂರ್ಣವಾದ ಸಾಂಸ್ಕೃತಿಕ ಬದುಕಿನ ಆಶೋತ್ತರಗಳು ವಚನಗಳಲ್ಲಿ ಹೆಪ್ಪುಗಟ್ಟಿರುತ್ತವೆ. ಕತ್ತಲೆಯಿಂದ ಬೆಳಕಿನಡೆಗೆ ಕೊಂಡೊಯ್ಯುವ ಉದಾತ್ತ ಉದ್ದೇಶವನ್ನು ಹೊಂದಿದ್ದು ಆ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತದೆ. ಸಾಹಿತ್ಯದ ಸಾರ್ಥಕ್ಯ ಅಡಗಿರುವುದು ಇಂಥಲ್ಲಿಯೇ ಅಲ್ಲವೆ? ಅದಕ್ಕಾಗಿಯೇ ಕರ್ಮಯೋಗಿ ಸಿದ್ಧರಾಮನು 'ವಚನ' ವೆಂಬುದು ಬಹುವೇದ್ಯವಯ್ಯಾ' ಎಂದು ನುಡಿದಿದ್ದಾನೆ.

ಸಿದ್ಧರಾಮನು ವಚನ ರಚನೆಯು 'ಎರೆದು ನಿದ್ರಿಪ ಬಾಲನಂತೆ', 'ದಣಿದು ನಿದ್ರಿಪ ಕೃಷಿವಲಲನಂತೆ', 'ಪದ್ಮಿನಿಯಲ್ಲಿ ಬೆರಗಾದ ಕಾಮಿಯಂತೆ' ಇರಬೇಕೆಂದು ಹೇಳಿರುವುದು ಅರ್ಥಪೂರ್ಣವೂ ಹಾಗೂ.ಧ್ವನಿಪೂರ್ಣವೂ ಆಗಿದೆ. ಇಲ್ಲಿ ಸಿದ್ಧರಾಮನ ಬಳಸಿಕೊಂಡಿರುವ ಹೋಲಿಕೆ ಹೊಚ್ಚ ಹೊಸತಾಗಿದ್ದು ತುಂಬಾ ಪರಿಣಾಮಕಾರಿಯಾಗಿದೆ. ಸುಂದರವಾಗಿಯೂ ಕಾಣಿಸುತ್ತದ್ದೆ.

ವಚನಗಳನ್ನು ಕೆಲವರು ಪದ್ಯವೆಂದು, ಹಲವರು ಗದ್ಯವೆಂದು ಮತ್ತೆ ಕೆಲವರು 'ಪದ್ಯಗಂಧಿಯಾದ ಗದ್ಯ'ವೆಂದು ಇನ್ನು ಹಲವಾರು ಅನುಭಾವ ಗೀತೆಗಳೆಂದು ವಿವಿಧ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಡಾ।। ರಂ.ಶ್ರೀ ಮುಗಳಿಯವರು "ವಚನಗಳೆಂದರೆ ನಡುಗನ್ನಡ ಶೈಲಿಯ ಅನುಭಾವಗದ್ಯದಲ್ಲಿ ಉಸುರಿದ ಅಧ್ಯಾತ್ಮಿಕ ಭಾವಗೀತೆ"[೧೪] ಗಳೆಂದು ನುಡಿದಿದ್ದಾರೆ. ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರು "ವಚನಗಳು ನಮ್ಮ ಕನ್ನಡದ ಉಪನಿಷತ್ತುಗಳು"[೧೫] ಎಂದಿದ್ದಾರೆ, ಖ್ಯಾತ ಕವಿಹಾಗೂ ವಿಮರ್ಶಕರಾದ ಡಾ।। ಬುದ್ದಣ್ಣ ಡಿಂಗಮರೆಯವರು; "ಭಾವವೆಂದರೆ ಭಾವಕ್ಕೆ ಅಂಟಿಕೊಳ್ಳದೆ, ಕಾವ್ಯದ ಆತೀತಕ್ಕೆ ಸಿಕ್ಕು ಇಲ್ಲವೆ ಕಾವ್ಯ ಅಲ್ಲದ್ದಕ್ಕೆ ಜೋತು ಬೀಳದೆ, ಬಂದು ಬಗೆಯ ಸಮತೂಕವನ್ನು ಕಾಯ್ದುಕೊಂಡು ಅರ್ಥಶೋಧನೆಯಲ್ಲಿ ವಚನಗಳು ಯಶಸ್ಸನ್ನು ಸಾಧಿಸಿವೆ"[೧೬] ಎಂಬುದಾಗಿ ವಿಶ್ಲೇಷಿಸಿದ್ದಾರೆ. ಪ್ರೊ. ಶಿ. ಶಿ. ಬಸವನಾಳರು" ವಚನಗಳು ಗದ್ಯದ ಒಂದು ಮಾದರಿಯೆಂದೇ ಸ್ಥೂಲವಾಗಿ ಹೇಳಬಹುದಾದರೂ ಅವು ನಿಜವಾಗಿಯೂ ಗದ್ಯದ ಒಂದು ವಿಶಿಷ್ಟ ಮಾದರಿಯೆಂದೆ ಹೇಳುವುದು ವಿಹಿತ. ಸೂಕ್ಷ್ಮವಾಗಿ ವಿಚಾರಿಸಿದರೆ

---

೧೪. ಕನ್ನಡ ಸಾಹಿತ್ಯ ಚರಿತ್ರೆ (೮ ನೆಯ ಮುದ್ರಣ ೧೯೯೦) ಪುಟ-೧೮೯.

೧೫. ವಚನಧರ್ಮಸಾರ ಪುಟ; ೨೩೪

೧೬. ಜ್ಞಾನದೇಗುಲ (ಅಭಿನಂದನ ಗ್ರಂಥ), ಪುಟ: ೭೫೦

ವಚನಗಳು ಗದ್ಯ ಪದ್ಯದ ನಡುವಿನ ಒಂದು ಮಾದರಿಯೆಂದೇ ಹೇಳಬೇಕಾಗುವುದು. ವಚನಗಳಲ್ಲಿ ಗದ್ಯದ ನಿರರ್ಗಳತೆ ಇಲ್ಲದಿದ್ದರೂ ಅದರ ಸರಳತೆ ಇದೆ; ಪದ್ಯದ ಕ್ರಮಬದ್ಧ ಛಂದೋಗತಿ ಇಲ್ಲದಿದ್ದರೂ ಅದರ ಲಯವಿದೆ''[೧೭] ಎಂದು ಹೇಳಿರುವುದು ಯಥೋಚಿತವಾಗಿದೆ. ಈ ದಿಸೆಯಲ್ಲಿ ಖ್ಯಾತ ವಿಮರ್ಶಕರು ಸುವಿಖ್ಯಾತ ಸಂಶೋಧಕರಾದ ಡಾ॥ ಎಂ. ಎಂ. ಕಲಬುರ್ಗಿ ಅವರ ಮಾತುಗಳು ಹೆಚ್ಚು ಸಮಂಜಸವೆನಿಸುತ್ತವೆ ನೋಡಿ: "ವಚನಗಳು ಆಚಾರ್ಯರ ಸಾಹಿತ್ಯವಲ್ಲ, ಅನುಭಾವಿಗಳ ಸಾಹಿತ್ಯ. ಆಚಾರ್ಯರು ಜೀವಿಸಿರುವಾಗಲೇ ತಮ್ಮ ವಿಚಾರಗಳನ್ನು ಬರೆದು ಅವುಗಳ ಸಂವಿಧಾನಾತ್ಮಕ ಮುದ್ರೆ ಒತ್ತುತ್ತಾರೆ. ಅನುಭಾವಿಗಳು ಮಾತ್ರ ಚಿಂತನೆಯನ್ನು ಹೃದಯದಿಂದ ಹೃದಯಕ್ಕೆ ಮುಟ್ಟುವಂತೆ ಬಿಡಿ ಮಾತುಗಳ ಮೂಲಕ ಹೇಳುತ್ತಾರೆ. ಬಿಡಿ ಮುತ್ತುಗಳಂತೆ ಸೂರೆಯಾದ ಅವುಗಳನ್ನು ಸಂಗ್ರಹಿಸುವ ಸಂಕಲಿಸುವ, ಸಂಪಾದಿಸುವ ಕೆಲಸವನ್ನು ಉತ್ತರಕಾಲೀನ ಅನುಯಾಯಿಗಳು ಮಾಡುತ್ತಾರೆ. ಏಸುವಿನ ವಾಣಿಯಾದ ಬೈಬಲ್, ಮಹಮ್ಮದನ ಉಪದೇಶವಾದ ಕುರಾನ್, ಬುದ್ಧನ ಬೋಧೆಯಾದ ತ್ರಿಪಿಟಕ, ಶರಣರ ಸಂದೇಶವಾದ ವಚನ ಕೃತಿಗಳು ಈ ಬಗೆಯ ಉತ್ತರಕಾಲೀನ ಸಂಕಲನಗಳಾಗಿವೆ. ಮೂಲತಃ ವಚನನಿಧಿ ಜನರಿಂದ, ಜನರಿಗಾಗಿ ಹುಟ್ಟಿ, ಜನರ ಮಧ್ಯದಲ್ಲಿ ಬಾಳಿನ ಸಾಹಿತ್ಯವಾಗಿದೆ"[೧೮] ಇದು ಹೊಸ ರೀತಿಯ ವ್ಯಾಖ್ಯಾನವೇ ಆಗಿದೆ.

ಒಟ್ಟಿನಲ್ಲಿ ಮಹಾಕಾವ್ಯಗಳು ರಚನೆಗೊಳ್ಳುವ ಸಾಂಪ್ರದಾಯಸ್ಥ ಸಮಾಜದಲ್ಲಿ, ಮಾರ್ಗಪರಂಪರೆಯನ್ನೇ ಗುರುತಿಸುವ ಕಾಲದಲ್ಲಿ ಸಂಸ್ಕೃತಿಭೂಯಿಷ್ಠವಾದ ಪ್ರೌಢಶೈಲಿಯನ್ನೇ ಮೆಚ್ಚಿ ಕೊಂಡಾಡುವ ಹೊತ್ತಿನಲ್ಲಿ ಈ ವಚನಗಳು ಮೂಡಿ ಬಂದಿವೆ. ಸ್ವತಂತ್ರವಾದ ಅಸ್ತಿತ್ವವನ್ನು ಪಡೆದುಕೊಂಡು, ತಮ್ಮದೇ ಆದ ವಿಶಿಷ್ಟ ಛಾಪನ್ನು ಒತ್ತಿದ್ದಂತ್ತು ಐತಿಹಾಸಿಕ ಸತ್ಯವಾಗಿದೆ. ಧರ್ಮ ಅನುಭಾವ-ಆಧ್ಯಾತ್ಮ ಸಾಮಾಜಿಕ ಕಳಕಳಿ, ಜನಪರ ಧೋರಣೆ ಇತ್ಯಾದಿ ಅಂಶಗಳ ಪ್ರತಿಪಾದನೆಯಿದ್ದರೂ ಕವಿಗಿರಬೇಕಾದ ಸಹಜ ನಿರಂಕುಶ ಪ್ರವೃತ್ತಿಯನ್ನು ಈ ವಚನಕಾರರು ಉಳಿಸಿಕೊಂಡಿರುವುದು ಗಮನಾರ್ಹವಾದ ಸಂಗತಿ ಸರಳ-ಸಹಜ ಸಾಮಾನ್ಯ ಮಾತು ಸಹಶ್ರೇಷ್ಠ ಕಾವ್ಯದ ಮಟ್ಟ ಮುಟ್ಟಿದ್ದು, ವಾಸ್ತವಿಕ ಹಾಗೂ ಸಾಮಾಜಿಕ ಪ್ರಜ್ಞೆಗೆ ಶ್ರೇಷ್ಠ ನಿದರ್ಶನವಾಗಿದೆ. ಸಮಾಜದ ಎಲ್ಲ ವರ್ಗಗಳಿಂದಲೂ ಅಕ್ಷರ ಪ್ರಪಂಚವನ್ನು ಪ್ರವೇಶಿಸಿದ ಅಸಂಖ್ಯಾತರು, ಸಾಹಿತ್ಯ ರಚನೆಯಲ್ಲಿ ತೊಡಗಿದ್ದರಿಂದ ಈ ಹಿಂದೆ ಎಂದೂ ಇಲ್ಲದಂಥ ವೈವಿಧ್ಯತೆ, ವೈಶಾಲ್ಯತೆ, ವಾಸ್ತವಿಕತೆ ಮತ್ತು ಸಮೃದ್ಧತೆಗಳು ಏಕಕಾಲದಲ್ಲಿಯೇ ಕನ್ನಡ ಸಾಹಿತ್ಯಕ್ಕೆ ಸಂಪ್ರಾಪ್ತವಾದ ಸಂಗತಿಯಂತೂ ತ್ರಿಕಾಲ ಸತ್ಯವಾಗಿದೆ.

❑

೧೭. ಬಸವಣ್ಣನವರ ಷಟ್‌ಸ್ಥಳದ ವಚನಗಳು (೨ನೆಯ ಮುದ್ರಣ: ೧೯೬೮), ಪುಟ೨೫
೧೮. ಬಸವಣ್ಣನವರ ವಚನ ಸಂಪುಟ, 'ಸಂಪಾದಕೀಯ'ದಲ್ಲಿ

# ಆಕರ ಗ್ರಂಥಗಳು


೧. ಬಸವಣ್ಣನವರ ಷಟ್‌ಸ್ಥಲದ ವಚನಗಳು; ಸಂ: ಪ್ರೊ. ಶಿ. ಶಿ. ಬಸವನಾಳ

೨. ಅಲ್ಲಮನ ವಚನ ಚಂದ್ರಿಕೆ: ಸಂ: ಡಾ|| ಎಲ್. ಬಸವರಾಜು

೩. ಮಹಾದೇವಿಯಕ್ಕನ ವಚನಗಳು; ಸಂ: ಡಾ|| ಆರ್.ಸಿ. ಹಿರೇಮಠ

೪. ವಚನ ಧರ್ಮಸಾರ; ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿ

೫. ಕನ್ನಡ ಸಾಹಿತ್ಯ ಚರಿತ್ರೆ-ಡಾ|| ರಂ.ಶ್ರೀ ಮುಗಳಿ

೬. ಬಸವಣ್ಣನವರ ವಚನ ಸಂಪುಟ: ಸಂ: ಡಾ|| ಎಂ.ಎಂ.ಕಲಬುರ್ಗಿ

೭. ಜ್ಞಾನದೇಗುಲ (ಪು. ಪು. ಗವಾಯಿಗಳು ಅಭಿನಂದನ ಗ್ರಂಥ) ಸಂಥ ವ್ಹಿ. ಬಿ.ಹಿರೇಮಠ.

೮. ಉಪನ್ಯಾಸ ಸಂಚಯ; ಸಂ: ಟಿ.ಆರ್.ಮಹಾದೇವಯ್ಯ

೯. ಸಾಹಿತ್ಯ ವಿಮರ್ಶೆ (೧೯೮೬) ಕ. ಸಾ.ಅಕಾಡೆಮಿ; ಸು: ಶಿವರಾಮ ಕಾಡನಕುಪ್ಪೆ

೧೦. ಕಾಯಕ ಮತ್ತು ದಾಸೋಹ-ಅಶೋಕ ನರೋಡೆ.

# ವಚನ ಸಾಹಿತ್ಯಕ್ಕೆ ಬಿಜಾಪುರ ಜಿಲ್ಲೆಯ ಕೊಡುಗೆ*

ಬಿಜಾಪುರ ಜಿಲ್ಲೆಯು ಪಂಚನದಿಗಳ ನಾಡು. ಬಿಸಿಲು ಬರಗಾಲಕ್ಕೆ ಹೆಸರಾದ ಕರುನಾಡು. ಕಲೆ, ಶಿಲ್ಪ, ಸಾಹಿತ್ಯ, ಸಂಗೀತ, ಆಧ್ಯಾತ್ಮಗಳ ಬೀಡು. ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಕ್ಕೆ ತನ್ನದೇ ಆದ ಕೊಡುಗೆಯನ್ನಿತ್ತಿದೆ. ಅದರಲ್ಲೂ ವಚನ ಸಾಹಿತ್ಯಕ್ಕೆ ಬಿಜಾಪುರ ಜಿಲ್ಲೆ ನೀಡಿರುವ ಕೊಡುಗೆಯಂತೂ ಅಪಾರವಾಗಿದೆ.

ಭಾರತೀಯ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನವು ಅವಿಸ್ಮರಣೀಯ ಕಾಲ. ಕ್ರಾಂತಿಯೋಗಿ ಬಸವಣ್ಣನವರ ನೇತೃತ್ವದಲ್ಲಿ ಜನರು ಒಂದೆಡೆ ಸೇರಿದರು. ಜಾತಿ-ಮತ, ಮೇಲು-ಕೀಳು, ಬಡವ - ಬಲ್ಲಿದ, ಅಧಿಕಾರ - ಅಂತಸ್ತು, ಸ್ತ್ರೀ-ಪುರುಷ ಮುಂತಾಗಿ ಸಮಾಜದಲ್ಲಿರುವ ಏರುಪೇರುಗಳನ್ನು ಹೊಡೆದೋಡಿಸಲು ಸಂಕಲ್ಪಿಸಿದರು. ಜನರಲ್ಲಿ ಮನೆಮಾಡಿರುವ ಅಜ್ಞಾನ ಅಂಧಾನುಕರಣೆ ಅನಕ್ಷರತೆ, ಕಂದಾಚಾರ ಇತ್ಯಾದಿಗಳನ್ನು ಕಿತ್ತೆಸೆದರು. ಸರ್ವರೂ ಸಮಾನರು, ಎಲ್ಲ ಕಾಯಕಗಳೂ ಸಮಾನವಾದವುಗಳೆಂದು ಸಾರಿದರು. 'ಕಾಯಕ' ಮತ್ತು 'ದಾಸೋಹ'ಗಳೆಂಬ ಎರಡು ಮಹಾಮೌಲ್ಯಗಳನ್ನು ಹುಟ್ಟು ಹಾಕಿದರು. ಹೊಸ ಮೌಲ್ಯ ಅನುಷ್ಠಾನದಿಂದಾಗಿ ಸಮಸ್ತ ಸಮಾಜದ ಸ್ವರೂಪವೇ ಪರಿವರ್ತನೆಗೊಳಗಾಯಿತು. ಅಂದಿನ ಜನಾಂಗದ ಜೀವನ ವಿಧಾನವೇ ಬದಲಾಗಿ ಹೋಯಿತು. ಭಾಷೆ, ಛಂದಸ್ಸು, ಕಥಾವಸ್ತು, ಶೈಲಿ, ಕೃತಿರಚನೆ, ಕೃತಿಗಳ ಆಶಯ ಮುಂತಾದವುಗಳಿಂದಾಗಿ ಸಾಹಿತ್ಯದಲ್ಲಿಯೇ ಕ್ರಾಂತಿಯ ಕಹಳೆ ಮೊಳಗಿತು. ಜನರ ಆಡುನುಡಿಗೆ, ದೇಸಿಯ ಛಂದಸ್ಸುಗಳಿಗೆ ಪ್ರಾಮುಖ್ಯತೆ ಲಭಿಸಿತು. ಅಚ್ಚಗನ್ನಡದ ಅಪೂರ್ವ ನಿಧಿಯಾದ 'ವಚನ ಸಾಹಿತ್ಯ'ವು ಶಿವಶರಣರಿಂದ ಆವಿಷ್ಕಾರಗೊಂಡಿತು. ವಚನ ಸಾಹಿತ್ಯವು "ಅನ್ಯಭಾಷೆಯ ಯಾವುದೇ ಮಾದರಿಯನ್ನು ಯಾವುದೇ ದೃಷ್ಟಿಯಿಂದಲೂ ಅನುಕರಿಸದೆ ಅಥವಾ ಆದರ್ಶವಾಗಿಟ್ಟುಕೊಳ್ಳದೆ, ಕೇವಲ ಅನುಭವದಿಂದಲೇ ಮಾಡಿದ ಈ ಪ್ರಕಾರವು ಕನ್ನಡದ ಹೆಮ್ಮೆಯಾಗಿದೆ. ವಿಶ್ವಸಾಹಿತ್ಯಕ್ಕೆ ಕನ್ನಡವು ಸಲ್ಲಿಸಿರುವ ಕಾಣಿಕೆಯಾಗಿದೆ"[೧] ಎಂದಿರುವ ಖ್ಯಾತ ವಿದ್ವಾಂಸರಾದ ಡಾ|| ಎಂ. ಚಿದಾನಂದಮೂರ್ತಿಯವರ ಅಭಿಪ್ರಾಯ ಔಚಿತ್ಯಪೂರ್ಣವಾಗಿದೆ.

## ಬಸವಣ್ಣ

ಬಸವಣ್ಣ ಕಲ್ಯಾಣಕ್ರಾಂತಿಯ ಮೂಲಪುರುಷ. ಕಾಯಕ ದಾಸೋಹಗಳ ಹರಿಕಾರ. ಅನುಭಾವ ಮಂಟಪದ ರೂವಾರಿ. ಸಮಾನತೆಯನ್ನು ಸ್ಥಾಪಿಸಲು ಶತಪ್ರಯತ್ನಗೈದ

---

* 'ಬಸವ ಪಥ' (ಸಂ-೧೬, ಸಂ: ೧೧; ೧೯೯೫)ದಲ್ಲಿ ಪ್ರಕಟಗೊಂಡಿರುವ ಲೇಖನ.

೧. ವಚನ ಸಾಹಿತ್ಯ (ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ ಸಂ: ೫) ಬೆಂ.ವಿ.ವಿ.ಬೆಂ. ಪುಟ-೧

ಮಹಾನ್ ಸಮಾಜ ಸುಧಾರಕ, ಮಹಾಮಾನವತಾವಾದಿ, ವಿಶ್ವವಿಭೂತಿಪುರುಷ, ವಿಶ್ವಮಾನವ, ವಿಶ್ವವಂದಿತ ವ್ಯಕ್ತಿ, ವಿಶ್ವಗುರು, ಕ್ರಾಂತಿಯೋಗಿ, ಮಹಾನ್ ಸಂಘಟನಾ ಚತುರ, ಹೊಸ ಸಮಾಜವೊಂದರ ಸ್ಥಾಪಕ, ವೀರಶೈವ ಧರ್ಮದ ಸ್ಥಾಪಕ, ಯುಗಪುರುಷ, - ಜಗಜ್ಯೋತಿ, ಕ್ರಾಂತಿಮೂರ್ತಿ ಮೊದಲಾದ ಹೆಸರುಗಳಿಂದ ನಾನಾ ಬಿರುದಾವಳಿಗಳಿಂದ ಕರೆದು ಕೊಂಡಾಡಿ, ಬಸವಣ್ಣನವರಿಗೆ ತಮ್ಮ ಪ್ರೀತಿ, ಭಕ್ತಿ, ಗೌರವ, ಆದರಗಳನ್ನು ತೋರಿದ್ದಾರೆ.

ಬಸವೇಶ್ವರರನ್ನು ಕುರಿತಾಗಿ ಹೇರಳವಾದ ಸಾಹಿತ್ಯ ಸೃಷ್ಟಿಯಾಗಿದೆ. ಬಸವಣ್ಣನವರ ವಚನಗಳೇ ಅವರ ವ್ಯಕ್ತಿತ್ವವನ್ನು ಅರ್ಥೈಸಿಕೊಳ್ಳಲು ಇರುವ ಪ್ರಪ್ರಥಮ ಆಕರ ಸಾಮಗ್ರಿಗಳಾಗಿವೆಯೆಂದು ಹೇಳಬಹುದು. ಮಹಾಕವಿ 'ಹರಿಹರ'ನು 'ಬಸವರಾಜದೇವರ ರಗಳೆ' ಪಾಲ್ಕುರಿಕೆ ಸೋಮನಾಥನ 'ಬಸವೇಶ್ವರ ಪುರಾಣ' ಭೀಮಕವಿಯ ಬಸವ ಪುರಾಣ, ಷಡಕ್ಷರದೇವನ - 'ವೃಷಭೇಂದ್ರ ವಿಜಯಂ' ಮುಂತಾದ ಮಹಾಕಾವ್ಯಗಳೇ ರಚನೆಯಾಗಿವೆ. ವಿರೂಪಾಕ್ಷ ಪಂಡಿತನ - 'ಶಿವತತ್ವ ಚಿಂತಾಮಣಿ' ಸುರಂಗನ 'ಸುರಂಗಪುರಾಣ' ಮುಂತಾದ ಕೃತಿಗಳಲ್ಲಿಯೂ ಬಸವಣ್ಣನವರ ಭವ್ಯ ಬದುಕಿನ ಅನಾವರಣವಾಗಿದೆ. ಶೂನ್ಯ ಸಂಪಾದನೆಯಲ್ಲಿಯೂ ಬಸವಣ್ಣನವರ ವಿಚಾರಧಾರೆಗಳು ಹಾಸುಹೊಕ್ಕಾಗಿವೆ.

ಹೊಸಗನ್ನಡ ಸಾಹಿತ್ಯದ ಸಂದರ್ಭದಲ್ಲಿ ಡಾ॥ ತಿಪ್ಪೇರುದ್ರಸ್ವಾಮಿಯವರ 'ಕರ್ತಾರನ ಕಮ್ಮಟ' ಹುಟ್ಟು ಹೋರಾಟಗಾರ - ಬಸವರಾಜ ಕಟ್ಟಿಮನಿಯವರ 'ಬಸವಣ್ಣ' ಕಾದಂಬರಿಗಳಲ್ಲಿಯೂ ಬಸವನ ಬದುಕು ಸೊಗಸಾಗಿ ಮೂಡಿಬಂದಿದೆ. ಕನ್ನಡದಲ್ಲಿ ರಚನೆಗೊಂಡ ಶ್ರೇಷ್ಠ ನಾಟಕಗಳು ಬಸವಣ್ಣನವರ ಕುರಿತಾಗಿಯೇ ಇರುವುದು ಕೇತುಕದ ಸಂಗತಿಯಾಗಿದೆ. ಲಂಕೇಶರ - 'ಸಂಕ್ರಾಂತಿ' ಗಿರೀಶ ಕಾರ್ನಾಡರ - 'ತಲೆದಂಡ', ಎಚ್. ಎಸ್. ಶಿವಪ್ರಕಾಶರ - 'ಮಹಾಚೈತ್ರ', ಡಾ॥ ಎಂ. ಎಂ. ಕಲಬುರ್ಗಿಯವರ - 'ಕೆಟ್ಟಿತ್ತು ಕಲ್ಯಾಣ' ಪ್ರೊ. ಪಿ. ವ್ಹಿ. ವಜ್ರಮಟ್ಟಿಯವರೂ ಕೂಡ ಬಸವಣ್ಣನ ಕುರಿತಾಗಿ ನಾಟಕ ರಚಿಸಿದ್ದಾರೆಂದು ತಿಳಿದುಬಂದಿದೆ. ಶರಣಜೀವಿ ಬ.ಗಿ. ಯಲ್ಲಟ್ಟಿಯವರು - 'ಮಹಾಮಾನವ' ಎಂಬ ಮಹಾಕಾವ್ಯವನ್ನೇ ರಚಿಸಿದ್ದರೆ. ಪ್ರಾ.ಸಂ.ಶಿ. ಭೂಸನೂರಮಠರು ಮಹಾದೇವಿಯಕ್ಕನ ಬದುಕನ್ನು ಚಿತ್ರಿಸಿದ 'ಭವ್ಯ ಮಾನವ'ದಲ್ಲಿಯೂ ಬಸವಣ್ಣನ ಪಾತ್ರ ಉಜ್ವಲವಾಗಿ ಬಂದಿದೆ. ಹೀಗೆ ಆಧುನಿಕ ಸಾಹಿತ್ಯ ಸಂದರ್ಭದಲ್ಲಿಯೂ ಬಸವಣ್ಣನವರ ಕುರಿತಾಗಿ ಅಪಾರ ಸಾಹಿತ್ಯ ಸೃಷ್ಟಿಯಾಗಿದೆ. ಇದರ ಕುರಿತಾಗಿ ಬಂದ ಬಿಡಿಲೇಖನ ಗಳಿಗಂತೂ ಲೆಕ್ಕವೇ ಇಲ್ಲ. ಹಲವು ಪಿಎಚ್.ಡಿ. ಪ್ರಬಂಧಗಳು ಬಂದಿದ್ದರೂ ಇನ್ನೂ ಹಲವಾರು ಮಹಾಪ್ರಬಂಧಗಳಿಗೆ ಬೇಕಾದ ಆಕರ ಸಾಮಗ್ರಿ ಬಸವಣ್ಣನ ಬದುಕು - ಬರಹಕ್ಕಿದೆಯೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಹೀಗಿರುವಾಗ ಅಂತಹ ವಿಶ್ವಮಾನ್ಯ, ವಿಶ್ವವಂದಿತ ವ್ಯಕ್ತಿತ್ವವನ್ನು ಪರಿಚಯಿಸುವುದೆಂದರೆ ಸಾಗರದ ನೀರನ್ನು ಸಿಂಪಿಯಲ್ಲಿ ತುಂಬಿಕೊಳ್ಳುವ ಸಾಹಸಕ್ಕಿಳಿದಂತಾಗುತ್ತದೆಯೆಂಬ ಎಚ್ಚರವೂ ನನಗಿದೆ. ಆದ್ದರಿಂದ ಅಪೂರ್ವ ಚೈತನ್ಯವನ್ನು ಪರಿಚಯಿಸುವ ಗೊಡವೆಗೆ ಹೋಗದೆ,

ಡಾ|| ಎಂ. ಎಂ. ಕಲಬುರ್ಗಿಯವರು ವ್ಯಕ್ತಪಡಿಸಿದ ಅಭಿಪ್ರಾಯವನ್ನಷ್ಟು ನೋಡಿದರೆ ಸದ್ಯಕ್ಕೆ ಸಾಕೆನಿಸುತ್ತದೆ. ಅದಕ್ಕಾಗಿ ನೋಡಿ: "ಬಸವಣ್ಣ ಬಾಳಿದ್ದು ಕನ್ನಡ ನಾಡಿನಲ್ಲಿ, ಬರೆದದ್ದು ಕನ್ನಡ ಭಾಷೆಯಲ್ಲಿ, ಈ ಪರಿಮಿತಿ ಕಾರಣವಾಗಿ ಇವನಿಗೆ ನ್ಯಾಯವಾಗಿ ಸಿಗಬೇಕಾದ ಜಾಗತಿಕ ಪ್ರಸಿದ್ಧಿ ಇನ್ನೂ ಸಿಕ್ಕಿಲ್ಲವಾದರೂ ಇವನನ್ನು ಕುರಿತಷ್ಟು ಸಾಹಿತ್ಯ ಕನ್ನಡದಲ್ಲಿ ಯಾರನ್ನೂ ಕುರಿತು ಹುಟ್ಟಿಲ್ಲ; ಇವನಷ್ಟು ಅಖಂಡ ಪ್ರಭಾವ ಕರ್ನಾಟಕದ ಮೇಲೆ ಯಾವ ಧಾರ್ಮಿಕ ಮಹಾಪುರುಷನೂ ಬೀರಿಲ್ಲ.

ಜಾಗತಿಕ ಸಂಸ್ಕೃತಿಗೆ ಘನತೆಯನ್ನು ತಂದುಕೊಡುವವರೆಂದರೆ ತಮ್ಮ ವ್ಯಕ್ತಿತ್ವವನ್ನು ಉದಾತ್ತೀಕರಿಸಿಕೊಂಡ ಮಹಾಪುರುಷರು ಮತ್ತು ತಮ್ಮ ಪರಿಸರವನ್ನು ಉದಾತ್ತೀಕರಿಸುವ ಯುಗಪುರುಷರು. ಈ ಎರಡನ್ನೂ ಸಾಧಿಸುವ ಮೂಲಕ ಬಸವಣ್ಣ ಕೇವಲ ಮಹಾಪುರುಷನಾಗಿ ಉಳಿಯದೆ, ಯುಗಪುರುಷನಾಗಿಯೂ ಬೆಳೆದಿದ್ದಾನೆ. ಸಾಮಾನ್ಯವಾಗಿ ಯುಗಪುರುಷರು ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ ಹೀಗೆ ಜೀವನದ ಯಾವುದೇ ಒಂದು ಕ್ಷೇತ್ರಕ್ಕೆ ಹೊಸ ತಿರುವು ತಂದುಕೊಡುತ್ತದೆ. ಬಸವಣ್ಣ ಇಂಥ ಎಲ್ಲ ಕ್ಷೇತ್ರಗಳಿಗೂ ಹೊಸ ತಿರುವು ಕೊಟ್ಟ ಕಾರಣ ಸಮಗ್ರಯುಗ ಪುರುಷ' ನೆನಿಸಿದ್ದಾನೆ. ಹೀಗಾಗಿ ಅವನನ್ನು ಜಗತ್ತು ಕಂಡ ಒಬ್ಬ ಅಪರೂಪದ ವ್ಯಕ್ತಿಯೆಂದು ಗುರುತಿಸಲಾಗುತ್ತಿದೆ"* ಡಾ|| ಎಂ. ಎಂ. ಕಲಬುರ್ಗಿಯವರು ಕರಿಯನ್ನು ಕನ್ನಡಿಯಲ್ಲಿ ಹಿಡಿದಿಡುವಂತೆ ಬಸವಣ್ಣನವರ ವ್ಯಕ್ತಿತ್ವವನ್ನು ಸೆರೆಹಿಡಿದಿದ್ದಾರೆ.

'ಕೂಡಲಸಂಗಮದೇವಾ' ಬಸವಣ್ಣನವರ ವಚನದ ಅಂಕಿತ. ಜೀವನಾನುಭವಗಳೇ ಕಾವ್ಯಾನುಭವಗಳಾಗಿ ಇವರ ವಚನಗಳಲ್ಲಿ ಕೆನೆಗಟ್ಟಿವೆ. ಸರಳ ಸುಲಭ ಸುಂದರ, ಸುಲಲಿತ, ಮಧುರ ಹಾಗೂ ಮೋಹಕವಾಗಿ ಅರಳಿವೆ. ಹತ್ತಾರು ಬಾರಿ ಓದಿದರೂ ಮತ್ತೆ ಮತ್ತೆ ಓದಿಸಿಕೊಳ್ಳುವ ರಚನೆಗಳಿವು. ಓದಿದಾಗೊಮ್ಮೆ ಹೊಸ ಹೊಸ ಅರ್ಥ ಹಾಗೂ ಧ್ವನಿಗಳನ್ನು ಹೊರಡಿಸುವ ಶಕ್ತಿ - ಸಾಮರ್ಥ್ಯವನ್ನು ಪಡೆದುಕೊಂಡಿವೆ. ಮಾನವೀಯ ಮೌಲ್ಯಗಳು ತುಂಬಿತುಳುಕುತ್ತವೆ. 'ಸಕಲಜೀವಾತ್ಮರಿಗೆ ಲೇಸನ್ನೇ' ಬಯಸಿದವರು. 'ದಯವೇ ಧರ್ಮದ ಮೂಲ'ವೆಂದು ಸಾರಿದವರು. 'ಮೃತ್ಯುಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ, 'ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು' ಎಂದು ಸಾರಿದರು. 'ಅಯ್ಯಾ ಎಂದೆಡೆ ಸ್ವರ್ಗ, ಎಲ್ಲವೋ ಎಂದಡೆ ನರಕ' 'ಆಚಾರವೇ ಸ್ವರ್ಗ ಅನಾಚಾರವೇ ನರಕ' 'ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ', 'ದೇಹವೇ ದೇವಾಲಯ ಎನ್ನ ಕಾಲೇ ಕಂಬ, ಶಿರವೇ ಹೊನ್ನ ಕಳಸವಯ್ಯಾ' 'ಕುಲವೇನೋ ಆವಂದಿರ ಕುಲವೇನೋ' ಇತ್ಯಾದಿ ಸಾವಿರಾರು ಸೂಕ್ತಿ ರೂಪದ ಹಿತವಚನಗಳು ಕನ್ನಡ ನಾಡಿನ ಜನರ ಮನೆ-ಮನೆಯ ಮಾತಾಗಿ ಹೋಗಿವೆ.

ಇವರ ವಚನಗಳಲ್ಲಿ ಆರ್ತಭಕ್ತಿ, ಅಂತರಂಗ ನಿವೇದನಾ ರೀತಿ, ಆತ್ಮಾವಲೋಕನ ಕ್ರಮ, ಸಮಾಜ ಸುಧಾರಣೆ, ಆರ್ಥಿಕ ಚಿಂತನೆ, ಪ್ರಗತಿಪರ ದೃಷ್ಟಿ, ವೈಚಾರಿಕ ನಿಲವು,

---

* ಸಮಗ್ರ ವಚನ ಸಂಪುಟ ಮಾಲಿಕೆ, ಸಂ: ೧ (ಬಸವಣ್ಣನವರ ವಚನಗಳು) ಪ್ರಸ್ತಾವನೆ-೧

ಸತ್ಯಶಾಂತಿ, ಅಹಿಂಸೆ, ದಯೆ, ಕರುಣೆಗಳ ನಿರೂಪಣೆಯಿದೆ. ಮಾನವೀಯ ಮೌಲ್ಯಗಳ ಪ್ರತಿಪಾದನೆ, ಕಾಯಕ ದಾಸೋಹಗಳ ಅನುಷ್ಠಾನ, ಗುರುಲಿಂಗ ಜಂಗಮದ ಮಹತ್ವ, ಷಟಸ್ಥಲ - ಅಷ್ಟಾವರಣಗಳ ಅನಾವರಣ, ಸ್ವರ್ಗ - ನರಕಗಳಿಗೆ ಹೊಸಭಾಷ್ಯ, ಇಹಲೋಕದ ಜೀವನದಲ್ಲಿ ಅದಮ್ಯ ಪ್ರೀತಿ - ವಿಶ್ವಾಸಗಳ ತುಂಬಿದ್ದು, ಸರ್ವರೂ ಸಮಾನರೆಂದು ಸಾರಿದ್ದು, ಅಜ್ಞಾನ, ಅನಕ್ಷರತೆ - ಅಂಧಾನುಕರಣೆ, ಡಂಬಾಚಾರ, ಕ್ಷುದ್ರ ದೇವತಾರಾಧನೆ, ಯಜ್ಞ- ಯಾಗಾದಿಗಳಲ್ಲಿ ಬಲಿ ಕೊಡುವ ಅಮಾನುಷ ಕ್ರೂರ ಪದ್ಧತಿಗಳ ಖಂಡನೆ, ಸ್ವತಂತ್ರ, ಸ್ವಾವಲಂಬಿ, ಸ್ವಾಭಿಮಾನ, ಸಮೃದ್ಧಿ ತುಂಬಿದ ಸಮಾಜದ ನಿರ್ಮಾಣ ಮುಂತಾದ ನೂರಾರು ವಿಷಯಗಳು ಪ್ರತಿಪಾದನೆಗೊಂಡಿವೆ.

ಕರಣಿಕರಾಗಿ, ಕೋಶಾಧಿಕಾರಿಯಾಗಿ, ದಂಡನಾಯಕರಾಗಿ, ಮಂತ್ರಿ - ಮಹಾಮಂತ್ರಿ ಪ್ರಧಾನಿಯಾಗಿ ಬಸವಣ್ಣನವರು ಹಂತ - ಹಂತವಾಗಿ ಮೇಲಕ್ಕೇರಿದರು. ಹಲವಾರು ಸಂಘರ್ಷಗಳ ಸುಳಿಯಲ್ಲಿ, ಸಮಸ್ಯೆಗಳ ಬಿರುಗಾಳಿಯಲ್ಲಿಯೇ ತಮ್ಮ ವ್ಯಕ್ತಿತ್ವವನ್ನು ಚೊಕ್ಕ ಚಿನ್ನವಾಗಿ ಹೊರಹೊಮ್ಮಿದರು. ಅಪಾರ ಪರಿಶ್ರಮದಿಂದಾಗಿ ಅಸಾಧ್ಯವಾದುದನ್ನು ಸಾಧ್ಯ ಮಾಡಿ ಇಡೀ ಜಗತ್ತಿಗೆ ಮಾದರಿಯಾದರು. ಜನಸಾಮಾನ್ಯರಂತೆ ಜನಿಸಿದರೂ, ಅಸಾಮಾನ್ಯರಾಗಿ ಬೆಳೆದು ಆಗಸದೇತ್ತರಕ್ಕೇರಿದರು. ಸಂಘಟನಾ ಚಾತುರ್ಯ, ವಿಚಕ್ಷಣ ಬುದ್ಧಿಮತ್ತೆ, ದಿಟ್ಟ ನಿಲುವು, ಗಟ್ಟಿ ನಿರ್ಧಾರ, ದೃಢಸಂಕಲ್ಪ, ಪ್ರಾಮಾಣಿಕ ಪ್ರಯತ್ನ, ದಕ್ಷ ಹಾಗೂ ಕರ್ತವ್ಯ ನಿಷ್ಠತೆ, ಅಗಾಧ ಕರ್ತೃತ್ವಶಕ್ತಿ, ಚುಂಬಕ ಶಕ್ತಿ ವ್ಯಕ್ತಿತ್ವದಿಂದಾಗಿ ಹಲವಾರು ಎಡರು-ತೊಡರು, ಅಡ್ಡಿಆತಂಕಗಳ ನಡುವೆಯೇ ಗೌರಿಶಂಕರ ಪರ್ವತದಂತೆ ಪವಾಡ ಸಾದೃಶ್ಯರಾಗಿ ರೂಪುಗೊಂಡರು. ಎಲ್ಲರಲ್ಲಿ ಸ್ವಾಭಿಮಾನ ತುಂಬಿ, ಆರ್ಥಿಕವಾಗಿ ಸಮೃದ್ಧಗೊಳಿಸಿ, ಸ್ವಾವಲಂಬನೆಯನ್ನು ಬೆಳೆಸಿ, ಮೇಲು - ಕೀಳುಗಳ ಹೊಡೆದೋಡಿಸಿ, ಸರ್ವರೂ ಸರಿಸಮಾನರೆಂದು ಸಾರಿ, ಎಲ್ಲರನ್ನೂ ಅಪ್ಪಿಕೊಳ್ಳುವ, ಒಪ್ಪಿಕೊಳ್ಳುವ ಔದಾರ್ಯದಿಂದಾಗಿ ಸಮಾಜದ ನೇತಾರ, ದೃಷ್ಟಾರ, ಕಾರಣಿಕ ಪುರುಷರೆಂದು ಕರೆಸಿಕೊಂಡಿದ್ದಾರೆ. ಜನ-ಮನದಲ್ಲಿ ಅಚ್ಚಳಿಯದೆ ನಿತ್ಯವೂ ನಳನಳಿಸುತ್ತಿದ್ದಾರೆ.

**ಕೊಂಡಗುಳಿ ಕೇಶಿರಾಜ**

ಬಿಜಾಪುರ ಜಿಲ್ಲೆಯ ಸಿಂದಗಿ ತಾಲ್ಲೂಕಿನ 'ಕೊಂಡಗುಳಿ'ಯು ಕೇಶಿರಾಜನ ಮೂಲ ಊರಾಗಿದೆ. ಕಲ್ಯಾಣದ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ದಣ್ಣಾಯಕನೀತ. ಇವನ ಕುರಿತಾಗಿ ಕ್ರಿ.ಶ. ೧೧೦೭ ಹಾಗೂ ೧೧೩೨ರ ಶಾಸನಗಳೆರಡೂ 'ಕೊಂಡಗುಳಿ' ಗ್ರಾಮದಲ್ಲಿ ದೊರೆತಿವೆಯೆಂದು ತಿಳಿದುಬಂದಿದೆ. "ಅನೇಕ ಪ್ರಪ್ರಥಮ, ಆದ್ಯ, ಹಿರಿಯ ಎಂಬ ಭಾಜನೆಗೆ ಒಳಗಾಗಿರುವ ಕೇಶಿರಾಜ ಬಸವಪೂರ್ವಯುಗದ ಮೊದಲನೆಯ ವಚನಕಾರ. ಮೊದಲನೆಯ ಪ್ರಧಾನಮಂತ್ರಿ, ಕನ್ನಡ ಸಾಹಿತ್ಯದ ಮೊದಲನೆಯ ಶತಕ ಕವಿ. ಸ್ತೋತ್ರಮಾಲಿಕಾ ಪದ್ಯ ರಚನೆಯಲ್ಲಿ ಮೊದಲಿಗ. ಜೇಡರ ದಾಸಿಮಯ್ಯನಿಗಿಂತ

---

೩. 'ಕೊಂಡಗುಳಿ ಕೇಶಿರಾಜ' (ಉಪನ್ಯಾಸ ಸಂಚಯ), ಪುಟ-೨೧

ಮೊದಲಿಗ"[೬] ಎಂದು ಹೀ.ಚಿ. ಶಾಂತವೀರಯ್ಯನವರ ಮಾತುಗಳು ಕೊಂಡಗುಳಿ ಕೇಶಿರಾಜನನ್ನು ಸಮರ್ಥವಾಗಿ ಪರಿಚಯಿಸುತ್ತವೆ.

ಮಹಾಕವಿ ಹರಿಹರನು ರಚಿಸಿದ 'ಕೇಶಿರಾಜ ದಣ್ಣಾಯಕ ರಗಳೆ'ಯು ಕಥಾನಾಯಕನೀತ. ಹರಿಹರನ ಕಾವ್ಯದ ನಾಯಕನಾಗಬೇಕಾದರೆ ಕೇಶಿರಾಜ ಎಂತಹ ಉಜ್ವಲ ಬದುಕನ್ನು ನಡೆಸಿರಬಹುದೆಂಬುದನ್ನು ಊಹಿಸಿಯೇ ತಿಳಿದುಕೊಳ್ಳಬೇಕು. ಹರಿಹರನ ರಗಳೆಯಲ್ಲಿ ಕೇಶಿರಾಜನ ಪರಿಚಯ, ಆತನಿಗಿರುವ ಸ್ಥಾನಮಾನಗಳು ಸೊಗಸಾಗಿ ಚಿತ್ರಣಗೊಂಡಿವೆ. ಷಡಕ್ಷರ ಕಂದ, ಲಿಂಗ ಮಹತ್ವಕಂದ, ನವರತ್ನಮಾಲೆ, ಶೀಲಸಂಪಾದನಾ ಕಂದ ಎಂಬ ನಾಲ್ಕು ಕೃತಿಗಳು ಕೊಂಡಗುಳಿ ಕೇಶಿರಾಜನಿಂದ ರಚನೆಗೊಂಡಿರುವ ಸಂಗತಿ ತಿಳಿದುಬರುತ್ತದೆ.

ಆದ್ಯ ವಚನಕಾರನೆಂಬ ಬಿರುದಿಗೆ ಪಾತ್ರನಾದ ಜೇಡರ ದಾಸಿಮಯ್ಯನಿಗಿಂತಲೂ ಕೊಂಡಗುಳಿ ಕೇಶಿರಾಜನು ಪೂರ್ವದಲ್ಲಿದ್ದನು. "ನೆರೆನಂಬಿ ಕರೆದಡೆನರಿ ಕುದುರೆಯಾಗಿ ಹರಿಯುವೆ ಜಗವೆಲ್ಲ ಅರಿಯಲು ತೊರೆಯೊಳಗೆ ಬಿದ್ದಲಿಂಗ ಕರೆದೆಡೆ ಬಂದಿತು. ಕರಸ್ಥಲಕೆ, ನಂಬದೆ ಕರೆದವರ ಹಂಬಲವನೊಲ್ಲನೆಮ್ಮ ರಾಮನಾಥ" ಎಂದು ದಾಸಿಮಯ್ಯನು ತನ್ನದೊಂದು ವಚನದಲ್ಲಿ ಹೇಳಿದ್ದಾನೆ. ಈ ವಚನ ಕೊಂಡಗುಳಿ ಕೇಶಿರಾಜನ ಕುರಿತಾಗಿಯೇ ಇರುವುದರಿಂದ ದಾಸಿಮಯ್ಯನಿಗಿಂತಲೂ ಕೇಶಿರಾಜ ಹಿರಿಯನೆಂಬುದು ಸ್ಪಷ್ಟವಾಗುತ್ತದೆ.

'ಷಡಕ್ಷರಕಂದ'ಕ್ಕೆ ಷಡಕ್ಷರ ಮಂತ್ರ, ಮಂತ್ರ ಮಹತ್ವ ಕಂದವೆಂಬ ಬೇರೆಬೇರೆ ಹೆಸರುಗಳೂ ಇವೆ. ಇದರಲ್ಲಿ ಒಟ್ಟು ೧೧೦ ಕಂದಪದ್ಯಗಳಿವೆ. ಕನ್ನಡದ ಮೊದಲ ಸ್ತೋತ್ರ ಶತಕವಿದು. 'ಓಂ ನಮಃ ಶಿವಾಯಃ' ಎಂಬುದು ಇದರಂಕಿತವಾಗಿದೆ. 'ಲಿಂಗಮಹತ್ವ ಕಂದ' ಕೃತಿಗೆ 'ಲಿಂಗಸ್ತೋತ್ರಕಂದ'ವೆಂಬ ಹೆಸರಿರುವುದು ತಿಳಿದುಬರುತ್ತದೆ. ಒಂದು ನೂರು ಕಂದ ಪದ್ಯಗಳಲ್ಲಿ ಲಿಂಗದ ಮಹತ್ವವನ್ನು ಹಲವು ರೀತಿಗಳಲ್ಲಿ ಹೇಳಲಾಗಿಧೆ. 'ನವರತ್ನಮಾಲೆ'ಯು ಭಕ್ತಿ-ಭಾವ ತುಂಬಿಕೊಂಡ ಕಿರುಕೃತಿಯಾಗಿದೆ. ಇದರಲ್ಲಿ ಒಂಬತ್ತು ಸ್ರಗ್ಧರಾವೃತ್ತಗಳಿವೆ. 'ಶೀಲ ಸಂಪಾದನಾ ಶತಕ'ವು ಒಂದುನ್ನೂರಾ ಒಂದು ಕಂದ ಪದ್ಯಗಳನ್ನು ಒಳಗೊಂಡಿರುವ ಗ್ರಂಥವಾಗಿದೆ. ಇದರಲ್ಲಿ ಮಂತ್ರ, ಲಿಂಗ, ಶೀಲದ ಕುರಿತಾಗಿ ವಿಸ್ತಾರವಾಗಿ ವಿವರಿಸಲಾಗಿದೆ.

### ನಿಜಗುಣಯೋಗಿ

ಈತನು ಬಸವನಬಾಗೇವಾಡಿ ತಾಲ್ಲೂಕಿನ 'ಚಿಮ್ಮಲಗಿ' ಗ್ರಾಮದವನು. ಬಸವಪೂರ್ವಯುಗದ ಶ್ರೇಷ್ಠ ಶಿವಯೋಗಿ, ವೈರಾಗ್ಯನಿಧಿ, ಕದಳಿಕರ್ಪೂರ - 'ಮಹಾದೇವಿಯಕ್ಕ' ತನ್ನೊಂದು ವಚನದಲ್ಲಿ 'ನಿಜಗುಣನ ಆರೂಢಸ್ಥಲ'ವೆಂದು ಕರೆದು ಕೊಂಡಾಡಿರುವುದನ್ನು ಕಾಣುತ್ತೇವೆ. 'ನಿಜಗುಣಯೋಗಿ' 'ನಿಜಗುಣ ಯೋಗಾ' ಎಂಬ ಅಂಕಿತದಲ್ಲಿ ಹಲವಾರು ವಚನಗಳನ್ನು ರಚಿಸಿದ್ದಾನೆ. ಇದುವರೆಗೆ ಹದಿನಾರು ವಚನಗಳು

ಲಭಿಸಿವೆ. ಭಕ್ತಿ, ಜ್ಞಾನ, ಯೋಗ, ಲಿಂಗಪೂಜೆ, ಮಾಯೆ, ಚೈತನ್ಯ, ಅನುಭಾವ ಇತ್ಯಾದಿ ವಿಷಯಗಳ ನಿರೂಪಣೆಯಿದೆ.

"ಆನುಳ್ಳನ್ನಕ್ಕ ನೀನುಂಟೆಲೆ ಮಾಯೆ
ಆನಿಲ್ಲದಿರ್ದಡೆ ನೀನಿಲ್ಲ
ಆನು ನೀನೆಂಬುಭಯವಳಿಯಲು
ಆನಂದ ನಿಜಗುಣಯೋಗ" (ವ-೪)

ಹೀಗೆ ಅತೀ ಕಡಿಮೆ ಶಬ್ದಗಳಲ್ಲಿ ಅತ್ಯಂತ ಹೆಚ್ಚಿನ ಅರ್ಥವನ್ನು ಹೊರಡಿಸುವುದು. ಧ್ವನಿಪೂರ್ಣವಾಗಿ ಹೇಳುವುದು ನಿಜಗುಣಯೋಗಿಯ ವಚನಗಳ ವಿಶೇಷ ಅಂಶವಾಗಿದೆ. 'ಆನು ನೀನೆಂಬ ಸಾದೇಹ ಗಗನಕ್ಕೆ ಕೈಯಿಟ್ಟರಂತೆ' (ವ-೩), 'ಗೆಲ್ಲ ಸೋಲಕ್ಕೆ ಹೋರಿ ಒಳ್ಳಿದನಾದನೆಂಬಲ್ಲಿಯೆ ಕಳ್ಳ ಕದ್ದ - ಗಜವೆಲ್ಲಿ ಅಡಗಿ ಮಾರೂದು ಹೇಳಾ' (ವ-೮), 'ರಂಜನೆಯಲಿ ರಂಜಿಸಿ ತೋರಿ ಅಡಗುವ ಪ್ರತಿಬಿಂಬದಂತೆ' (ವ-೧೪), 'ಬೇರಿಗೆ ನೀರೆರೆದಲ್ಲಿ ಶಾಖೆಗೆ ಸಂದುಂಟೆ?' (ವ-೧೬) ಈ ಮೊದಲಾದ ವಚನಗಳಲ್ಲಿ ಮನಸೂರೆಗೊಳ್ಳುವ ಸಾಲುಗಳಿರುವುದನ್ನು ಗುರುತಿಸಬಹುದಾಗಿದೆ. "ಶ್ರೇಷ್ಠ ಅನುಭಾವಿಯೋರ್ವನ ಸ್ಫಟಿಕ ಸದೃಶವಾದ ಚಿಂತನಾಂಶ ಅರ್ಥಪೂರ್ಣವಾದ ಮಾತುಗಳಲ್ಲಿ ಹರಳುಗೊಂಡಿರುವುದನ್ನು ನಾವು ನಿಜಗುಣಯೋಗಿಯ ವಚನಗಳಲ್ಲಿ ಕಾಣುವೆವು"[೫] ಎಂದಿರುವ ಡಾ|| ಎಸ್. ವಿದ್ಯಾಶಂಕರ ಅವರ ಮಾತುಗಳು ಸಮರ್ಥನೀಯವಾಗಿವೆ. ಮಹಾಲಿಂಗದೇವನ 'ಏಕೋತ್ತರ ಶತಸ್ಥಲ'ದಲ್ಲಿಯೂ ನಿಜಗುಣ ಯೋಗಿಯವೆಂದು ಹೇಳಲಾಗುವ ಮೂವತ್ಮೂರು ಹಾಡುಗಳಿವೆ.

**ಚಂದಿಮರಸ**

ಚಂದಿಮರಸನು ನಿಜಗುಣಯೋಗಿಯ ಶಿಷ್ಯನೆಂಬುದು ವಿಧಿತವಾಗಿದೆ. ಬಸವಣ್ಣನ ಹಿರಿಯ ಸಮಕಾಲೀನ ವ್ಯಕ್ತಿ. ಈತನೂ ಬಸವನ ಬಾಗೇವಾಡಿಯ ತಾಲ್ಲೂಕಿನ 'ಚಿಮ್ಮಲಗಿ'ಯವನು. 'ಚಿಮ್ಮಲಗಿಯ ಚೆನ್ನರಾಯ'ವೆಂಬುದು ಇವನ ವಚನದ ಅಂಕಿತವಾಗಿದೆ. ಇಲ್ಲಿಯವರೆಗೆ ಈತನವೆಂದು ಹೇಳಲಾಗುವ ೧೬೦ ವಚನಗಳು ಲಭ್ಯವಾಗಿವೆ. 'ಅಂಧಕನ ಕೈಯ ಹಿಡಿದಂತೆ' (ವ:೫) 'ಆದುದೆ ಜನನ, ಮಾದುದೆ ಮರಣ, ತೋರುವುದೆಲ್ಲವು ದಿವಸದ ವಿಸ್ತಾರ (ವ-೧೧), 'ಕನಸಿನಲ್ಲಿ ಹುಟ್ಟಿದ ಕಂದಂಗೆ, ನೆನಪಿನಲ್ಲಿ ಜಾತಕರ್ಮವ ಮಾಡುವರೆ? (ವ-೩೧) ಮುಂತಾದ ಕಾವ್ಯಾತ್ಮಕ ಸಾಲುಗಳಿವೆ. ಸಾಂದರ್ಭಿಕವಾಗಿ ಅಜ್ಞಾನ, ಮೂಢನಂಬಿಕೆ, ಡಾಂಭಿಕತನ ಇತ್ಯಾದಿಗಳನ್ನು ಖಂಡಿಸಿದ್ದಾನೆ. ಪ್ರಾಸಂಗಿಕವಾಗಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವ, ಕಕ್ಕಯ್ಯ, ಮಾಚಯ್ಯ, ದಾಸಯ್ಯ, ಚೆನ್ನಯ್ಯ ಮೊದಲಾದವರನ್ನು ಸ್ಮರಿಸಿದ್ದಾನೆ.

---

೪. ಸಕಲ ಪುರಾತನರ ವಚನ, ಸಂ: ೨: ಸಂ: ಡಾ|| ಎಂ. ಎಸ್. ಸುಂಕಾಪುರ, ವ: ೯೧೬
೫. ಸಂಕೀರ್ಣ ವಚನ ಸಂಪುಟ: ೨, 'ಪ್ರಸ್ತಾವನೆ'ಯಲ್ಲಿ.

**ಅಕ್ಕನಾಗಲಾಂಬಿಕೆ**

ಅಕ್ಕನಾಗಲಾಂಬಿಕೆಯು ಬಸವಣ್ಣನವರ ಸಹೋದರಿ, ದಿವ್ಯಜ್ಞಾನಿ ಚೆನ್ನಬಸವಣ್ಣನ ತಾಯಿ, ಮಾದರಸ - ಮಾದಲಾಂಬಿಕೆಯವರ ಸುಪುತ್ರಿಯಾಗಿ ಬಾಗೇವಾಡಿ ಅಗ್ರಹಾರದಲ್ಲಿ ಜನಿಸಿದಳು. ಬಾಗೇವಾಡಿ, ಕಪ್ಪಡಿ ಸಂಗಮ, ಮಂಗಳವೇಡೆಗಳಲ್ಲಿ ಇವಳು ಕಳೆದ ಜೀವನದ ಕುರಿತು ಏನೂ ತಿಳಿಯುವುದಿಲ್ಲ. ಇವಳ ಪಾತ್ರ ಹಾಗೂ ಚಟುವಟಿಕೆಗಳೆಲ್ಲ 'ಕಲ್ಯಾಣ'ದಲ್ಲಿಯೇ ಕಾಣಸಿಗುತ್ತವೆ. ಹರಿಹರನು ಸಣ್ಣ-ಪುಟ್ಟ ವಚನಕಾರರ ಕುರಿತಾಗಿ ರಗಳೆಗಳನ್ನು ರಚಿಸಿದ್ದಾನೆ. ಆದರೆ ಅತಿ ಪ್ರಮುಖಳಾದ ಬಸವನ ಮಹಾಮನೆ ಮತ್ತು ಅನುಭಾವ ಮಂಟಪದಲ್ಲಿ ನಿರ್ಣಾಯಕವಾದ ಕಾರ್ಯಭಾರ ನಿರ್ವಹಿಸಿದ 'ಅಕ್ಕನಾಗಲಾಂಬಿಕೆ'ಯ ಕುರಿತು ರಗಳೆಯನ್ನೇಕೆ ರಚಿಸಿಲ್ಲವೋ ಗೊತ್ತಾಗದು. ಅಷ್ಟೇ ಅಲ್ಲ, ಶಿವಶರಣರ ಇತರ ರಗಳೆಗಳಲ್ಲಿಯೂ ಇವಳನ್ನು ಸಾಂದರ್ಭಿಕವಾಗಿಯೂ ಎಲ್ಲಿಯೂ ಪ್ರಸ್ತಾಪಿಸಿಲ್ಲ. ಇದು ಆಶ್ಚರ್ಯವನ್ನುಂಟು ಮಾಡದೇ ಇರದು.

ಅಕ್ಕನಾಗಲಾಂಬಿಕೆಗೆ 'ನಾಗಮ್ಮ' ಮತ್ತು 'ಅಕ್ಕನಾಗಮ್ಮ' ಎಂಬ ಬೇರೆ ಇನ್ನೆರಡು ಹೆಸರುಗಳೂ ಇರುವುದನ್ನು ಕಾಣುತ್ತೇವೆ. 'ನಾಗಲಾಂಬಿಕೆ ತನ್ನ ಪೂರ್ವಾರ್ಧ ಜೀವನದಲ್ಲಿ ಬಸವಣ್ಣನನ್ನು ರೂಪಿಸಿದರೆ ಉತ್ತರಾರ್ಧದಲ್ಲಿ ಮಗನಾದ ಚೆನ್ನಬಸವಣ್ಣನನ್ನು ರೂಪಿಸಿದ್ದಾಳೆ'"[೬] ಎಂದಿರುವ ಡಾ|| ವೀರಣ್ಣಾರಾಜೂರ ಅವರ ಮಾತುಗಳು ಇವಳ ಭವ್ಯ ವ್ಯಕ್ತಿತ್ವಕ್ಕೆ ಕನ್ನಡಿ ಹಿಡಿದಿವೆ.

'ಬಸವಣ್ಣಪ್ರಿಯ ಚೆನ್ನಸಂಗಯ್ಯ'ವೆಂಬುದು ಇವಳ ವಚನದ ಅಂಕಿತವಾಗಿದೆ. ಇಲ್ಲಿಯವರೆಗೆ ಇವಳ ಹದಿನಾಲ್ಕು ವಚನಗಳು ಸಿಕ್ಕಿವೆ. ಬಸವನ ವ್ಯಕ್ತಿತ್ವ ಹಾಗೂ ಅವನು ಕೈಗೊಂಡ ಚಟುವಟಿಕೆಗಳೆ ಇವಳ ವಚನಗಳ ವಸ್ತುವಾಗಿದೆ. 'ಎನ್ನ ಕುಲದ ಸೂತಕ ಕಳೆದಾತ ಬಸವಣ್ಣ' ಎನ್ನುವಲ್ಲಿ ಬಸವನಿಂದಾಗಿ ತನಗೊಂದು ವ್ಯಕ್ತಿತ್ವ ಲಭಿಸಿರುವುದನ್ನು ಎತ್ತಿ ಹೇಳಿದ್ದಾಳೆ. "ನಿಜದ ನಿರ್ವಯಲ ಬಾಗಿಲ ನಿಜವ ತೋರಿದಾತ ಬಸವಣ್ಣ" ಎನ್ನುವಲ್ಲಿ ಬಸವನನ್ನು ಅಭಿಮಾನದಿಂದ ನೆನೆಯುತ್ತಾಳೆ. "ಆಚಾರವೆಂಬುದು ಅಗೋಚರ ನೋಡಯ್ಯಾ" ಎಂಬ ವಚನದಲ್ಲಿ ಆಚಾರದ ಮಹತ್ವವನ್ನು ನಿರೂಪಿಸಿದ್ದಾಳೆ. "ಶ್ರೀ ಗುರುವೆ ತಾಯಿ-ತಂದೆಯಾಗಿ, ಲಿಂಗವೇ ಪತಿಯಾಗಿ, ಜಂಗಮವೇ ಅತ್ತೆ-ಮಾವಂದಿರಾಗಿ, ಶಿವಭಕ್ತರೆ ಬಾಂಧವರಾಗಿ, ಸತ್ಯಸದಾಚಾರವೆಂಬ ಮನೆಗೆ ಕಳುಹಿದರಾಗಿ ಶರಣಸತಿ ಎಂಬ ನಾಮ ನಿಜವಾಯಿತ್ತು" (ವ-೧೫) ಎಂಬ ರಚನೆಯಲ್ಲಿ 'ಶರಣಸತಿ ಲಿಂಗಪತಿ'ಯೆಂಬ ಭಾವನೆಯು ನಿಚ್ಚಳವಾಗಿ ಗೋಚರಿಸುತ್ತದೆ. ಪ್ರಾಸಂಗಿಕವಾಗಿ ಪ್ರಭುದೇವ, ಮಾಚಿದೇವ, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಮುಂತಾದವರನ್ನು ತನ್ನ ವಚನಗಳಲ್ಲಿ ಸ್ಮರಿಸಿರುವುದನ್ನು ಗುರುತಿಸಬಹುದು.

**ಗಂಗಾಂಬಿಕೆ**

---

೬. ಶಿವಶರಣೆಯರ ವಚನ ಸಂಪುಟ-೫; ಪ್ರಸ್ತಾವನೆ, ಪುಟ-೩೫

ಗಂಗಾಂಬಿಕೆಯು ಬಸವಣ್ಣನವರ ಪ್ರಥಮ ಪತ್ನಿ. ಬಿಜ್ಜಳನ ಮಂತ್ರಿಯಾದ 'ಬಲದೇವ'ನ ಸುಪುತ್ರಿ. ಬಸವಣ್ಣನವರು ಬಿಜಾಪುರ ಜಿಲ್ಲೆಯವರಾದುದರಿಂದ ಸಹಜ ಹಾಗೂ ಸರಳವಾಗಿಯೇ ಅವನ ಧರ್ಮಪತ್ನಿಯರೂ ಸಹ ಬಿಜಾಪುರ ಜಿಲ್ಲೆಯವರೆ ಆಗುತ್ತಾರೆ. ಅದಕ್ಕಾಗಿಯೇ ಗಂಗಾಂಬಿಕೆ ಹಾಗೂ ನೀಲಾಂಬಿಕೆಯರೂ ಕೂಡ ಈ ಜಿಲ್ಲೆಯವರೆಂದು ಪರಿಗಣಿಸಲಾಗಿದೆ. ಬಸವಣ್ಣ ಹಮ್ಮಿಕ್ರೊಂಡ ಮಹಾನ್ ಕಾರ್ಯಗಳಲ್ಲಿ ಗಂಗಾಂಬಿಕೆಯು ತುಂಬ ಪ್ರಮುಖ ಪಾತ್ರವನ್ನು ನಿರ್ವಹಿಸಿದ್ದಾಳೆ. ಇವಳಿಗೆ 'ಸಿದ್ಧರಸ'ನೆಂಬ ಮಗನಿರುವುದು ತಿಳಿದುಬರುತ್ತದೆ. ಆದರೆ ಆ ಮಗು ಬಹಳ ಕಾಲ ಬದುಕದೆ, ಬಾಲ್ಯದಲ್ಲಿಯೇ ಅಸುನೀಗಿದುದಾಗಿ ತಿಳಿದುಬರುತ್ತದೆ. "ಒಂದು ಹಾಳ ಭೂಮಿಯ ಹುಲಿ ಬಂದು ಎನ್ನ ಎಳಗರುವ ಭಕ್ಷಿಸೀತ್ತಲ್ಲಾ' ಎಂಬ ರಚನೆಯಲ್ಲಿ 'ಸಿದ್ಧರಸ' ಮರಣ ಹೊಂದಿರುವುದರ ಸೂಚನೆ ದೊರೆಯುತ್ತದೆ.

"ಗಂಗಾಪ್ರಿಯ ಕೂಡಲ ಸಂಗ" ಎಂಬುದು ಗಂಗಾಂಬಿಕೆಯ ವಚನದಂಕಿತ. ಇದುವರೆಗೆ ಇವಳ ಒಂಬತ್ತು ವಚನಗಳು ಉಪಲಬ್ಧವಾಗಿವೆ. ಮಗನನ್ನು ಕಳೆದುಕೊಂಡು ಪರಿತಪಿಸುವ ತಾಯಿಯ ತಳಮಳವೆ ಬಹುಪಾಲು ವಚನಗಳಲ್ಲಿದೆ ಕೆಲವು ವಚನಗಳು ಬಸವಣ್ಣನವರ ವ್ಯಕ್ತಿತ್ವ ಹಾಗೂ ಕರ್ತೃತ್ವ ಶಕ್ತಿಯ ಗುಣಗಾನವಿದೆ. ಉದಾಹರಣೆಗೆಂದು ಈ ವಚನ ನೋಡಬಹುದು:

**"ಸಾಂದ್ರವಾಗಿ ಹರ-ಗಣಭಕ್ತಿಯ ಮಾಳ್ಪನೆಂತೊ**
**ಮಾದಲಾಂಬಿಕಾ ನಂದನನು?**
**ಸಾಂದ್ರವಾಗಿ ಬಿಜ್ಜಳನರಮನೆಯ ನ್ಯಾಯನೋಳ್ಪನೆಂತೋ**
**ಮಾದರಸನ ಮೋಹದ ಮಗನು?**
**ಸಾಂದ್ರವಾಗಿ ಲಿಂಗಾರ್ಚನೆಯ ಲಿಂಗತೃಪ್ತಿ ಅನುಗೆಯ್ವನೆಂತೋ**
**ಗಂಗಾಪ್ರಿಯ ಕೂಡಲಸಂಗನ ಶರಣ ಚೆನ್ನಾ?"[೭]**

ಈ ವಚನದಲ್ಲಿ ಬಸವಣ್ಣನವರ ಬಹುಮುಖ ವ್ಯಕ್ತಿತ್ವದ ಪರಿಚಯ ಮಾರ್ಮಿಕವಾಗಿ ಮಡುಗಟ್ಟಿದೆ. ಬಸವಣ್ಣನ ತಂದೆ-ತಾಯಿ, ದೊರೆ-ಬಿಜ್ಜಳ, ಬಸವನ ಚಟುವಟಿಕೆ, ರಾಜರ ಆಸ್ಥಾನದಲ್ಲಿ ಆತನಿಗಿರುವ ಸ್ಥಾನ, ಆತನ ಕಾರ್ಯವೈಖರಿ ಧ್ವನಿಪೂರ್ಣವಾಗಿ ದಾಖಲುಗೊಂಡಿವೆ. ಬಸವಣ್ಣನ ಜೀವನಚರಿತ್ರೆ ಹಾಗೂ ಆತನ ಕಾರ್ಯಕಲಾಪಗಳನ್ನು ಒಟ್ಟೊಟ್ಟಿಗೆ ನಿರೂಪಿಸುವುದರಿಂದ ಈ ವಚನಕ್ಕೆ ಐತಿಹಾಸಿಕ ಮಹತ್ವಪ್ರಾಪ್ತವಾಗಿದೆ.

**ನೀಲಾಂಬಿಕೆ**

ನೀಲಾಂಬಿಕೆಯು ಬಸವೇಶ್ವರನ ಕಿರಿಯ ಮಡದಿ. ಇವಳಿಗೆ ನೀಲಮ್ಮ, ನೀಲಲೋಚನೆ ಎಂದೂ ಕರೆಯುಲಾಗುವುದು. ಮಹಾಕವಿ ಹರಿಹರದೇವನು

---

೭. ಶಿವಶರಣೆಯರ ವಚನ ಸಂಪುಟ-೫; ಗಂಗಾಂಬಿಕೆಯ ವಚನಗಳು, ವ:೯

"ಬಸವರಾಜದೇವರ ರಗಳೆ"ಯಲ್ಲಿ ಇವಳನ್ನು "ಮಾಯಾದೇವಿ' ಎಂದೇ ಕರೆದಿರುವುದುಂಟು.

ಇವಳ ವಚನದಲ್ಲಾಗಲೀ, ಸಮಕಾಲೀನರ ವಚನಗಳಿಂದಾಗಲೀ 'ನೀಲಾಂಬಿಕೆ'ಯ ವೈಯಕ್ತಿಕ ಬದುಕಿನ ಬಗೆಗೆ ಏನೆಂದೂ ತಿಳಿಯುವುದಿಲ್ಲ. ಬಸವಣ್ಣನವರು ಕೈಗೊಂಡ ಸಮಾಜಸುಧಾರಣೆ, ಧಾರ್ಮಿಕ ಚಳುವಳಿ, ಆರ್ಥಿಕ ಚಿಂತನೆ, ಮಹಾಮನೆ, ಅನುಭಾವ ಮಂಟಪಗಳಲ್ಲಿ ಇವಳು ನಿರ್ಣಾಯಕ ಎನ್ನಬಹುದಾದ ಪಾತ್ರವನ್ನು ನಿರ್ವಹಿಸಿದ್ದಾಳೆ. ಗಂಗಾಂಬಿಕೆಗೆ 'ಸಿದ್ಧರಸ' ನಿದ್ದಂತೆಯೆ, ನೀಲಾಂಬಿಕೆಗೆ 'ಬಾಲಸಂಗಯ್ಯ'ನೆಂಬ ಮಗನಿದ್ದನು. ಗಂಗಾಂಬಿಕೆಯ ವಚನದಲ್ಲಿ "ಅವಳ ಕಂದ ಬಾಲಸಂಗ" ಎಂದು ಹೇಳಿರುವುದು ಖಚಿತ ಆಧಾರವನ್ನೊದಗಿಸಿದೆ. ದುರ್ದೈವವೆಂದರೆ "ಸಿದ್ಧರಸ"ನಂತೆಯೇ 'ಬಾಲಸಂಗಯ್ಯ'ನು ಬಾಲ್ಯದಲ್ಲಿಯೇ ಮೃತ್ಯುವನ್ನಪ್ಪಿದನು. 'ಸಂಗಯ್ಯ'ನೆಂಬುದು ನೀಲಾಂಬಿಕೆಯ ವಚನದಂಕಿತವಾಗಿದೆ. ಇಲ್ಲಿಯವರೆಗೆ ಇವಳದೆನ್ನಬಹುದಾದ ಒಂದನೂರಾ ಇಪ್ಪತ್ತಾರು (೧೨೬) ವಚನಗಳು ದೊರೆತಿವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಪ್ರಕಟಿತವಾದ ಸಮಗ್ರ ವಚನ ಸಂಪುಟ ಮಾಲಿಕೆಯಲ್ಲಿ (ಶಿವಶರಣೆಯರ ವಚನ ಸಂಪುಟ-ಐದರಲ್ಲಿ) ನೀಲಾಂಬಿಕೆಯ ವಚನಗಳ ಸಂಖ್ಯೆ ೧೨೬ ಎಂದು ಹೇಳಲಾಗಿದೆ.[೮] ಬೆಂಗಳೂರು ಬಸವ ಸಮಿತಿಯವರು ಪ್ರಕಟಿಸಿದ "ನೀಲಮ್ಮನ ವಚನಗಳು" ಎಂಬ ಕೃತಿಯಲ್ಲಿ ಡಾ|| ಸಾ. ಶಿ. ಮರುಳಯ್ಯ ಹಾಗೂ ಶ್ರೀ ಎಸ್. ಶಿವಣ್ಣನವರು "೨೮೮" ವಚನಗಳನ್ನು ಸಂಪಾದಿಸಿಕೊಟ್ಟಿದ್ದಾರೆ.[೯] ಸ್ವರ ವಚನ. ಕಾಲಜ್ಞಾನ ವಚನ, ಬೆಡಗಿನ ವಚನಗಳನ್ನು ನೀಲಾಂಬಿಕೆಯು ರಚಿಸಿದ್ದಾಳೆ.

ಬಸವಣ್ಣನ ಬದುಕು, ಆತನ ಲಿಂಗೈಕ್ಯಗಳೇ ಇವಳ ವಚನಗಳ ವಸ್ತುವಾಗಿದೆ. ಗುರು, ಲಿಂಗ, ಜಂಗಮ, ಪ್ರಸಾದ, ಅನುಭಾವ, ವೈಚಾರಿಕ ಅಂಶಗಳು ಕೆಲವೆಡೆ ಸಾಂದರ್ಭಿಕವಾಗಿ ಬಂದಿವೆ. "ಮಾತಿನ ಹಂಗೇಕೆ ಮನವೆ ಏಕಾಂತದಲ್ಲಿ ನಿಂದ ಬಳಿಕ" ಎನ್ನುವ ವಚನವು ಅವಳ ಮುಟ್ಟಿದ 'ಅನುಭವ'ದ ಅತ್ಯುನ್ನತ ಶಿಖರಕ್ಕೆ ಸಾಕ್ಷಿಯಾಗಿದೆ. "ಮಡದಿ ಎನ್ನಲಾಗದು ಬಸವಂಗೆ ಎನ್ನನು. ಪುರುಷನೆನಲಾಗದು ಬಸವನು ಎನಗೆ, ಉಭಯ ಕುಲವ ಹರಿದು ಬಸವಂಗೆ ಶಿಸುವಾದೆನು, ಬಸವನೆನ್ನ ಶಿಸುವಾದನು"[೧೦] ಎನ್ನುವಲ್ಲಿ ಅವಳ ದಾಂಪತ್ಯ ಬದುಕಿನ ಅನ್ಯೋನ್ಯತೆ ಹಾಗೂ ಪರಸ್ಪರರನ್ನು ಅರಿತು ಬೆರೆತ ರೀತಿ ಅರ್ಥವತ್ತಾಗಿ ಬಂದಿದೆ.

"ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮಕ್ಕೆ
ಮಾಡುವ ಮಾಟವಳಿಯಿತ್ತು ಬಸವಾ;
ಇಂದಿಂಗೆ ಊಟವಳಿಯಿತ್ತು ಬಸವಾ

೮. ವಿವರಕ್ಕೆ ವೀಕ್ಷಿಸಿರಿ: ಸಮಗ್ರ ವಚನ ಸಂಪುಟ - ೫; ಪುಟ - ೨೩೭ ರಿಂದ ೨೬೬.

೯. ಹೆಚ್ಚಿನ ವಿವರಕ್ಕಾಗಿ ನೋಡಿ: 'ನೀಲಮ್ಮನ ವಚನಗಳು' ಸಂ: ಡಾ|| ಸಾ.ಶಿ. ಮರುಳಯ್ಯ ಹಾಗೂ ಎಸ್. ಶಿವಣ್ಣ

ಇಂದಿಂಗೆ ಅವರ ಸಂಗವಳಿದು
ನಿರಾಲಂಬ ಮೂರ್ತಿಯ ಇರವು ಕಾಣಿಸಿತಯ್ಯಾ
ಸಂಗಯ್ಯ, ಬಸವನ ರೂಪು ಎನ್ನಲ್ಲಿ ಅಡಗಲು"[೧೦]

ಈ ವಚನವು ಬಸವಣ್ಣನವರ ಕರ್ತೃತ್ವ ಶಕ್ತಿಯನ್ನು ಸಮರ್ಥವಾಗಿ ಪರಿಚಯಿಸಿದೆ. ಬಸವನ ಕಾರ್ಯಕ್ಷಮತೆ ಅವರು ಲಿಂಗೈಕ್ಯರಾದ ಸಂಗತಿ ಹಾಗೂ ನೀಲಾಂಬಿಕೆಯ ದುಃಖ-ದುಮ್ಮಾನ, ಕಳವಳ ಮುಂತಾದವುಗಳು ಇದರಲ್ಲಿ ಹೆಪ್ಪುಗಟ್ಟಿದೆ. ಬಸವನು ಬಯಲಾದ ಸಂಗತಿ ಇವಳ ಬಹಳಷ್ಟು ವಚನಗಳಲ್ಲಿ ದಾಖಲುಗೊಂಡಿದೆ "ಎನಗಿನ್ನೇನು ಎನಗಿನ್ನೇನು" ಎಂದು ಆರಂಭವಾಗುವ ವಚನ ಓದುಗರ ಹೃದಯವನ್ನೇ ಹಿಂಡುತ್ತದೆ.

ಅವಳೆದೆಯ ತಳಮಳವು ಹಲವಾರು ವಚನಗಳಲ್ಲಿ ನಿರೂಪಣೆಯಾಗಿದ್ದು, ಓದುತ್ತಿದ್ದಂತೆ ಸಹೃದಯಿಗಳ ಕಣ್ಣುಗಳು ತೇವಗೊಳ್ಳುತ್ತವೆ. ಒಂದೊಂದು ವಚನವು ಒಂದೊಂದು ಸಶಕ್ತ ಶೋಕಗೀತೆಗಳಾಗಿ ಬಿಟ್ಟಿವೆ. ಒಂದೆಡೆ ತನ್ನ ಬಾಳ ಬಳ್ಳಿ 'ಮಗು'ವನ್ನು ಕಳೆದುಕೊಂಡ 'ತಾಯಿ'ಯಾಗಿ ಹಲಬುತ್ತಿರುವುದು; ಮತ್ತೊಂದೆಡೆಯಲ್ಲಿ ತನ್ನ ಸರ್ವಸ್ವವೇ ಆಗಿದ್ದ ಗಂಡನನ್ನು ಕಳೆದುಕೊಂಡು, ಎದೆಯೆದೆ ಬಡಿದುಕೊಂಡಳುವ 'ಹೆಂಡತಿ'ಯ ಚಿತ್ರಣ ಕಣ್ಣಿಗೆ ಕಟ್ಟುತ್ತದೆ. ಮಗ 'ಲೋಹಿತಾಶ್ವ'ನನ್ನು ಕಳೆದುಕೊಂಡು ಪ್ರಲಾಪಿಸುವ ರಾಘವಾಂಕನ ಹರಿಶ್ಚಂದ್ರ ಕಾವ್ಯದ 'ಚಂದ್ರಮತಿ'ಯಂತೆ; ಏಕೈಕ ಪುತ್ರನಾದ 'ಶಂಕರ' ಕುದುರೆ ಕಾಲಿಗೆ ಸಿಕ್ಕು ಮೃತ್ಯುವನ್ನಪ್ಪಿದಾಗ ದುಃಖಿಸುವ ಷಡಕ್ಷರದೇವನ 'ತಿರುಕೊಳನಾಚಿ'ಯ ಪ್ರಲಾಪದಂತೆ ಈ ವಚನಗಳು ಓದುಗರನ್ನು ತಟ್ಟುತ್ತವೆ.

ಇನ್ನಿತರ ಸಂಗತಿಗಳನ್ನು ಕೂಡ ಇವಳು ಪ್ರಾಸಂಗಿಕವಾಗಿ ಹೇಳಿದ್ದಾಳೆ. "ಬಸವನ ಅನುಭವದಿಂದ ವಿವರವ ಕಂಡು ವಿಚಾರ ಪತ್ನಿಯಾದೆನಯ್ಯ" ಎಂದು ಹೇಳಿರುವುದು ಇವಳ ಪ್ರಖರ ವೈಚಾರಿಕತೆಯ ಪ್ರತೀಕವಾಗಿದೆ. "ಇದು ಬಹಳ ದೊಡ್ಡ ಮಾತು. ಹೆಂಡತಿ ಗಂಡನಿಗೆ ವಿಚಾರ ಪತ್ನಿಯಾಗಬೇಕು ಎಂಬುದು ಜಾಗತಿಕ ಸಾಹಿತ್ಯದಲ್ಲಿಯೇ ಒಂದು ಅಪರೂಪದ ಅಭಿಪ್ರಾಯವಾಗಿದೆ"[೧೧] ಎಂದಿರುವ ಡಾ|| ವೀರಣ್ಣ ರಾಜೂರ ಅವರ ವಿಶ್ಲೇಷಣೆ ಹೊಸ ಬೆಳಕನ್ನು ಚೆಲ್ಲುತ್ತದೆ. ಈ ರೀತಿಯಾಗಿ ವಚನ ರಚನೆ, ಮಹಾಮನೆ, ಅನುಭಾವ ಮಂಟಪ, ಕಾಯಕ. ದಾಸೋಹ, ಕಲ್ಯಾಣಕ್ರಾಂತಿ ಮುಂತಾದೆಡೆಗಳಲ್ಲಿ ತನ್ನನ್ನು ತಾನು ಇಡಿಯಾಗಿ ತೊಡಗಿಸಿಕೊಂಡು, ಬಸವನ ಏಳಿಗೆಗಾಗಿ ದುಡಿದ ನೀಲಾಂಬಿಕೆಯು ಕರ್ನಾಟಕ ಕಂಡ ಅಪ್ರತಿಮ ಮಹಿಳೆಯಾಗಿದ್ದಾಳೆ.

**ಮುಕ್ತಾಯಕ್ಕ**

ಮುಕ್ತಾಯಕ್ಕ ಅಜಗಣ್ಣನ ತಂಗಿ. ವಚನಕಾರ್ತಿಯರಲ್ಲಿಯೇ ಎದ್ದುಕಾಣುವ ವ್ಯಕ್ತಿತ್ವ

---

೧೦. ಶಿ. ಶ. ವಚನಗಳು, ಸಂ: ೫ ನೀಲಮ್ಮನ ವಚನಗಳು ವ- ೧೦೧
೧೧. ಶಿವಶರಣೆಯರ ವಚನ ಸಂಪುಟ: ೫, ಪ್ರಸ್ತಾವನೆ, ಪುಟ: ೩೭

ಇವಳದ್ದಾಗಿತ್ತು. ಮಹಾದೇವಿಯಕ್ಕನ ತರುವಾಯ ಅವಳಷ್ಟೇ ಎತ್ತರವಾದ ವ್ಯಕ್ತಿತ್ವವನ್ನು ಪಡೆದ ಹೆಣ್ಣು ಮಗಳಿವಳು. ಮುಕ್ತಾಯಕ್ಕನ ತವರು ಮನೆಯು ಇತಿಹಾಸ ಪ್ರಸಿದ್ಧವಾದ ಲೊಕ್ಕಿಗುಂಡಿ (ಇಂದಿನ ಲಕ್ಕುಂಡಿ). ಇವಳ ಗಂಡನ ಮನೆಯು 'ಮೊಸಳೆ ಕಲ್ಲು' ಎನ್ನುವುದು. ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಇಂಧಿನ 'ಮಸಳಿ-ಕಲ್ಲು' ಗ್ರಾಮವೇ ಮುಕ್ತಾಯಕ್ಕನ 'ಮೊಸಳೆ ಕಲ್ಲು' ಆಗಿತ್ತೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಹೆಸರಿನ ಸಾಮ್ಯತೆ, ಸರಳೀಕರಣ ಜನರಾಡುವಾಗ ಸವಕಳಿಗೊಂಡು ಮೊಸಳೆ ಕಲ್ಲು ಮಸಳಿ ಕಲ್ಲು ಆಗಿರುವ ಸಾಧ್ಯತೆ ಇದೆ. ಈ ಊಹೆ ಸಂಭವನೀಯವಾಗಿರುವುದರಿಂದ ಮುಕ್ತಾಯಕ್ಕನ ಗಂಡನ ಮನೆಯು 'ಮಸಳಿಕಲ್ಲು' ಆಗಿತ್ತೆಂದು ಸ್ವೀಕರಿಸಿ; ಅವಳನ್ನು ಬಿಜಾಪುರ ಜಿಲ್ಲೆಯವಳೆಂದು ಪರಿಗಣಿಸಿ ಇಲ್ಲಿ ಪರಿಚಯಿಸಲಾಗಿದೆ.

ಅಲ್ಲಮಪ್ರಭುದೇವ ಸರ್ವರನ್ನು ಪರೀಕ್ಷೆಯ ಮೂಸೆಯ ಬರೆದು ನೋಡಿದರೆ, ಅಂಥ ಅಲ್ಲಮನನ್ನೇ ಮುಕ್ತಾಯಕ್ಕ ಪರೀಕ್ಷೆಗೊಳಪಡಿಸಿದ ದಿಟ್ಟ ಹೆಣ್ಣುಮಗಳು. ಅಜಗಣ್ಣನ ನಿಧನಾನಂತರ ಪ್ರಭುವಿಗೂ - ಮುಕ್ತಾಯಕ್ಕಳಿಗೂ ನಡೆದ ಸಂಭಾಷಣೆ ಮೆಲುಕು ಹಾಕುವಂತಿದೆ. ವಾದ - ಸಂವಾದಗಳ ತರುವಾಯವೇ ಅಲ್ಲಮನನ್ನು ತನ್ನ ಗುರುವೆಂದು ಸ್ವೀಕರಿಸಿ ಗೌರವಿಸುತ್ತಾಳೆ. ಈ ಪ್ರಸಂಗದಲ್ಲಿಯೇ ಅವಳ ಪ್ರಖರ ವ್ಯಕ್ತಿತ್ವದ; ಅತ್ಯುನ್ನತ ವಿಚಾರದ ದರ್ಶನವಾಗುತ್ತದೆ. "ಬಹುಶಃ ವಚನಕಾರ್ತಿಯರಲ್ಲೇ ಇಷ್ಟು ಎತ್ತರದ ಅನುಭಾವಿಕ ನಿಲುವಿನಲ್ಲಿ ನಿಂತು ಮಹಾಜ್ಞಾನಿಯನ್ನು ಎದುರಿಸಿದವರು ಮತ್ತೊಬ್ಬರಿಲ್ಲ"[೧೨] ಎಂದಿರುವ ವಿದ್ವಾಂಸರ ಮಾತುಗಳು ಸಮಂಜಸವಾಗಿವೆ.

ಮುಕ್ತಾಯಕ್ಕ ತನ್ನ ಅಣ್ಣ 'ಅಜಗಣ್ಣ'ನನ್ನೇ ಗುರುವೆಂದು ಸ್ವೀಕರಿಸಿದಾಕೆ, ಅವನ ಹೆಸರನ್ನೇ ತನ್ನ ಅಂಕಿತವನ್ನಾಗಿಟ್ಟುಕೊಂಡಿದ್ದಾಳೆ. ಇವಳ ಕುರಿತು ಶೂನ್ಯ ಸಂಪಾದನೆಯಲ್ಲಿ ವಿವರವಾದ ಮಾಹಿತಿ ದೊರಕುತ್ತದೆ. ತನು, ಮನ, ಯೋಗ, ಗುರು, ಲಿಂಗ, ಜಂಗಮ, ಅರಿವು, ಜ್ಞಾನ, ಆಚಾರ, ವಿಚಾರಗಳ ಕುರಿತು ತನ್ನ ವಚನಗಳಲ್ಲಿ ಚರ್ಚಿಸಿದ್ದಾಳೆ. ಶರಣರನ್ನು ಪ್ರಾಸಂಗಿಕವಾಗಿ ಬಸವನ ವ್ಯಕ್ತಿತ್ವದ ಹಿರಿಮೆಯನ್ನು ಕೊಂಡಾಡಿದ್ದಾಳೆ. ತನ್ನ 'ಅಜಗಣ್ಣ'ನೇ ಇವಳ ವಚನಗಳ ಸ್ಥಾಯೀಭಾವ. ಎಲ್ಲಕ್ಕೂ ಅವನನ್ನೇ ಪ್ರಮಾಣವಾಗಿ ನೀಡುತ್ತಾಳೆ. ಇವಳ ಬೆಡಗಿನ ವಚನಗಳಲ್ಲಿ ಬಳಸಿದ ಪ್ರತಿಮೆ ಸಂಕೇತಗಳು ಪರಿಣಾಮಕಾರಿಯಾಗಿವೆ. 'ಸಿಡಿಲು ಹೊಡೆದ ಬಾವಿಗೆ ಸೋಪಾನವುಂಟೆ?', 'ನೀರ ಬೊಂಬೆಗೆ ನಿರಾಳದ ಗೆಜ್ಜೆಯ ಕಟ್ಟಿ' 'ಜಲದ ಚಿತ್ತಾರದ ಕೊರಳಲ್ಲಿ ದಾರವಿಲ್ಲದ ಮುತ್ತಿನ ಸರವು ನೋಡಾ' 'ಅರಿವಿನಣಲೊಳಗಿಕ್ಕಿ ಅಗಿವುತ್ತಿದೆ ಮರ್ತ್ಯಲೋಕ' ಮೊದಲಾದ ವಚನವನ್ನು ಹೆಸರಿಸಬಹುದಾಗಿದೆ.

**ಮಡಿವಾಳ ಮಾಚಿದೇವ**

ಈತನು ಬಿಜಾಪುರ ಜಿಲ್ಲೆಯ ತಾಲ್ಲೂಕಿನ 'ದೇವರ ಹಿಪ್ಪರಗಿ'ಯವನು.

---

೧೨. ಶಿವಶರಣೆಯರ ವಚನ ಸಂಪುಟ: ೫, ಪ್ರಸ್ತಾವನೆ, ಪುಟ: ೪೧

ಶಿವಶರಣರ ಬಟ್ಟೆಗಳನ್ನು ತೊಳೆಯುವ ಕಾಯಕ ಕೈಗೊಂಡವನೀತ. ಇವನ ಇಷ್ಟದೇವತೆ 'ಕಲ್ಲಿನಾಥ' ಮಲ್ಲಿಕಾರ್ಜುನರು ಮಾಚಿದೇವನಿಗೆ ದೀಕ್ಷೆ ಕೊಟ್ಟ ಗುರುಗಳು. ಮಡಿವಾಳ ಮಾಚಯ್ಯನದು ವೀರ ಮಾಹೇಶ್ವರ ನಿಷ್ಠೆ. ತನ್ನ ಮೇಲೇರಿ ಬಂದಿರುವ ದೊರೆ ಬಿಜ್ಜಳನ ಆನೆಯನ್ನೇ ಮರ್ಧಿಸಿದ ವೀರ-ಧೀರ ವ್ಯಕ್ತಿ. ಕಲ್ಯಾಣಕ್ರಾಂತಿಯಾದ ಬಳಿಕ ಚೆನ್ನಬಸವಣ್ಣನು 'ಉಳುವಿ'ಯೆಡೆಗೆ ಸಾಗಿದಾಗ ಶರಣರ ಪಡೆಯ ಸೇನಾನಾಯಕನಾಗಿ ಹೋರಾಡಿದಾತ. ತನ್ನ ಶೌರ್ಯ-ಸಾಹಸಗಳಿಂದ ತೊಂದರೆಗೆ ಸಿಲುಕಿದ ಶಿವಶರಣರನ್ನು ಅವರಿಂದ ರಚಿತವಾದ ವಚನ ಸಾಹಿತ್ಯವನ್ನು ಸಂರಕ್ಷಿಸಿದ ಕೀರ್ತಿ ಮಡಿವಾಳ ಮಾಚಿದೇವನಿಗೆ ಸಲ್ಲುತ್ತದೆ.

ಬಸವನಲ್ಲಿ ಅಹಂಕಾರವುಂಟಾದಾಗ, ಅವನ ಗರ್ವಭಂಗ ಮಾಡಿದ್ದು, ಆತನಿಗೆ ವಾಸ್ತವದ ದರ್ಶನ ಮಾಡಿಸಿದ್ದು, ನುಲಿಯ ಚಂದಯ್ಯನ 'ಲಿಂಗಯ್ಯ'ನ ಕುರಿತು ಎದ್ದ ವಿವಾದದಲ್ಲಿ ಸಂಧಾನ ಮಾಡಿಸಿದ್ದು, ಈತನ ಬದುಕಿನ ಪ್ರಮುಖ ಅಂಶಗಳಾಗಿವೆ.

'ಕಲಿದೇವರ ದೇವಾ' ಎಂಬುದು ಇವನ ವಚನದ ಅಂಕಿತವಾಗಿದೆ. ಇಲ್ಲಿಯವರೆಗೆ ಒಟ್ಟು ಮೂರುನೂರು ಐವತ್ತೂಮ್ರು (೩೫೩) ಈತನ ವಚನಗಳು ಲಭಿಸಿವೆ. ಮಾಚಿದೇವನ ವಚನಗಳಲ್ಲಿ ಬೆರಗುಗೊಳಿಸುವಷ್ಟು ಅಪಾರವಾದ ವೈವಿಧ್ಯತೆಯಿದೆ. ಬಸವನ ಬಗೆಗೆ ಭಕ್ತಿ ಗೌರವಾದರದ ಭಾವನೆಯಿರುವುದು ಈತನ ವಚನಗಳಲ್ಲಿ ಕಾಣಬಹುದಾಗಿದೆ. ಮೂಢನಂಬಿಕೆ, ಕಂದಾಚಾರ, ಕ್ಷುದ್ರದೇವತಾರಾಧನೆ, ಸ್ಥಾವರಲಿಂಗಪೂಜೆ, ಪಟ್ಟಭದ್ರ ಹಿತಾಸಕ್ತಿಗಳನ್ನು ಈತ ಕಟುವಾಗಿ ಖಂಡಿಸಿದ್ದಾನೆ. ಪುರೋಹಿತ ಶಾಹಿಳಿಗೆ, ಮಡಿವಂತರಿಗೆ ಸನಾತನ ಸಂಪ್ರದಾಯವಾದಿಗಳಿಗೆ ಮಾಚಿದೇವನ ವಚನಗಳು ಚಾಟಿಯೇಟಾಗಿ ಪರಿಣಮಿಸುತ್ತವೆ. ಕಾಯಕ ಮತ್ತು ದಾಸೋಹಗಳನ್ನು ಗೌರವಿಸುವ ಮಾಚಯ್ಯನು ವೀರಶೈವದ ಆಚರಣೆಗಳನ್ನು ಬಲವಾಗಿ ಸಮರ್ಥಿಸಿ, ಸಾಂದರ್ಭಿಕವಾಗಿ ಅವುಗಳಿಗೆ ಆಧಾರಗಳನ್ನು ನೀಡಿದ್ದಾನೆ. 'ಕಚ್ಚುವ ತಿಗಣೆಗಾಗಿ ಮನೆಯ ಸುಟ್ಟವರುಂಟೆ?', 'ಗರಿಯ ಕಟ್ಟಿದ ಕೋಲು ಗರಿಯ ತಾಗಬಲ್ಲುದೆ?' 'ಮುಗ್ಗಿದ ತುರಗದ ಕಾಲ ಕತ್ತರಿಸಿದವರಂಟೆ' 'ಕಸಗೊಂಡ ಭೂಮಿಯಲಿ ಸಸಿ ಪಲ್ಲವಿಸುವುದೇನಯ್ಯ' ಮುಂತಾದ ಮನಮುಟ್ಟುವ ನಾಣ್ಣುಡಿ. ಉಪಮೆಗಳನ್ನು ಬಳಸಿದ್ದಾನೆ.

> "ಎತ್ತೆತ್ತ ನೋಡಿದಡೆ ಬಸವನೆಂಬ ಬಳ್ಳಿ
> ಎತ್ತಿ ನೋಡಿದಡೆ ಲಿಂಗವೆಂಬ ಗೊಂಚಲು
> ಒತ್ತಿ ಹಿಡಿದಡೆ ಭಕ್ತಿ ಎಂಬ ರಸವಯ್ಯ
> ......................................................" ೧೩

---

೧೩. ಮಡಿವಾಳ ಮಾಚಯ್ಯನ ವಚನಗಳು, ವ-೮೮, ಸಂಕೀರ್ಣ ವಚನ ಸಂ;೩; ಪುಟ-೨೦೧.

ಈ ವಚನದಲ್ಲಿ ಅಣ್ಣ ಬಸವಣ್ಣನವರ ದಟ್ಟ ಪ್ರಭಾವವನ್ನು ಧ್ವನಿಪೂರ್ಣವಾಗಿ ಮಾಚಿದೇವ ಕಟ್ಟಿಕೊಟ್ಟಿದ್ದಾನೆ. ಈ ರೀತಿಯಾಗಿ ವಚನಕಾರರಲ್ಲಿಯೇ ತೀರ ವಿಭಿನ್ನವಾದ ವ್ಯಕ್ತಿತ್ವವನ್ನು ಮಡಿವಾಳ ಮಾಚಿದೇವ ಪಡೆದುಕೊಂಡಿದ್ದಾನೆ.

**ಶಂಕರದಾಸಿಮಯ್ಯ**

ಈತನು ಬಿಜಾಪುರಜಿಲ್ಲೆಯ ಹುನಗುಂದ ತಾಲ್ಲೂಕಿನ 'ಕಂದಗಲ್ಲು' ಗ್ರಾಮದವನು. ನವಿಲೆಯ ಜಟಾಶಂಕರಲಿಂಗವು ಶಂಕರದಾಸಿಮಯ್ಯನ ಆರಾಧ್ಯದೈವ. ಶಿವದಾಸಿ ಈತನ ಧರ್ಮಪತ್ನಿ. ಶಂಕರದಾಸಿಮಯ್ಯನ ರಗಳೆ, ಶಂಕರದಾಸಿಮಯ್ಯಪುರಾಣ, ಬಸವಪುರಾಣ, ಚೆನ್ನಬಸವಪುರಾಣ, ಭೈರವೇಶ್ವರ ಕಾವ್ಯದ ಕಥಾಸೂತ್ರ ರತ್ನಕರ ಮುಂತಾದ ಕೃತಿಗಳಲ್ಲಿ ಶಂಕರ ದಾಸಿಮಯ್ಯನ ಬದುಕಿನ ವಿವರಗಳು ದೊರೆಯುತ್ತವೆ. ಮುದನೂರಿನಲ್ಲಿ ಜೇಡರ ದಾಸಿಮಯ್ಯನ ಗರ್ವಭಂಗ ಮಾಡಿದ್ದು, ಕಲ್ಯಾಣದಲ್ಲಿ ವಿಷ್ಣುವಿನ ವಿಗ್ರಹ ದಹಿಸಿದ ಪ್ರಸಂಗ, ಪರಮೇಶ್ವರನಿಂದ ಹಣೆಗಣ್ಣು ಪಡೆದ ಪ್ರಕರಣಗಳು ಈ ಮೇಲೆ ಪ್ರಸ್ತಾಪಿಸಿದ ಗ್ರಂಥಗಳಿಂದ ತಿಳಿದುಬರುತ್ತವೆ.

'ನಿಜಗುರು ಶಂಕರದೇವಾ' ಎಂಬುದು ಶಂಕರದಾಸಿಮಯ್ಯನ ವಚನದ ಅಂಕಿತವಾಗಿದೆ. ಈತನ ಐದೇ ಐದು ವಚನಗಳು ಇದುವರೆಗೆ ದೊರೆತಿವೆ. ಬಸವಣ್ಣ, ಪ್ರಭುದೇವ, ಚನ್ನಬಸವಣ್ಣ, ಮರುಳುಶಂಕರದೇವ, ಜೇಡರದಾಸಿಮಯ್ಯ ಮುಂತಾದವರನ್ನು ತನ್ನ ವಚನಗಳಲ್ಲಿ ಉಲ್ಲೇಖಿಸಿದ್ದಾನೆ. ಸರಳತೆಯೇ ಈತನ ವಚನಗಳ ವಿಶಿಷ್ಟಪೂರ್ಣ ಸಂಗತಿಯಾಗಿದೆ. ಸರಳತೆಯಲ್ಲಿಯೂ ಸುಂದರ ಮತ್ತು ಸೊಗಸಾದ ವಿಚಾರಗಳನ್ನು ಶಂಕರದಾಸಿಮಯ್ಯನು ಅರ್ಥಪೂರ್ಣವಾಗಿ ಪ್ರತಿಪಾದಿಸಿದ್ದಾನೆ. ಅದಕ್ಕೆ ಉದಾ:

> **"ಎರಳೆ ಯತಿಯಂತೆ, ಕಾಗೆ ಪಿಕದಂತಿರಬೇಡವೆ?**
> **ತಿಟ್ಟನೆ ತಿರುಗಿ, ತೊಟ್ಟನೆ ತೊಳಲಿ**
> **ಬಳಲುವವರ ಕಳ ಹೇಸಿಕೆಯಾ ನೋಡಾ!**
> **ಇರುಳು ಹಗಲೆನ್ನದೆ ತಿರುಗುವವರ ಕಂಡು ಹೇಸದೆ**
> **ಅರಿದಡೆ ಶರಣ, ಮರೆದಡೆ ಮಾನವ**
> **ಸತ್ತ ಕನಸ ಹೊತ್ತುಕೊಂಡು ಊರೂರಿಗೆ ಮಾರುವ**
> **ಕಾಶಾಂಬರಧಾರಿಗಳನ್ನೆಲ್ಲ, ನಿಜಗುರು ಶಂಕರದೇವ"[೧೪]**

ಇದರಂತೆಯೆ, 'ಕಾಯವ ಮದವಳಿದಲ್ಲದೆ, ಮಾಯಾವಿಕಾರವಳಿಯದು' ಎಂದು ಆರಂಭವಾಗುವ ವಚನವೂ ಗಮನಾರ್ಹವಾಗಿದೆ. "ಈತನ ವಚನಗಳು ಸರಳತೆ ಹಾಗೂ

---

೧೪. ಶಂಕರ ದಾಸಿಮಯ್ಯಗಳ ವಚನ-೨; ಸಂಕೀರ್ಣ ವ.ಸಂ.-೪; ಪುಟ-೫೪

೧೫. ಸಂಕೀರ್ಣ ವಚನ ಸಂಪುಟ-೪; ಪ್ರಸ್ತಾವನೆ, ಪುಟ-೨೫

ಸ್ಪಷ್ಟತೆಗಳಿಂದ ಕೂಡಿದ್ದು, 'ವಚನ ಶಿಲ್ಪ'ದ ದೃಷ್ಟಿಯಿಂದ ಮಹತ್ವದವುಗಳಾಗಿರುತ್ತವೆ. ಈ ವಚನಗಳ ವಿಷಯ ಸಂಗ್ರಹಗುಣ ಮತ್ತು ಅಭಿವ್ಯಕ್ತಿ ಕೌಶಲ್ಯ ಅತ್ಯಂತ ಗಮನಾರ್ಹವೆನಿಸಿವೆ"[೧೫] ಡಾ|| ಬಿ.ಆರ್. ಹಿರೇಮಠರ ಈ ಅಭಿಪ್ರಾಯವು ತುಂಬ ಮೌಲಿಕವಾಗಿದ್ದು, ಶಂಕರದಾಸಿಮಯ್ಯನ ವಚನಗಳನ್ನು ಅಧ್ಯಯನಿಸಲು ದಾರಿದೀಪ ವಾಗುತ್ತದೆ. ಅಷ್ಟೇ ಅಲ್ಲ, ಆತನ ಒಟ್ಟು ವಚನಗಳ ಅಭಿವ್ಯಕ್ತಿಯ ವ್ಯಾಖ್ಯಾನದಂತಿದೆಯೆಂದು ಹೇಳಬಹುದು.

**ಹಾವಿನಡಾಳ ಕಲ್ಲಯ್ಯ:**

ಕಲ್ಲಯ್ಯನು ಬಿಜಾಪುರ ಜಿಲ್ಲೆಯ 'ಹಾವಿನಡಾಳ' ಗ್ರಾಮದವನು. ಹಾವಿನಡಾಳದ ಆದಿದೈವ 'ಕಲ್ಲಿನಾಥ'ನು ಈತನ ಆರಾಧ್ಯದೈವ. ಕಲ್ಲಯ್ಯನು ಪತ್ತಾರಿಕೆಯು ವಂಶವೃತ್ತಿಯಾಗಿರುವ ಮನೆತನದಿಂದ ಬಂದಾತನೆಂಬುದು ತಿಳಿಯುತ್ತದೆ. ಶಿವನಯ್ಯ ಹಾಗೂ ಸೋಮವ್ವೆ ಪುಣ್ಯದಂಪತಿಗಳ ಸುಪುತ್ರನೀತ. ಹರಿಹರನು ಚಿತ್ರಿಸಿದ ರಗಳೆಯಲ್ಲಿ ಈತನು ಬದುಕು ವಿಸ್ತಾರವಾಗಿ ಬಂದಿದೆ. ಕಲ್ಲಯ್ಯನು ಮಹಾನ್ ಶಿವಭಕ್ತನಾಗಿದ್ದನು. ನಾಯಿಯಿಂದ ವೇದ ಓದಿಸಿದ ಪ್ರಸಂಗ, ಸತ್ತ ಹಾವನ್ನು ಮತ್ತೆ ಬದುಕಿಸಿದ ಪ್ರಸಂಗ ಮುಂತಾದ ದಂತಕತೆಗಳು ಈತನ ಹೆಸರಿನಲ್ಲಿ ಪ್ರಚಾರದಲ್ಲಿವೆ.

'ಮಹಾಲಿಂಗ ಕಲ್ಲೇಶ್ವರಾ'ವು ಹಾವಿನಹಾಳ ಕಲ್ಲಯ್ಯನ ವಚನದ ಅಂಕಿತ. ಈತನವೆಂದು ಹೇಳಲಾಗುವ ಒಂದನೂರಾ ಮೂರು (೧೦೩) ವಚನಗಳು ಲಭ್ಯವಾಗಿವೆ. 'ಅರಳಿದ ಪುಷ್ಪ ಪರಿಮಳಿಸದಿಹುದೆ?', 'ತುಂಬಿದ ಸಾಗರ ನೊರೆತೊರೆಯಾದದಿಪ್ಪುದೆ?' ಎನ್ನುವ ವಚನದಲ್ಲಿ 'ಕರ್ಮ'ದ ಕುರಿತಾಗಿ ವಿವರಿಸಲಾಗಿದೆ. ಈತನ ವಚನಗಳಲ್ಲಿ 'ಅಷ್ಟಾವರಣ, ಲಿಂಗಾಂಗ ಸಾಮರಸ್ಯ, ಶಿವಭಕ್ತಿ, ಆಚಾರವಿಚಾರ, ಶಿವಶರಣ ನಿಷ್ಠೆ, ನಿಷ್ಕಾಮಸೇವೆ, ಅನುಭಾವ, ಶರಣರ ಸ್ಮರಣೆ, ಅಂತರಂಗ ನಿವೇದನೆ ಮೊದಲಾದ ವಸ್ತುಗಳಿವೆ. ಉಪಮೆ ರೂಪಕಗಳಿಂದ ಕೂಡಿದ ಈತನ ವಚನಗಳಲ್ಲಿ ಕಾವ್ಯ ಸೌಂದರ್ಯ, ಭಾವದೀಪ್ತಿಗಳನ್ನೂ ಕಾಣುತ್ತೇವೆ"[೧೬] ಎಂಬ ಮಾತು ಸಮರ್ಥನೀಯವಾಗಿದೆ.

> **"ಅರಿವೆ ಗುರು, ಆಚಾರವೇ ಶಿಷ್ಯ, ಜ್ಞಾನವೆ ಲಿಂಗ**
> **ಪರಿಣಾಮವೇ ತಪ, ಸಮತೆಯೆಂಬುದೆ ಯೋಗದಾಗು ನೋಡಾ**
> **ಈಸಾವನರಿಯದೆ ವೇಷವ ಧರಿಸಿ, ಲೋಚು ಬೋಳಾದಡೆ**
> **ಮಹಾಲಿಂಗ ಕಲ್ಲೇಶ್ವರ ದೇವರು ನಗುವರು"[೧೭]**

ಇದು ತುಂಬ ಜನಪ್ರಿಯ ವಚನವಾಗಿದೆ. ಇದರಲ್ಲಿ ಕಲ್ಲಯ್ಯನು ಗುರು, ಶಿಷ್ಯ, ಲಿಂಗ, ತಪ, ಯೋಗ ಮುಂತಾದವುಗಳಿಗೆ ಅರ್ಥಪೂರ್ಣವಾದ 'ಭಾಷ್ಯ' ಬರೆದಿದ್ದಾನೆ. ಈ ವಚನ ಕಲ್ಲಯ್ಯನ ವೈಚಾರಿಕತೆಗೆ ಶ್ರೇಷ್ಠ ನಿದರ್ಶನವಾಗಿದೆ. ಈ ರೀತಿಯಾಗಿ

---

೧೬. ಅದೇ, ಪುಟ-೨೪.

೧೭. ಹಾವಿನಡಾಳ ಕಲ್ಲಯ್ಯನ ವಚನಗಳು, ವ-೫, ಸಂ.ವ.ಸಂ-೪, ಪುಟ-೩೩೧

ಹಾವಿನಹಾಳ ಕಲ್ಲಯ್ಯನ ವಚನಗಳಲ್ಲಿ ಹಲವು ವಿಷಯಗಳ ಜಿಜ್ಞಾಸೆಯಿದೆ. ಅಪಾರ ವೈವಿಧ್ಯತೆಯಿದೆ. ಕಲ್ಲಯ್ಯನು ಕರ್ಮಯೋಗಿ 'ಸಿದ್ಧರಾಮ'ನ ಸಾನಿಧ್ಯ ಪಡೆದಿದ್ದನೆಂದು ತಿಳಿದುಬರುತ್ತದೆ. ರುದ್ರಮುನಿ, ರೇವಣಸಿದ್ಧರ ಸಂಪರ್ಕವೂ ಈತನಿಗಿತ್ತು. ಮಹಾಶಿವಭಕ್ತನಾದ ಕಲ್ಲಯ್ಯನು ಸೊಲ್ಲಾಪುರದಲ್ಲಿ ಲಿಂಗೈಕ್ಯನಾದನೆಂದು ಆತನ ಸಮಾಧಿಯು ಸಿದ್ಧರಾಮೇಶ್ವರ ದೇವಾಲಯದ ಆವರಣದಲ್ಲಿಯೆಂದು ಪ್ರತೀತಿಯಿದೆ.

## ನುಲಿಯ ಚಂದಯ್ಯ

ನುಲಿಯ ಚಂದಯ್ಯನು ಬಿಜಾಪುರದ ಬಳಿಯಿರುವ 'ಶಿವಣಗಿ' ಗ್ರಾಮದ ನಿವಾಸಿಯಾಗಿದ್ದನು. ಶಿವಣಗಿಯು ಬಿಜಾಪುರದಿಂದ ಪೂರ್ವದಲ್ಲಿ ಹದಿನೆಂಟು ಮೈಲುಗಳ ದೂರದಲ್ಲಿದೆ. ಈತನ ಹೆಸರೇ ಹೇಳುವಂತೆ - ನಾರು ಪಡಿಕೊಯ್ದು, ನೀರಿನಲ್ಲಿ ನೆನೆಯಿಟ್ಟು, ನಾರನ್ನು ತಯಾರಿಸಿ, ಅದರಿಂದ ಹಗ್ಗ-ಹೊಸೆದು ಪೇಟೆಯಲ್ಲಿ ಮಾರಿ ಜೀವನ ಸಾಗಿಸುತ್ತಿದ್ದ ಕಾಯಕ ಜೀವಿಯೀತ. ನುಲಿಯ ಚಂದಯ್ಯನು ತನ್ನ ಕಾಯಕದಲ್ಲಿ ತಲ್ಲೀನನಾದಾಗ ಕರಡಗಿಯ (ಸಜ್ಜೆ) ಒಳಗಿನ ಲಿಂಗವು ಜಾರಿ ಬೀಳುವುದು, ಅದನ್ನು ಚಂದಯ್ಯ ಸ್ವೀಕರಿಸದೆ ಹೋದಾಗ, ಲಿಂಗವು ವ್ಯಕ್ತಿಯ ರೂಪ ಧರಿಸಿ ಬಂದು ಸ್ವೀಕರಿಸುವಂತೆ ಕೇಳಿದ್ದು, ಚಂದಯ್ಯ ನಿರಾಕರಿಸಿದಾಗ, ಮಡಿವಾಳ ಮಾಚಿದೇವ ಸಂಧಾನ ಮಾಡಿಸಿದ್ದು, ಆ ಸಂಧಾನದಂತೆ ಚಂದಯ್ಯ ಹೊಸೆದ ಹಗ್ಗವನ್ನು ಮಾರುವ ಕಾಯಕ ಮಾಡಲು ಹೋದ 'ಲಿಂಗಪ್ಪ'ನು ಹೆಚ್ಚಿಗೆ ಹಣವನ್ನು ಪಡೆಯುವುದು, ಚಂದಯ್ಯ ಮತ್ತೆ ನಿರಾಕರಿಸಿದ್ದು. ಈ ವ್ಯಾಜ್ಯ ಅನುಭಾವ ಮಂಟಪಕ್ಕೆ ಬಂದಿದ್ದು, ಶಿವಶರಣರ ಶಿವಾನುಭವಗೋಷ್ಠಿಯಲ್ಲಿ ಇತ್ಯರ್ಥವಾದ ಪ್ರಕರಣ ಸ್ವಾರಸ್ಯಪೂರ್ಣವಾಗಿದೆ. ಈ ದಂತಕತೆಯ ಸತ್ಯಾಸತ್ಯತೆ ಏನೇ ಇರಲಿ, ಇದರಿಂದ ತಿಳಿದುಬರುವುದೇನೆಂದರೆ - ಚಂದಯ್ಯನು ನಿಷ್ಠಾವಂತ, ಪ್ರಾಮಾಣಿಕ ಕಾಯಕ ಜೀವಿಯಾಗಿದ್ದನೆಂದು ಸ್ಪಷ್ಟವಾಗುತ್ತದೆ.

'ಚಂದೇಶ್ವರ ಲಿಂಗ'ವು ಚಂದಯ್ಯನ ವಚನದ ಅಂಕಿತವಾಗಿದೆ. ನಲವತ್ತೆಂಟು ವಚನಗಳು ಇಲ್ಲಿಯವರಿಗೆ ದೊರೆತಿವೆ. "ಆವಾವ ಕಾಯಕದಲ್ಲಿ ಬಂದರೂ ಭಾವ ಶುದ್ಧವಾಗಿ ಗುರುಲಿಂಗ ಜಂಗಮಕ್ಕೆ ಮಾಡುವುದೇ ಶಿವಪೂಜೆ" (ವ-೨)

'ಕಾರೆಯ ಕಾಯಿ ಕಾಡಿನ ಸೊಪ್ಪಾಯಿತ್ತಾದಡ ಕಾಯಕದಿಂದ ಬಂದುದು ಲಿಂಗಾರ್ಪಿತ' (ವ-೮) 'ಗುರುವಾದರೂ ಕಾಯಕದಿಂದವೇ ಜೀವನ್ಮುಕ್ತಿ, ಲಿಂಗವಾದರೂ ಕಾಯಕದಿಂದವೇ ವೇಷದ ಪಾಶ ಹರಿವುದು' (ವ-೨೧) 'ಸತ್ಯ ಶುದ್ಧ ಕಾಯಕದಿಂದ ಬಂದ ದ್ರವ್ಯದಲ್ಲಿ ಚಿತ್ತ ವಿಚ್ಛಂಬವಾಗದಿರಬೇಕು' (ವ-೪೪) ಮುಂತಾಗಿ ಪ್ರತಿಪಾದಿಸಿರುವುದನ್ನು ಗಮನಿಸಿದರೆ ಚಂದಯ್ಯನ 'ಕಾಯಕದ ಪರಿಕಲ್ಪನೆ'ಯು ಸುಸ್ಪಷ್ಟವಾಗುತ್ತದೆ. ಕಾಯಕ ಮತ್ತು ದಾಸೋಹಕ್ಕೆ ನುಲಿಯ ಚಂದಯ್ಯನು ಹೊಸ ವ್ಯಾಖ್ಯಾನವನ್ನೇ ಬರೆದಿದ್ದಾನೆಂದು ಹೇಳಬಹುದಾಗಿದೆ. "ಚಂದಯ್ಯನ ಕಾಯಕದ ಕಲ್ಪನೆ ಅರ್ಥಪೂರ್ಣವಾಗಿದೆ. 'ಕಾಯಕ' ಭಾವಶುದ್ಧವಾಗಿರಬೇಕು. ಹಾಗೆ ಬಂದುದನ್ನು

ಗುರು-ಲಿಂಗ-ಜಂಗಮಕ್ಕೆ ವಿನಿಯೋಗಿಸುವುದೆ "ಶಿವಪೂಜೆ' ಎನ್ನುವ ಆಲೋಚನೆಯಲ್ಲಿ ನಾವೀನ್ಯತೆಯಿದೆ"[೧೮] ಎಂದಿರುವ ಡಾ|| ಎಸ್. ವಿದ್ಯಾಶಂಕರ ಅವರ ಮಾತುಗಳು ಯಥೋಚಿತವಾಗಿದೆ.

ಗುರುಲಿಂಗ ಜಂಗಮದ ಕುರಿತಾಗಿ ಹಲವಾರು ವಚನಗಳನ್ನು ಈತ ರಚಿಸಿದ್ದಾನೆ. ಅದರಲ್ಲಿ ಇದೊಂದನ್ನು ನೋಡಬಹುದು.

> **"ಭಾವಶುದ್ಧವಾಗಿಪ್ಪುದೇ ಗುರುಪೂಜೆ**
> **ಜ್ಞಾನಶುದ್ಧವಾಗಿಪ್ಪುದೇ ಲಿಂಗಪೂಜೆ**
> **ತ್ರಿಕರಣ ಶುದ್ಧವಾಗಿ ತ್ರಿವಿಧ ಮಲದಲ್ಲಿ**
> **ನಿಶ್ಚಯವಾಗಿ ನಿಂದುದೇ ಜಂಗಮಪೂಜೆ**
> **ಇಂತೀ ವಿವಿಧ ಭೇದದಲ್ಲಿ ತ್ರಿವಿಧಾರ್ಪಣವ ಅರ್ಪಿಸಿ ನಿಂದುದೇ**
> **ಚಂದೇಶ್ವರಲಿಂಗಕ್ಕೆ ಅರ್ಪಿತ, ಮಡಿವಾಳಯ್ಯಾ"[೧೯]**

ಈ ವಚನವು ಚಂದಯ್ಯನ ವೈಚಾರಿಕತೆಗೆ ಶ್ರೇಷ್ಠ ನಿದರ್ಶನವೊದಗಿಸುತ್ತದೆ.

**ವೀರಗೊಲ್ಲಾಳ**

ಮಹಾಶಿವಭಕ್ತನಾದ "ಗೊಲ್ಲಾಳ'ನು ಬಿಜಾಪುರ ಜಿಲ್ಲೆಯ 'ಸಿಂದಗಿ' ತಾಲ್ಲೂಕಿನ 'ಗೋಲಗೇರಿ' ಗ್ರಾಮದವನು. ಗೊಲ್ಲಾಳೇಶ್ವರ ಪುರಾಣದಲ್ಲಿ ವೀರಗೊಲ್ಲಾಳ ಚರಿತ್ರೆ ವಿವರವಾಗಿ ದೊರೆಯುತ್ತದೆ. ಲಿಂಗಾರ್ಚನ ರಗಳೆ, ಬಸವಪುರಾಣ, ಶಿವತತ್ವ ಚಿಂತಾಮಣಿ ಇವೇ ಮೊದಲಾದ ಗ್ರಂಥಗಳಲ್ಲಿಯೂ ಪ್ರಾಸಂಗಿಕವಾಗಿ ಈತನ ಜೀವನ ಹಾಗೂ ರಚನೆ ಸಂಬಂಧಿಸಿದ ಕೆಲಸಂಗತಿಗಳು ಬರುತ್ತವೆ. ಈತನು ವೃತ್ತಿಯಿಂದ ಕುರಿಗಳನ್ನು ಕಾಯಕಕ್ಕೆಗೊಂಡಾತ. ಕುರಿಗಳನ್ನು ಮೇಯಿಸುವುದೆ ಈತನ ಕುಲ ಕಸಬಾಗಿರುವುದರಿಂದ ಈತನ ವಚನಗಳ ತುಂಬ ಆಡು, ಕುರಿ, ಹೋತ, ಟಗರು, ತೋಳ, ಹಿಕ್ಕೆ ಇತ್ಯಾದಿಗಳು ಪದೇ ಪದೇ ನಿರೂಪಣೆಗೊಂಡಿವೆ. ಕುರಿಯ ಹಿಕ್ಕೆಯಲ್ಲಿಯೇ ಶಿವಲಿಂಗದ ದರ್ಶನ ಪಡೆದು, ಹಾಗೂ ಇತರರಿಗೆ ದರ್ಶನ ಮಾಡಿಸಿರುವ ಪವಾಡವೊಂದು 'ವೀರಗೊಲ್ಲಾಳ'ನ ಬದುಕಿನಲ್ಲಿ ಜರುಗಿದ್ದು ತಿಳಿದುಬರುತ್ತದೆ. ಈ ವಿಷಯವಾಗಿಯೇ ದಂತಕತೆಯೆಂದು ಹುಟ್ಟಿಕೊಂಡು, ಆ ಭಾಗದ ಜನ-ಮನದಲ್ಲಿ ನೆಲೆಸಿದೆ.

ವೀರಗೊಲ್ಲಾಳನ ಭಕ್ತರು 'ಗೋಲಗೇರಿ'ಯಲ್ಲಿ ದೇವಾಲಯವನ್ನು ನಿರ್ಮಿಸಿದ್ದಾರೆ. ಬೀರಗೊಲ್ಲಳನ ಹೆಸರಿನಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ. ವರ್ಷಂಪ್ರತಿ ತಪ್ಪದೆ ಜಾತ್ರೆಯು ಸಂಭ್ರಮ ಹಾಗೂ ಸಡಗರದಿಂದ ಜರುಗುತ್ತದೆ. ವೀರಗೊಲ್ಲಾಳ ಕಾಲನಂತರ ಆರಂಭವಾದ ಈ ಜಾತ್ರಾ ಮಹೋತ್ಸವ ಇಂದಿಗೂ ತಪ್ಪದೆ ಪ್ರತಿ ವರುಷ ವಿಜೃಂಭಣೆಯಿಂದ ಆಚರಿಸಲ್ಪಡುತ್ತದೆ. ಗೋಲಗೇರಿಯು 'ಜಾಗೃತಸ್ಥಳ'ವೆಂದೇ

---

೧೮. ನುಲಿಯ ಚಂದಯ್ಯನ ವಚನ, ಸಂ.ವ.ಸಂ.-೨ 'ಪ್ರಸ್ತಾವನೆ'ಯಲ್ಲಿ.
೧೯. ಅದೇ, ವಚನ-೩೮, ಪುಟ-೪೩೪

ಭಕ್ತಾದಿಗಳಲ್ಲಿ ಪ್ರತೀತಿಯಿದೆ. ಈ ಅಂಶಗಳು ಗೊಲ್ಲಾಳನ ಬಗೆಗೆ ಜನತೆ ಇರಿಸಿದ ಭಕ್ತಿ. ಗೌರವಾದರಗಳ ಪ್ರತೀಕವೇ ಆಗಿರುವುದನ್ನು ಸುಲಭವಾಗಿ ಗುರುತಿಸಬಹುದಾಗಿದೆ.

'ವೀರ ಬೀರೇಶ್ವರಲಿಂಗ'ವೆಂಬುದು ವೀರಗೊಲ್ಲಾಳನ ವಚನದ ಅಂಕೀತವಾಗಿದೆ. ಒಟ್ಟು ಹತ್ತು ವಚನಗಳು ಈವರೆಗೆ ಉಪಲಬ್ಧವಾಗಿದೆ. ತನ್ನ ಕುಲಕಾಯಕವಾದ ಕುರಿಗಳನ್ನು ಕಾಯುವಾಗ ಜರುಗಿರುವ ಸಂಗತಿಗಳೇ ಈತನ ವಚನಗಳ ವಸ್ತುವಾಗಿ ಹರಳುಗಟ್ಟಿವೆ. "ಆಡು ಆರುದಿಂಗಳಹುಟ್ಟಿ, ಮೂರು ದಿನ ಬದುಕಿ, ಒಂದು ದಿನ ಸತ್ತಿತ್ತು" (ವ- 'ಹೋತನ ಕೊಯ್ದು ಕುರಿಯ ಸುಲಿದು, ಮರಿಯ ಕೊರಳೆನ್ನೆತ್ತಿ, ಕಾವಲಕುನ್ನಿಯ ಕೆಡಹಿ' (ವ-) ಇತ್ಯಾದಿ ವಚನಗಳನ್ನು ನೋಡಬಹುದಾಗಿದೆ. ಈತನ ವಚನಗಳು ವಚನ ಸಾಹಿತ್ಯಕ್ಕೆ ಹೊಸ ಲೋಕವನ್ನೇ ತೆರೆಯುತ್ತವೆ. ವಿಶಿಷ್ಟ ಅನುಭವಗಳಿಂದ, ವಿಶೇಷ ಪದ ಪ್ರಾಯೋಗದಿಂದ ವೀರಗೊಲ್ಲಾಳನ ವಚನಗಳು ಸಾಹಿತ್ಯಾಸಕ್ತರ ಮನಸೂರೆಗೊಂಡಿವೆ.

**"ಕಲ್ಲು ಲಿಂಗವಲ್ಲ, ಉಳಿಯ ಮೊನೆಯಲ್ಲಿ ಒಡೆಯಿತ್ತು**
**ಮರದೇವರಲ್ಲ, ಉರಿಯಲ್ಲಿ ಬೆಂದಿತ್ತು**
**ಮಣ್ಣು ದೇವರಲ್ಲ, ನೀರಿನ ಕೊನೆಯಲ್ಲಿ ಕದಡಿತ್ತು**
**ಇಂತಿವನೆಲ್ಲವನರಿವ ಚಿತ್ತ ದೇವರಲ್ಲ**
**ಕರಣಂಗಳ ಮೊತ್ತದೊಳಗಾಗಿ ಸತ್ವಗೆಟ್ಟಿತ್ತು**
**ಇಂತಿವ ಕಳೆದುಳಿದ ವಸ್ತುವಿಪ್ಪೆಡೆಯಾವುದೆಂದಡೆ:**
**ಕಂಡವರೊಳಗೆ ಕೈಕೊಂಡಾಡದೆ,**
**ಕೊಂಡ ವ್ರತದಲ್ಲಿ ಮತ್ತೊಂದನೊಡಗೂಡಿ ಬೆರೆಯದೆ**
**ವಿಶ್ವಾಸ ಗ್ರಹಿಸಿ ನಿಂದಲ್ಲಿ ಆ ನಿಜಲಿಂಗವಲ್ಲದೆ,**
**ಮತ್ತೊಂದು ಪರತನರಿಯದೆ ನಿಂದಾತನೆ ಸರ್ವಾಂಗಲಿಂಗಿ**
**ವೀರಬೀರೇಶ್ವರಲಿಂಗದೊಳಗಾದ ಶರಣ"[೨೦]**

ಈ ವಚನದಲ್ಲಿ ವೀರಗೊಲ್ಲಾಳ ನಿಲುವನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. ಪ್ರಗತಿಪರ ದೃಷ್ಟಿಕೋನವನ್ನು ಒಳಗೊಂಡ ವಚನಗಳನ್ನು ರಚಿಸಿರುವುದು ಗಮನಾರ್ಹ ಸಂಗತಿಯಾಗಿದೆ.

ಈ ರೀತಿಯಾಗಿ ವಚನ ಸಾಹಿತ್ಯದ ಆಗಸದಲ್ಲಿ ಬೆಳ್ಳಿಚುಕ್ಕಿಗಳಂತೆ ಬಿಜಾಪುರ ಜಿಲ್ಲೆಯ ವಚನಕಾರರು ಬೆಳಗಿದರೆ, ಬಸವಣ್ಣನವರು ಹುಣ್ಣಿಮೆಯ ಪೂರ್ಣಚಂದ್ರನಂತೆ ಕಂಗೊಳಿಸುತ್ತಾರೆ. ಈ ಜಿಲ್ಲೆಯ ವಚನಕಾರರನ್ನು ಗುರುತಿಸುವುದೇ ಒಂದು ಚೇತೋಹಾರಿ ಅನುಭವ. ಈ ಶಿವಶರಣರ ವಚನಗಳನ್ನು ಆಸ್ವಾದಿಸುವುದೇ ಒಂದು ರಸಾನುಭವವಾಗಿದೆ. ಬಿಜಾಪುರ ಜಿಲ್ಲೆಯ ವಚನಕಾರರನ್ನು ಪರಿಚಯಿಸುವುದೆಂದರೆ, ಸಮಗ್ರ ವಚನ ಸಾಹಿತ್ಯದ 'ಪಕ್ಷಿನೋಟ'ವೊಂದನ್ನು ಕಟ್ಟಿಕೊಟ್ಟಂತಾಗುತ್ತದೆಯೆಂದರೆ ಅತಿಶಯೋಕ್ತಿಯಾಗಲಾರದು. ❑

---

೨೦. ವೀರಗೊಲ್ಲಾಳನ ವಚನಗಳು, ಸಂ.ವ.ಸಂ.-೪; ವ-೩, ಪುಟ-೨೯.

# ಶರಣರ ಕಾಯಕ*

'ಕಾಯಕ' ಎಂಬುವ ಪದವು ಹನ್ನೆರಡನೆಯ ಶತಮಾನದ ಬಸವಾದಿ ಪ್ರಮುಖ ವಚನಕಾರರಿಂದ ಆವಿಷ್ಕಾರಗೊಂಡು, ಚಲಾವಣೆಯಲ್ಲಿ ಬಂದಿತು. ಈ ಕಾಯಕ ತತ್ವವು ಶಿವಶರಣರು ವಿಶ್ವಕ್ಕೆ ನೀಡಿರುವ ಅಪೂರ್ವ ಕೊಡುಗೆಯಾಗಿದೆಯೆಂದು ಹೇಳಬಹುದಾಗಿದೆ.

## ಪ್ರಸ್ತಾವನೆ

'ಕಾಯಕ' ಪದವು ದುಡಿತ, ಉದ್ಯೋಗ, ವೃತ್ತಿ, ಕೂಲಿ, ಶ್ರಮ, ಕೆಲಸ, ಕಾರ್ಯ, ದಂಧೆ, ಕಾಮಗಾರಿ, ದಗದ ಇತ್ಯಾದಿಗಳಿಗಿಂತಲೂ ಬೇರೆಯಾಗಿದೆ. ವೈದಿಕರ 'ನಿಷ್ಕಾಮಕರ್ಮ', ಜೈನರ 'ಅಪರಿಗ್ರಹ', ಕ್ರೈಸ್ತರ 'ಕಾಲಿಂಗ್' ಮೊದಲಾದವುಗಳಿಗಿಂತಲೂ ವಿಭಿನ್ನವಾಗಿದೆ. ಇವೆಲ್ಲ ಪದಗಳಿಂತಲೂ 'ಕಾಯಕ'ವು ವಿಶಿಷ್ಟವೂ ವ್ಯಾಪಕವೂ ಅರ್ಥಪೂರ್ಣವೂ ಆಗಿದೆ.

'ಕಾಯಕ'ವು ನಿಷ್ಕಪಟ, ನಿಸ್ವಾರ್ಥತನದಿಂದ ಕೂಡಿಕೊಂಡಿದ್ದು, ಶುಚಿತ್ವ ಮೈಗೂಡಿಸಿಕೊಂಡಿದೆ. ಕಾಯಕದಲ್ಲಿ ನಿಷ್ಠೆ, ಪ್ರಾಮಾಣಿಕತೆಗಳು ಅತಿ ಮುಖ್ಯ. ಯಾರೊಬ್ಬರ ಒತ್ತಾಯಕ್ಕೊಳಪಟ್ಟು ಮಾಡುವುದಾಗಿರದೆ, ಸ್ವತಃ ಮನಮುಟ್ಟಿ ಮಾಡುವ ಕಾರ್ಯವು ಕಾಯಕವೆನಿಸಿಕೊಳ್ಳುತ್ತದೆ. ನಾವು ಕೈಗೊಳ್ಳುವ ಕಾಯಕವು ಮೋಸ, ಲಂಚ, ವಂಚನೆ, ಕ್ರೌರ್ಯ, ದೌರ್ಜನ್ಯ, ದಬ್ಬಾಳಿಕೆ, ಅನ್ಯಾಯ, ಅಕ್ರಮ, ಅನೀತಿ, ಅಧರ್ಮ ಮುಂತಾದ ಪಾಶವೀಯ ಅಂಶಗಳಿಂದ ವಿಮುಕ್ತವಾಗಿದ್ದು, ಮಾನವೀಯ ಮೌಲ್ಯಗಳ ತಳಹದಿಯ ಮೇಲೆ ರೂಪಿಸಲ್ಪಟ್ಟಿರಬೇಕೆಂಬುದು ವಚನಕಾರರ ಆಶಯವಾಗಿದೆ.

## ಕಾಯಕದಲ್ಲಿ ಶುಚಿತ್ವ

'ಶುಚಿ'ತ್ವಕ್ಕೆ ಎಲ್ಲ ಕ್ಷೇತ್ರಗಳಲ್ಲಿ ಅಗ್ರ ಪ್ರಾಶಸ್ತ್ಯವಿದೆ. ಶುಚಿತ್ವದಿಂದಲೇ ಯಾವುದೇ ಕಾರ್ಯಕ್ಕೂ ಮಹೋನ್ನತೆ ಪ್ರಾಪ್ತವಾಗುತ್ತದೆ. ಶುಚಿತ್ವವಿರದ ಎಂತಹ ಕಾರ್ಯಗಳೂ ಕೂಡ ತಮ್ಮ ಮೌಲ್ಯಗಳನ್ನು ಕಳೆದುಕೊಳ್ಳುತ್ತವೆ. ವೀರದೊಂದಿಗೆ ಶುಚಿತ್ವವು ಮೇಳೈಸಿದ್ದಾರೆ, ಅದು 'ವೀರಸಿದ್ಧಾಂತದ ಶಾಸನ' ಆಗುವುದೆಂದು ನಮ್ಮ ಪ್ರಾಚೀನ ಮಹಾಕಾವ್ಯಗಳು ಪ್ರತಿಪಾದಿಸಿವೆ. ಅದಕ್ಕೆ ಮಹಾಭಾರತದ 'ಭೀಷ್ಮ'ರ ಪಾತ್ರವು ಉಜ್ವಲ ಉದಾಹರಣೆ ಯಾಗಿದೆ. ವಚನಕಾರರಲ್ಲಿಯೂ ಕೂಡ ಶುಚಿತ್ವಕ್ಕೆ ಪ್ರಾಧಾನ್ಯತೆ ಲಭಿಸಿದೆ. ಅದಕ್ಕಾಗಿಯೇ ಬಸವಣ್ಣನವರು: "ಕೂಡಲ ಸಂಗನ ಶರಣರು ಸರ್ವಾಂಗ ಕಲಿಗಳು, ಸೋಂಕಿದಲ್ಲಿ ಶುಚಿಗಳು" ಎಂದು ಹೇಳಿರುವುದನ್ನಿಲ್ಲಿ ಸ್ಮರಿಸಿಕೊಳ್ಳಬಹುದು. ಈ ಶುಚಿತ್ವವನ್ನು ಶಿವಶರಣರು ಮತ್ತೆ - ಮತ್ತೆ ಪ್ರಸ್ತಾಪಿಸಿರುವುದನ್ನು ಕಾಣುತ್ತೇವೆ.

---

* . ಬಸವಪಥದಲ್ಲಿ (ಸಂ-೧೩, ಸಂ-೨-೧೯೯೧) ಪ್ರಕಟಗೊಂಡ 'ಶರಣರ ಕಾಯಕ' ಹಾಗೂ 'ಅನುಭಾವ ಪಥ' (ಸಂ-೪, ಸಂ-೨, ೧೯೯೧)ದಲ್ಲಿ ಪ್ರಕಟವಾದ 'ವಚನಕಾರರು ಪ್ರತಿಪಾದಿಸಿರುವ 'ಕಾಯಕ ತತ್ತ್ವ' ಇನ್ನೆರಡೂ ಲೇಖನಗಳನ್ನು ಕ್ರೋಢೀಕರಿಸಿಕೊಂಡು, ಹೊಸದಾಗಿ ಪರಿಷ್ಕರಿಸಿದ ಲೇಖನವಿದು.

**ಬಸವಣ್ಣ**

> "ಗುರುಲಿಂಗ ಜಂಗಮದ ಹೆಸರಿನಿಂದ ಕಾಯಕವ ಮಾಡಿ
> ಗುರುಜನಕೆ ವಂಚಿಸಿದೊಡೆ ಭಕ್ತದ್ರೋಹಿ ನೋಡಾ
> ಕೂಡಲಸಂಗಮದೇವಾ"[೧]

**ಚೆನ್ನಬಸವಣ್ಣ**

> "ಮಾಡುವಲ್ಲಿ ನೀಡುವಲ್ಲಿ ಕೂಡೆ ಶುದ್ಧನಲ್ಲದಿದ್ದರೆ
> ನೀನಂದೆ ಮೂಗ ಕೊಯ್ಯ......"[೨]

**ಕಾಳವ್ವೆ**

> "ಸತ್ಯ ಶುದ್ಧವಿಲ್ಲದುದು ಕಾಯಕವಲ್ಲ"[೩]

**ಮೆರೆಮಿಂಡಯ್ಯ**

> "ಅಸಿಯಾಗಲಿ ಕೃಷಿಯಾಗಲಿ ವಾಚಕವಾಣಿ ಮಸಿಯಾಗಲಿ
> ಮಾಡುವಲ್ಲಿ ಹುಸಿಯಿಲ್ಲದಿರಬೇಕು"[೪]

**ಢಕ್ಕೆಯ ಬೊಮ್ಮಣ್ಣ**

> "ಆವ ಸ್ವಕಾಯಕವಿಂದಾದಡು ಆಗಲಿ
> ಭಾವ ಶುದ್ಧಿಯಾಗಿ ಮಾಡುವುದು....."[೫]

ಈ ಮೇಲಿನ ಮಾತುಗಳಿಂದ ಕಾಯಕದಲ್ಲಿ ಸತ್ಯ ಶುದ್ಧತೆಗಳು ಪ್ರಮುಖವಾದವುಗಳೆಂಬುದು ವಿಧಿತವಾಗುತ್ತದೆ. ತನು-ಮನಗಳಿಂದ ಮಾಡುವ ಕೆಲಸ, ನಿಷ್ಠೆ - ಪ್ರಾಮಾಣಿಕತೆಗಳಿಂದ ಕೈಗೊಳ್ಳುವ ಕಾರ್ಯವು (ಅದು ಯಾವುದಾಗಿದ್ದರೂ) ಕಾಯಕವೆನಿಸಿಕೊಳ್ಳುತ್ತದೆ. ಭಾವಶುದ್ಧಿಯಿಂದ ಮಾಡುವ ಆ ಕಾಯಕವೇ ಜಂಗಮ ಪೂಜೆಯೆನಿಸಿಕೊಳ್ಳುತ್ತದೆಯೆಂದು ಢಕ್ಕೆಯ ಬೊಮ್ಮಣ್ಣ ಹೇಳುತ್ತಾನೆ.

ಸುಳ್ಳು, ಮೋಸ ವಂಚನೆಗಳಿಂದ ಕಾರ್ಯವನ್ನು ಸಾಧಿಸಿಕೊಳ್ಳಬಾರದು. ಅದು ನಿಷ್ಪ್ರಯೋಜಕವಾಗುತ್ತದೆ. ಅಂತಹ ವ್ಯಕ್ತಿಯು ಮಾಡುವ ಪೂಜೆಯು ಶಿವನಿಗೆ ಸಲ್ಲದೆ ಹೋಗುತ್ತದೆ. ಅಂಥವರು ಭಕ್ತದ್ರೋಹಿಗಳಾಗುತ್ತಾರೆಂದು ಬಸವಣ್ಣನವರು ಎಚ್ಚರಿಸಿರುವುದನ್ನು ಕಾಣುತ್ತೇವೆ. ಸತ್ಯ ಶುದ್ಧತೆಯಿಂದ ಕೂಡಿದ ಕಾಯಕವನ್ನು ಕೈಗೊಂಡುದಾದರೆ,

---

೧. ಬಸವಣ್ಣನವರ ಷಟಸ್ಥಳದ ವಚನಗಳು ಸಂ: ಪ್ರೊ. ಶಿ.ಶಿ. ಬಸವನಾಳ, ವಚನ: ೫೨

೨. ಚೆನ್ನಬಸವಣ್ಣನವರ ವಚನಗಳು, ಸಂ. ಡಾ. ಆರ್.ಸಿ. ಹಿರೇಮಠ, ವ-೪೦೨

೩. ವಚನ ಮಂಜರಿ, ಸಂ. ಡಾ. ಚನ್ನಕ್ಕಾ ಎಲಿಗಾರ, ವಚನ-೪೧

೪. ಸಕಲ ಪುರಾತನರ ವಚನಗಳು (೧) ಸಂ. ಡಾ. ಆರ್.ಸಿ. ಹಿರೇಮಠ, ವಚನ - ೨೫

೫. ವಚನ ಮಂಜರಿ, ಸಂ. ಡಾ. ಚನ್ನಕ್ಕ ಎಲಿಗಾರ, ವಚನ - ೩೩

ಅಂತರಂಗ ಮತ್ತು ಬಹಿರಂಗಗಳೆರಡೂ ಶುದ್ಧವಾಗುತ್ತವೆ. ಅಂಥ ವ್ಯಕ್ತಿಯ ವ್ಯಕ್ತಿತ್ವ ಪಾರದರ್ಶಕವಾಗುತ್ತದೆ. ಈ ಪಾರದರ್ಶಕ ವ್ಯಕ್ತಿತ್ವದ ಭಕ್ತನ ಭಾವಶುದ್ಧಿಯೇ ಶಿವನನ್ನು ಒಲಿಸಿಕೊಳ್ಳುವ ದಾರಿಯಾಗುತ್ತದೆ.

**ಕಾಯಕದಲ್ಲಿ ಸಮಾನತೆ**

ವಚನಕಾರರು 'ಕಾಯಕ' ತತ್ತ್ವವನ್ನು ಪ್ರತಿಪಾದಿಸುವಾಗ ಬಹುಮುಖ್ಯವಾದ ಕೆಲ ಅಂಶಗಳನ್ನು ಸೂಚಿಸಿದ್ದಾರೆ. ಇಂಥ ಕಾರ್ಯ ಮಾಡಬೇಕು, ಇಂಥವನ್ನು ಮಾಡಬಾರದು ಎನ್ನುವ ಯಾವುದೇ ಕಟ್ಟುಪಾಡುಗಳನ್ನು ವಿಧಿಸಿಲ್ಲ. ತಮಗೆ ಸರಿಯೆಂದು ಕಂಡುಬರುವ ವಯಕ್ತಿಕವಾಗಿ ತೃಪ್ತಿಯುಂಟುಮಾಡುವ, ಮನಸ್ಸಿಗೆ ನೆಮ್ಮದಿಯನ್ನು ಕೊಡುವ ಯಾವುದಾದರೂ ಕಾಯಕವನ್ನು ಕೈಗೊಳ್ಳಬಹುದಾಗಿದೆ. ಶತ-ಶತಮಾನಗಳಿಂದ ಬಂದಿರುವ ವಂಶವೃತ್ತಿ ಅಂದರೆ 'ಕುಲಕಸಬ'ನ್ನೇ ಮಾಡಬೇಕೆಂಬ ಕಡ್ಡಾಯವನ್ನೂ ಹೇರುವುದಿಲ್ಲವೆಂಬುದು ಗಮನಾರ್ಹವಾದ ಅಂಶವಾಗಿದೆ. ಒಂದು, ವೃತ್ತಿ ಬಿಟ್ಟು ಮತ್ತೊಂದು ವೃತ್ತಿಯನ್ನು ಮಾಡಬಹುದು. ವೃತ್ತಿಗಳನ್ನು ಬದಲಾಯಿಸುವುದಕ್ಕೆ ಇವರು ಆಕ್ಷೇಪವೆತ್ತುವುದಿಲ್ಲ. ಎಲ್ಲ ಕಾಯಕಗಳೂ ಒಂದೇ ಆಗಿವೆ. ಎಲ್ಲಕ್ಕೂ ಸರಿ-ಸಮಾನವಾದ ಸ್ಥಾನವಿದೆಯೆಂದು ಸಾರಿದರು. ಕಾಯಕದಲ್ಲಿ ಜಾತಿ-ಮತ, ಮೇಲು-ಕೀಳು, ಶ್ರೇಷ್ಠ-ಕನಿಷ್ಠ, ಮಡಿ-ಮೈಲಿಗೆ ಇತ್ಯಾದಿ ತಾರತಮ್ಯಗಳು ಇಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ಮುಖ್ಯರಾಗಿ ಶರಣರು ಕಾಯಕ ತತ್ತ್ವವನ್ನು ಪ್ರತಿಪಾದಿಸಿರುವುದು ವರ್ಗ-ವರ್ಣ ವ್ಯವಸ್ಥೆಯ ನಿರ್ಮೂಲನ ಮಾಡುವುದಕ್ಕಾಗಿಯೇ ಇರಬಹುದು.

**ಅಕ್ಕಮ್ಮ**

"ಅಸಿ ಮಸಿ ಕೃಷಿ ವಾಣಿಜ್ಯ ಮುಂತಾದ ಕಾಯಕವ ಮಾಡಿ
ಭಕ್ತರ ಪಡುಗ ಪಾದತ್ರಾಣ ಪಹರಿ ಬಾಗಿಲ ಬೊಕ್ಕಸ ಬೀಯಗ
ಮುಂತಾದ ಕಾಯಕವಂ ಮಾಡಿ........"[೬]

**ಗಂಗಮ್ಮ**

"ಆವ ಕಾಯಕ ಮಾಡಿದರೂ
ಒಂದೇ ಕಾಯಕವಯ್ಯಾ....."[೭]

**ಮೋಳಿಗೆ ಮಾರಯ್ಯ**

"ಅಸಿಯಾಗಲಿ ಮಸಿಯಾಗಲಿ ಕೃಷಿಯಾಗಲಿ
ವಾಣಿಜ್ಯ ಮುಂತಾದ ಕೃಷಿಯ ಮಾಡುವಲ್ಲಿ
ಪಶುಪತಿಗೆಂದೇ ಪ್ರಮಾಣಿಸಿ....."[೮]

---

೬. ವಚನ ಮಂಜರಿ, ಸಂ. ಡಾ. ಚೆನ್ನಕ್ಕ ಎಲಿಗಾರ, ವಚನ. ೩೭

೭. ಅದೇ, ವಚನ : ೩೮

೮. ಸಕಲ ಪುರಾತನರ ವಚನಗಳು (ಸಂ.೧) ಸಂ. ಡಾ. ಆರ್.ಸಿ. ಹಿರೇಮಠ, ವಚನ - ೩೨೫

**ದಾಸಿಮಯ್ಯ**

"ಒಡೆಯರ ಪ್ರಾಣಕ್ಕೆ ಇದ್ದೀತೆ ಯಜ್ಞೋಪವೀತ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಪ್ರಾಣದಲ್ಲಿ
ಹಿಡಿಗೋಲು......."[೯]

**ಬಸವಣ್ಣ**

"ಹೊಲೆಯ ಹೊಲೆಯರ ಮನೆಹೊಕ್ಕು
ಸಲೆ ಕೈ-ಕೂಲಿಯ ಮಾಡಿಯಾದರೂ....."[೧೦]

**ಢಕ್ಕೆಯ ಬೊಮ್ಮಣ್ಣ**

"ದೇವರಿಗೆಂದು ಕುರಿತು ಆವ ಕಾಯಕವ ಮಾಡಿದಡೂ
ಕಾಲಾಂತಕ ಭೀಮೇಶ್ವರಲಿಂಗಕ್ಕೆ ಅರ್ಪಿತವು"[೧೧]

ಈ ವಚನಗಳು 'ಕಾಯಕ ಸಮಾನತೆ' ಸಾರುವುದನ್ನು ನಾವು ಸ್ಪಷ್ಟವಾಗಿ ಕಾಣುತ್ತೇವೆ.

ಪರಂಪರಾಗತವಾದ ಚತುರ್ವರ್ಣ ಪದ್ಧತಿಯು ಅಂದಿನ ಸಮಾಜದಲ್ಲಿ ಬೀಡುಬಿಟ್ಟಿತ್ತಲ್ಲದೆ, ಕಟ್ಟು-ನಿಟ್ಟಾಗಿಯೂ ಪಾಲಿಸಲ್ಪಡುತ್ತಲಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ವರ್ಗಗಳ ಜೊತೆಗೆ ಅಸ್ಪೃಶ್ಯವೆಂಬ ವರ್ಣವ್ಯವಸ್ಥೆಯು ಹುಟ್ಟಿಕೊಂಡು ಸಮಾಜವು ಛಿದ್ರ -ಛಿದ್ರವಾಗಿ ಹೋಗಿತ್ತು. ಶೂದ್ರ ಮತ್ತು ಅಸ್ಪೃಶ್ಯರ ಮೇಲೆ ಹೇಳತೀರದ ದೌರ್ಜನ್ಯಗಳು ದಬ್ಬಾಳಿಕೆಗಳು ನಡೆಯುತ್ತಿದ್ದವು. ಅವರು ಮಾಡುವಂತಹ ಕೆಲಸಗಳನ್ನು ತುಚ್ಛವಾಗಿ ಕಾಣುತ್ತಿದ್ದರಲ್ಲದೆ, ಅವುಗಳನ್ನು ಹೀಯಾಳಿಸುತ್ತಲೂ ಇದ್ದರು. ಬಟ್ಟೆ ತೊಳೆಯುವುದು (ಅಗಸ) ಕಸಗೂಡಿಸುವುದು (ಝಾಡುಮಾಲಿ), ಹಗ್ಗ ಹೊಸೆಯುವುದು (ಮ್ಯಾದರ), ಚಪ್ಪಲಿ ಹೊಲೆಯುವುದು (ಸಮಗಾರ), ಕ್ಷೌರ ಮಾಡುವುದು (ನಾವಿ) ದೋಣಿಯ ಮೂಲಕ ಹೊಳೆ ದಾಟಿಸುವುದು (ಅಂಬಿಗ), ಊರ ಕಾಯವುದು (ತಳವಾರ) ಮುಂತಾದುವುಗಳು ಕೀಳು ಮೈಲಿಗೆಯುಕ್ತ ಕಾಯಕಗಳೆಂದು ಜರೆಯುತ್ತಿದ್ದ ಪಾಶವೀಯ ಸಮಾಜವಿದು.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಕೈಗೊಳ್ಳುವ ವೃತ್ತಿಗಳು ಶ್ರೇಷ್ಠವಾದವುಗಳೆಂದು, ಅವು ಮಡಿವಂತಿಕೆಯಿಂದ ಕೂಡಿದವುಗಳೆಂದು ಭ್ರಮಿಸಿ ಬೀಗುತ್ತಿದ್ದ ಕಾಲವದು. ಬ್ರಾಹ್ಮಣರಂತೂ ತಾವೇ ಸರ್ವರಿಗಿಂತಲೂ ಶ್ರೇಷ್ಠರೆಂದು ಬಿಂಬಿಸುತ್ತ, ಉಳಿದವರೆಲ್ಲರು ತಮ್ಮ ಸೇವೆ ಮಾಡಿ ಬದುಕಬೇಕೆಂದು ಆಶಿಸುತ್ತ; ತಮ್ಮನ್ನು ತಾವೇ 'ಭೂಸುರರು' ಎಂದೇ

---

೯. ಸಕಲ ಪುರಾತನರ ವಚನಗಳು (ಸಂ. ೨) ಸಂ. ಡಾ. ಎಂ.ಎಸ್. ಸುಂಕಾಪುರ, ವಚನ-೯೦೨

೧೦. ಬಸವಣ್ಣನವರ ಷಟಸ್ಥಳದ ವಚನಗಳು, ಸಂ. ಪ್ರೊ. ಶಿ.ಶಿ. ಬಸವನಾಳ, ವಚನ - ೭೧೨

೧೧. ಢಕ್ಕೆಯ ಬೊಮ್ಮಣ್ಣ, ಎಚ್.ಎಸ್. ಮುಕ್ತಾಯಕ್ಕ, ಪುಟ - ೩೬

ಕರೆದುಕೊಳ್ಳುತ್ತಿದ್ದರು. ಈ ವಿಷ ವರ್ತುಳದಲ್ಲಿ ಸಿಕ್ಕ ಜನತೆ ನರಳುತ್ತಿತ್ತು. ಸಮಾಜ ಜರ್ಜರಿತವಾಗಿ ತತ್ತರಿಸಿತ್ತು. ಈ ಏರು-ಪೇರುಗಳನ್ನು ಸರಿಗೊಳಿಸಲು ಮಹಾನ್ ಸಮಾಜ ಸುಧಾರಕರು, ಕ್ರಾಂತಿಯೋಗಿಗಳಾದ ಬಸವಣ್ಣನವರು ಚಳುವಳಿಯನ್ನೇ ಹುಟ್ಟುಹಾಕಿದರು. ಅವರೊಂದಿಗೆ ಸಮಾಜದ ವಿವಿಧ ಸ್ತರಗಳಿಂದ ಬಂದ ಅಪಾರ ಸಂಖ್ಯೆಯ ಜನರೂ ಸೇರಿದರು. ಎಲ್ಲ ಕಾಯಕಗಳೂ ಒಂದೇ ಎಂದು ಒಕ್ಕೊರಲಿನಿಂದ ಸಾರಿ ಹೇಳಿದರು. "ನಾನಾವ ಕರ್ಮಗಳ ಮಾಡಿದರೆಯೂ, ಆ ಕರ್ಮಫಲಭೋಗವ ನೀ ಕೊಡುವೆಯೆಂಬುದ ನಾ ಬಲ್ಲೆನು" ಎಂದು ಬಸವಣ್ಣನವರು ಹೇಳಿರುವುದು ಇದೇ ಅರ್ಥದಲ್ಲಿ. ವರ್ಣ-ವರ್ಗ ವ್ಯವಸ್ಥೆಯನ್ನು ಹೊಡೆದೋಡಿಸುವುದೇ ಬಸವಣ್ಣನವರ ಪ್ರಮುಖ ಧ್ಯೇಯವಾಗಿತ್ತು.

ವರ್ಣ ಮತ್ತು ವರ್ಗ ವ್ಯವಸ್ಥೆಯನ್ನು ಹೊಡೆದೋಡಿಸಲು ಸಂಕಲ್ಪಿಸಿದ ವಚನಕಾರರು, ಅದಕ್ಕೆ ಪರ್ಯಾಯವಾಗಿ ಯಾವ ವ್ಯವಸ್ಥೆಯನ್ನು ನಿರ್ಮಿಸಲು ಪ್ರಯತ್ನಿಸಿದರು? ಅವರ ಕಲ್ಪನೆ - ಯೋಜನೆಗಳು ಏನಿದ್ದವು? ಎನ್ನುವುದು ಕುತೂಹಲಕಾರಿ ಸಂಗತಿಯಾಗುತ್ತದೆ. ಅದಕ್ಕುತ್ತರವೆಂಬಂತೆ ಈ ಮಾತುಗಳನ್ನು ಗಮನಿಸಬಹುದು: "ಇಷ್ಟಲಿಂಗ ಪೂಜೆ ವರ್ಣಭೇದವನ್ನು ಹೊಡೆದು ಹಾಕಿ ಉಪಾಸನೆ ಶಕ್ತಿಯುತ ಸಾಧನವಾದರೆ, ಈ ಕಾಯಕನಿಷ್ಠೆ ವರ್ಗಭೇಧವನ್ನು ಹೊಡೆದುಹಾಕಿ ಕ್ರಿಯಾಶೀಲತೆಗೆ ದೈವೀಮಾಧ್ಯಮವಾಯ್ತು. ಅಂದರೆ ಅಲ್ಲಿ 'ಕಾಯ'ವೇ ಕೈಸಾಲವಾದರೆ ಇಲ್ಲಿ 'ಕಾಯಕ'ವೇ ಕೈಲಾಸವಾದುದು ಅಪೂರ್ವ ಅಂಶವೇ ಸರಿ. ಈ ವಿವರಗಳನ್ನು ಪರಿಭಾವಿಸಿದರೆ ಶಿವ-ಶರಣರು ಕಟ್ಟಬಯಸಿದ ಸಮಾಜವರ್ಣವ್ಯವಸ್ಥೆಯದಲ್ಲ, ವರ್ಗ ವ್ಯವಸ್ಥೆಯದಲ್ಲ. 'ಕಾಯಕ ವ್ಯವಸ್ಥೆ'[೧೨]ಯದೆಂದು ಸ್ಪಷ್ಟವಾಗುತ್ತದೆ ಎಂದು ಡಾ. ಎಂ. ಎಂ. ಕಲಬುರ್ಗಿಯವರು ಹೇಳುತ್ತಾರೆ. ಶರಣರು ಕಟ್ಟಬಯಸಿದ ಸಮಾಜದ ಪರಿಕಲ್ಪನೆಯನ್ನು ಡಾ. ಕಲಬುರ್ಗಿಯವರ ಈ ಮೇಲಿನ ಮಾತುಗಳು ತುಂಬ ಸಮರ್ಥನೀಯವಾಗಿ ವಿವರಿಸುತ್ತವೆ. ಕಾಯಕದಲ್ಲಿ ಸಮಾನತೆಯನ್ನು ಸಾಧಿಸುವುದರ ಜೊತೆಗೆ ಹೊಸವ್ಯವಸ್ಥೆ ರೂಪಿಸ ಹೊರಟಿರುವುದು ವಚನಕಾರರ ವೈಶಿಷ್ಟ್ಯವೆನಿಸಿಕೊಳ್ಳುತ್ತದೆ.

### ದೈಹಿಕ ಶ್ರಮಕ್ಕೆ ಪ್ರಾಶಸ್ತ್ಯ

ಸರ್ವರೂ ಒಂದಿಲ್ಲ ಒಂದು ಕಾಯಕ ಕೈಗೊಳ್ಳಬೇಕು. ತಮ್ಮ ಶಕ್ತಿ ಸಾಮರ್ಥ್ಯ ಮತ್ತು ಇಚ್ಛೆಗನುಸಾರವಾಗಿ ಕಾರ್ಯ ನಿರ್ವಹಿಸಬೇಕು. ಪರಾವಲಂಬಿಗಳಾಗದೆ, ಸ್ವತಃ ಪರಿಶ್ರಮಪಟ್ಟು ದುಡಿಯುವುದರ ಮೂಲಕ ಸ್ವಾವಲಂಬಿಗಳಾಗಿರಬೇಕು. ಸ್ವಾಭಿಮಾನಿಗಳಾಗಿ ಬದುಕಬೇಕು. ದುಡಿಯದವರು ಉಣ್ಣಲಿಕ್ಕೆ ಅನರ್ಹರಾಗುತ್ತಾರೆ. ಇವೇ ಮೊದಲಾದ ಮಾತುಗಳನ್ನು ವಚನಕಾರರು ಸಂದರ್ಭಾನುಸಾರವಾಗಿ ಅಲ್ಲಲ್ಲಿ ಹೇಳಿದ್ದಾರೆ. ಇದು ಶಿವಶರಣರು ದೈಹಿಕ ಶ್ರಮಕ್ಕೆ ನೀಡಿರುವ ಪ್ರಾಶಸ್ತ್ಯವೇ ಆಗಿದೆ. 'ದುಡಿತವೇ ದುಡ್ಡಿನ

---

೧೨. ವಚನ ಸಾಹಿತ್ಯ ವಿವೇಚನೆ (ಕ.ವಿ.ವಿ. ಪ್ರಸಾರಾಂಗ, ಧಾರವಾಡ) ಪುಟ-೧೮

ತಾಯಿ' ಎಂಬ ಪಡೆನುಡಿಯು ಸರ್ವರಿಗೂ ಪರಿಚಿತವಾಗಿದೆ. ವ್ಯಕ್ತಿ ದುಡಿಯುವುದರಿಂದ ಆತನ ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದರ ಜೊತೆಗೆ ಸಮಾಜವು ಸುಭದ್ರವಾಗಿ ನಿಲ್ಲುತ್ತದೆ. ಸಮಾಜ ಆರ್ಥಿಕವಾಗಿ ಸುಭದ್ರವಾಗಿರುವುದರಿಂದ ದೇಶ ಚೇತರಿಸಿಕೊಂಡು ಸಮೃದ್ಧವಾಗಿ ಹೊರಹೊಮ್ಮುತ್ತದೆ. ಬಲಾಢ್ಯವಾಗಿ ತಲೆಯೆತ್ತಿ ನಿಲ್ಲುತ್ತದೆ.

ದುಡಿಯುವ ವ್ಯಕ್ತಿಯು ದೈಹಿಕವಾಗಿ ಆರೋಗ್ಯವಂತನಾಗುತ್ತಾನೆ. ಜೊತೆಗೆ ಮಾನಸಿಕ ವಾಗಿಯೂ ಸದೃಢನಾಗುತ್ತಾನೆ. 'An empty mind is devil's workshop' ಎನ್ನುವಂತೆ; ಕೆಲಸವಿಲ್ಲದೆ ಖಾಲಿ ಕುಳಿತಾಗ ಇಲ್ಲ ಸಲ್ಲದ ವಿಚಾರಗಳು ಸುಳಿದಾಡುತ್ತವೆ. ಖಾಲಿ ಮನಸ್ಸಿನಲ್ಲಿ ದ್ವಂದ್ವ ತಾಕಲಾಟಗಳು ಉದಿಸುತ್ತವೆ. ವಿಚಾರಗಳಲ್ಲಿ ಸಂಘರ್ಷ-ಕೆಟ್ಟ ಹಾಗೂ ಅಸಹ್ಯ ಯೋಜನೆಗಳು ಬೇತಾಳದಂತೆ ಆಕ್ರಮಿಸಿ ಅಂಥ ವ್ಯಕ್ತಿ ಮಾನಸಿಕವಾಗಿ ಬಳಲುವಂತಾಗುತ್ತದೆ. ಅಂತಹ ಅವಸ್ಥೆಯಲ್ಲಿ ಎಂಥೆಂಥವೋ ದುಶ್ಚಟಗಳು ಅಂಟಿಕೊಳ್ಳುವ ಸಾಧ್ಯತೆಯಿರುತ್ತದೆ. ಈ ಎಲ್ಲ ಸಂಭವನೀಯತೆಗಳು ತಡೆಯಲು ತಕ್ಕ ಮದ್ದೆಂದರೆ ದುಡಿಮೆಯೊಂದೇ ಎಂದು ಹೇಳಬಹುದು. ಅದಕ್ಕಾಗಿಯೇ ವಚನಕಾರರು ದೈಹಿಕ ಶ್ರಮಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದಾರೆ.

**ನುಲಿಯ ಚಂದಯ್ಯ**

> **"ತನು ಕರಗಿ ಮನಬಳಲಿ ಬಂದ ತೆರದನುವನರಿದು**
> **ಸಂದಿಲ್ಲದೆ ಸಂಶಯವಿಲ್ಲದೆ ಜಂಗಮಕ್ಕೆ ದಾಸೋಹವೇ ಮಾಟ"[೧೩]**

**ಸಿದ್ಧರಾಮ**

> **"ಕೃಷಿಯ ಮಾಡಿ ಉಣ್ಣದೆ**
> **ಹಸಿವು ಹರಿವ ಪರಿಯಿನ್ನೆಂತೋ"[೧೪]**

**ಕಾಳವ್ವೆ**

> **"ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ"[೧೫]**

**ಮನಸಂದ ಮಾರಿತಂದೆ**

> **"ಕಾಯಕವಿಡಿದಿಹನ್ನಬರ ಶಿವಭಕ್ತರಿಗೆ ಕಾಯಕವೆ ಕೈಲಾಸ**
> **ಕಾಯಕವಿಲ್ಲದವನ ಅರಿವು ಮಾಯವಾಯಿತ್ತು"[೧೬]**

---

೧೩. ವಚನ ಮಂಜರಿ, ಸಂ. ಡಾ. ಚೆನ್ನಕ್ಕ ಎಲಿಗಾರ, ವಚನಸಂಖ್ಯೆ - ೪೦

೧೪. ಸಿದ್ಧರಾಮನ ವಚನಗಳು, ಸಂ (ಉಪನ್ಯಾಸ ಸಂಚಯ) ವಚನ ಸಂಖ್ಯೆ - ೫೧೨

೧೫. ವಚನ ಮಂಜರಿ, ಸಂ. ಡಾ. ಚೆನ್ನಕ್ಕಾ ಎಲಿಗಾರ, ವಚನ ಸಂಖ್ಯೆ - ೪೧

೧೬. ಅದೇ, ವಚನ ಸಂಖ್ಯೆ - ೪೨

**ಶಿವಲೆಂಕ ಮಂಚಣ್ಣ**

"ಕಾಯಕವೆಂದರೆ ಕಾಯವ ಬಳಲಿಸದೆ
ತನು ಕರಗದೆ ಮನ ನೋಯದೆ
ಕಾಡಿ ಬೇಡಿ ಮಾಡುವುದು ದಾಸೋಹವೆ?"[೧೭]

ಈ ಮೇಲಿನ ವಚನಗಳಲ್ಲಿ ಸಿದ್ಧರಾಮ ಶಿವಯೋಗಿಯು "ಕಾಯಕ ಮಾಡದಿದ್ದರೆ ಹಸಿವು ಹರಿವ ಪರಿಯಿನ್ನೆಂತೋ" ಎಂದು ಪ್ರಶ್ನಿಸಿದ್ದು, ಕಾಳವ್ವೆಯು - 'ಕಾಯಕ ಮಾಡದೆ ಇರುವವರು ಭಕ್ತರೇ ಅಲ್ಲ' ಎಂದು ಹೇಳಿರುವುದರ ಉದ್ದೇಶ ಪ್ರತಿಯೊಬ್ಬರೂ ಕಾಯಕವನ್ನು ಮಾಡಬೇಕೆಂಬುದೇ ಆಗಿದೆ. ಬೆವರು ಸುರಿಸಿ ದುಡಿಯದೆ, ಬೇರೊಬ್ಬರಿಂದ ಕಡ ಪಡೆದು, ಅಥವಾ ಬೇಡಿ ಪಡೆದುಕೊಂಡು ದೇವರಿಗೆ 'ಎಡೆ' ಮಾಡಿದರೆ; ಅದು ಪಂಚಾಮೃತವಾಗಿದ್ದರೂ ಕೂಡ ಪರಮಾತ್ಮನಿಗೆ ಸಲ್ಲುವುದಿಲ್ಲ. ಆದರೆ ಸ್ವತಃ ಮೈಮಣಿಸಿ ದುಡಿದು ಸಂಪಾದಿಸಿದ ಕಾರೆಯ ಸೊಪ್ಪಾದರೂ ಸರಿ ಅದು ಲಿಂಗಕ್ಕೆ ಅರ್ಪಿತ ವಾಗುತ್ತದೆಯೆಂದು ಶರಣ ನುಲಿಯ ಚೌಡಯ್ಯ ಹೇಳಿರುವುದರ ಹಿನ್ನೆಲೆ ಗ್ರಹಿಸಬೇಕಿದೆ. ಮನಸಂದ ಮಾರಿತಂದೆಯು ಹೇಳಿರುವ "ಕಾಯಕವಿಡಿದಿಹನ್ನಬರ ಶಿವಭಕ್ತರಿಗೆ ಕಾಯಕವೇ ಕೈಲಾಸ" ಎಂಬ ಮಾತು ದೈಹಿಕ ಪರಿಶ್ರಮಕ್ಕೆ ವಚನಕಾರರು ಕೊಟ್ಟ ಪ್ರಾಮುಖ್ಯತೆಯ ಹೆಗ್ಗುರುತಾಗಿದೆ.

**ಕಾಯಕದಲ್ಲಿ ಸಮಯಪ್ರಜ್ಞೆ**

'ಸಮಯ'ಕ್ಕೆ ಶಿವಶರಣರು ಅತೀವ ಮಹತ್ವ ನೀಡಿದ್ದಾರೆ. ಅವರ ವಚನಗಳಲ್ಲಿ 'ಸಮಯಪ್ರಜ್ಞೆ' ಕುರಿತಾದ ಉಲ್ಲೇಖಗಳು ಧಾರಾಳವಾಗಿ ದೊರೆಯುತ್ತವೆ. ಕೆಲಸವಿಲ್ಲದೆ ಖಾಲಿ ತಿರುಗಾಡುವುದು, ಸುಮ್ಮನೆ ಹೊತ್ತುಗಳೆಯುವುದು, ಕಾಡು ಹರಟೆ ಹೊಡೆಯುವುದು, ಮಾಡಬೇಕಾದ ಕಾರ್ಯ ನಿರ್ವಹಿಸದೆ, ಮುಂದೂಡುತ್ತ ಹೋಗುವುದು ಇತ್ಯಾದಿಗಳು ವಚನಕಾರರಿಗೆ ಹಿಡಿಸುವುದಿಲ್ಲ. ಸಮಯ ಬೆಲೆಯುಳ್ಳದ್ದು. ಒಮ್ಮೆ ಕಳೆದುಕೊಂಡರೆ ಮತ್ತೆ ಮರಳಿ ಸಿಗದು. ಅದಕ್ಕಾಗಿಯೇ "ಮುತ್ತಿಗಿಂತ ಹೊತ್ತು ಉತ್ತಮ"

. . . . . . . . . . . . . . . . . . . . . . .

ಎಂಬ ಮಾತು ಬಳಕೆಯಲ್ಲಿದೆ. ಇಂಥ ಸಮಯದ ಕುರಿತಾಗಿ ವಚನಕಾರರು ಹೇಳಿರುವುದು ಈ ರೀತಿಯಾಗಿದೆ:

**ಮುಕ್ತಾಯಕ್ಕ**

"ಸುಮ್ಮನೇಕೆ ದಿನ ಕಳೆವಿರಿ
ಸುಮ್ಮನೇಕೆ ಹೊತ್ತುಗಳೆವಿರಿ?"[೧೮]

---

೧೭. ಅದೇ, ವಚನ ಸಂಖ್ಯೆ - ೪೦

೧೮. ವಚನ ಮಂಜರಿ ಸಂ. ಡಾ. ಚೆನ್ನಕ್ಕ ಎಲಿಗಾರ, ವಚನ ಸಂಖ್ಯೆ ೧೬೮

**ಬಸವಣ್ಣ**

> "ನಾಳೆ ಬಪ್ಪುದು ನಮಗಿಂದೇ ಬರಲಿ
> ಇಂದು ಬಪ್ಪುದು ನಮಗೀಗಲೇ ಬರಲಿ"[೧೯]

**ಆಯ್ದಕ್ಕಿ ಲಕ್ಕಮ್ಮ**

> "ಕಾಯಕ ನಿಂದಿತ್ತು ಹೋಗಯ್ಯಾ ಎನ್ನಾಳ್ದನೆ
> . . . . . . . . . . . . . . . . . . . . . . . .
> ಬೇಗು ಹೋಗು ಮಾರಯ್ಯ"[೨೦]

**ಆಯ್ದಕ್ಕಿ ಮಾರಯ್ಯ**

> "ಕಾಯಕದಲ್ಲಿ ನಿರತನಾದರೆ,
> ಗುರುದರುಶನವಾಧರೂ ಮರೆಯಬೇಕು
> ಲಿಂಗಪೂಜೆಯಾದರೂ ಮರೆಯಬೇಕು
> ಜಂಗಮ ಮುಂದಿದ್ದರೂ ಡಂಗುಡರಿಯಬೇಕು"[೨೧]

ಹೊತ್ತು ನಮಗಾಗಿ ಕಾಯುವುದಿಲ್ಲ. ಆ ಹೊತ್ತಿಗಾಗಿ ನಾವೇ ಕಾಯಬೇಕಾಗುತ್ತದೆ. ಯಾವುದೇ ಕಾರಣದಿಂದ ಹಿಡಿದ ಕಾರ್ಯವನ್ನು ಅರ್ಧಕ್ಕೆ ಬಿಟ್ಟರೆ ಮುಂದದೂ ಪೂರ್ತಿಯಾಗದೆ ಹೋಗಬಹುದು. ನಾಳೆ ಮಾಡಿದರಾಯ್ತು ನಾಡಿದ್ದು ನೋಡಿದರಾಯ್ತು ಎಂದು ಮುಂದೂಡಬಾರದು. ಅಂದಂದಿನ ಕಾಯಕವನ್ನು ಅಂದಂದೇ ಮಾಡಿ ಮುಗಿಸಬೇಕು. ನಿತ್ಯದ ಕಾಯಕಕ್ಕೆ ಮಾರಯ್ಯ ವಿಳಂಬಿಸಿದಾಗ, ಅವನ ಧರ್ಮಪತ್ನಿ ಲಕ್ಕಮ್ಮ ಎಚ್ಚರಿಸುತ್ತಾಳೆ. ಕಾಯಕದ ಹೊತ್ತಾಯಿತು ತಡ ಮಾಡಿದರೆ "ಕಾಯಕ ನಿಂದಿತ್ತು ಹೋಗಯ್ಯ" ಎಂದು ಅವನನ್ನು ಜಾಗೃತಿಗೊಳಿಸಿ, ಕರ್ತವ್ಯಕ್ಕೆ ಅಣಿಗೊಳಿಸಿರುವುದನ್ನು ಕಾಣುತ್ತೇವೆ. ಇದು ಅವಳಲ್ಲಿಯ ಸಮಯ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಇನ್ನು 'ನೂಲಿ ಚಂದಯ್ಯ'ನೆಂಬ ಶಿವಶರಣನು ಹಳ್ಳದ ದಡದಲ್ಲಿ 'ನಾರು' ಕೊಯ್ಯುವ ಕಾಯಕದಲ್ಲಿರುತ್ತಾನೆ. ಆಗ ಇಷ್ಟಲಿಂಗವು ಹಳ್ಳದ ನೀರೊಳಗೆ ಜಾರಿ ಬೀಳುತ್ತದೆ. ಕಾಯಕದಲ್ಲಿ ನಿರತನಾಗಿರುವ ಚಂದಯ್ಯ ಲಿಂಗವನ್ನು ಎತ್ತಿಕೊಳ್ಳದಿರುವುದು, ಲಿಂಗವು ಮಾನವಾಕೃತಿ ಧರಿಸಿ, ತನ್ನ ತಪ್ಪನ್ನು ಮನ್ನಿಸಿ ಸ್ವೀಕರಿಸಬೇಕೆಂದು ಭಿನ್ನವಿಸಿಕೊಳ್ಳುವ ಪ್ರಸಂಗ, ಮಡಿವಾಳ ಮಾಚಿದೇವ ಮಧ್ಯಸ್ಥಿಕೆಯಿಂದಾಗಿ ಹೊಸೆದ ಹಗ್ಗವನ್ನು ಲಿಂಗಪ್ಪ ಕಲ್ಯಾಣದಲ್ಲಿ ಮಾರಿಬರಬೇಕೆಂಬ ಕರಾರಿನ ಮೇಲೆ ಚಂದಯ್ಯ ಸ್ವೀಕರಿಸುತ್ತಾನೆ. ಲಿಂಗಪ್ಪನು ಒಂದಕ್ಕೆ ನಾಲ್ಕುಪಟ್ಟು ತುಟ್ಟಿಯಾಗಿ ಮಾರಿ ಬಂದದ್ದಕ್ಕಾಗಿ ಮತ್ತೆ ನಿರಾಕರಿಸುವುದು, ಶಿವ ಭಕ್ತರ ವ್ಯಾಜ್ಯ ಅನುಭವ ಮಂಟಪದ ಶಿವಾನುಭವಗೋಷ್ಠಿಯಲ್ಲಿ ಇತ್ಯರ್ಥಗೊಳ್ಳುವ ಕತೆ ಬಹಳ

---

೧೯. ಬಸವಣ್ಣನವರ ಷಟಸ್ಥಳ ವಚನಗಳು, ವಚನಸಂಖ್ಯೆ: ೬೯೯

೨೦. ಶಿವಶರಣರ ವಚನಗಳು, ಪುಟ- ೭೦

೨೧. ವಚನ ಮಂಜರಿ, ಸಂ. ಡಾ. ಚೆನ್ನಕ್ಕ ಎಲಿಗಾರ, ವಚನ ಸಂಖ್ಯೆ - ೪೪

ಜನರಿಗೆ ಪರಿಚಿತವಾಗಿದೆ. ಈ ಕಥೆಯ ಸತ್ಯಾಸತ್ಯತೆ ಏನೆ ಇರಲಿ, ಆದರೆ ಅದರಲ್ಲಿ ಅಡಗಿರುವ ಅಂಶ ಮಾತ್ರ ವಿಶಿಷ್ಟವಾಗಿದೆ. ಚಂದಯ್ಯ ನೀರಿನೊಳಗೆ ಜಾರಿಬಿದ್ದ ಲಿಂಗವನ್ನು ಎತ್ತಿಕೊಳ್ಳದೆ ತನ್ನ ಕಾರ್ಯದಲ್ಲಿಯೇ ತಾನು ತಲ್ಲೀನನಾಗಿ ಬಿಡುವುದು ಅಪೂರ್ವ ಸಂಗತಿಯಾಗಿದೆ. ಇಂತಹ ಪ್ರಸಂಗಗಳು ವಚನಕಾರರ ಸಮಯಪ್ರಜ್ಞೆಗೆ ಶ್ರೇಷ್ಠ ನಿದರ್ಶನಗಳಾಗಿ ನಿಲ್ಲುತ್ತವೆ.

### ಲಂಚ – ವಂಚನೆಗೆ ಆಸ್ಪದವಿಲ್ಲ

ಶಿವಶರಣರು ಆಸೆ-ಆಮಿಷಗಳಿಗೆ, ಲಂಚ-ವಂಚನೆಗಳಿಗೆ ಎಂದೂ ಅವಕಾಶ ನೀಡುವುದಿಲ್ಲ. ಭ್ರಷ್ಟಾಚಾರವನ್ನೇ ಅವರು ಮೊಟ್ಟ ಮೊದಲು ಮನ್ನಿಸುವುದೇ ಇಲ್ಲ. ಲಂಚವಾಗಿ ಯಾರೊಬ್ಬರಿಂದಲೂ ಏನೊಂದನ್ನೂ ಸ್ವೀಕರಿಸಬಾರದೆಂದು ಹೇಳಿರುವುದನ್ನು ಅವರ ವಚನಗಳನ್ನು ಕಾಣುತ್ತೇವೆ.

**ಕೇತಯ್ಯ**

"ಅನ್ಯರ ದ್ರವ್ಯದ ಅಪಹರಿಸಿಕೊಂಡಲ್ಲಿ
ಅದು ತನಗೆ ಅನ್ಯದೈವ"[೨೨]

**ಕೋಲಶಾಂತಯ್ಯ**

"ಪಶುಪತಿಯ ಭಕ್ತನಾಗಿರ್ದ, ಹಸಿದು ಸರ್ವರ ವಂಚಿಸಿ
ಪಿಸುಣತನದಿಂದ ಕಾಡಿಬೇಡಿ ತಂದವನ ಮನೆಯು
ಕಿಸುಕುಳಕೆ ಸರಿ. . . . . . . . . . . . ."[೨೩]

**ಬಸವಣ್ಣ**

"ಚಲಬೇಕು ಶರಣಂಗೆ ಪರಧನವನೊಲ್ಲೆನೆಂಬ"[೨೪]

**ಆದಯ್ಯ**

"ಹಣ ಬಂಗಾರ ವಸ್ತ್ರ ಕಪ್ಪಡ
ಬಟ್ಟೆಯಲ್ಲಿ ನೆಟ್ಟನೆ ಬಿದ್ದಿರಲು
ಕಂಡು ಕಾತರಿಸಿ, ಕೈಮುಟ್ಟ ಎತ್ತದ ಭಾಷೆ
ಕೊಟ್ಟಡೆ ಮುಟ್ಟದ ಭಾಷೆ"[೨೪]

**ಚೆನ್ನಬಸವಣ್ಣ**

"ತನುವ ಬಳಲಿಸದೆ ಉದ್ದಂಡ ವೃತ್ತಿಯಲ್ಲಿ ಧನವಗಳಿಸಿ
ಭಕ್ತನಾದೆನೆಂಬವನ ತೋರದಿರಯ್ಯಾ

---

೨೨. ಸಕಲ ಪುರಾತನರ ವಚನಗಳು (ಸಂ. ೧) ಸಂ. ಡಾ. ಆರ್.ಸಿ. ಹಿರೇಮಠ, ವ. ೧೬೩೮.

೨೩. ಅದೇ, ವಚನ - ೭೨

೨೪. ಬಸವಣ್ಣನವರ ಷಟಸ್ಥಳದ ವಚನಗಳು, ಸಂ. ಪ್ರೊ. ಶಿ.ಶಿ. ಬಸವನಾಳ, ವ-೬೭೯

**ಅದೆಕೆಂದಡೆ:**
**ಅವ ಪರಧನ ಚೋರಕ, ಅವ ಪಾಪಿ-ಕೋಪಿ-ಪರಿಭ್ರಷ್ಟ"[೨೫]**

ಈ ಮಾತುಗಳಿಂದ ಶಿವಶರಣರ ನಿಲುವು ಸ್ಪಷ್ಟವಾಗಿ ತಿಳಿಯುತ್ತದೆ. ಪರಿಶ್ರಮವಿಲ್ಲದೆ ಬಿಟ್ಟಿಯಾಗಿ ಬಂದ ಹಣಕ್ಕೆ ಮಾನ್ಯತೆಯನ್ನು ನೀಡುವುದಿಲ್ಲ. ಮತ್ತೊಬ್ಬರಿಂದ ಕಾಡಿ ಬೇಡಿ ಪೀಡಿಸಿ ಹಣ ಕಿತ್ತುಕೊಳ್ಳುವುದು ಒತ್ತಟ್ಟಿಗಿರಲಿ, ಜನ ತಾವಾಗಿಯೇ ನೀಡಲು ಬಂದರೂ ಸ್ವೀಕರಿಸಬಾರದೆನ್ನುತ್ತಾರೆ.

ಬೇರೆಯವರಿಂದ ಹಣ ಪಡೆಯುವುದು ದೂರವಿರಲಿ, ದಾರಿಯಲ್ಲಿ ಬಿದ್ದಿರುವುದನ್ನೂ ಎತ್ತಿಕೊಳ್ಳಬಾರದೆಂದು ಹೇಳುತ್ತಾರೆ. ಶಿವಶರಣರ ಆಶಯವನ್ನು ಭಟ್ಟಿಯಿಳಿಸಿಇಟ್ಟಂತಿದೆ 'ಸತ್ಯಕ್ಕ' ಈ ವಚನ ನೋಡಿ:

**"ಲಂಚ ವಂಚನಕ್ಕೆ ಕೈಯ್ಯಾನದ ಭಾಷೆ**
**ಬಟ್ಟೆಯಲ್ಲಿ ಹೊನ್ನ ವಸ್ತು ಬಿದ್ದಿದ್ದಡೆ**
**ಕೈಮುಟ್ಟಿ ಎತ್ತಿದೆನಾದಡೆ ಅಯ್ಯಾ ನಿಮ್ಮಾಣೆ**
**ನೀವಿಕ್ಕಿದ ಭಾಷೆಯೊಳಗಿದ್ದೇನಯ್ಯಾ**
**ಶಂಭುಜಕ್ಕೇಶ್ವವ ದೇವಯ್ಯಾ ನಿಮ್ಮಾಣೆ ಕೇಳಯ್ಯಾ"[೨೬]**

ಈ ವಚನದಲ್ಲಿ ಸತ್ಯಕ್ಕ ತನ್ನ ನಿಲುವನ್ನು ಪ್ರತಿಪಾದಿಸುತ್ತ ತನ್ನ ಇಷ್ಟದೇವರ ಮೇಲೆ ಆಣೆಯಿಟ್ಟು ಹೇಳಿರುವಲ್ಲಿ ಅವಳ ಪ್ರಾಮಾಣಿಕತೆ ಎದ್ದು ತೋರುತ್ತದೆ. ಈ ವಚನದಲ್ಲಿ ಸ್ವಾಭಿಮಾನಿ ಸತ್ಯಕ್ಕನ ದಿಟ್ಟ ವ್ಯಕ್ತಿತ್ವದ ದರುಶನವಾಗಿ, ಅವಳ ಕುರಿತು ಗೌರವ ತಂತಾನೆ ಮೂಡುತ್ತದೆ.

ಇಂದು ಎಲ್ಲಿ ನೋಡಿದಲ್ಲಿ ಬರಿ ಭ್ರಷ್ಟಾಚಾರವೇ ತಾಂಡವವಾಡುತ್ತಿದೆ. ಲಂಚವಿಲ್ಲದೆ ಯಾವ ಕೆಲಸಗಳೇ ಆಗುತ್ತಿಲ್ಲ. ಲಂಚ ಕೊಟ್ಟರೂ ಕೂಡ ಕೆಲಸ ಆಗಿಯೇ ತೀರುವುದೆಂಬ ಭರವಸೆ ಇಂದಿಲ್ಲ. ಸರಕಾರ ಕಾನೂನು ಮಾಡಿದ್ದರೂ ಲಂಚ ನಿರ್ಮೂಲನಗೊಳಿಸುವುದಿರಲಿ ಪ್ರತಿಬಂಧಿಸಲು ಕೂಡ ಸಾಧ್ಯವಾಗುತ್ತಿಲ್ಲ. ಉನ್ನತಹುದ್ದೆಯಲ್ಲಿದ್ದವರೆ ಅದರ ಬೆನ್ನು ಹತ್ತಿದ್ದಾರೆ. ಇಡೀ ವ್ಯವಸ್ಥೆಯೇ ಕುಸಿದುಹೋಗಿದೆ. ಇಂಥ ಹೊತ್ತಿನಲ್ಲಿ ವಚನಕಾರರ ಆಶಯವು ಹಿಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತವೆನಿಸುತ್ತದೆ.

## ಕಾಯಕಕ್ಕೆ ತಕ್ಕ ಪ್ರತಿಫಲ

ಆಯಾ ಕೆಲಸಕ್ಕೆ ತಕ್ಕ ಪ್ರತಿಫಲ ಇದ್ದೇ ಇರುತ್ತದೆ. ಒಂದು ವೇಳೆ, ಇರದಿದ್ದರೆ ಇರಬೇಕು. ಆಯಾ ಪರಿಶ್ರಮಕ್ಕೆ ಅನುಗುಣವಾಗಿ ಅದು ಸಲ್ಲುತ್ತಿರಬೇಕು. ಒಬ್ಬರಿಗೊಂದು

---

೨೪. ಸಕಲ ಪುರಾತನರ ವಚನ (ಸಂ. ೨) ಸಂ. ಡಾ. ಎಂ.ಎಸ್. ಸುಂಕಾಪುರ, ವ. ೨೪೦

೨೫. ಚೆನ್ನಬಸವಣ್ಣನವರ ವಚನಗಳು, ಸಂ. ಡಾ. ಆರ್.ಸಿ. ಹಿರೇಮಠ, ವ. ೬೫, ಪುಟ-೩೧

೨೬. ವಚನ ಮಂಜರಿ, ಸಂ. ಡಾ. ಚೆನ್ನಕ್ಕ ಎಲಿಗಾರ, ವ-೧೯೬

ಮತ್ತೊಬ್ಬರಿಗೊಂದು ಹೀಗೆ ತಾರತಮ್ಯವಿರಬಾರದು. ಜಾತಿ, ಭೇದ, ಲಿಂಗ-ಭೇದಗಳಿರಬಾರದು. ಸಮಾನ ಕಾಯಕಕ್ಕೆ ಸಮಾನ ವೇತನ ದೊರೆಯಬೇಕು. ತಾನು ಮಾಡುವ ಕೆಲಸಕ್ಕಿಂತಲೂ ಹೆಚ್ಚಿನ ಪ್ರತಿಫಲವನ್ನು ನಿರೀಕ್ಷಿಸಬಾರದು. ಕಷ್ಟಪಟ್ಟು ದುಡಿದು ಕಡಿಮೆ ಹಣವನ್ನು ತೆಗೆದುಕೊಳ್ಳಬಾರದು. ಹಾಗೆಯೇ ಕೆಲಸಕ್ಕೆ ಹಚ್ಚಿ ತಮ್ಮ ಕಾರ್ಯವನ್ನು ಮಾಡಿಸಿಕೊಂಡವರು ಆಯಾ ಕೆಲಸಕ್ಕೆ ಯೋಗ್ಯ ಸಂಭಾವನೆ ನೀಡಬೇಕು. ಈ ಅಂಶಗಳನ್ನು 'ನುಲಿಯಚಂದಯ್ಯ'ನು ಅರ್ಥಪೂರ್ಣವಾಗಿ ಪ್ರತಿಪಾದಿಸಿದ್ದಾನೆ.

**"ನೇಮದ ಕೂಲಿ ಅಂದಿನ ನಿತ್ಯ ನೇಮದಲ್ಲಿ ಸಂದಿರಬೇಕು**
**ನೇಮದ ಕೂಲಿಯ ಬಿಟ್ಟು ಹೇಮದಾಸೆಗೆ ಕಾಮಿಸಿ**
**ದ್ರವ್ಯವ ಹಿಡಿದರೆ ತಾ ಮಾಡುವ ಸೇವೆ ನಷ್ಟವಯ್ಯಾ**
**ನಿನ್ನಾಸೆಯ ವೇಷದ ಪಾಶಕ್ಕೆ ನೀನೇ ಹೋಗು**
**ನನಗೆ ನನ್ನ ಜಂಗಮ ಪ್ರಸಾದದಾಗೆ**
**ಚಂದ್ರೇಶ್ವರ ಲಿಂಗಕ್ಕೆ ಪ್ರಾಣವಯ್ಯಾ"**[೨೭]

ನಿಯಮಿತವಾಗಿ ಮಾಡುವ ವೃತ್ತಿಯು ನಿಯಮಿತವಾಗಿಯೇ ನಡೆಯಬೇಕು. ಅಂದರೆ ನಾವು ಮಾಡುವ ಕಾಯಕವು ಎಂದಿನಂತೆ, ಎಂದಿನಷ್ಟೇ ಪ್ರಮಾಣದಲ್ಲಿಯೇ ಆಗಬೇಕು. ನಿತ್ಯಕ್ಕಿಂತಲೂ ಕಡಿಮೆಯಾಗಬಾರದು. ಒಂದು ಕಾರ್ಯವನ್ನು ಪೂರೈಸಿಕೊಡಲು ಒಪ್ಪಿಕೊಂಡು, ಕಾರ್ಯಪ್ರವೃತ್ತರಾದಾಗ, ಬೇರೆಯಾರಾದರೂ ಹೆಚ್ಚು ಹಣ ಕೊಡುತ್ತೇವೆಂದ ಕೂಡಲೇ; ಈ ಮುಂಚೆ ಮಾಡಲು ಒಪ್ಪಿಕೊಂಡ ಕಾರ್ಯವನ್ನು ಬಿಟ್ಟು ಬಿಡಬಾರದು. ಅರ್ಧಕ್ಕೆ ನಿಲ್ಲಿಸಬಾರದು, ಹಾಗೆ ಅರ್ಧಕ್ಕೆ ಬಿಟ್ಟು, ಹೆಚ್ಚಿನ ಹಣ ಸಿಗುವ ಕಡೆಗೆ ಹೋದರೆ; ಮೊದಲಿನವರಿಗೆ ದ್ರೋಹ ಮಾಡಿದಂತಾಗುತ್ತದೆ. ಮಾತು ಕೊಟ್ಟು, ತಮ್ಮನ್ನೇ ನಂಬಿ, ಅಪಾರ ವೆಚ್ಚ ಮಾಡಿದವರನ್ನು ಮೋಸಗೊಳಿಸುವುದು ಅಪರಾಧವೆನಿಸುತ್ತದೆ. ಹೀಗೆ ಹಣ ಹೊನ್ನಿನಾಸೆಗಾಗಿ ಹಿಡಿದ ಕಾರ್ಯ ಬಿಟ್ಟು, ಮತ್ತೊಂದನ್ನು ಮಾಡಲು ಹೊರಟರೆ (ನೇಮದ ಕೂಲಿಯ ಬಿಟ್ಟು, ಹೇಮದಾಸೆಗೆ ಕಾಮಿಸಿ ದ್ರವ್ಯವ ಹಿಡಿದರೆ), "ತಾ ಮಾಡುವ ಸೇವೆ ನಷ್ಟವಯ್ಯಾ" ಎಂದು ನುಲಿಯ ಚಂದಯ್ಯ ವಿವರಿಸಿದ್ದಾನೆ.

## ಕಾಯಕದಲ್ಲಿ ವಸ್ತುವಿಗೆ ನ್ಯಾಯ ಬೆಲೆ

ಕಾಯಕಕ್ಕೆ ತಕ್ಕ ಪ್ರತಿಫಲ ದೊರೆಯಬೇಕೆಂದು ಪ್ರತಿಪಾಧಿಸಿರುವಂತೆಯೇ, ವಚನಕಾರರು - ಕಾಯಕದಿಂದ ಉತ್ಪಾದನೆಯಾದ ವಸ್ತುಗಳಿಗೂ "ನ್ಯಾಯವಾದ ಬೆಲೆ" ಸಿಗಬೇಕೆಂದು ಹೇಳುತ್ತಾರೆ. ವಸ್ತುವಿಗೆ ಸರಿಯಾಗಿ ಯೋಗ್ಯ ಬೆಲೆ ದೊರೆತರೆ ಆ ಕಾಯಕ ಕೈಗೊಂಡವರು ಹೆಚ್ಚು-ಹೆಚ್ಚಾಗಿ ದುಡಿಯುತ್ತಾರೆ. ಹೆಚ್ಚು-ಹೆಚ್ಚಾಗಿ ಸಿದ್ಧಪಡಿಸಿದ ವಸ್ತುಗಳನ್ನು ಉತ್ಪಾದಿಸುತ್ತಾರೆ. ವಸ್ತುವಿಗೆ ತಕ್ಕ ಬೆಲೆ ಸಿಗದೆ ಹೋದಾಗ ಸಹಜವಾಗಿ ಅದರ ಉತ್ಪಾದನೆಯಲ್ಲಿ ಇಳಿಮುಖವಾಗುತ್ತದೆ. ಆ ವೃತ್ತಿ ಕೈಗೊಂಡು ಜೀವಿಸುವವರಿಗೆ ಅಪಾರ

---

೨೭. ಶವಣ ಪ್ರಸಾದ (ನುಲಿಯ ಚಂದಯ್ಯನ ಕಾಯಕ ನಿಷ್ಠೆ) ಪುಟ - ೯೩)

ತೊಂದರೆಯುಂಟಾಗುತ್ತದೆ. ಇದಕ್ಕೆ ನಮ್ಮ ಭಾರತ ದೇಶದ ಬಡ ರೈತನೇ ಶ್ರೇಷ್ಠ ಉದಾಹರಣೆಯಾಗಿದ್ದಾನೆ. ಆತ ಯಾವೊತ್ತೂ ಸಾಲದಿಂದ ಮುಕ್ತನಾಗಲು ಆಗುವುದಿಲ್ಲ. ಎಲ್ಲರೂ ಅವನನ್ನೇ ಶೋಷಣೆ ಮಾಡುತ್ತಾರೆ. ರೈತರಿಂದ ಉತ್ಪಾದನೆಯಾದ ಪದಾರ್ಥಗಳಿಗೆ ನ್ಯಾಯವಾಗಿ ಬೆಲೆಯೇ. ಸಿಗುವುದಿಲ್ಲ. ಆದರೆ ಅದಕ್ಕೆ ವಿರುದ್ಧವಾಗಿ ರೈತನಿಗೆ ಬೇಕಾದ ವಸ್ತುಗಳೆಲ್ಲ ತೀರಾ ದುಬಾರಿಯಾಗಿ ಬಿಟ್ಟಿವೆ. ಈ ವೈಪರೀತ್ಯ ಹೋಗಬೇಕು. "ಸಂಪತ್ತಿನ ಉತ್ಪಾದನೆಯಲ್ಲಿ ಬಳಸುವ ವಿವಿಧ ಘಟಕಗಳಿಗೆ ಹಾಗೂ ಉತ್ಪಾದಿತ ಸಿದ್ಧ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ನ್ಯಾಯವಾದ ಬೆಲೆ ಸಿಗಬೇಕೆಂಬುದು ಇಂದಿನ ಅರ್ಥ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಪ್ರತಿಯೊಬ್ಬ ಶ್ರಮಜೀವಿಯು ಉತ್ಪಾದನಾ ಪ್ರಕ್ರಿಯೆಯಲ್ಲಿ ಸಲ್ಲಿಸಿದ ತನ್ನ ಸೇವೆಗೆ ತಕ್ಕ ಪ್ರತಿಫಲ ಪಡೆಯಬೇಕು"[೨೮] ಎಂದು ಅರ್ಥಶಾಸ್ತ್ರದ ಪ್ರಾಧ್ಯಾಪಕರಾದ ಬಿ.ಎ. ಪಾಟೀಲರು ಹೇಳಿದ ಮಾತುಗಳನ್ನಿಲ್ಲಿ ನೆನಪಿಸಿಕೊಳ್ಳಬಹುದಾಗಿದೆ.

ಬಸವಣ್ಣನವರು 'ನ್ಯಾಯ ಬೆಲೆ'ಯ ಕುರಿತಾಗಿ ಜಿಜ್ಞಾಸೆಗೈದಿದ್ದಾರೆ. ಅವರು ಅನುಭಾವದ ಪರಿಭಾಷೆಯಲ್ಲಿ ಹೇಳಿದ್ದರೂ ಸಹ; ಅದರಲ್ಲಿ ನ್ಯಾಯಬೆಲೆಯ ಕುರಿತಾಗಿರುವ ಅರ್ಥವನ್ನು ಗುರುತಿಸಬಹುದಾಗಿದೆ.

**"ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ**
**ಹರದ ಕುಳ್ಳಿರ್ದ ನಮ್ಮ ಮಹಾದೇವಸೆಟ್ಟಿ**
**ಒಮ್ಮನವಾದರೆ ಒಡನೆ ನುಡಿವನು;**
**ಇಮ್ಮನವಾದರೆ ನುಡಿಯನು**
**ಕಾಣಿಯ ಸೋಲ; ಅದ್ಧ ಕಾಣಿಯಗೆಲ್ಲ**
**ಜಾಣ ನೋಡವ್ವಾ**
**ನಮ್ಮ ಕೂಡಲಸಂಗಮದೇವಾ"[೨೯]**

ಈ ಸಮಸ್ತ ವಿಶ್ವವೇ ಒಂದು ಮಾರುಕಟ್ಟೆ. ಈ ವಿಶ್ವದ ಹುಟ್ಟಿಗೆ ಮೂಲ ಕಾರಣಪುರುಷನಾದ ಆ ಮಹಾದೇವನು ಆ ಮಾರುಕಟ್ಟೆಗೆ ದೊಡ್ಡ ವ್ಯಾಪಾರಿ. ಆತ ವ್ಯಾಪಾರ ಮಾಡುವಾಗ ಥೇಟ್ 'ಶೆಟ್ಟಿ'ಯಂತೆಯೇ ವರ್ತಿಸುತ್ತಾನೆ. ಪಡಿಪದಾರ್ಥಗಳನ್ನು ಕೊಂಡುಕೊಳ್ಳಲು ಬಂದವರಿಂದ 'ಅರ್ಧಕಾಣಿ' ದುಡ್ಡನ್ನು ಹೆಚ್ಚಾಗಿ ಬಯಸುವುದಿಲ್ಲ. ಆಯಾ ವಸ್ತುವಿನ ಬೆಲೆ ಎಷ್ಟು ಇದೆಯೋ ಅಷ್ಟಕ್ಕೆಯೇ ಮಾರುತ್ತಾನೆ. ಹಾಗೆಯೇ 'ಅರ್ಧಕಾಣಿ' ಯನ್ನು ಸುಮ್ಮನೆ ಬಿಟ್ಟುಕೊಟ್ಟು, ತನಗೆ ನಷ್ಟ ಮಾಡಿಕೊಳ್ಳುವಂಥವನೂ ಅಲ್ಲ. ಲಾಭ-ನಷ್ಟ ಇಲ್ಲದ ಈ ವ್ಯಾಪಾರದಲ್ಲಿ ಆ ಮಹಾದೇವಸೆಟ್ಟಿಯು ಅತಿ ಚಾಣಾಕ್ಷನಾಗಿದ್ದಾನೆ. ಆತನು ಕೈಗೊಂಡಿರುವ ಆ ವ್ಯಾಪಾರವು ಜನರಿಗೆ ಅನುಕೂಲವನ್ನು ಕಲ್ಪಿಸುವುದರ ಜೊತೆಗೆ ಲೋಕದ ಜನತೆಯ ಹಿತಾಸಕ್ತಿಯನ್ನು ಕಾಪಾಡುತ್ತದೆ.

---

೨೮. ಶರಣರ ಆರ್ಥಿಕ ಚಿಂತನೆ; 'ನ್ಯಾಯ ಬೆಲೆ'ಯಲ್ಲಿ, ಪುಟ - ೩೯

೨೯. ಬಸವಣ್ಣನವರ ಷಟಸ್ಥಳದ ವಚನಗಳು, ಪುಟ-೩೧, ವಚನಸಂಖ್ಯೆ - ೧೧೮

ಬಸವಣ್ಣನವರ ವಚನವನ್ನು ವಿಶ್ಲೇಷಿಸುತ್ತ ಡಾ. ಎಲ್. ಬಸವರಾಜು ಹೀಗೆ ಹೇಳುತ್ತಾರೆ: "ಇದೊಂದು (ಜಗತ್ತು) ಅಂಗಡಿ! ದೇವರಿಟ್ಟಿರುವ ದೊಡ್ಡ ಅಂಗಡಿ! ಅಲ್ಲಿ ಸಲ್ಲುವ ನಾಣ್ಯವೆಂದರೆ ದುಡಿಮೆ, ಸತ್ಯ ಶುದ್ಧ ಕಾಯಕ! ಅಲ್ಲಿನ ವ್ಯವಹಾರದ ನಿರ್ಣಾಯಕ ಸೂತ್ರವೆಂದರೆ "ಲಾಭವಿಲ್ಲ-ನಷ್ಟವಿಲ್ಲ" ಕೊಳ್ಳುವವರಿಗೆ ನಷ್ಟಮಾಡಿ, ತಾನು ಲಾಭಗಳಿಸುವ ಲಾಭಕೋರನಲ್ಲ, ಕಾಳಸಂತೆಕಾರನಲ್ಲ ದೇವರು!ಅವನು ಲೋಕವನ್ನು ವಂಚಿಸಿ ತಾನೇನನ್ನು ಗಳಿಸನು, ಮತ್ತು ತನ್ನನ್ನು ವಂಚಿಸುವ ಲೋಕಕ್ಕೆ ಏನನ್ನೂ ಸಲ್ಲಿಸನು. ಅವನು ಲೋಕದ ಶೆಟ್ಟಿಯಂತೆ ಕೃಪಣ ಕುತಂತ್ರ ಜಾಣನಲ್ಲ. ದೇವರು "ದುಡಿದಷ್ಟು ಪಡಿ"ಯುವ ಸಮತೋಲನ ವಿತರಣ ಜಾಣ, ಕಡು ಜಾಣ! ಈ ವ್ಯವಹಾರದಲ್ಲಿ ಅರ್ಧಕಾಸಿನಷ್ಟು ಲಾಭವನ್ನಾದರೂ ಏಕೆ ಸಹಿಸಿಯಾನು? ಅವನ ಅಂಗಡಿಯಲ್ಲಿ ಲಾಭವಿಲ್ಲ ನಷ್ಟವಿಲ್ಲ ಕೊಳ್ಳುವವನಾಗಲಿ, ಕೊಡುವವನಿಗಾಗಲಿ! ಈ ಒಪ್ಪಂದ ಒಮ್ಮನಸ್ಸಿದ್ದರೆ, ಆ ದೇವರಿಗೂ ಈ ಜೀವರಿಗೂ ಈ ಲೋಕದಂಗಡಿಯಲ್ಲಿ ವ್ಯವಹಾರ. ಇಲ್ಲದಿದ್ದರೆ ಉಪಸಂಹಾರ!"[೩೦] ಈ ವಚನದ ವಿವೇಚನೆಯಿಂದ ವಚನಕಾರರು 'ನ್ಯಾಯಬೆಲೆ'ಯ ಕುರಿತಾಗಿ ಚಿಂತನ-ಮಂಥನಗೈದಿದ್ದಾರೆಂಬುದು ಮನದಟ್ಟಾಗುತ್ತದೆ. ಜನಸಾಮಾನ್ಯರ ಕೆಲಸದ ಬಗ್ಗೆ, ಅವರಿಂದ ಉತ್ಪಾದನೆಗೊಳ್ಳುವ ವಸ್ತುವಿಗೆ ಯೋಗ್ಯವಾದ ಬೆಲೆ ಸಿಗಬೇಕೆನ್ನುವಲ್ಲಿ ಪ್ರಾಮಾಣಿಕ ಕಾಳಜಿಯಿರುವುದು ಕಂಡುಬರುತ್ತದೆ.

### ಸಂಗ್ರಹ ನಿಷೇಧ

ಸ್ಥಿತ್ಯಂತರ ಯುಗದಲ್ಲಿ ಬಾಳಿ ಬೆಳಗಿದ ವಚನಕಾರರ ವಿಚಾರಗಳು ಆಶ್ಚರ್ಯವೆನಿಸುವಷ್ಟು ವೈಜ್ಞಾನಿಕ, ವೈಚಾರಿಕ, ಪ್ರಗತಿಪರ ಧೋರಣೆಯಿಂದ ಕೂಡಿವೆ. ವಾಸ್ತವಿಕ ತಳಹದಿಯ ಮೇಲೆ ರೂಪುಗೊಂಡಿವೆ. ಆಧುನಿಕರಾದ ಕಾರ್ಲ್‌ಮಾರ್ಕ್ಸ್, ಲೆನಿನ್, ಲೋಹಿಯಾ, ಲೋಕನಾಯಕ ಜಯಪ್ರಕಾಶ ನಾರಾಯಣ ಮೊದಲಾದವರು ಪ್ರತಿಪಾದಿಸುವ ಹಲವಾರು ಚಿಂತಕರ ತತ್ವಧಾರೆಗಳನ್ನು ಹನ್ನೆರಡನೆಯ ಶತಮಾನದ ಶಿವಶರಣರಲ್ಲಿ ಕಾಣುತ್ತೇವೆ. ಇಂದಿನ ಸಮತಾವಾದ, ಸಮಾಜವಾದಗಳ ತಿರುಳು ಶರಣರು ಸ್ಥಾಪಿಸಿದ ಸಮಾಜದಲ್ಲಿ ಆಚರಣೆಯಲ್ಲಿತ್ತೆಂಬುದು ಕೌತುಕವಾಗಿದೆ.

"ಸರ್ವರಿಗೆ ಸಮಪಾಲು, ಸರ್ವರಿಗೆ ಸಮಬಾಳು" ಎನ್ನುವ ಉದಾತ್ತ ವಿಚಾರವನ್ನು ಮೈಗೂಡಿಸಿಕೊಂಡು ಬೆಳೆದ ವಚನಕಾರರ ಸಮಾಜವು ಸಂಗ್ರಹ ಮಾಡಲು ಅವಕಾಶ ನೀಡಿರಲಿಲ್ಲ. ನಮ್ಮ ಉಪಯೋಗಕ್ಕೆ ಬೇಕಾದುದಕ್ಕಿಂತಲೂ ಹೆಚ್ಚಾಗಿ ಸಂಗ್ರಹಿಸುವುದನ್ನು, ಅದರಲ್ಲಿಯೂ ಜೀವನಾವಶ್ಯಕ ವಸ್ತುಗಳನ್ನು ಒಂದೆಡೆ ಕೂಡಿಡುವುದನ್ನು ನಿಷೇದಿಸಿದ್ದಾರೆ.

ಅಂದಂದಿಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಪಡೆದುಕೊಳ್ಳಬೇಕು. ಒಂದೆಡೆ ಕೂಡಿಟ್ಟರೆ ಮತ್ತೊಂದೆಡೆ ಕೊರತೆಯುಂಟಾಗುತ್ತದೆ. ಬಡವರಿಗೆ ಮಧ್ಯಮ ವರ್ಗದವರಿಗೆ

---

೩೦. ಬಸವ ವಚನಾಮೃತ ಸಂ. ಡಾ. ಎಲ್. ಬಸವರಾಜು, ಪುಟ-೧೧

ಅಪಾರ ಅನಾನುಕೂಲವಾಗುತ್ತದೆ. ವಸ್ತುಗಳ ಕೊರತೆಯಾದಾಗ ಸಹಜವಾಗಿ ಮಾರು ಕಟ್ಟೆಯಲ್ಲಿ ಅದರ ಬೆಲೆ ಹೆಚ್ಚಳವಾಗುತ್ತದೆ. ಒಂದಕ್ಕೆ ನಾಲ್ಕು ಪಟ್ಟು ದುಡ್ಡು ಕೊಡಬೇಕಾದ ಅನಿವಾರ್ಯತೆಯುಂಟಾಗುತ್ತದೆ. ಅಕ್ರಮದಾಸ್ತಾನುದಾರರಿಗೆ, ಕಾಳಸಂತೆಕೋರರಿಗೆ, ಖದೀಮರಿಗೆ ಲಾಟರಿ ಹತ್ತಿದಂತಾಗುತ್ತದೆ. ಹಣದುಬ್ಬರಕೆ, ಕಪ್ಪುಹಣದ ಹಾವಳಿ, ತೆರಿಗೆ ತಪ್ಪಿಸುವವರಿಗೆ ಅವಕಾಶ ಒದಗಿಸಿದಂತೆ ಆಗುತ್ತದೆ. ಇದರಿಂದಾಗಿ ಸಮಸ್ತ ಸಮಾಜದ ಸ್ವಾಸ್ಥ್ಯವೇ ತಪ್ಪಿಹೋಗುತ್ತದೆ. ಕಡುಬಡವರು, ಬಡವರು, ಸಾಮಾನ್ಯರು, ಮಧ್ಯ ವರ್ಗದವರು, ಶ್ರೀಮಂತರು, ಆಗರ್ಭ ಶ್ರೀಮಂತರು, ಬಂಡವಾಳ ಶಾಹಿಗಳು ಇತ್ಯಾದಿ ವರ್ಗಗಳು ಹುಟ್ಟಿಕೊಳ್ಳುತ್ತವೆ. ದಿನಗಳು ಉರುಳಿದಂತೆ ಈ ವರ್ಗಗಳ ನಡುವಿನ ಕಂದಕ ಆಳ ಹಾಗೂ ಅಗಲವಾಗುತ್ತ ಹೋಗುತ್ತದೆ. ಹೀಗಾಗಿ ಇಡೀ ಸಮಾಜ ಅವ್ಯವಸ್ಥೆಯ ಆಗರವಾಗಿ ಬಿಡುತ್ತದೆ. ಹಲವಾರು ಜ್ವಲಂತ ಸಮಸ್ಯೆಗಳು ಧುತ್ತೆಂದು ತಲೆಯೆತ್ತಿ ಹೆಡೆಯಾಡಿಸತೊಡಗುತ್ತವೆ. ದುಷ್ಟ ಶಕ್ತಿಗಳು ತಾಂಡವವಾಡುತ್ತವೆ. ಜೀವನ ನಡೆಸುವುದೆ ದುಸ್ತರವಾಗಿ ಜನಸಾಮಾನ್ಯರು ಪರದಾಡಬೇಕಾಗಿ ಬರುತ್ತದೆ. ಇವೆಲ್ಲ ಅಂಶಗಳನ್ನು ಕುಲಂಕುಷವಾಗಿ ಪರಿಶೀಲಿಸಿದ ವಚನಕಾರರು, ಸಾಕಷ್ಟು ಚಿಂತನೆಗೈದು ಸಮಕಾಲೀನತೆ ಯೊಂದಿಗೆ ಸರ್ವಕಾಲೀನ ದೃಷ್ಟಿಯನ್ನಿಟ್ಟುಕೊಂಡು ಬಹಳ ಅಮೂಲ್ಯವಾದ ಮೌಲ್ಯಗಳನ್ನು ಸೃಷ್ಟಿಸಿ ಅನುಷ್ಠಾನಕ್ಕೆ ತಂದಿದ್ದರು. ಅದರಲ್ಲಿ 'ಸಂಗ್ರಹ ನಿಷೇದ'ವು ಅತಿ ಮುಖ್ಯವಾಗಿದೆ.

**ಅಕ್ಕಮ್ಮ**

> "…. ಇರುಳೆಡೆಗೆಂದಿರಿಸದೆ, ಹಗಲೆಡೆಯ ನೆನೆಯದೆ
> ಇಂದಿಂಗೆ ನಾಳಿಂಗೆ ಎಂಬ ಸಂದೇಹಂ ಬಿಟ್ಟು"[೩೧]

**ಅಲ್ಲಮ**

> "ಅಂದಂದಿಗೆ ಬಂದ ಧನವನಂದೇ ವೆಚ್ಚವ ಮಾಡಿ"[೩೨]

**ಸಿದ್ಧರಾಮ**

> "ಇಂದಿಗೆಬುದು ಲಿಂಗದೊಳಿರಲು ಶಿವಭಕ್ತಂಗೆ
> ನಾಳಿಗೆಯೆಂಬುದು ಬದ್ಧ ಭವಿತನ"[೩೩]

**ಬಸವಣ್ಣ**

> "ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದು ಎಳೆಯ
> ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ
> ನಿಮ್ಮಾಣೆ! ನಿಮ್ಮ ಪುರಾತನರಾಣೆ"[೩೪]

---

೩೧. ವಚನ ಮಂಜರಿ, ಸಂ. ಡಾ. ಚೆನ್ನಕ್ಕ ಎಲಿಗಾರ, ವ-೪೬

೩೨. ಅಲ್ಲಮನ ವಚನ ಚಂದ್ರಿಕೆ, ಸಂ. ಡಾ. ಎಲ್. ಬಸವರಾಜು, ವ-೩೯

೩೩. ಸಿದ್ಧರಾಮನ ವಚನಗಳು: (ಉಪನ್ಯಾಸ ಸಂಚಯ) ಪುಟ-೩೧೫

೩೪. ಬಸವಣ್ಣನವರ ಷಟಸ್ಥಳ ವಚನಗಳು. ಸಂ. ಪ್ರೊ. ಶಿ.ಶಿ. ಬಸವನಾಳ, ವ-೪೩೮

ಲಕ್ಕಮ್ಮ

"ಆಸೆಯೆಂಬುದು ಅರಸಿಂಗಲ್ಲದೆ
ಶಿವಭಕ್ತರಿಗುಂಟೆ ಅಯ್ಯಾ?
ರೋಷವೆಂಬುದು ಯಮಧೂತರಿಗಲ್ಲದೆ
ಅಜಾತರಿಗುಂಟೆ ಅಯ್ಯಾ?
ಈಸಕ್ಕಿಯಾಸೆ ನಿಮಗೇಕೆ?
ಈಶ್ವರನೊಪ್ಪ, ಮಾರಯ್ಯಪ್ರಿಯ
ಅಮರೇಶ್ವರಲಿಂಗಕ್ಕೆ ದೂರ ಮಾರಯ್ಯ"[೩೫]

ಈ ವಚನಗಳು ಶಿವಶರಣರು 'ಸಂಗ್ರಹ ನಿಷೇಧ'ಕ್ಕೆ ಆದ್ಯತೆ ನೀಡಿ ಅದನ್ನು ಅನುಷ್ಠಾನಗೊಳಿಸಲು ಶ್ರಮಿಸಿರುವುದಕ್ಕೆ ನಿದರ್ಶನಗಳಾಗಿವೆ. ನಾಳಿಗೆ ಬೇಕೆಂದು, ಯಾವುದೇ ವಸ್ತುಗಳನ್ನು ಸಂಗ್ರಹಿಸಿದರೆ "ಅದು ಶುದ್ಧ ಭವಿತನ"ವೆಂದು ಸಿದ್ಧರಾಮ ಸ್ಪಷ್ಟಪಡಿಸಿದ್ದಾನೆ. ಅಂದು ಎಷ್ಟು ಬೇಕೋ, ಅಷ್ಟನ್ನೇ ಯಾರು ಪಡೆಯುತ್ತಾರೆಯೋ ಅಂಥವರ ಮನೆಯ ಅಂಗಳವು ಮಂಗಳಮಯವಾದ ಕೈಲಾಸಕ್ಕೆ ಸರಿ-ಸಾಟಿಯಾಗಿ ನಿಲ್ಲುತ್ತದೆಯೆಂದು ಅಕ್ಕಮ್ಮ ತಿಳಿಸುವುದರ ಉದ್ದೇಶ ಸಂಗ್ರಹ ನಿಷೇಧವೇ ಆಗಿದೆ. ಅಣ್ಣ ಬಸವಣ್ಣನವರು ಸಾಕ್ಷಾತ್ ಸಂಗಮನಾಥನ ಮೇಲೆ ಆಣೆಯಿಟ್ಟು, ಪ್ರಮಾಣಮಾಡಿ, "ಇಂದಿಗೆ ನಾಳಿಂಗೆ, ಎನ್ನೊಡಲಿಂಗೆ, ಎನ್ನೊಡವೆಗೆ, ಎನ್ನಮಡದಿ-ಮಕ್ಕಳಿಗೆಂದು ಬೇಕು ಬೇಕೆಂದು ಬಯಸಿ, ಆಸೆಪಟ್ಟು ಸಂಗ್ರಹಿಸಿದೆನಾದರೆ ತಲೆದಂಡ! ತಲೆದಂಡ"ವೆಂದು ಪ್ರತಿಜ್ಞೆಗೈದಿದ್ದಾರೆ.

'ಸಂಗ್ರಹ ನಿಷೇಧ'ಕ್ಕೆ ಆಯ್ದಕ್ಕಿ ಲಕ್ಕಮ್ಮ ಉಜ್ವಲ ಉದಾಹರಣೆಯಾಗಿ ನಿಲ್ಲುತ್ತಾಳೆ. ತನ್ನ ಗಂಡ ಮಾರಯ್ಯ ಹೆಚ್ಚಿಗೆ ಅಕ್ಕಿಯಾರಿಸಿಕೊಂಡು ಬಂದಾಗ, ಹೊಸ್ತಿಲ ಹೊರಗೆ ನಿಲ್ಲಿಸಿ ತರಾಟೆಗೆ ತೆಗೆದುಕೊಳ್ಳುತ್ತಾಳೆ. ತದನಂತರ ವಸ್ತುಸ್ಥಿತಿಯನ್ನು ವಿವರಿಸುತ್ತಾಳೆ. ತೂಕ ತಪ್ಪಿದ ಗಂಡನನ್ನು ಸರಿದಾರಿಯಲ್ಲಿ ನಡೆಸುತ್ತಾಳೆ. ಸಾಧ್ವಿ 'ಲಕ್ಕಮ್ಮ'ಳ ಮಹಾನ್ ವ್ಯಕ್ತಿತ್ವವು ನಮ್ಮ ಸಮಾಜದಲ್ಲಿರುವ ಸಮಸ್ತ ಸಹೋದರಿಗೊಂದು ಆದರ್ಶ ಪ್ರಾಯವೂ, ಮಾರ್ಗದರ್ಶಿಯೂ ಆಗಿದೆ.

ವಚನಕಾರರು ಕೇವಲ ಮಾತನಾಡಿದವರಲ್ಲ; ನಡೆದಂತೆ ನುಡಿದರು. ನುಡಿದಂತೆ ನಡೆದರು. ನಡೆಯೊಳಗಡೆ ನುಡಿಯ ಪೂರೈಸಿದವರು. 'ನಡೆ-ನುಡಿ ಒಂದಾದೆಡೆ ಇದೇ ಜನ್ಮ ಕಡೆ'ಯೆಂದು ಸಾರಿದ್ದಾರೆ.

## ಕಾಯಕದಿಂದ ಬಡತನ ನಿವಾರಣೆ

'ಭಾರತವು ಬಡವರಿಂದ ತುಂಬಿದ ಶ್ರೀಮಂತ ರಾಷ್ಟ್ರ' ಎಂಬ ಮಾತನ್ನು ಆಗಾಗ

---

೩೫. ವಚನ ಮಂಜರಿ, ಸಂ. ಡಾ. ಚೆನ್ನಕ್ಕ ಎಲಿಗಾರ, ವ-೩೯

ಕೇಳುತ್ತೇವೆ. ನಮ್ಮಲ್ಲಿ ಸಾಗರ ಸಂಪತ್ತು, ಖನಿಜ ಸಂಪತ್ತು, ಅರಣ್ಯಸಂಪತ್ತು ಪ್ರಾಣಿ ಸಂಪತ್ತು, ಜಲ ಸಂಪತ್ತು, ಪರಿಸರ ಸಂಪತ್ತು, ಮಾನವ ಸಂಪತ್ತು ಅಪಾರವಾಗಿದೆ. ಈ ಹೇರಳ ಸಂಪನ್ಮೂಲಗಳನ್ನು ನಾವು ವ್ಯವಸ್ಥಿತವಾಗಿ, ವೈಜ್ಞಾನಿಕವಾಗಿ ಬಳಸಿಕೊಂಡಿಲ್ಲ. ಭಾರತದಲ್ಲಿ ಕಷ್ಟಪಟ್ಟು ದುಡಿಯುವರಿಗಿಂತಲೂ ಎಷ್ಟೋ ಪಟ್ಟು ದುಡಿಯದೇ ತಿನ್ನುವವರಿದ್ದಾರೆ. ಸಾಮಾನ್ಯವಾಗಿ ಮನೆಗೊಬ್ಬರು ದುಡಿಯುವವರಿದ್ದರೆ, ಹತ್ತಾರು ಜನರು ಖಾಲಿ ಕುಳಿತು ಕಬಳಿಸುವವರಿದ್ದಾರೆ. ನಮ್ಮಲ್ಲಿರುವ ಜನಸಂಪತ್ತನ್ನು ಸಮರ್ಪಕವಾಗಿ ಬಳಸಿಕೊಂಡಿದ್ದರೆ ಬಡತನವೆಂಬುದೇ ಇರುತ್ತಿರಲಿಲ್ಲ. ಪ್ರಾಮಾಣಿಕವಾಗಿ ಪ್ರತಿಯೊಬ್ಬರೂ ಕಾಯಕವನ್ನು ಕೈಗೊಳ್ಳಬೇಕಿದೆ. ಈ ವಿಚಾರಗಳನ್ನು ವಚನಕಾರರು ಅಚ್ಚುಕಟ್ಟಾಗಿ ಮಂಡಿಸಿದ್ದಾರೆ.

**ಲಕ್ಕಮ್ಮ**

"ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಿಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮೀ ತಾನಾಗಿಪ್ಪಳು"[೩೬]

"ಲಿಂಗಕ್ಕೆ ಬಡತನವಿಲ್ಲದೆ ಮನಕ್ಕೆ ಬಡತನವುಂಟೆ?
ಘನ ಶಿವಭಕ್ತರಿಗೆ ಬಡತನವಿಲ್ಲ, ಸತ್ಯರಿಂಗೆ ದುಷ್ಕರ್ಮವಿಲ್ಲ?[೩೭]

**ಬಸವಣ್ಣ**

"ಆಯುಷ್ಯ ತೀರಿದಲ್ಲದೆ ಮರಣವಿಲ್ಲ
ಭಾಷೆ ತಪ್ಪಿದಲ್ಲದೆ ದಾರಿದ್ರ್ಯವಿಲ್ಲ"[೩೮]

**ಆಯ್ದಕ್ಕಿ ಮಾರಯ್ಯ**

"ಭಕ್ತರಿಗೆ ಬಡತನವುಂಟೆ?
ಸತ್ಯರಿಗೆ ಕರ್ಮವುಂಟೆ?"[೩೯]

**ಅಕ್ಕಮ್ಮ**

"ಇಂದಿಗೆ ನಾಳಿಂಗೆ ಎಂಬ ಸಂದೇಹಂ ಬಿಟ್ಟು
ಮುಂದಣ ಕಾಯಕ ಅಂದಂದಿಗೆ ಉಂಟು....."[೪೦]

---

೩೬. ವಚನ ಮಂಜರಿ. ಸಂ. ಡಾ. ಚೆನ್ನಕ್ಕ ಎಲಿಗಾರ, ವ-೫೪

೩೭. ಅದೇ, ವ- ೫೫

೩೮. ಬಸವಣ್ಣನವರ ಷಟಸ್ಥಳ ವಚನಗಳು, ಸಂ. ಪ್ರೊ. ಶಿ.ಶಿ. ಬಸವನಾಳ, ವ-೬೯೨

೩೯. ವಚನ ಮಂಜರಿ, ಸಂ. ಡಾ. ಚೆನ್ನಕ್ಕ ಎಲಿಗಾರ, ವ-೫೦

೪೦. ಅದೇ, ವ-೪೬

'ಭಕ್ತರಿಗೆ ಬಡತನವುಂಟೆ? ಲಿಂಗಕ್ಕೆ ಬಡತನವಲ್ಲದೆ, ಮನಕ್ಕೆ ಬಡತನವಿಲ್ಲ? ಮುಂದಣ ಕಾಯಕ ಅಂದಂದಿಗೆ ಉಂಟು ಎಂಬುದನರಿತು'ಕೊಂಡು ಜೀವನ ಸಾಗಿಸಬೇಕೆಂದು ಸೂಚಿಸುತ್ತಾರೆ. ದುಡಿಯದವರಿಗೆ, ಆಲಸಿಗಳಿಗೆ, ಸೋಮಾರಿಗಳಿಗೆ ಬಡತನ ಬರುವುದು. ಆದರೆ ಚಿತ್ತ ಶುದ್ಧಧಲ್ಲಿ ಕಾಯಕ ಮಾಡುವಲ್ಲಿ, ಸದ್ಭಕ್ತರಿಗೆ ಎತ್ತ ನೋಡಿದತ್ತ ಲಕ್ಷ್ಮೀ ತಾನಾಗಿಪ್ಪಳು' ಎಂದು ವಚನಕಾರರು ಧೈರ್ಯ ತುಂಬಿದ್ದಾರೆ. ಅಷ್ಟೆ ಅಲ್ಲ: 'ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವು ಸತ್ತಂದಿಗಲ್ಲದೆ ಬಡತನ'ವೆಂಬುದಿಲ್ಲವೆಂದು ಪ್ರಮಾಣ ಮಾಡುತ್ತಾರೆ. ಲಿಂಗಕ್ಕೆ ಎಂದೆಂದಿಗೂ ಸಾವಿಲ್ಲ, ಕೇಡಿಲ್ಲದ ಕಾರಣ, ಮನಮುಟ್ಟಿ ದುಡಿಯುವರಿಗೆ ಬಡತನವೆಂಬುದೇ ಇರುವುದಿಲ್ಲ.

ನಮ್ಮ ದೇಶದಲ್ಲಿ ಇಂದಿನ ಯುವಕರಿಗೆ ಸಿಂಹಸ್ವಪ್ನವಾಗಿರುವ ನಿರುದ್ಯೋಗ ಸಮಸ್ಯೆಯ ಕುರಿತಾಗಿ ಹಿಂದೆಯೇ ವಚನಕಾರರು ಚಿಂತಿಸಿದ್ದಾರೆ. ಶಿವಶರಣರು ತೋರಿಸಿದ ದಾರಿಯಲ್ಲಿ ಸಾಗಿ 'ಆವ ಕಾಯಕವಾದರೂ ಒಂದೇ ಕಾಯಕವಯ್ಯ' ಎಂದು ಅರಿತು ನಡೆದಿದ್ದರೆ ಇಂದಿನ ಹಾಹಾಕಾರವೇ ಇರುತ್ತಿರಲಿಲ್ಲವೆನಿಸುತ್ತದೆ.

ಬಹಳಷ್ಟು ಯುವಕರು ತಾವು ಬಯಸುವ ಉದ್ಯೋಗವೇ ಬೇಕು. ಬೇರೆಯಾದರೆ ಬದುಕಲು ಸಾಧ್ಯವೇ ಇಲ್ಲವೆಂದು ಭ್ರಮಿಸಿಕೊಂಡು, ಕೊನೆಯುವರೆಗೂ ನಿರುದ್ಯೋಗಿಯಾಗಿಯೇ ಉಳಿದುಬಿಡುವ ಅಥವಾ ನಿರಾಶರಾಗಿಬಿಡುತ್ತಾರೆ. ಕೆಲವರು ಸಂಯಮಕಳೆದುಕೊಂಡು ಹೇಡಿಗಳಾಗಿ ಆತ್ಮಹತ್ಯೆಯಂತಹ ಹೇಯ ಕೃತ್ಯಕ್ಕಿಳಿಯುತ್ತಾರೆ. ಪ್ರತಿಯೊಬ್ಬರೂ ಡಾಕ್ಟರ್, ಇಂಜಿನಿಯರ್, ತಹಶೀಲದಾರ, ಪ್ರೊಫೆಸರ್, ಲಾಯರ್ ಆಗಬೇಕೆಂದು ಬಯಸುತ್ತಾರೆ. ಮತ್ತೆ ಕೆಲವರು ಹಣಕಾಸು, ಕಂದಾಯ, ಪೋಲಿಸು, ಲೋಕೋಪಯೋಗಿ, ಅರಣ್ಯ, ನೀರಾವರಿ, ರಸ್ತೆ ಸಾರಿಗೆ ಸಂಸ್ಥೆ, ಬ್ಯಾಂಕ್ ಇತ್ಯಾದಿ ಆಕರ್ಷಕ ಇಲಾಖೆಗಳಲ್ಲಿಯೇ ನೌಕರಿಗಾಗಿ ಹಂಬಲಿಸುತ್ತಾರೆ. ತಕ್ಕ ಅರ್ಹತೆ ಇದ್ದರೆ ಬೇರೆ? ಸರ್ವರೂ ಸಾರಾ-ಸಗಟಾಗಿ 'ವೈಟ್ ಕಾಲರ್ ಜಾಬ್' ಬಯಸಿದರೆ; ಪೂರೈಸುವುದಾದರೂ ಹೇಗೆ? ಮಿತಿಮೀರಿದ ಜನಸಂಖ್ಯೆಯಿಂದ ತತ್ತರಿಸುವ ಭಾರತದಂತಹ ದೇಶದಲ್ಲಿ ಎಲ್ಲರಿಗೂ ಸರಕಾರಿ ನೌಕರಿ ಒದಗಿಸುವುದು ಅಸಾಧ್ಯದ ಮಾತೇ ಆಗಿದೆ. ಅದಕ್ಕಾಗಿ ನಾವೆಲ್ಲರೂ ನಮ್ಮ ಸುತ್ತ ಕಟ್ಟಿಕೊಂಡ ದಂತಗೋಪುರದಿಂದ ಹೊರಬರಬೇಕು. ವಸ್ತುಸ್ಥಿತಿಯನ್ನರಿತುಕೊಳ್ಳಬೇಕು. ಯಾವುದಾದರೊಂದು ವೃತ್ತಿಯನ್ನು ಕೈಗೊಂಡು ನಿಷ್ಠೆ, ಪ್ರಾಮಾಣಿಕತೆಯಿಂದ ದುಡಿಯಬೇಕಿದೆ. ಇದರಲ್ಲಿ ಮೇಲು-ಕೀಳು, ಉಚ್ಚ-ನೀಚ, ಮಡಿ-ಮೈಲಿಗೆ ಎಂಬುದೇ ಇಲ್ಲ. ಎಲ್ಲ ಕಾಯಕಗಳೂ ಸರಿಸಮಾನವಾದವುಗಳು. "ನಾಳೆ ಬಪ್ಪುದು ನಮಗಿಂದೇ ಬರಲಿ, ಇಂದು ಬಪ್ಪುದು ನಮಗೀಗಲೇ ಬರಲಿ, ಇದಕಾರಂಜುವರು, ಇದಕಾರು ಅಳುಕುವರು" ಎಂದು ಧೈರ್ಯದಿಂದ ಮುನ್ನುಗ್ಗಿ ಕಾರ್ಯ ಪ್ರವೃತ್ತರಾಗ ಬೇಕು. ನಮ್ಮಲ್ಲಿರುವ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು, ನಿಷ್ಠೆ, ಪ್ರಾಮಾಣಿಕತೆಯಿಂದ ಯಾವುದಾದರೂ ಕಾಯಕ ಮಾಡಿದರೆ ಹಸಿವು, ಬಡತನ, ನಿರುದ್ಯೋಗ ಮುಂತಾದ ಪಿಡುಗುಗಳನ್ನು ನಮ್ಮ ಸಮಾಜದಿಂದಲೇ

ಹೊಡೆದೋಡಿಸಬಹುದು. ಸುಂದರ ಸಮೃದ್ಧವಾದ ರಾಷ್ಟ್ರವನ್ನು ಕಟ್ಟಬಹುದಾಗಿದೆ. ಸುಸಂಸ್ಕೃತ, ಸದೃಢ ಸಮಾಜವನ್ನು ರೂಪಿಸಬಹುದಾಗಿದೆ.

## ಕಾಯಕ ಮತ್ತು ಅನುಭಾವ

ಶಿವಶರಣರು ಕಾಯಕವನ್ನು ಹಲವಾರು ಮಗ್ಗುಲಗಳಲ್ಲಿ ನೋಡಿದ್ದಾರೆ. ಹತ್ತಾರು ರೀತಿಯಲ್ಲಿ ದುಡಿಸಿಕೊಂಡಿದ್ದಾರೆ. ಕಾಯಕವನ್ನು ಕೈಗೊಳ್ಳುವ ವ್ಯಕ್ತಿಗಳಿಗೆ, ಅದು ಒಂದು ಸಾಮಾಜಿಕ ಪ್ರತಿಷ್ಠೆಯನ್ನು ತಂದುಕೊಡುವ ಮಾಧ್ಯಮವಷ್ಟೇ ಆಗಿರದೆ, ಸತ್ಯ ಶುದ್ಧ ಶುಚಿ ಜೀವನದ ಪ್ರತೀಕವಾಗಿತ್ತೆಂಬುದು ವಚನಗಳಿಂದ ಕಂಡುಕೊಳ್ಳಬಹುದಾಗಿದೆ.

"ಮಾದಾರ ಧೂಳಯ್ಯ"ನಂತಹನಿಗೆ ತನ್ನ ಕಾಯಕದಲ್ಲಿನ ತನಿಯಾದ ನಿಷ್ಠೆ, ಅದು ಕೊಡುವ ಪರಮ ತೃಪ್ತಿ ಮುಖ್ಯವೇ ಹೊರತು ಕೈಲಾಸದಲ್ಲಿರುವ ಶಿವನಲ್ಲ, ಕೈಲಾಸದಿಂದ ಸಾಕ್ಷಾತ್ ಶಿವನೇ ಇಳಿದು ಬಂದು ಅವನ ಮುಂದೆ ನಿಂತರೂ ಪರಮ ಪದವಿಯನ್ನೂ ಬೇಡುವವನಲ್ಲ. ಮಾಡುವ ಕಾಯಕದಲ್ಲಿ ಶಿವನನ್ನು ಕಾಣಬೇಕೆಂಬುದು ಹನ್ನೆರಡನೆಯ ಶತಮಾನದ ಶರಣರ ಆದರ್ಶ. ಮಾದಾರ ಧೂಳಯ್ಯನು ತನ್ನ ಕರ್ತವ್ಯದಲ್ಲಿ ನಿರತನಾಗುವನು. ಲೌಕಿಕಭಾಗ್ಯ ಅಥವಾ ಅಲೌಕಿಕ ಭಾಗ್ಯ ಅನಾಯಾಸವಾಗಿ ಬರುವುದು ಮಾದಾರ ಧೂಳಯ್ಯನಿಗೆ ಬೇಡವಾಗಿದೆ. ಸತ್ಯ ಶುದ್ಧವಾದ ದುಡಿಮೆ ಹಾಗೂ ಅದರಿಂದ ಒದಗಿ ಬರುವ ಪ್ರತಿಫಲಗಳ ಮುಂದೆ ಯಾವುದಕ್ಕೂ ಬೆಲೆಯಿಲ್ಲ. ಶಿವಶರಣರು ತಾವು ಅನುಸರಿಸುವ ಕಾಯಕ ಹಾಗೂ ಅದರಲ್ಲಿ ಬಳಕೆಯಾಗುವ ಪರಿಕರಗಳ ಮೂಲಕ ಅಲೌಕಿಕ ಅಧ್ಯಾತ್ಮತತ್ತ್ವವನ್ನು ಕಾಣುವ, ಕಂಡು ಹೇಳುವ ಪ್ರಯತ್ನವನ್ನು ತಮ್ಮ ವಚನಗಳ ಮೂಲಕ ಮಾಡಿದರು"[೪೧] ಎಂದಿರುವ ಡಾ. ಎಸ್. ವಿದ್ಯಾಶಂಕರ ಅವರ ಮಾತುಗಳು ಅರ್ಥಪೂರ್ಣವಾಗಿವೆ. 'ನುಲಿಯ ಚಂದಯ್ಯ'ನ ಜೀವನವೂ ಸಹ ಮೇಲಿನ ಮಾತುಗಳು ಆಶಯವನ್ನೇ ಪ್ರತಿಫಲಿಸುತ್ತಿರುವುದನ್ನು ಗುರುತಿಸಬಹುದಾಗಿದೆ. ಅಲ್ಲಮಪ್ರಭು ದೇವನು ಕೃಷಿಯ ಕಾಯಕವನ್ನೇ ಅನುಭಾವಕ್ಕೆ ತಿರುಗಿಸಿ ವ್ಯಾಖ್ಯಾನಿಸಿದ ರೀತಿಯ ಹೃದಯಸ್ಪರ್ಶಿಯಾಗಿದೆ.

> **"ತನುವ ತೋಂಟವ ಮಾಡಿ**
> **ಮನವ ಗುದ್ದಲಿ ಮಾಡಿ**
> **ಅಗೆದು ಕಳೆದೆನಯ್ಯಾ ಭ್ರಾಂತಿಯ ಬೇರ**
> **ಬಡಿದು ಸಂಸಾರದ ಹೆಂಟೆಯ**
> **ಬಗಿದು ಬಿತ್ತಿದೆನಯ್ಯಾ ಬ್ರಹ್ಮಬೀಜವ"**[೪೨]

ಬೇಸಾಯವು ಅಲ್ಲಮನ ಕಾಯಕವಲ್ಲ, ಅದು ಅವನ ವಂಶವೃತ್ತಿಯೂ ಆಗಿರಲಿಲ್ಲ.

---

೪೧. ಉಪನ್ಯಾಸ ಸಂಚಯ (ಭಾಷೆ ಮತ್ತು ಕಾಯಕದ ಪರಿಕಲ್ಪನೆ) ಪುಟ-೭೫

೪೨. ಅಲ್ಲಮನ ವಚನ ಚಂದ್ರಿಕೆ ಸಂ. ಡಾ. ಎಲ್. ಬಸವರಾಜು, ವ-೮೧೨, ಪುಟ-೧೩೦

ಆದರೂ ಅದರ ಗಾಢ ಪರಿಚಯ ಆತನಿಗಿದೆ. ಅದಕ್ಕಾಗಿಯೇ ಕೃಷಿಯ ಚಟುವಟಿಕೆಗಳನ್ನು ಸಮರ್ಥವಾಗಿ ಉಲ್ಲೇಖಿಸಿದ್ದಾನೆ. ಅಲ್ಲಮನು ಬೇಸಾಯದ ಪರಿಭಾಷೆಯಲ್ಲಿ ತನ್ನ ಅನುಭಾವವನ್ನು ನಿರೂಪಿಸಿದ್ದಾನೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಕೃಷಿ ಕಾಯಕವನ್ನೇ ಅನುಭಾವದ ಮಟ್ಟಕ್ಕೆ ಏರಿಸಿದ್ದಾನೆಂದು ಹೇಳಬಹುದು.

ಅಲ್ಲಮನು ಕೃಷಿ ಕಾಯಕದಲ್ಲಿ ಅನುಭಾವವನ್ನು ನಿರೂಪಿಸಿದ್ದರೆ. ಅಂಬಿಗರ ಚೌಡಯ್ಯನು ತನ್ನ ಕಾಯಕ 'ಅಂಬಿಗತನ'(ನಾವಿಕ)ದ ಪರಿಭಾಷೆಯಲ್ಲಿಯೇ ಅನುಭಾವವನ್ನು ಕಟ್ಟಿಕೊಟ್ಟಿರುವುದು ಹೆಚ್ಚು ಔಚಿತ್ಯಪೂರ್ಣವಾಗಿದೆ. ಆತನ 'ಸ್ವಾನುಭವ'ವೇ ಅದರಲ್ಲಿ ಮಡಗಟ್ಟಿರುವುದನ್ನು ಗುರುತಿಸಬಹುದಾಗದೆ. ನೋಡಿ:

**"ಅಂಬಿಗನು ಜಗದೊಳಗೆ ಇಂಬಿಲೋಲಾಡುವನು**
**ತುಂಬಿದ ಸಾಗರದೊಳಗೆ ನೋಡಯ್ಯ**
**ನಿಂದ ದೋಣಿಯನೇರಿದಂದಿನ ಹುಟ್ಟ**
**ಛಂದಗೆಟ್ಟವರೆಲ್ಲಾ ಬಂದೇರಿ ದೋಣಿಯನು**
**ಶಿವನೊಂದೆ ತಾವಿಗೊಯ್ದಿಳುಹುವೆನೆಂದನಂಬಿಗ ಚೌಡಯ್ಯ"**[೪೩]

ಅನುಭಾವದ ಭಾಷ್ಯ ಬರೆಯುವಾಗ.ಅಂಬಿಗರ ಚೌಡಯ್ಯನು ತನ್ನ ವಂಶವೃತ್ತಿಯ ಜೊತೆಗೆ ತಳುಕು ಹಾಕಿದ್ದಾನೆ. ದೇಹವನ್ನು ದೋಣಿಗೆ ಹೋಲಿಸಿ, ಹುಟ್ಟು-ಸಾವುಗಳು 'ಆವರ್ತನ ಕ್ರಿಯೆ'ಗಳಾಗಿರುವುದರಿಂದ ಅವುಗಳನ್ನು ಹುಟ್ಟಿಗೆ (ನೀರ ತೆರೆಹೊಡೆದು ನಾವನ್ನು ನಡೆಸುವ ಸಾಧನವಾದ 'ಹುಟ್ಟು' ಎಂಬುದಕ್ಕೆ) ಹೋಲಿಸಿದ್ದಾನೆ. ಆ ಹುಟ್ಟಿನಿಂದ 'ಮಾಟಕೂಟವೆಂಬ ಹೊಳೆಯಲ್ಲಿ ಕೂಟದವರು ದಾಟುತ್ತಿದ್ದಾರೆ' ಎಂದಿದ್ದಾನೆ. ಹುಟ್ಟು-ಸಾವುಗಳೆಂಬ ನಿರಂತರವಾಗಿ ಸುತ್ತುತ್ತಿರುವ ಚಕ್ರದಿಂದ ಪಾರಗೊಳಿಸುವವನು ಆ ಪರಮಾತ್ಮನೆನ್ನುವ ಅಂಬಿಗ. ಆ ಶಿವನೆಂಬುವ ಅಂಬಿಗನನ್ನು ಸಂಪೂರ್ಣವಾಗಿ ನಂಬಿ, ನಮ್ಮ-ನಮ್ಮ ಕಾಯಕದಲ್ಲಿ ತೊಡಗಿಸಿಕೊಂಡದ್ದಾದರೆ, 'ಒಂದೇ ಹುಟ್ಟಲಿ ಕಡೆಯ ಹಾಯಿಸು'ವಂಥ ಶಕ್ತಿಯುಳ್ಳವನು. ಸಂಸಾರವನ್ನು ಬಂಡೆ, ಬಸ್ಸು, ರೈಲು, ಸಾಗರ ಮುಂತಾದುವುಗಳಿಗೆ ಹೋಲಿಸುವುದು ಒಂದು ಪರಂಪರೆಯೇ ಆಗಿದೆ. ಹಾಗೆಯೇ ಚೌಡಯ್ಯನು ಈ ವಚನದಲ್ಲಿ ಸಂಸಾರವನ್ನು ಸಮುದ್ರಕ್ಕೆ ಹೋಲಿಸಿದ್ದಾನೆ. ಆ ಭವಸಾಗರವನ್ನು ದಾಟಿಸುವ ಅಂಬಿಗ ದೋಣಿಯನ್ನೇರಿ, ಕೈಯ್ಯಲ್ಲಿ ಹುಟ್ಟುಹಿಡಿದು ನಿಂತುಕೊಂಡಿದ್ದಾನೆ. ವಿಶ್ವದ ಸಮಸ್ತಜೀವ ಸಂಕುಳಗಳ ಸೃಷ್ಟಿಗೆ ಕಾರಣನಾದ ಆ ಸೃಷ್ಟಿಕರ್ತನಾದ ಪರಮಾತ್ಮನು 'ಸೃಷ್ಟಿ' ಸಮುದ್ರದಲ್ಲಿ 'ಸ್ಥಿತಿ'ಗೆ ಕಾರಣೀಕರ್ತೃವಾಗಿದ್ದಾನೆ. ಅವನ ಅಂಶವನ್ನು ಪಡೆದಿರುವವರು ಮಾನವರಾದ ನಾವುಗಳೆಲ್ಲ, ನಮ್ಮ ಶರೀರ ಇಹಲೋಕಕ್ಕೆ ಬಂದಾಗಿನಿಂದಲೂ ಅದರ ಎಲ್ಲ ಚಟುವಟಿಕೆಗಳನ್ನು ಆ ಶಿವನು ತನ್ನ

---

೪೩. ಅಂಬಿಗರ ಚೌಡಯ್ಯನ ವಚನಗಳು (ಲಲಿತ ಪ್ರಕಾಶನ, ಹುಬ್ಬಳ್ಳಿ) ವ-೧೧೨

ಕಣ್ಣಲ್ಲಿ ಕಣ್ಣಿಟ್ಟು ಸೂಕ್ಷ್ಮವಾಗಿ ಅವಲೋಕಿಸಿದ್ದಾನೆ. ಅವನು ಕಾಯಕದಲ್ಲಿ ನಿರತನಾಗಿರುವ ಭಕ್ತರ ಅಂಗದಲ್ಲಿ ಒಂದು ಚೈತನ್ಯ ಮೂರ್ತಿಯಾಗಿ ನೆಲೆಸುತ್ತಾನೆ. ಅಂಗವು ಲಿಂಗವಾಗುವ ಸ್ಥಿತಿಯಲ್ಲಿ ಲಿಂಗಾಂಗ ಸಾಮರಸ್ಯದ ನೆಲೆಯಲ್ಲಿ, ಒಂದೇ ಹುಟ್ಟಿನಲ್ಲಿಯೇ ಈ ಭವಸಾಗರ ವನ್ನು ದಾಟಿಸುವುದು ಅಸಾಧ್ಯವೇನಲ್ಲ. ನದಿ ದಾಟುವುದನ್ನು ಆಧ್ಯಾತ್ಮದ ಪ್ರಕ್ರಿಯೆಯಾಗಿ ಪರಿವರ್ತಿಸಿಕೊಳ್ಳುವಲ್ಲಿ ಸಹಜತೆ ಸುಂದರತೆಯಿದೆ. ಅದಕ್ಕಾಗಿ ತಮ್ಮ ಕಾಯಕವನ್ನೇ ಅನುಭಾವಕ್ಕೇರಿಸಿದ ಅದ್ಭುತಕ್ಕಾಗಿ ಈ ವಚನಕಾರರನ್ನು ಅಭಿನಂದಿಸಬೇಕಾಗುತ್ತದೆ. ಈ ಅಂಶವು ವಚನಕಾರರು ಕಾಯಕಕ್ಕೆ ಕೊಟ್ಟಿರುವ ಅತ್ಯುನ್ನತ ಸ್ಥಾನದ ಅರಿವನ್ನುಂಟು ಮಾಡಿಸುತ್ತದೆ.

**ಕಾಯಕದ ಪರಾಕಾಷ್ಠತೆ**

ಕಾಯಕವು ವಚನಕಾರರಲ್ಲಿ ತನ್ನ ಪರಾಕಾಷ್ಠತೆಯನ್ನು ಮುಟ್ಟಿತೆಂದು ಹೇಳಬಹುದು. ವಚನಕಾರರು 'ಕಾಯಕ'ದ ಎಲ್ಲಾ ಸಾಧ್ಯತೆಗಳನ್ನು ತುಂಬ ಸಶಕ್ತವಾಗಿ ಬಳಸಿಕೊಂಡಿದ್ದಾರೆ "ಶರಣರ ಕಾಯಕ ತತ್ತ್ವ ಮನುಷ್ಯರಲ್ಲಿ ಉತ್ಸಾಹವನ್ನು ಉಂಟು ಮಾಡುತ್ತಲೇ ಆಲಸ್ಯವನ್ನು ತಳ್ಳಿ ಹಾಕಿತು. ಸ್ವಾಭಿಮಾನವನ್ನು ಬೆಳೆಸುತ್ತಲೇ, ಕೈಯೊಡ್ಡಿ ನಿಲ್ಲುವ ಅಸಹಾಯಕತೆಯನ್ನು ತಪ್ಪಿಸೀತು. ಪ್ರಾಮಾಣಿಕತೆಯನ್ನು ಕಲಿಸುತ್ತಲೇ, ಮೋಸ ವಂಚನೆಗಳನ್ನು ಕಿತ್ತು ಹಾಕಿತು. ಸಮಾನತೆಯನ್ನು ಹೇಳುತ್ತಲೇ ತಾರತಮ್ಯವನ್ನು ತಳ್ಳಿ ಹಾಕಿತು. ಕ್ರಿಯಾಶೀಲವಾಗುತ್ತಲೇ ಜಡತೆಯಿಂದ ದೂರ ಉಳಿಯಿತು. ಶ್ರಮದ ಮಹತ್ವವನ್ನು ತಿಳಿಸುತ್ತಲೇ ಮನುಷ್ಯರ ಆರೋಗ್ಯವನ್ನು ಹೆಚ್ಚಿಸಿತು. ಅಂತೆಯೇ ಕಾಯಕ ತತ್ವಗುರುಲಿಂಗ-ಜಂಗಮಗಳಿಗಿಂತ ದೊಡ್ಡದಾಗಿ ಬೆಳೆದು ನಿಂತಿತು. ಅನೇಕ ಶರಣರು ಗುರು-ಲಿಂಗ-ಜಂಗಮಗಳಿಗಿಂತ ಕಾಯಕವನ್ನು ದೊಡ್ಡದೆಂದು ಭಾವಿಸಿದರು. ಪೂಜೆ ಪುನಸ್ಕಾರಗಳಿಗಿಂತ ಶ್ರಮಶ್ರದ್ಧೆ ಮಹತ್ವದ್ದೆಂದು ತಿಳಿದವರು"[೪೪] ಡಾ. ಬಸವರಾಜು ಸಬರದ ಅವರ ಈ ಅಭಿಪ್ರಾಯ ಸಮಂಜಸವಾಗಿದೆ.

**ಮನಸಂದ ಮಾರಿತಂದೆ**

> **"ಕಾಯಕವಿಡಿಹನ್ನಬರ ಶಿವಭಕ್ತರಿಗೆ**
> **ಕಾಯಕವೇ ಕೈಲಾಸ"[೪೫]**

**ಚೆನ್ನಬಸವಣ್ಣ**

> **"ತನು ಮನ ಬಳಲಿಸಿ ಧನವ ಗಳಿಸಿದ**
> **. . . . . . . . . . . . . . . . . . . . . . . . .**

---

೪೪. ಬಸವಪಥ, (ಸಂ. ೧೩, ಸಂ. ೩) ಪುಟ-೩೨, ೩೩

೪೫. ವಚನ ಮಂಜರಿ, ಸಂ. ಡಾ. ಚೆನ್ನಕ್ಕ ಎಲಿಗಾರ, ವ-೪೨

ಆತನ ತನು ಮನ ಶುದ್ಧ, ಆತನ ನಡೆ-ನುಡಿ ಪಾವನ
. . . . . . . . . . . . . . . . . . . . . . . . .
ಅಂತಪ್ಪ ಭಕ್ತನ ಕಾಯಕವೇ ಕೈಲಾಸ"[೪೬]

## ಅಂಬಿಗರ ಚೌಡಯ್ಯ

"ಕಾಯಕವೇ ಕಾಶಿ, ಒಡಲೇ ಕೇದಾರ
ಮಾಡಿ ನೀಡುವ ಹಸ್ತವೇ ಸೇತುಬಂಧ ರಾಮೇಶ್ವರ
ಮಹಾಲಿಂಗವ ಹೊತ್ತಿರುವ ಶಿರಸ್ಸೇ ಶ್ರೀಶೈಲ ಪರ್ವತ ನೋಡಾ"[೪೭]

## ನುಲಿಯ ಚಂದಯ್ಯ

"ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ
ಲಿಂಗವಾದಡೂ ಕಾಯಕದಿಂದಲೇ ಶಿಲೆಕುಲಹರಿವುದು
ಜಂಗಮವಾದಡೂ ಕಾಯಕದಿಂದವೇ ವೇಷದ ಪಾಶ ಹರಿವುದು"[೪೮]

ಇಲ್ಲಿ ಉಲ್ಲೇಖಿಸಿದ ವಚನಗಳ ತುಣುಕುಗಳಿಂದ ಶಿವಶರಣರಲ್ಲಿ 'ಕಾಯಕ'ವು ತನ್ನ ಉತ್ತುಂಗ ಶಿಖರ ತಲುಪಿರುವುದನ್ನು ಸರಳವಾಗಿ ಗುರುತಿಸಬಹುದಾಗಿದೆ. ಮನಸಂದ ಮಾರಿತಂದೆಯು - "ಕಾಯಕವೇ ಕೈಲಾಸ"ವೆಂದು ಘಂಟಾಘೋಷವಾಗಿ ಸಾರಿದ್ದಾನೆ. ಇದು ಆಂಗ್ಲ ಗಾದೆಮಾತು 'Work is worship' ಎಂಬುದಕ್ಕಾಗಿ ಸಂವಾದಿಯಾಗಿದೆ. ಚೆನ್ನಬಸವಣ್ಣನು ಪರಿಶ್ರಮಪಟ್ಟು, 'ದೇಹ ದಂಡಿಸಿ ದುಡಿಯುವ ಸದ್ಭಕ್ತನ ಪಾದವ ತೋರಿರಯ್ಯಾ' ಎಂದು ಕೇಳಿ ; ಅಂಥವನಿಗೆ ಉಪದೇಶ ನೀಡಿದ 'ಗುರು' ನಿರಂಜನ ನಿರಾಮಯ ಸ್ವರೂಪ ಹೊಂದುತ್ತಾನೆಂದು ಹೇಳಿ; ಅಂಥ ಸದ್ಭಕ್ತನ ಮನೆಯಲ್ಲಿ ಲಿಂಗಪೂಜೆಯನ್ನು ಮಾಡಿಕೊಳ್ಳುವ ಜಂಗಮನು 'ಜಗತ್ಪಾವನ'ನಾಗುತ್ತಾನೆಂದು ಸ್ಪಷ್ಟಪಡಿಸಿದ್ದಾನೆ. ಮುಂದುವರೆದು ಆ ಭಕ್ತನು ಮಾಡುವ 'ಕಾಯಕವೇ ಕೈಲಾಸ'ವೆಂದು ಹೇಳಿ, ಅಂಥವನಿಗೆ 'ನಮೋ ನಮೋ' ಎಂಬೆ ಕೂಡಲಚೆನ್ನಸಂಗಮದೇವಾ ಎಂದಿರುವುದು, ಚೆನ್ನಬಸವಣ್ಣ ಕಾಯಕಕ್ಕೆ ಕೊಟ್ಟಿರುವ ಪ್ರಾಧಾನ್ಯತೆಯನ್ನು ಎತ್ತಿ ತೋರಿಸುತ್ತದೆ.

"ಕಾಯಕವೇ ಕಾಶಿ, ಒಡಲೇ ಕೇದಾರ" ಎಂದಿರುವ ಚೌಡಯ್ಯನ ವಚನ ಎಂಥ ವಿವೇಕಯುಕ್ತವಾದ ವ್ಯಾಖ್ಯಾನ. ಈ ವಚನ ಹತ್ತಾರು ಒಳನೋಟಗಳನ್ನೊಳಗೊಂಡಿದ್ದು ಹಿಂಜಿದಷ್ಟು ಹೊಸ ಹೊಸ ಅರ್ಥ ಹೊರಗೆಡಹುತ್ತದೆ. ಕಾಯಕ, ತೀರ್ಥಯಾತ್ರೆ, ಶರೀರ ಇವುಗಳ ಕುರಿತು ಒಟ್ಟೊಟ್ಟಿಗೆ ಬರೆದ ವಿನೂತನ ವ್ಯಾಖ್ಯಾನವಾಗಿದೆ. ದೇವರ ಹೆಸರಿನಲ್ಲಿ ತೀರ್ಥಯಾತ್ರೆಗೆಂದು ಅತ್ತಿತ್ತ ಅಡ್ಡಾಡುವುದನ್ನು ತಿರಸ್ಕರಿಸಿ, ಕಾಯಕಕ್ಕೆ ಹೆಚ್ಚು ಒತ್ತು ನೀಡಿರುವುದು ಚೌಡಯ್ಯನ ವೈಚಾರಿಕ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ.

---

೪೬. ಚೆನ್ನಬಸವಣ್ಣನವರ ವಚನಗಳು, ಸಂ. ಡಾ. ಆರ್.ಸಿ. ಹಿರೇಮಠ, ವ-೮೦

೪೭. ಅಂಬಿಗರ ಚೌಡಯ್ಯನ ವಚನಗಳು (ಲಲಿತ ಪ್ರಕಾಶನ, ಹುಬ್ಬಳ್ಳಿ) ವ-೩೯

೪೮. ವಚನ ಮಂಜರಿ, ಸಂ. ಡಾ. ಚೆನ್ನಕ್ಕ ಎಲಿಗಾರ, ವ-೪೭

ನುಲಿಯ ಚಂದಯ್ಯನ ಕಾಯಕದ ಬಗ್ಗೆ ಪ್ರಸ್ತಾಪಿಸುತ್ತಾ ಕಾಯಕವು ಕೇವಲ ಭಕ್ತರಿಗಷ್ಟೇ ಸೀಮಿತವಾಗಿಲ್ಲ. ಗುರು-ಲಿಂಗ-ಜಂಗಮರು ಕೂಡಕಾಯಕ ವೃತ್ತಿಯಿಂದ ಹೊರಗೆ ಉಳಿಯುವಂತಿಲ್ಲ. ಎಲ್ಲರೂ ತಮ್ಮ ಕಾಯಕಗಳನ್ನು ನಿಷ್ಠೆ ಪ್ರಾಮಾಣಿಕತೆಯಿಂದ ನಿಯಮಿತವಾಗಿ ಮಾಡಲೇಬೇಕು, ಆಗಲೇ ಗುರುವಿಗೆ ಜೀವನ್ಮುಕ್ತಿ, ಲಿಂಗಕ್ಕೆ ಶಿಲೆಯ ಕುಲ ಹರಿವುದು, ಜಂಗಮಕ್ಕೆ ಮೇಘದ ಪಾಶ ಹರಿವುದು, ಸರ್ವರಿಗೂ ಮುಕ್ತಿ ದೊರೆಯುವುದು ಎಂದು ಹೇಳುವಲ್ಲಿ ಚಂದಯ್ಯನು ಕಾಯಕಕ್ಕೆ ಕೊಟ್ಟಿರುವ ಪ್ರಾಮುಖ್ಯತೆಯು ಧ್ವನಿತಗೊಳ್ಳುತ್ತದೆ.

ಈ ಮೇಲೆ ಪ್ರಸ್ತಾಪಿಸಿದ ವಚನಗಳಿಗೆ ಕಳಸವಿಟ್ಟಂತೆ ಆಯ್ದಕ್ಕಿ ಮಾರಯ್ಯನ ಈ ಕೆಳಗಿನ ವಚನ ರಚನೆಗೊಂಡಿದೆ.

> **"ಕಾಯಕದಲ್ಲಿ ನಿರತನಾದರೆ, ಗುರುದರುಶನವಾದರೂ ಮರೆಯಬೇಕು**
> **ಲಿಂಗಪೂಜೆಯಾದಡೂ ಮರೆಯಬೇಕು, ಜಂಗಮ ಮುಂದಿದ್ದಡೂ**
> **ಹಂಗು ಹರಿಯಬೇಕು, ಕಾಯಕವೇ ಕೈಲಾಸವಾದ ಕಾರಣ,**
> **ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗೆ"** [೪೯]

ತುಂಬ ಧ್ವನಿಪೂರ್ಣವಾದ ವಚನವಿದು. ಇದರ ಅರ್ಥದ ಆಳ, ಎತ್ತರ ಹಾಸು-ಬೀಸು, ಬಹಳ ವಿಸ್ತಾರವಾಗಿದೆ. ಈ ವಚನ ಕಾಯಕದ ಪರಾಕಾಷ್ಠತಗೆ ಒಂದು ಉಜ್ವಲ ಉದಾಹರಣೆಯಾಗಿ ನಿಲ್ಲುತ್ತದೆ. ಸಮಸ್ತ ಶಿವಶರಣರ ಆಶಯವನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಆಯ್ದಕ್ಕಿ ಮಾರಯ್ಯನ ವಚನ ಮೂಡಿಬಂದಿದೆ. ಯಾವುದನ್ನು ಸರ್ವಸ್ವವೆಂದು ಭಾವಿಸಿ ತ್ರಿಕರ್ಣಪೂರ್ವಕವಾಗಿ ಪೂಜಿಸುವರೋ ಅಂಥ ಇಷ್ಟಲಿಂಗ ಪೂಜೆಯನ್ನು ಕಾಯಕದಲ್ಲಿ ತೊಡಗಿದಾಗ ಮರೆಯಬೇಕು. ಹಾಗೆ ಮರೆತರೆ ಅದರಲ್ಲಿ ಯಾವ ತಪ್ಪೂ ಇಲ್ಲವೆಂದು ಸಾರಿದ್ದಾರೆ. ಯಾರನ್ನು ಸಮಾಜದ ಗುರು, ಮಾರ್ಗದರ್ಶಕರು, ಪರಮಪೂಜ್ಯರೆಂದು ಭಾವಿಸಿ ಅವರ ದರುಶನಕ್ಕಾಗಿ ಹಂಬಲಿಸುತ್ತಾರೋ, ಅಂತಹ 'ಗುರುಗಳ' ದರುಶನ ಮರೆಯಬಹುದು. ಆದರೆ ಕಾಯಕಕ್ಕೆ ಚ್ಯುತಿಯನ್ನುಂಟು ಮಾಡಬಾರದು. ಹಾಗೆಯೇ 'ಜಂಗಮ'ರು ತಾವಾಗಿಯೇ ನಮ್ಮ ಮನೆಯವರಿಗೆ, ನಾವಿದ್ದಲ್ಲಿಗೆ ದಯಮಾಡಿಸಿದರೂ ಕಾಯಕದಲ್ಲಿ ನಿರತರಾಗಿದ್ದಾರೆ, ಅವರ ಹಂಗು ಹರಿದುಕೊಳ್ಳಬೇಕು. ಅವರ ದಾಕ್ಷಿಣ್ಯಕ್ಕೆ ಒಳಗಾಗಿ ಕೈಗೊಂಡ ಕಾಯಕವನ್ನು ನಿಲ್ಲಿಸಬಾರದು. ಯಾಕೆಂದರೆ 'ಕಾಯಕವೇ ಕೈಲಾಸ'ವಾದ ಕಾರಣ; ಕಾಯಕದಲ್ಲಿ ಗುರು-ಲಿಂಗ-ಜಂಗಮರನ್ನು ಕಾಣಬೇಕೆಂದು ಹೇಳಿರುವುದು ಮಾರಯ್ಯನ ಪ್ರಗತಿಪರ ಧೋರಣೆಯ ಪ್ರತೀಕವಾಗಿದೆ. ಇದರಲ್ಲಿ ವೈಜ್ಞಾನಿಕ ಸತ್ಯವೂ ಅಡಗಿರುವುದನ್ನು ಹುಡುಕಬಹುದು.

ಈ ವಚನದ ವಿಚಾರವು ಶಿವಶರಣರು ಕಾಯಕದಲ್ಲಿ ಇಟ್ಟುಕೊಂಡಿರುವ ಖಚಿತತೆಯ ಜೊತೆಗೆ ಅದಮ್ಯ ವಿಶ್ವಾಸದ ಸಂಕೇತವಾಗಿದೆ. ತಮ್ಮ ಧರ್ಮದ ಅತೀ

---

೪೯. ವಚನ ಮಂಜರಿ, ಸಂ. ಡಾ. ಚೆನ್ನಕ್ಕ ಎಲಿಗಾರ, ವ-೪೪, ಪುಟ-೧೪

ಮುಖ್ಯ ಹಾಗೂ ಅವಿಭಾಜ್ಯ ಅಂಗವೆನಿಸಿದ ಮಹತ್ವದ ಆಚರಣೆಗಳನ್ನು ಕಾಯಕದಲ್ಲಿ ತೊಡಗಿದಾಗ ತ್ಯಜಿಸಬೇಕೆಂದು ವಿಶ್ವದ ಮತ್ತಾವುದೇ ಧರ್ಮವು ಹೇಳಿರುವ ನಿದರ್ಶನಗಳಿಲ್ಲ. ವಿಚಾರ ವಚನಕಾರರಲ್ಲಿ ಮಾತ್ರ ವ್ಯವಸ್ಥಿತವಾಗಿ ಪ್ರತಿಪಾದನೆಯಾಗಿರುವುದು; ವಚನಕಾರರ ವೈಶಿಷ್ಟ್ಯಕ್ಕೆ ಹೊನ್ನಗನ್ನಡಿಯಾಗಿದೆ.

ಕಾಯಕದ ಕುರಿತಾಗಿ ವಚನಕಾರರು ವೈವಿಧ್ಯಮಯ ವಿಚಾರಗಳನ್ನು, ವಿಶಿಷ್ಟಯುತವಾದ ಭಾಷ್ಯವನ್ನು ಬರೆದಿದ್ದಾರೆ. ಜಾತಿ, ಮತ, ಮಡಿ-ಮೈಲಿಗೆಗಳನ್ನು ನಿರ್ಮೂಲನಗೊಳಿಸಲು, ಬಡತನ ನಿರುದ್ಯೋಗದಂತಹ ಸಮಸ್ಯೆಗಳನ್ನು ನಿವಾರಿಸಲು, ಲಂಚ, ವಂಚನೆ ತೊಲಗಿಸಲು, ವರ್ಣ ವರ್ಗ ವ್ಯವಸ್ಥೆಯನ್ನು ಹೊಡೆದೋಡಿಸಲು, ಸಂಗ್ರಹವನ್ನು ನಿಷೇಧಿಸಲು, ದೈಹಿಕ ಶ್ರಮ ಮತ್ತು ಸಮಯ ಪ್ರಜ್ಞೆಯನ್ನು ತಿಳಿಸಲು, ವ್ಯಕ್ತಿಯ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳಲು, ಕೌಟುಂಬಿಕ ಪರಿಸರದ ಸೌಂದರ್ಯತೆ ಕಾಪಾಡಲು, ವ್ಯಕ್ತಿಯಲ್ಲಿರುವ ಆಲಸ್ಯ, ಜಡತ್ವ ಹೊಡೆದೋಡಿಸಿ, ಕ್ರಿಯಾಶೀಲತೆಯ ತುಂಬಿಸಲು, ಪ್ರತಿಯೊಬ್ಬರೂ ಪರಾವಲಂಬಿಗಳಾಗದೆ, ಸ್ವಾವಲಂಬಿಗಳಾಗಿ ಸ್ವಾಭಿಮಾನ ದಿಂದ ಬದುಕಲು, ವ್ಯಕ್ತಿಯ ಮಾನಸಿಕ ಸ್ವಾಸ್ಥ್ಯ ಹಾಗೂ ದೈಹಿಕ ಆರೋಗ್ಯವನ್ನು ಸಂರಕ್ಷಿಸಲು, ಸಮಾಜ ಶಾಂತಿ ನೆಮ್ಮದಿಯನ್ನು ನೆಲೆಗೊಳಿಸಲು, ನಾಡಿನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಮಸ್ತ ಸಮಾಜದ ಏಳಿಗೆಗೆ, ಮನುಕುಲದ ಕಲ್ಯಾಣಕ್ಕಾಗಿ ಕಾಯಕ ತತ್ವವನ್ನು ವಚನಕಾರರು ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. "ವಚನಕಾರರಲ್ಲಿ ಕಾಯಕವು ಕೇವಲ ವೃತ್ತಿಯಷ್ಟೇ ಆಗುವುದಿಲ್ಲ. ಅದಕ್ಕೂ ಮಿಗಿಲಾಗಿ ಪರಶಿವನ ಸಾಕ್ಷಾತ್ಕಾರಕ್ಕೆ, ಕೈಲಾಸ ಪದವಿಗೆ ಒಂದು ಸುವರ್ಣ ಸೇತುವೆಯೆ ಆಗಿದೆಯೆಂದು ಹೇಳಬಹುದು. ಇನ್ನು ಮುಂದುವರೆದು ಹೇಳುವುದಾದರೆ ವಚನಕಾರರಿಗೆ ಕಾಯಕ ಇಹ ಪರ ಎರಡರ ಸಾಧನ; ಅಲ್ಲಿ, ಇಹ ಪರ ಎರಡೂ ಅದುವೆ" ಎಂದಿರುವ 'ಶಾಂತರಸ'ರ ಮಾತುಗಳನ್ನಿಲ್ಲಿ ಸ್ಮರಿಸಿಕೊಳ್ಳಬಹುದು.

❑

---

ಶರಣ-ಪ್ರಸಾದ (ನುಲಿಯ ಚಂದಯ್ಯನ ಕಾಯಕ ನಿಷ್ಠೆ) ಪುಟ - ೯೧

# ಅಂಬಿಗರ ಚೌಡಯ್ಯನ ವಚನಗಳಲ್ಲಿ ಬಂಡಾಯ[೧]

'ಅಂಬಿಗರ ಚೌಡಯ್ಯ'ನು ದುಡಿಯುವ ವರ್ಗದಿಂದ ಬಂದಿರುವ ವ್ಯಕ್ತಿ. ಈತನ ಹೆಸರೇ ಹೇಳುವಂತೆ ವೃತ್ತಿಯಿಂದ ಅಂಬಿಗ. ಅಂದರೆ ನದಿಯಲ್ಲಿ ಹುಟ್ಟುಹಾಕಿ ಪ್ರಯಾಣಿಕರನ್ನೂ ಒಂದು ದಡದಿಂದ ಮತ್ತೊಂದು ದಡಕ್ಕೆ ದಾಟಿಸುವ ಕಾಯಕ. ಇಂಥ ಕಾರ್ಮಿಕ ವರ್ಗದಿಂದ ಮೂಡಿಬಂದ ಚೌಡಯ್ಯನಲ್ಲಿರುವ ವೈಚಾರಿಕತೆ ಅಘಾದವಾದುದು. ಪ್ರತಿಯೊಂದನ್ನು ತನ್ನ ಚಿಂತನೆಯ ಕುಲುಮೆಯಲ್ಲಿಟ್ಟು ತಿಕ್ಕಿ ತೀಡಿ ಪರೀಕ್ಷಿಸಿದ ನಂತರವೇ ಒಪ್ಪಿಕೊಳ್ಳುವಾತ ಈತನ ಚಿಂತನಶೀಲಗುಣ ಬೆರಗನ್ನುಂಟು ಮಾಡುವಷ್ಟು ಪ್ರಖರವಾಗಿದೆ. ಶಿವಶರಣರ ಹುಟ್ಟುಹಾಕಿದ 'ವಚನಚಳುವಳಿ'ಯ ಮಹಾಂದೋಲನದಲ್ಲಿದ್ದುಕೊಂಡೇ ಅದರಳೊಗಿನ ಲೋಪ-ದೋಷಗಳನ್ನು ಪ್ರಶ್ನಿಸುವಂತಹ ಎದೆಗಾರಿಕೆಯುಳ್ಳವನು. ಜಪ-ತಪ,ಹೋಮ-ಹವನ, ಯಜ್ಞ-ಯಾಗಗಳನ್ನು ಸಾರಾ-ಸಗಟಾಗಿ ತಿರಸ್ಕರಿಸಿದ ಪ್ರಗತಿಪರ ವ್ಯಕ್ತಿ ಸಂಸಾರಕ್ಕೆ ಬೆನ್ನು ತಿರುಗಿಸಿ ಪಲಾಯನವಾದ ಪಠಿಸಿದವರನ್ನು ಕಟುವಾಗಿ ಟೀಕಿಸಿದಾತ. ಮೂಢನಂಬಿಗೆ, ಅಜ್ಞಾನ, ಆಡಂಬರಗಳನ್ನು ವಿಡಂಬಿಸಿ, ವೈಚಾರಿಕತೆಯನ್ನು ಬಿತ್ತಲೆತ್ನಿಸಿದಾತ. ಜೀವನದ ಬಗ್ಗೆ ಅದಮ್ಯ ಪ್ರೀತಿ-ವಿಶ್ವಾಸವಿರಿಸಿಕೊಂಡಾತ ಇನ್ನುಳಿದ ಶಿವಶರಣರಂತೆ ತಮ್ಮಿಷ್ಟ ದೇವತೆಯ ಹೆಸರನ್ನು ಅಂಕಿತವನ್ನಾಗಿ ಮಾಡಿಕೊಳ್ಳದೆ, ತನ್ನ ಹೆಸರನ್ನೆ ತನ್ನ ವಚನದ ಅಂಕಿತವನ್ನಾಗಿಟ್ಟುಕೊಂಡದ್ದು ಅಂಬಿಗರ ಚೌಡಯ್ಯನ ದಿಟ್ಟ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಈ ಅಂಶವೊಂದೆ ಸಾಕು. ಚೌಡಯ್ಯನು ಉಳಿದ ವಚನಕಾರರಿಗಿಂತ ಭಿನ್ನ ವ್ಯಕ್ತಿತ್ವ ಹೊಂದಿದ್ದಾನೆ ಎನ್ನಲು. ತನ್ನ ಹೆಸರನ್ನೇ ಅಂಕಿತವನ್ನಾಗಿಟ್ಟುಕೊಳ್ಳುವುದರ ಮೂಲಕ ದೇವರನ್ನೇ ನಿರಾಕರಿಸಿದ ಪ್ರಜ್ಞಾವಂತನಾಗಿದ್ದಾನೆ.

ಸಮಾಜದ ಅರೆ-ಕೊರೆಗಳನ್ನೆಲ್ಲ ಹೇಳುವಲ್ಲಿ ಸಮಾಜ ವಿಮರ್ಶಕನಂತೆ ಕಾರ್ಯ ನಿರ್ವಹಿಸಿದ್ದಾನೆ.ಕೇವಲ ಸಮಸ್ಯೆಯನ್ನೆತ್ತಿಲ್ಲ. ಸಾಧ್ಯವಾದೆಡೆಗಳಲ್ಲಿ ಅದಕ್ಕೆ ಸೂಕ್ತ ಪರಿಹಾರಗಳನ್ನು ಸೂಚಿಸಿದ್ದಾನೆ. ಪ್ರಗತಿಪರ ದೃಷ್ಟಿಯನ್ನು ರೂಢಿಸಿಕೊಂಡಿರುವ ಅಂಬಿಗರ ಚೌಡಯ್ಯನು ಒಬ್ಬ ಅಪ್ಪಟ ಬಂಡಾಯಗಾರನಾಗಿ ಕಂಡು ಬರುತ್ತಾನೆ. ಹಾಗೆ ನೋಡಿದರೆ ಇಡೀ ವಚನ ಚಳುವಳಿಯೇ ಬಂದು ಮಹಾನ್ ಬಂಡಾಯದ ಹೋರಾಟವಾಗಿ ಪರಿಣಮಿಸುತ್ತದೆ.

ವಚನ ಚಳುವಳಿ ಹುಟ್ಟಿದ್ದು ಜಡಗಟ್ಟಿ ಹೋಗಿದ್ದ ಸಮಾಜಕ್ಕೆ ತುರ್ತು ಚಿಕಿತ್ಸೆ ಒದಗಿಸುವುದಕ್ಕಾಗಿ, ವೈದಿಕ ಧರ್ಮದ ದಬ್ಬಾಳಿಕೆಯನ್ನು ತಡೆಗಟ್ಟುವುದಕ್ಕಾಗಿ, ಯಜ್ಞ-ಯಾಗ, ಪಶುಬಲಿ, ನರಬಲಿ, ವರ್ಗ ವರ್ಣ ವ್ಯವಸ್ಥೆಯನ್ನು ಕಿತ್ತುಹಾಕಲೆಂದು. ತನ್ನ ಉದ್ದೇಶದಲ್ಲಿ ಒಂದು ಹಂತದವರೆಗೆ ಈ ಚಳುವಳಿ ಯಶಸ್ವಿಯೂ ಆಯಿತು. ತನ್ನ ಹಲವಾರು ಮಿತಿಗಳಿಂದ ಹಾಗೂ ಪಟ್ಟಭದ್ರಹಿತಾಸಕ್ತಿಗಳಿಂದಾಗಿ, ಪರೋಹಿತಶಾಹಿ ಕುತಂತ್ರ ದ್ದಿಂದಾಗಿ, ಅಧಿಕಾರಶಾಹಿಗಳ ದಬ್ಬಾಳಿಕೆಯಿಂದಾಗಿ, ವಿಫಲಗೊಂಡಿತು. ಈ ಮಹಾನ್ ಕ್ರಾಂತಿಯ ಒಡಲೊಳಗಿಂದ ಮೂಡಿ ಬಂದ ಚೌಡಯ್ಯನು ವೇದ, ಶಾಸ್ತ್ರ, ಪುರಾಣಗಳನ್ನು ಅಲ್ಲಗಳೆದಿದ್ದಾನೆ. ಅವುಗಳ ಬುಡವನ್ನೇ ಅಲ್ಲಾಡಿಸುತ್ತಾನೆ, ನೋಡಿ:

---

೧. ಬಸವಪಥ ಸಂ-೧೩, ಸಂ, ಸಂ-೧ (೧೯೯೧) ಪುಟ; ೫೨-೬೮ ರಲ್ಲಿ ಪ್ರಕಟವಾಗಿದೆ

"ವೇದದಲುಳ್ಳೊಡೆ ಪ್ರಾಣಿವಧೆಯಪ್ಪದೇ?
ಶಾಸ್ತ್ರದಲುಳ್ಳೊಡೆ ಸಮವಾಗದಿಪ್ಪುದೆ?
ಪರ್ವತದಲುಳ್ಳೊಡೆ ಹೋದವರು ಮರಳಿ ಬಪ್ಪರೆ
ನಿರ್ಬುದ್ಧಿ ಮಾನವವ ಏನೆಂಬೆ?" (ಅಂ.ಚೌ. ವ-೭೭)[೨]

ವೇದದಲ್ಲಿ ಹೇಳಿದೆಯೆಂದಾಕ್ಷಣ ಅದನ್ನಿಂದು ಆಚರಿಸಬಹುದೆ? ಪ್ರಸ್ತುತ ಪ್ರಸಂಗದಲ್ಲಿ 'ಪ್ರಾಣಿವಧೆ' ಮಾಡುವುದು ಎಷ್ಟರ ಮಟ್ಟಿಗೆ ಸೂಕ್ತ? ಅಂದು ವೇದದಲ್ಲಿ ಹೇಳಿದೆಯೆಂದು ಕೊಂಡು ಇಂದು ಅಂಧಾನುಕರಣೆ ಮಾಡುವುದು ಎಷ್ಟು ಸಮಂಜಸ? ಎಂದು ಪ್ರಶ್ನಿಸಿ, ಪ್ರಾಣಿವಧೆಯನ್ನು ಖಂಡಿಸಿ, ಸಕಲ ಪ್ರಾಣಿಗಳಲ್ಲಿ ದಯೆ ತೋರಬೇಕೆಂಬ ಬಸವಣ್ಣನವರ ಮಾತನ್ನು ಅನುಮೋದಿಸಿದ್ದಾನೆ. ಇನ್ನೂ ಶಾಸ್ತ್ರ ಇದನ್ನು ಸಮರ್ಥಿಸುವುದೆ? ಪರ್ವತದಲ್ಲಿ ಅಂಥದೊಂದು ಮಹಾಶಕ್ತಿ ಇದ್ದದ್ದೇ ಆಗಿದ್ದರೆ, ಅಲ್ಲಿಗೆ ಹೋದವರು ಹೇಗೆ ಬರುತ್ತಿದ್ದರು? ಶಾಸ್ತ್ರವೆಂಬುದು ಸಂತೆಯ ಸುದ್ದಿಯೆಂದಿರುವ ಅಲ್ಲಮಪ್ರಭುವಿನ ಮಾತನ್ನು ಬೆಂಬಲಿಸಿದ್ದಾನೆ. ಶೋಷಣೆ ಮಾಡುವ, ಜೀವ ವಿರೋಧಿಯಾದ ವೇದ-ಶಾಸ್ತ್ರಗಳನ್ನು ನಂಬಿರುವ ಮಂದಮತಿಗಳಿಗೆ ಏನೆನ್ನಬೇಕೆಂದು ಉದ್ಗಾರವೆತ್ತಿದ್ದು ಆತನ ಪ್ರಗತಿಪರ ದೃಷ್ಟಿಕೋನಕ್ಕೆ ಅನುಗುಣವಾಗಿಯೇ ಇದೆ.

"ಕಷ್ಟನ ಮನೆಯಲ್ಲಿ ಸೃಷ್ಟೀಗೀಶ್ವರ ಉಂಬಾಗ
ಎತ್ತ ಹೋದವು ನಿಮ್ಮ ಶಾಸ್ತ್ರಗಳು?
ಕತ್ತೆ ಮುಚ್ಚಳು ಬೇಡಂಗಚ್ಚರಿದೆವಾಗ
ಇಕ್ಕಿದ ಜನಿವಾರ ಬೇಡಾದವು?
ಮುಕ್ಕಳಿಸಿದ ನೀರತಂದೆರೆದಡೆ
ಇರಲಿದ್ದೇವೆ ಎಂದೆವೇ ವೇದಗಳು?
ವೇದದ ದುಃಖ ಬೇಡೆಂದ ಅಂಬಿಗರ ಚೌಡಯ್ಯ" (ಅಂ. ಚೌ. ವಚನ-೩೪)

ಪರಿಶ್ರಮದಿಂದ ದುಡಿಯುವ, ಕಾಯಕವೆ ಕೈಲಾಸವೆಂದು ಕೊಂಡು ನಿಷ್ಠೆ-ಪ್ರಾಮಾಣಿಕತೆಯಿಂದ ದುಡಿಯುವ ಶ್ರಮಿಕರ ಮನೆಯಲ್ಲಿ ಆ ಪರಶಿವನು ಉಣ್ಣುವಾಗ ನಿಮ್ಮ ಶಾಸ್ತ್ರಗಳು ಎಲ್ಲಿ ಓಡಿಹೋಗಿದ್ದವು? ಬೇಡರ ಕಣ್ಣಪ್ಪನು ಬಾಯೊಳಗೆ ನೀರು ತಂದು ಕಾಡಿನೊಳಗಿರುವ ಲಿಂಗಕ್ಕೆ ಮಜ್ಜನ ಮಾಡಿಸುವಾಗ ನಿಮ್ಮ ಜನಿವಾರ ಮತ್ತು ವೇದಗಳು ಎಲ್ಲಿ ಅಡಗಿಕೊಂಡಿದ್ದವು? ಎಂದು ಚೌಡಯ್ಯ ಪ್ರಶ್ನಿಸಿದ್ದಾನೆ. ಅದಕ್ಕಾಗಿ ವೇದ-ಶಾಸ್ತ್ರ ಜನಿವಾರಗಳೆಲ್ಲ ಅರ್ಥವಿಲ್ಲದ ಜಡವಸ್ತುಗಳು, ಈ ಜಡತ್ವಗಳ ಗೊಡವೆಯೇ ಬೇಡವೆಂದು ಹೇಳಿರುವುದು ಅರ್ಥಪೂರ್ಣವಾಗಿದೆ.

" ಆರು ದರುಶನಕ್ಕೆ ನಿಮ್ಮನ್ನು ತೋರದಿರಯ್ಯ! ನಾಲ್ಕು ವೇದ, ಹದಿನೆಂಟು ಪುರಾಣವೆಂಬುವರ ಬೆನ್ನ ಹತ್ತದಿರು" (ವಚನ-೨೫) ಎಂದು ಹೇಳುವಲ್ಲಿ-ಆರು ದರುಶನ, ನಾಲ್ಕು ವೇದ, ಹದಿನೆಂಟು-ಪುರಾಣಗಳನ್ನು ಚೌಡಯನ್ನು ತಿರಸ್ಕರಿಸಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ದೇವರು ಅಲ್ಲಿದ್ದಾನೆ, ಇಲ್ಲಿದ್ದಾನೆಂದು ಕೊಂಡು ನೀರ ಕಂಡಲ್ಲಿ ಮುಳುಗುವುದು,

೨. ಲಲಿತ ಪ್ರಕಾಶನ ಹುಬ್ಬಳ್ಳಿಯ ಅಂಬಿಗರ ಚೌಡಯ್ಯನ ವಚನಗಳು ಸಂಖ್ಯೆಯಲ್ಲಿ ಬಳಸಿದ್ದೇನೆ.

ಕಲ್ಲ ಕಂಡಲ್ಲಿ ಸುತ್ತುವುದು, ಬೆಟ್ಟ ನೋಡಿದಾಕ್ಷಣ ಹತ್ತುವುದು, ತೀರ್ಥಯಾತ್ರೆಯ ಹೆಸರಿನಲ್ಲಿ ಊರೂರು ಸುತ್ತುವುದನ್ನು ಚೌಡಯ್ಯ ಸಮ್ಮತಿಸುವುದೇ ಇಲ್ಲ. ಅಂಥವರನ್ನು ಕುರಿತಾಗಿ ಈ ವಚನ ರಚಿಸಿದ್ದಾನೆ.

**"ಕಟ್ಟಿದ ಲಿಂಗವ ಬಿಟ್ಟು, ಬೆಟ್ಟದ ಲಿಂಗಕ್ಕೆಹೋಗಿ**
**ಹೊಟ್ಟಡಿ ಬೀಳುವ ಲೊಟ್ಟ ಮೂಳರ ಕಂಡಡೆ**
**ಮೆಟ್ಟಿದ ಎಡಪಾದರಕ್ಷೆಯ ತಗೊಂಡು**
**ಲಟ-ಲಟನೆ ಹೊಡಿಯೆಂದಾತ ಅಂಬಿಗರ ಚೌಡಯ್ಯ"**

**(ಅಂ.ಚಿ. ವಚನ ೨೩)**

ಈ ವಚನದಲ್ಲಿ ಬಹುದೇವರ ಉಪಾಸಾನೆಯನ್ನು ತಿರಸ್ಕರಿಸಿದ್ದು, ಅದೇ ಕಾಲಕ್ಕೆ ಏಕದೇವತಾ ಉಪಾಸನೆಯನ್ನು ಪ್ರತಿಪಾದಿಸಿರುವುದನ್ನು ಹಾಗೂ ತೀರ್ಥಯಾತ್ರೆಗಳನ್ನು ಖಂಡಿಸಿದ ಸಂಗತಿಯನ್ನು ಒಟ್ಟೊಟ್ಟಾಗಿ ಗುರುತಿಸಬಹುದು. ಬೆಟ್ಟದ ಮೇಲಿರುವ, ಗುಡಿ-ಗುಂಡಾರದಲ್ಲಿರುವ ಸ್ಥಾವರ ಲಿಂಗಪೂಜೆಯನ್ನು ಮಾಡುವವರನ್ನು ವಿಡಂಬಿಸಿರುವ ಚೌಡಯ್ಯ ಅಂತಹ ಮುಠ್ಠಾಳರನ್ನು ಎಡಗಾಲದ ಎಕ್ಕಡದಿಂದ ಹೊಡೆಯೆಂದಿದ್ದಾನೆ.

'ಈಶ್ವರನ ಕಾಂಬುದೆಂದೊದಾಸೆಯುಳ್ಳೊಡೆ, ಪರದೇಶಕ್ಕೆ ಹೋಗಿ ಬಳಲದಿರು, ಕಾಶಿಯಲ್ಲಿ ಕಾಯುವ ವಿನಾಶವ ಮಾಡಬೇಡ' (ವಚನ-೧೪) ಎನ್ನುವಲ್ಲಿ, 'ಪರದೇಶಕ್ಕೆ ಹೋಗಿ ಬಳಲದಿರು' ಎಂದು ಹೇಳುವಲ್ಲಿ ತೀರ್ಥಯಾತ್ರೆಯನ್ನು ಸ್ಪಷ್ಟವಾಗಿ ಅಲ್ಲಗಳೆಯುವುದನ್ನೂ ಕಾಣಬಹುದಾಗಿದೆ. 'ಕಾಶಿಯಲ್ಲಿ ಕಾಯುವ ವಿನಾಶ ಮಾಡಬೇಡ' ಎಂದಿರುವುದು ಹೊಚ್ಚ ಹೊಸದಾಗಿದೆ. ಹಿಂದುಗಳು ತಮ್ಮ ಜೀವನದಲ್ಲಿ ಒಂದೇ ಒಂದು ಬಾರಿಯಾದರೂ 'ಕಾಶಿ'ಗೆ ಹೋಗಬೇಕೆಂದು ಹಂಬಲಿಸುವುದು ಸಾಮಾನ್ಯ ಸಂಗತಿಯಾಗಿದೆ. ಆದರೆ ಚೌಡಯ್ಯ ಅದನ್ನು ಬೆಂಬಲಿಸುವುದಿಲ್ಲವೆಂಬುದು ಗಮನಾರ್ಹ ಅಂಶವಾಗಿದೆ. ಮುಂದುವರೆದು 'ಕಾಶಿಗೆ ಹೋದವರನ್ನು ವೇಶ್ಯೆಗೆ ಸಮ' ವೆಂದೂ; ಶ್ರೀಶೈಲ ಪರ್ವತಕ್ಕೆ ಹೋಗುವವರನ್ನು ಪಂಚಮಹಾಪಾತಕ' ರೆಂದು ಕರೆದಿದ್ದಾನೆ. ಅಂಥವರ ಮುಖವನ್ನೇ ನೋಡಬಾರದೆಂದು ಸೂಚಿಸಿದ್ದಾನೆ. ಇದು ಆತನ ಪ್ರಖರ ವೈಚಾರಿಕತೆಗೆ ಶ್ರೇಷ್ಠ ನಿದರ್ಶನವನ್ನು ಒದಗಿಸುತ್ತದೆ. ಗುಡಿ-ಗುಂಡಾರ, ಮಠ-ಮಂದಿರಗಳು ಶೋಷಣೆಯ ಕೇಂದ್ರಗಳಾಗಿವೆ. ಅಜ್ಞಾನ-ಅಂಧಾನುಕರಣೆಗಳ ಆಗರವಾಗಿವೆ. ಅಂಥಲ್ಲಿ ಹೋಗಬಾರದೆಂದು ಹೇಳಿದ್ದಾನೆ. ಅವನ ವಿಚಾರದಲ್ಲಿ ನಮ್ಮ-ನಮ್ಮ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದೇ ನಾವು ಕೈಗೊಳ್ಳಬಹುದಾದ ತೀರ್ಥಯಾತ್ರೆಯಾಗಿದೆ. ಅದಕ್ಕಾಗಿಯೇ ಆತ ಹೇಳುತ್ತಾನೆ:

**"ಕಾಯಕವೇ ಕಾಶಿ, ಒಡಲೇ ಕೇದಾರ**
**ಮಾಡಿ ನೀಡುವ ಹಸ್ತವೇ ಸೇತುಬಂಧರಾಮೇಶ್ವರ**
**ಮಹಾಲಿಂಗವ ಹೊತ್ತಿರುವ ಶಿರಸ್ಸೇ ಶ್ರೀ ಶೈಲ ಪರ್ವತ ನೋಡಾ"**

**(ಅಂ. ಚೇ. ವಚನ-೨೯)**

ಎಂತಹ ವಿವೇಕಯುತ ವ್ಯಾಖ್ಯಾನವಿದು! ಹತ್ತಾರು ಒಳನೋಟಗಳನ್ನು ಒಳಗೊಂಡಿರುವ ಈ ವಚನ ಬಿಡಿಸಿದಷ್ಟೇ ಅರ್ಥವನ್ನು ಸ್ಫುರಿಸುತ್ತದೆ. ತೀರ್ಥಯಾತ್ರೆ, ಕಾಯಕ, ಮಾನವನ ಶರೀರ ಈ ಮೂರಕ್ಕೂ ಬರೆದಿರುವ ಹೊಸ ಭಾಷ್ಯವಿದೆಂದು

ಹೇಳಬಹುದು. ದೇವರ ನೆಪವೊಡ್ಡಿ ಸುಮ್ಮ-ಸುಮ್ಮನೆ ಅತ್ತಿತ್ತ ಅಡ್ಡಾಡುವುದು ವ್ಯರ್ಥವೆಂದು ಚೌಡಯ್ಯ ಪ್ರತಿಪಾದಿಸಿರುವಲ್ಲಿ ಅಪಾರ ಅರ್ಥವಿದೆ. ನಮ್ಮ-ನಮ್ಮ ಕಾಯಕಗಳಿಗೆ ಈತ ಹೆಚ್ಚಿನ ಒತ್ತು ನೀಡಿ, ದುಡಿತಕ್ಕೆ ಮಹತ್ವ ಕೊಟ್ಟಿರುವುದು ಆತನ ಶ್ರಮ ಸಂಸ್ಕೃತಿಯನ್ನು ಬೆಂಬಲಿಸುತ್ತದೆ.

ನಮ್ಮ ಸಮಾಜದಲ್ಲಿ ಮನೆಮಾಡಿರುವ ಅಜ್ಞಾನ-ಅಂಧಾನುಕರಣೆ, ಮೂಢನಂಬಿಕೆಗಳನ್ನೂ ಅಂಬಿಗರ ಚೌಡಯ್ಯ ಖಾರವಾಗಿ ಟೀಕಿಸಿದ್ದಾನೆ. ನಮ್ಮ ಜನರಿಂದು ಅಜ್ಞಾನದಿಂದ ಶೋಷಣೆಗೆ ಬಲಿಯಾಗುತ್ತಿದ್ದಾರೆ. ತಮ್ಮ ಹಣ, ಆರೋಗ್ಯ, ನೆಮ್ಮದಿ, ಅಮೂಲ್ಯ ಸಮಯವನ್ನು ಕಳೆದುಕೊಳ್ಳುತ್ತಿದ್ದಾರೆ ಎನ್ನುವ ಕಳಕಳಿಯು ಆತನ ಟೀಕೆಯ ಹಿಂದೆ ಅಡಗಿರುವುದನ್ನು ಗುರುತಿಸಬಹುದಾಗಿದೆ.

**"ಆರಳಿಮರ, ವಿಷ್ಣು ಕಾಂತಿ, ಬನ್ನಿ, ಮುತ್ತುಗ, ತುಳಸಿ**
**ಹರಿ-ಹರಿ ಎಂದು ಹೊಡೆ ಹೊಮ್ಮುವಿರಿ, ಎಲ್ಲಿಭೋ, ಎಲ್ಲಿಭೋ!**
**ನಿಮ್ಮ ಹೊಡೆದಾಡುವ ದೈವಂಗಳೆಲ್ಲ ಗಿಡಮರವಾಗಿ ಹೋದುವಲ್ಲ"**

**(ಅಂ.ಚೀ. ವ-೯)**

ತಮ್ಮ ಇಷ್ಟಾರ್ಥಗಳನ್ನು ಗಿಡ-ಮರಗಳು ಈಡೇರಿಸುತ್ತವೆಯೆಂಬ ಮೂಢನಂಬಿಕೆಗೆ ಇಂದಿಗೂ ಹಳ್ಳಿ-ಹಳ್ಳಿಗಳಲ್ಲಿ ಮನೆ ಮಾಡಿದೆ. ಹರಕೆ ಹೊತ್ತು ಗಿಡ-ಮರ ಸುತ್ತುವುದು ಸಾಮಾನ್ಯವಾಗಿದೆ. ಇವೆಲ್ಲವೂ ನಿರುಪಯುಕ್ತ, ಇನ್ನೂ ಮೇಲಾದರೂ ನಿಮ್ಮ ಅಜ್ಞಾನ-ಅಂಧಾನುಕರಣೆಗಳನ್ನು ಬಿಟ್ಟು-ಬಿಡಿರಿ, ಎಂದು ಜನತೆಗೆಕೇಳುವಲ್ಲಿ ಆತನ ಕಳಕಳಿಯಾ ವ್ಯಕ್ತವಾಗಿದೆ.

**"ಕೊರಳಿಗೆ ಕವಡಿಯ ಕಟ್ಟಿ**
**ನಾಯಾಗಿ ಬೊಗಳುವ ಅದಾವ ವಿಚಾರವಯ್ಯಾ?**
**ಹುರಿಬೆನ್ನ ಶಿಡಿಬಾಯ ಬಿಗಿದಲ್ಲಿ**
**ಹಿಡಿದು ಹೋಗುವುದಾವ ವಿಚಾರವಯ್ಯಾ?**
**ಬೇವಿನ ಉಡುಗೆಯನ್ನುಟ್ಟು ಹಡಲಿಗೆ ಹೊತ್ತು**
**ಉಧೋ ಉಧೋ ಎಂಬುದು ಆದಾವ ವಿಚಾರವಯ್ಯಾ?"**

**(ಅಂ.ಚಿ. ವ-೧೫)**

ಮೈಲಾರನ ಭಕ್ತರು ನಾಯಿಯಂತೆ ಬೊಗಳುವುದನ್ನು ಅಂಬಾಭವಾನಿಯ ಹಿಂಬಾಲಕರು ಕವಡಿಸರ ಕಟ್ಟಿಕೊಳ್ಳುವುದನ್ನು ಎಲ್ಲಮ್ಮನ ಭಕ್ತರು ದೇವಿಗೆ ಹರಕೆ ಹೊತ್ತು ಹುಟುಗಿಯುಟ್ಟು ಬಾಯಲ್ಲಿ ಬೇವು ಕಚ್ಚಿ ಹಿಡಿಯುವುದನ್ನು, ಎಲ್ಲವ್ವನ ಜೋಲಿಗಿತ್ತಿಯರು ಜಗ, ಹಡಲಗಿ, ಕೊಡ ಹೊತ್ತು ಕುಣಿಯುವುದನ್ನು ಮೇಲಿನ ವಚನದಲ್ಲಿ ವಿಡಂಬಿಸಿ ಹೀಗೆ ಮಾಡುವುದು ಅದಾವ ಪ್ರಗತಿಪರ ವಿಚಾರವೆಂದು ಪ್ರಶ್ನಿಸಿದ್ದಾನೆ. ಪ್ರಜ್ಞಾವಂತರುಈ ಅಂಧಾನುಕರಣೆಗಳನ್ನು ಎಂದೂ ಬೆಂಬಿಲಿಸರು. ವೈಜ್ಞಾನಿಕಯುಗ, ರಾಕೆಟ್‌ಯುಗವೆಂದು ಬೀಗುತ್ತಿರುವ ಶತಮಾನದಲ್ಲಿಯೇ ಅನಾಗರಿಕತೆಗಳು ಮಡುಗಟ್ಟಿರುವಾಗ ಇನ್ನು ಎಂಟು ಶತಮಾನಗಳ ಹಿಂದೆ ಹನ್ನೆರಡನೆಯ ಶತಮಾನದಲ್ಲಿ ಎಷ್ಟು ದಟ್ಟವಾದ ಬೇರುಬಿಟ್ಟಿರಬಹುದು? ಇಂಥ ಮೂಢನಂಬಿಕೆಗಳನ್ನಿಂದು ಖಂಡಿಸುವುದು ಸಾಮಾನ್ಯ

ವಾಗಿದೆ. ಆದರೆ ಹನ್ನೆರಡನೆಯ ಶತಮಾನದಲ್ಲಿಯೇ ಅಂಬಿಗರ ಚೌಡಯ್ಯನು ಚಿಂತಿಸಿರುವುದು ಆತನ ಪ್ರಗತಿಪರ ದೃಷ್ಟಿಯ ಸಂಕೇತವಾಗಿದೆ.

ಅಂಬಿಗರ ಚೌಡಯ್ಯನ ವಚನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ, ಆತ ಸಮಾಜ ಶಾಸ್ತ್ರಜ್ಞನಾಗಿ, ಸಮಾಜದ ವೈದ್ಯನಾಗಿ ಕಂಡು ಬರುತ್ತಾನೆ. ಸಮಾಜದಲ್ಲಿರುವ ನ್ಯೂನತೆಗಳನ್ನು ಎತ್ತಿ ತೋರಿಸುತ್ತಾನೆ. ವೈದ್ಯ ರೋಗಕ್ಕೆ ಕಾರಣವಾದ ಕಾಯಿಲೆಯನ್ನು ಮೊದಲು ಕಂಡುಕೊಂಡು ತದನಂತರ ಉಪಶಮನಕ್ಕೆ ಮದ್ದನ್ನು ನೀಡುತ್ತಾನೆಯೋ; ಹಾಗೆಯೇ ಅಂಬಿಗರ ಚೌಡಯ್ಯನು ಕೂಡ, ಪ್ರಥಮವಾಗಿ ಸಮಾಜದ ಅಧಃ ಪತನ ಹಾಗೂ ಅದರ ಅಸ್ವಸ್ತತೆಗೆ ಕಾರಣಭೂತವಾದ ಅಂಶಗಳನ್ನು ಪರಿಶೀಲಿಸಿ ಕಟುವಾಗಿ ಖಂಡಿಸುತ್ತಾನೆ. ಆ ಮೇಲೆ ಅವುಗಳಿಗೆ ತನ್ನದೇ ಆದ ಪರಿಹಾರೋಪಾಯಗಳನ್ನು ಸೂಚಿಸುತ್ತಾನೆ. ಸಮಾಜದ ಯಾವ ಲಿಂಗವೂ ಇವನಿಂದ ಹೊರಗುಳಿದಿಲ್ಲ. ಖಾರವಾಗಿ ಖಂಡಿಸುವಾಗ ಚೌಡಯ್ಯ ಕಠೋರವಾಗಿ ಕಂಡುಬಂದರೂ, ಅಂತರ್ಯದಲ್ಲಿ ತೀರ ಮೃದು ಸ್ವಭಾವದವನು. ಸಮಾಜದ ಒಳಿತಾಗಿ ಪರಿಶ್ರಮಿಸಿದ ವ್ಯಕ್ತಿ ಈತ, ಆತನ ಮಾತುಗಳು ಕಟುವೆನಿಸಿದರೂ ಕೂಡ, ಆತನ ಕಾಳಜಿಯನ್ನು ನಿರಾಕರಿಸಲಾಗದು.

ಸಮಾಜದ ಮಾರ್ಗದರ್ಶಕರೂ, ಸರ್ವರಿಗೂ ಗುರುಸ್ಥಾನದಲ್ಲಿರುವ 'ಸ್ವಾಮೀಜಿ' ಯವರನ್ನೀತ ಗೌರವಿಸುತ್ತಾನೆ. ಆದರೆ ಢೋಂಗಿಗಳನ್ನು ಆಡಂಬರ ಮಾಡುವವರನ್ನೂ ಅಷಾಢಭೂತಗಳನ್ನು ಚೌಡಯ್ಯ ತನ್ನ ಮಾತಿನ ಮೊನೆಯಿಂದ ಹಿಡಿ-ಹಿಡಿದು ಇಕ್ಕುವುದನ್ನು ಕಾಣಬಹುದಾಗಿದೆ. ಕಂತೆ ತೊಟ್ಟವ ಗುರವಲ್ಲ ಕಾವಿ ಹೊದ್ದವ ಜಂಗಮನಲ್ಲ. ಎನ್ನುತ್ತಾನೆ. ಸ್ವಾಮಿಗಳಿಗೆ ಭಕ್ತರೆಲ್ಲರೂ ಸರಿಸಮಾನರು, ತಾರತಮ್ಯ ಮಾಡುವ ಸ್ವಾಮಿಗಳನ್ನು ಅಂಬಿಗರ ಚೌಡಯ್ಯ ಹೇಗೆ ತರಾಟೆಗೆ ತೆಗೆದುಕೊಳ್ಳುತಾನೆಂಬುದನ್ನು ನೋಡಿ:

"ದೊಡ್ಡ ದೊಡ್ಡ ಚಿಂದಿಯ ಶೆಟ್ಟಿಗಳ ಕಂಡು  
ಅಡ್ಡಗಟ್ಟಿ ಹೋಗಿ ಶರಣಾರ್ಥಿ ಎಂಬರು;  
ಎಡ್ಡೆಗಳ್ಳುತನಕ್ಕೆ ದುಡ್ಡುಗಳ ಬೇಡುತ್ತ  
ನಮ್ಮ ಮಠಕ್ಕೆ ಬರ್‍ರಿ, ಹಿರಿಯರೆ ಎಂಬರು;  
ಹೋಗಿ ಶರಣಾರ್ಥಿ ಎಂದು ಭಕ್ತನೆಂದೊಡೆ  
ಕೇಳದ ಹಾಗೆ ಅಡ್ಡ ಮೋರೆಯನ್ನಿಕ್ಕಿಕೊಂಡು  
ಸುಮ್ಮನೆ ಹೋಗುವ ಹೆಡ್ಡ ಮೂಳರಿಗೆ ದುಡ್ಡೇ ಪ್ರಾಣವಾಯಿತ್ತು  
ಧುಡ್ಡಿಸ್ತರ ಕುರುಡನರಿಯದೆ ಮೊಳಪಾದದ ಮೇಲೆ  
ಹೊಡಕೊಂಡು ನಗುತ್ತಿರ್ದಾತ ನಮ್ಮ ಅಂಬಿಗರ ಚೌಡಯ್ಯ"(ಅಂ. ಚೌ. ವ-೫೯)

ದುಡ್ಡಿದ್ದ ದೊಡ್ಡಪ್ಪನನ್ನು ಕರೆ-ಕರೆದು ಮಾತನಾಡಿಸಿ ಮಠದೆಡೆಗೆ ಬರುವಂತೆ ಆಮಂತ್ರಿಸುವ, ಬಡಭಕ್ತರು ತಾವಾಗಿಯೇ ಮಠಕ್ಕೆ ಬಂದು ಮಾತನಾಡಿಸಿದರೂ ಕೇಳಿಯೂ ಕೇಳಿಸದಂತಿರುವ, ದುಡ್ಡನ್ನೇ ಸರ್ವಸ್ವವೆಂದು ಬೀಗುವ ಕೆಲವು 'ಖೋಟಾ ಕಾವಿಧ್ದಾರಿ' ಗಳನ್ನು ಕಂಡ ಚೌಡಯ್ಯ ಛೇಡಿಸಿದ್ದಾನೆ.

ಸ್ವಾಮಿಗಳು ದುಡ್ಡಿನಿಂದ ಬಹುದೂರ ಇರಬೇಕು. ದುಡ್ಡಿನ ಆಸೆ, ಅಮೀಶೆ ಅವರಿಗೇಕೆ ಎಂದು ಚೌಡಯ್ಯ ಪ್ರಶ್ನಿಸಿದ್ದು ಸಹ್ಯವಾಗಿದೆ. ಹೊಟ್ಟೆ ಹೊರೆಯುವುದಕ್ಕಾಗಿ ಕಾವಿ ತೊಡುವವರನ್ನು ಕತ್ತೆಗಳೆಂದು ಕರೆದಿದ್ದಾನೆ. "ತುತ್ತಿನಾಸೆಗೆ ಲಿಂಗವ ಕೊಟ್ಟು ಹೋಗುವ

ಕತ್ತೆ ಗುರುವಿನ ಪಾದ ಹಿಡಿದೆಯಾಗಿ ಸ್ವತಃ ಲಿಂಗವೇ ನಿನಗೆ ಕಿರಿದಾಯಿತ್ತು" ಎಂದು ಎಚ್ಚರಿಸಿ, ಅಂಥವನ ಕೈಯಿಂದ ಲಿಂಗಕಟ್ಟಿಸಿ ಕೊಂಡವನು 'ಕಳ್ಳನಾಯಿ' ಎಂದಿದ್ದಾನೆ. ಉದಾ:

"....ಲಿಂಗ ಕಟ್ಟಿದವನೊಬ್ಬ ಕಳ್ಳನಾಯಿ
ಕಟ್ಟಿಸಿಕೊಂಡವನೊಬ್ಬ ಕಳ್ಳನಾಯಿ
ಇಂತಪ್ಪ ನಾಯಿಗಳನ್ನು ಹಿಡೀತಂದು ಮೂಗನೆ ಕೊಯ್ದು
ನಮ್ಮ ಕುಂಬಾರ ಗುಂಡಯ್ಯನ ಮನೆಯ
ಕರೆ ಕತ್ತೆಯನ್ನು ತಂದು ಊರಲೆಲ್ಲ ಮೆರೆಯಿಸಿ
ನಮ್ಮ ಮಾದಾರ ಹರಳಯ್ಯನ ಮನೆಯ ಹನ್ನೆರಡು ಜೋಡು
ಹಳೆಯ ಪಾದರಕ್ಷೆಗಳನ್ನು ತಂದು ಮುದ್ದು ಮುಖದ ಮೇಲೆ
ಶುದ್ಧವಾಗಿ ಹೊಡೆಯೆಂದಾತ ನಮ್ಮ ಅಂಬಿಗರ ಚೌಡಯ್ಯ"

(ಅಂ. ಚೌ.ವ-೭೬)

ಈ ವಚನಕ್ಕೆ ವಿವರಣೆಯೇ ಬೇಕಿಲ್ಲ. ಚೌಡಯ್ಯ ನೀಡುವ ಶಿಕ್ಷೆ ಎಷ್ಟು ಭೀಕರವಾಗಿದೆ! ಇದನ್ನು ಚೌಡಯ್ಯ ಮಾತ್ರ ಹೇಳಲು ಸಾಧ್ಯ. ಇಂಥಲ್ಲಿಯೇ ಚೌಡಯ್ಯನ ಧೀರ ವ್ಯಕ್ತಿತ್ವ, ಸ್ಪಷ್ಟ ನಿಲುವು, ದೃಢ ನಿರ್ಧಾರಗಳು ವ್ಯಕ್ತಗೊಳ್ಳುತ್ತವೆ.

ಗುರು-ಶಿಷ್ಯರ ಸಂಬಂಧದ ಕುರಿತಾಗಿ ಹಲವಾರು ವಚನಗಳಲ್ಲಿ 'ಜಿಜ್ಞಾಸೆ' ಮಾಡಿರುವುದನ್ನು ಕಾಣುತ್ತೇವೆ. ವಿದ್ಯೆ ನೀಡುವ ಗುರುಗಳು ವಿದ್ಯಾರ್ಥಿಗಳಲ್ಲಿಯ ಜಾತಿ-ಮತವನ್ನು ಪರಿಗಣಿಸಬಾರದು. ವಿದ್ಯೆಯನ್ನೂ ಪಡೆದು, ಆ ವ್ಯಕ್ತಿ ತನ್ನ ಅಜ್ಞಾನವೆಲ್ಲ ಕಳೆದುಕೊಂಡು ಸುಸಂಸ್ಕೃತನಾದರೆ, ಅವನಿಗೆ ಜಾತಿ ಬಾಧಿಸಬಾರದು, ಆ ಶಿಷ್ಯನೊಡನೆ ಊಟ ಮಾಡಬೇಕು, ಮೇಲು-ಕೀಳುಗಳ ಸೂತಕವಾಗಲಿ, ಮಡಿ-ಮೈಲಿಗೆಯ ವಿಚಾರವಾಗಲಿ ಗುರುವಿನ ಮನದಲ್ಲಿ ಬರಬಾರದು. ವಿಚಾರಗಳು ಬರಿ ಬೋಧನೆಗೆ ಮಾತ್ರ ಇರದೇ ಅವುಗಳನ್ನು ಜೀವನದಲ್ಲಿಯೂ ಅಳವಡಿಸಿಕೊಳ್ಳಬೇಕು. ಉದಾತ್ತ ವಿಚಾರಗಳನ್ನು ಭೋದಿಸಿ, ತಾನೇ ಅನುಸರಿಸಿದ ಗುರುವನ್ನು ಚೌಡಯ್ಯ ಮೆಚ್ಚುವುದಿಲ್ಲ, ಶಿಷ್ಯನಿಗೆ ಪಾಠ ಮಾಡಿ ಅವನಿಂದ ಗುರುದಕ್ಷಿಣೆಯನ್ನಾಗಲಿ, ಇನ್ನಿತರ ವಸ್ತುಗಳನ್ನು ಸ್ವೀಕರಿಸುವುದು ಸಲ್ಲದು, ಶಿಷ್ಯನ ಕುಲವನ್ನು ಮುಂದೆ ಮಾಡಿ ಅವನೊಡನೆ ಉಣ್ಣದೆ, ಪ್ರತಿಯಾಗಿ ಅಕ್ಕಿ, ಗೋಧಿ, ಬೇಳೆ, ಬೆಲ್ಲ ಇತ್ಯಾದಿ 'ಸೀದಾ' ಒಯ್ದು ಗುರುವಿನ ನೀತಿಯನ್ನು ಚೌಡಯ್ಯನು ಖಂಡಿಸುವುದನ್ನು ನೋಡಬಹುದು ಈ ವಚನದಲ್ಲಿ:

"ಕುಲಹೀನ ಶಿಷ್ಯಂಗೆ ಅನುಗ್ರಹ ಮಾಡಿ
ತಿರುಗಿ ಅವನ ಮನೆಯಲ್ಲಿ ಉಣಬಾರದೆಂದು
ಅಕ್ಕಿ ಕಣಕವ ತಕ್ಕೊಂಡು ಹೋಗುವ ಗುರುವಿನ ಕಂಡರೆ
ಕೆಡವಿ ಹಾಕಿ, ಮೂಗನೇ ಕೊಯ್ದು ಇಟ್ಟಂಗಿ ಕಲ್ಲಿಟೆ ತಿಕ್ಕಿ
ಸಾಸಿವೆ ಹಿಟ್ಟನು ತಳಿಯ ಮೇಲೆ ಲಿಂಬೆಯ ಹುಳಿಹಿಂಡಿ
ಪಡುವಲ ಗಾಳಿಗೆ ಹಿಡಿ ಎಂದಾತ ನಮ್ಮ ಅಂಬಿಗರ ಚೌಡಯ್ಯ"

(ಅಂ. ಚೌ. ವ-೨೯)

ಗುರುವಿನ 'ಇಬ್ಬಂಧಿತನ'ಕ್ಕೆ ಚೌಡಯ್ಯನು ನೀಡಿದ ಶಿಕ್ಷೆಯಿದು! ಗುರು ತನ್ನ ಶಿಷ್ಯನನ್ನೂ ಪರೀಕ್ಷಿಸಿ ಶಿಷ್ಯತ್ವ ನೀಡಬೇಕು. ಹಾಗೆಯೇ ಶಿಷ್ಯನು ಕೂಡ ತನ್ನ

ದೇಹದ ಅಂಗರಚನೆಯಲ್ಲಿ ಮಾತ್ರ ಭಿನ್ನತೆಯಿದ್ದರೂ, ದೇಹದೊಳಗೆ ಸುಳಿವ ಆತ್ಮ ಒಂದೇ ಆಗಿದೆ. ಅದು ಹೆಣ್ಣು ಅಲ್ಲ, ಗಂಡೂ ಅಲ್ಲ, ಶರೀರ ರಚನೆಗೆ ಅನುಗುಣವಾಗಿ ನಾವೇ ಸ್ತ್ರೀಪುರುಷರೆಂದು ಹೆಸರಿಟ್ಟು ಕರೆಯುತ್ತೇವಷ್ಟೇ. ಆದ್ದರಿಂದ ಅವರಿಬ್ಬರಲ್ಲಿ ವ್ಯತ್ಯಾಸವಿಲ್ಲವೆಂದು ನಿರೂಪಿಸಿರುವುದು ಚೌಡಯ್ಯನ ಚಿಂತನಶೀಲತೆಯ ದ್ಯೋತಕವಾಗಿದೆ.

**"ಶರಣಸತಿ ಲಿಂಗಪತಿ ಎಂಬರು! ಶರಣ ಹೆಣ್ಣಾದ ಪರಿ ಇನ್ನೆಂತು**
**ಲಿಂಗ ಗಂಡಾದ ಪರಿ ಇನ್ನೆಂತು! ನೀರು ನೀರ ಕೂಡಿ**
**ಬೆರೆದಲ್ಲಿ ಬೇಧಿಸಿ ಬೇರೆ ಮಾಡಬಹುದೆ?**
**ಗಂಡು ಹೆಣ್ಣು ಯೋಗವಾದಲ್ಲಿ! ಆತುರ ಹಿಂಗೆ ಘಟಬೇರಾಯಿತ್ತು**
**ಶರಣಸತಿ ಲಿಂಗಪತಿ ಎಂಬ ಮಾತು! ಮೊದಲಿಗೆ ಮೋಸ**
**ಲಾಭಕ್ಕಾಧೀನ ಉಂಟೇ ಎಂದನೆಂಬಿಗರ ಚೌಡಯ್ಯ"**

**(೫೦. ಚೀ. ವ-೫೦)**

ಶಿವಶರಣರು ತಮ್ಮನ್ನು ಸತಿಯೆಂದು, ಲಿಂಗವನ್ನು ಪತಿಯೆಂದು ಒಪ್ಪಿ, ಭಕ್ತಿಗೈದವಾದರಗಳೊಡನೆ ಆರಾಧಿಸುವುದನ್ನು ಕಾಣುತ್ತೇವೆ. ಆದರೆ ವಿಚಕ್ಷಣಮತಿಯಾದ ಚೌಡಯ್ಯನು 'ಶರಣಸತಿ-ಲಿಂಗಪತಿ' ಯೆಂಬ ಪರಿಕಲ್ಪನೆಗೆ ಭಾರಿ ಏಟನ್ನೂ ಕೊಟ್ಟಿದ್ದಾನೆ. ಈ ವಚನವು ಚೌಡಯ್ಯನ ಪ್ರಖರ ವೈಚಾರಿಕ ಪ್ರಜ್ಞೆಯ ಪ್ರತೀಕವಾಗಿದೆ. ವಚನಕಾರರು ಸ್ತ್ರೀಪುರಷರು ಸಮಾನರೆಂದಿದ್ದಾರೆ. ಈ ಸಮಾನತೆಯನ್ನು ಸಾಧಿಸಲೆಂದೇ ಹೋರಾಟ ಮಾಡಿದ್ದಾರೆ. ಆದರೆ ತಾವೇ ಪ್ರತಿಪಾದಿಸಿದ ನೀತಿಯೊಳಗೆ ತಮಗರಿವಾಗದಂತೆ ಸಿಲುಕಿರುವುದು ಸೋಜಿಗದ ಸಂಗತಿಯಾಗಿದೆ.

ಗಂಡು-ಹೆಣ್ಣಿನಲ್ಲಿ ಭೇದವೇ ಇಲ್ಲವೆಂದ ಮೇಲೆ, ಶರಣ 'ಸತಿ' ಯಾಗುವ ಲಿಂಗ 'ಪತಿ' ಯಾಗುವ ಮಾತೆಲ್ಲಿಂದ ಬಂತು? ಒಂದು ನೀರು ಮತ್ತೊಂದು ನೀರನೊಂದಿಗೆ ಬೆರೆತಾಗ ಅದು ನೀರೇ ಆಗಬೇಕಲ್ಲದೆ ಬೇರೇನು ಆಗಬಲ್ಲುದು? ಹಾಗೆಯೇ ಹೆಣ್ಣು-ಗಂಡು ಒಂದೆಯೆಂದಾಗ ಸತಿ-ಪತಿ ಭೇದ ಭಾವಕ್ಕೆ ಅವಕಾಶವೇ ಇಲ್ಲ. 'ಶರಣ ಹೆಣ್ಣಾದ ಪರಿ ಇನ್ನೆಂತು? ಲಿಂಗ ಗಂಡಾದ ಪರಿ ಇನ್ನೊಂತೂ" ಎಂದು ಚೌಡಯ್ಯ ಎತ್ತಿದ ಪ್ರಶ್ನೆ ಜಟಿಲ ಮತ್ತು ಅಷ್ಟೇ ಸಂಕೀರ್ಣವಾಗಿದೆ. ಆತ ಶರಣಸತಿ-ಲಿಂಗಪತಿಯೆಂಬ ಮಾತೇ ಮೊಟ್ಟ ಮೊದಲಿಗೆ ಮೋಸದ ಮೊಟ್ಟೆಯಾಗಿದೆ. "ಪ್ರಾಮಾಣಿಕ ನಿಷ್ಠಾವಂತ ಹೋರಾಟ ಗಾರನೊಬ್ಬ ಚಳುವಳಿ ತನ್ನೊಂದಿಗೆ ಬರದಿದ್ದಾಗ ಅದನ್ನು ಹಿಂದೆ ಹಾಕಿ ಮುಂದೆ ಹೋಗುವ ಸಾಮರ್ಥ್ಯ ಹೊಂದಿರುತ್ತಾನೆಂಬುದನ್ನು ಚೌಡಯ್ಯನ ವ್ಯಕ್ತಿತ್ವದಲ್ಲಿ ಕಾಣಬಹುದಾಗಿದೆ. ಕಣ್ಣಿಗೆ ಕಾಣದ ಹರಿ-ಹರ ಬ್ರಹ್ಮಾದಿಗಳನ್ನು ಅಲ್ಲಗಳೆದು ಕಣ್ಣೆದುರು ನಡೆದಾಡುವ ಶಿವಶರಣರಿಗೆ ಮನುಷ್ಯರಿಗೆ ಪ್ರಾಮುಖ್ಯತೆ ಕೊಡುವುದು. ದೇವರು ಧರ್ಮಗಳು ಸುಳ್ಳು ಎಂದು ಗೊಂದಲವೆಬ್ಬಿಸುವ ಸೂಕ್ಷ್ಮವಾಗಿ ಅವುಗಳ ಬೇರುಗಳನ್ನೇ ಕಿತ್ತೆಸೆಯಲು ಪ್ರಯತ್ನಿಸಿರುವುದು; ಧಾರ್ಮಿಕ ಚಳುವಳಿಯೊಂದರ ಮುಂಚೂಣಿಯಲ್ಲಿದ್ದು ಕೊಂಡೇ ಅದರ ಜಡತ್ವವನ್ನು ಅಲ್ಲಗಳೆಯುವುದು ಇವೆಲ್ಲಾ ಚೌಡಯ್ಯ ತೆಗೆದುಕೊಳ್ಳುವ ದಿಟ್ಟ ನಿಲುವುಗಳು. ಅರಿವಿನ ಸಾಧನೆಗಾಗಿ ಗುರು-ಲಿಂಗ-ಜಂಗಮದ ಕಲ್ಪನೆಯೇ ಹೊರತು ಗುರು, ಲಿಂಗ, ಜಂಗಮಕ್ಕಾಗಿ ಅರಿವನ್ನು ಮರೆತು ಭಾವುಕರಾಗುವುದಿಲ್ಲ. ಈ ಎಲ್ಲಾ

ವಿಚಾರಗಳನ್ನು ಚೌಡಯ್ಯ ತನ್ನ ವಚನಗಳಲ್ಲಿ ಪರಿಣಾಮಕಾರಿಯಾಗಿ ಬಿಂಬಿಸಿದ್ದಾನೆ[೩]" ಎಂದಿರುವ ಡಾ|| ಬಸವರಾಜ ಸಬರದರ ಮಾತುಗಳು ಅಂಬಿಗರ ಚೌಡಯ್ಯನ ಧೀರ ವ್ಯಕ್ತಿತ್ವವನ್ನು ಅನಾವರಣಗೊಳಿಸುತ್ತವೆ.

"ತನ್ನ ಹುಸಿಮಾಡಿ ಇನ್ನೊಂದು ದಿಟಮಾಡುವ
ಅಣ್ಣರಿಗೆ ನಂಬುಗೆ ಇನ್ನಾವುದಯ್ಯಾ?
ತನ್ನೊಳಗಿರ್ದ ಘನವ ತಾ ತಿಳಿಯಲರಿಯದೆ
ಪರಬ್ರಹ್ಮಕ್ಕೆ ತಲೆಯಿಕ್ಕಿ ತೆಗೆದೆನೆಂಬ
ಅಣ್ಣಾ ಗಾವಿಲನೆಂದ ಅಂಬಿಗರ ಚೌಡಯ್ಯ" (ಅಂ. ಚೌ. ವ-೪೭)

ತನ್ನ ಮೇಲೆ ತನಗೆ ಮೊದಲು ನಂಬಿಕೆಯಿರಬೇಕು. ತನ್ನನ್ನು ತಾನೇ ನಂಬದಿರುವಾಗ ಮತ್ತೊಂದನ್ನು ನಂಬಲು ಹೇಗೆ ಸಾಧ್ಯ? ತನ್ನಲ್ಲಿರುವ ಮಹತ್ತತೆಯನ್ನು ತಿಳಿದುಕೊಳ್ಳುವ ಯೋಗ್ಯತೆಯಿಲ್ಲದವರು ಬೇರೆಯವರ ಘನತೆಯನ್ನು ಹೇಗೆ ಅರಿತುಕೊಳ್ಳಬಲ್ಲರು? ಎಂಬ ಪ್ರಶ್ನೆಯು ವಾಸ್ತವವಾಗಿದೆ. ಪ್ರತಿಯೊಬ್ಬರು ಇದರ ಕುರಿತಾಗಿ ಯೋಚಿಸುವಂತಿದೆ.

"ತನ್ನ ಮರೆದು ದೇವರ ಕಂಡಿಹೆನೆಂದೆಂಬರು;
ತನ್ನವ ಮರೆದು ದೇವರ ಕಂಡಿಹೆನೆಂಬ ಕಾರಣ
ಹರಿ-ಹರ-ಸುರ-ಬ್ರಹ್ಮಾದಿಗಳು ತ್ತಲೆಕೆಳಗಾಗಿ ಹೋದರು;
ಆ ದೇವಹ ಮರೆದು ತನ್ನವನರಿದುದುಂಟಾದರೆ
ತಾನೇ ದಿಟವೆಂದ ಅಂಬಿಗರ ಚೌಡಯ್ಯ" (ಅಂ. ಚೌ. ವ-೪೪)

ದೇವರನ್ನೂ ಮರೆತರೂ ಸರಿ. ತನ್ನನ್ನು ತಾನು ಅರಿತು ಕೊಂಡರೆ ಅದೆ "ದಿಟ" ವೆಂದು ಪ್ರತಿಪಾದಿಸಲಾಗಿದೆ. ಕಣ್ಣಿಗೆ ಕಾಣದ ಕೈಗೆ ಸಿಗುವ ವಸ್ತುವನ್ನು ನಂಬುವುದರಲ್ಲಿ ಅರ್ಥವಿಲ್ಲ. ಕಣ್ಣಿಗೆ ಕಾಣುವ, ಕೈಗೆ ಸಿಗುವ, ಸಮಯಕ್ಕೆ ನೆರವಾಗುವ, ನಮ್ಮಂತೆ ನಡೆದಾಡುವ- ಮಾತನಾಡುವ ಮಾನವರನ್ನೇ ನಂಬುವುದು ಹೆಚ್ಚು ಪ್ರಯೋಜನಕಾರಿಯಾಗಿದೆಯೆಂದು ಚೌಡಯ್ಯ ಹೇಳಿರುವಲ್ಲಿ ನೈಜತೆಯಿದೆ. 'ತನ್ನತನಕೆ' ಕೊಟ್ಟಿರುವ ಮಹತ್ತತೆ ಇದಾಗಿದೆ. ಚೌಡಯ್ಯ ಹಂತ-ಹಂತವಾಗಿ ಬೆಳೆದು ಬಂದ ಬಗೆಯನ್ನು ಇಲ್ಲಿ ಗುರುತಿಸಬಹುದಾಗಿದೆ. ಇನ್ನು ಮುಂದೆ ಹೋಗಿ ಚೌಡಯ್ಯ ಹೀಗೆ ಹೇಳುತ್ತಾನೆ:

"ಕ್ರಿಯೆಯರಿದವಂಗೆ ಗುರುವಿಲ್ಲ!
ಆಚಾರವನರಿದರಂಗೆ ಲಿಂಗವಿಲ್ಲ;
ಉತ್ಪತ್ತಿ-ಸ್ಥಿತಿ-ಲಯವನರಿದವಂಗೆ ಜಂಗಮವಿಲ್ಲ
ಪರಬ್ರಹ್ಮವನದಿವರಿಗೆ ಸರ್ವೇಂದ್ರಿಯವಿಲ್ಲ
ತನ್ನತನವನರಿದವಂಗೆ ಹಿಂದೆ ಮುಂದೆ
ಕಾಂಬುವದೊಂದು ಇಲ್ಲವೆಂದ ಅಂಬಿಗರ ಚೌಡಯ್ಯ" (ಅಂ. ಚೌ, ವ-೩೨)

ತಾನು ಯಾರು? ತನ್ನ ಕಾರ್ಯಗಳೇನು? ಅದನ್ನು ನಿರ್ವಹಿಸುವುದು ಹೇಗೆ? ಇತ್ಯಾದಿ ಅಂಶಗಳನ್ನು ಅರಿತುಕೊಂಡವನಿಗೆ 'ಗುರು'ವಿನ ಅವಶ್ಯಕತೆಯಲ್ಲ. ಕಾರಣ ಗುರುವಾದರೂ ಬೋಧಿಸುವುದು ಅದನ್ನೇ ಅಲ್ಲವೇ? ನಡೆ-ನುಡಿಗಳಲ್ಲಿ ಏಕತೆನ್ನು

---

೩. 'ಅನ್ವೇಷಣೆ' ವಿಶೇಷ ಸಂಚಿಕೆ-೧೯೮೬

ಸಾಧಿಸಿದವನಿಗೆ, ಆಚಾರ-ವಿಚಾರಗಳಲ್ಲಿ ವ್ಯತ್ಯಾಸವಿಲ್ಲದವನಿಗೆ ಲಿಂಗದ ಅವಶ್ಯಕತೆಯಿಲ್ಲ ಹುಟ್ಟು. ಸಾವುಗಳನ್ನರಿತುಕೊಂಡವನಿಗೆ 'ಜಂಗಮದ ಅವಶ್ಯಕತೆಯಿಲ್ಲ ತನ್ನ ತಾನು ಅರಿತವಗೆ ಸರಿಸಾಟಿಯಿಲ್ಲ' ಎಂಬುದು ವ್ಯಕ್ತಿ, ವ್ಯಕ್ತಿತ್ವ ಆತನ ಜ್ಞಾನ (ಅರಿವು) ಕ್ಕೆ ಸಂದ ಕೊಡುಗೆಯಾಗಿದೆ. ಗುರು, ಲಿಂಗ, ಜಂಗಮವನ್ನು ನಿರಾಕರಿಸುವುದು ಸಾಮಾನ್ಯರಿಗೆ ಸಾಧ್ಯವಿಲ್ಲ. ಅಂಬಿಗರ ಚೌಡಯ್ಯನಂತಹ ಬಂಡಾಯದ ಪ್ರಖರ ಪ್ರಜ್ಞೆಯುಳ್ಳವರಿಗೆ ಮಾತ್ರಸಾಧ್ಯವಾಗುತ್ತದೆ. ಇಂಥಲ್ಲಿಯೇ ಚೌಡಯ್ಯನು ಉಳಿದವರಿಗಿಂತ ಭಿನ್ನನಾಗುತ್ತಾನೆ. ಏರೆತ್ತರ ಸ್ಥಾನ ಪಡೆಯುತ್ತಾನೆ. ಅದಕ್ಕಾಗಿಯೇ ಖ್ಯಾತ ವಿದ್ವಾಂಸರಾದ ಡಾ|| ಎಂ. ಎಂ. ಕಲಬುರ್ಗಿಯವರು "ಅಂಬಿಗರ ಚೌಡಯ್ಯ ಒಂದು ವಿಧ, ಮಿಕ್ಕವರೇ ಒಂದು ವಿಧ. ಚೌಡಯ್ಯನಲ್ಲಿ ತಾತ್ವಿಕತೆಗಿಂತ ನೈತಿಕ ಮತ್ತು ಸಾಮಾಜಿಕ ವಿಚಾರಗಳು ಅಧಿಕ. ಹೀಗೆ ಲೋಕ ನೀತಿ ಸಮಾಜ ನೀತಿಗಳು ವಸ್ತುವಾದಲ್ಲಿ ಸಹಜವಾಗಿಯೇ ಸಾಹಿತ್ಯ ಬಂಡಾಯದ ಧ್ವನಿ ಪಡೆಯುತ್ತದೆ. ರಚನೆ ಸರಳತೆಗೆ ಹೊರಳುತ್ತದೆ. ಈ ಬಂಡಾಯಧ್ವನಿ ಸರಳತೆಗಳು ಈತನ ವಚನಗಳ ಮುಖ್ಯ ಲಕ್ಷಣವಾಗಿದೆ"[೪] ಎಂದಿರುವುದು ನೈಜವಾಗಿದೆ.

> **"ಅಡವಿಯ ಹೊಗಸಿತ್ತು, ನೀರಲದ್ದಿತ್ತು**
> **ಜಡೆಗಟ್ಟಿ ಭಸ್ಮದ ತೊಡಸಿತ್ತು**
> **ಹಿಡಿದೆತ್ತಿ ಕೇಶವ ಕೀಳಿಸಿತ್ತು**
> **ಹುಡಿ ಹುಚ್ಚುಗೊಳಿಸಿತ್ತು**
> **ಊರೊಳಗೆಲ್ಲ ಬೆಡಗಿನ ಮಾಯೆಗೆ**
> **ನಾಚುವೆನೆಂದ ಅಂಬಿಗರ ಚೌಡಯ್ಯ"**

**(ಅಂ. ಚೌ. ವ-೩)**

ಬೆಡಗಿನ ಮಾಯೆಗಂಜಿ ಜೀವನವನ್ನು ಎದುರಿಸದ ಹೇಡಿಗಳನ್ನು ಈತ ಮನ್ನಿಸುವುದಿಲ್ಲ. ನೀರಲ್ಲಿ ಮುಳುಗುವವರನ್ನು ಬೂದಿ ಬಳಿದು ಕೊಳ್ಳುವವರನ್ನು ತಲೆಗೊದಲ ಬೋಳಿಸಿಕೊಳ್ಳುವವರನ್ನು ಚೌಡಯ್ಯ ಮೆಚ್ಚುವುದಿಲ್ಲ.

> **"ಅಡವಿಯ ತೊಪ್ಪಲು ತರಿತಂದು ತಿಂದುಂಡು ವಡಲ ದುಡಿಸಿಕೊಂಡು**
> **ಪಡೆಗವಿಯೊಳಗೆ ತಪನ್ನೈದಿದೆನೆಂದು ಹಮ್ಮಿನಲಿ ನುಡಿವ ಅಣ್ಣಗಳು ಕೇಳಿಕೋ**
> **ಕ್ಷ್ಮೈಡರುಚಿಗಳು ಹುಟ್ಟಿಸಿದ ಶಿವನ ಕರುಣ ರಸದಲ್ಲಿ**
> **ಆ ರುಚಿಯ ಸುಖವಂ ಪಡುವುದಕ್ಕೆ**
> **ಹೊನ್ನು, ಹೆಣ್ಣು-ಮಣ್ಣು ಈ ತ್ರಿವಿಧ ಪದಾರ್ಥ ಹಿಡಿದು**
> **ಗುರುಲಿಂಗ ಜಂಗಮಕ್ಕೆ ನೀಡಿ ಮಾಡಿದೆನೆಂಬ ಷಡುರುಚಿಗೆ ಷಡ್ವಿಧ ಲಿಂಗಗಳುಂಟು**
> **ಅವಂ ನೋಡಿ ಎಚ್ಚತ್ತು ಸವಿಸವಿದರ್ಪಿಸಬಲ್ಲ ಮಹಾತ್ಮನು ತಾನೇನು ಜಡನಲ್ಲ!**
> **ಬಡವಲ್ಲೆಂದಾತ ನಮ್ಮ ಅಂಬಿಗರರ ಚೌಡಯ್ಯನು"**

**(ಅಂ. ಚೌ. ವ-೪)**

ಈ ವಚನದಲ್ಲಿ ಚೌಡಯ್ಯ, ಹೊನ್ನು ಹೆಣ್ಣು ಮಣ್ಣು, ಮಡದಿ ಮಕ್ಕಳು ಸಂಸಾರಗಳನ್ನು ನಿರಾಕರಿಸಿಲ್ಲ, ಅವುಗಳನ್ನು ನಿಭಾಯಿಸಿಕೊಂಡೆ ಗುರುಲಿಂಗ ಜಂಗಮಕ್ಕೆ ತೃಪ್ತಿ ಪಡಿಸಬಹುದು. ಸಂಸಾರದಲ್ಲಿ ಇರುವಾತ ಜಡಗಟ್ಟದೆ ಚಲನಶೀಲಗುಣವನ್ನು

---

೪. ಸಂಕೀರ್ಣ ವಚನ ಸಂಪುಟ-೧ ಪ್ರಸ್ತಾವನೆ, ಪುಟ: ೨೦.

ಪಡೆದುಕೊಳ್ಳುತ್ತಾನೆ ಎಂದು ಪ್ರತಿಪಾದಿಸಿರುವುದು, ಚೌಡಯ್ಯ ಸಂಸಾರದಲ್ಲಿಟ್ಟಿರುವ ಅಖಂಡ ವಿಶ್ವಾಸದ ಕುರುಹಾಗಿದೆ.

ದೇಹವನ್ನು ದಂಡಿಸುವುದು, ಉಪವಾಸ ಮಾಡುವುದು, ದುಡ್ಡಿನ ಆಸೆಗಾಗಿ ಎಲ್ಲವನ್ನು ಕಟ್ಟಿಟ್ಟು, ಸರಿಯಾಗಿ ಉಣ್ಣದೇ ಉಡದೇ ಇರುವುದನ್ನು ಈತ ಪುರಸ್ಕರಿಸುವುದಿಲ್ಲ. ದೇಹಕ್ಕೆ ಹೊತ್ತು ಹೊತ್ತಿಗೆ ಆಹಾರ ಕೊಡಲು ಸೂಚಿಸಿದ್ದಾನೆ. ನೋಡಿ:

"ದೇಹಾರವ ಮಾಡುವ ಅಣ್ಣಗಳಿರಾ!
ಒಂದು ತುತ್ತು ಆಹಾರವನ್ನಿಕ್ಕಿರಯ್ಯಾ
ದೇಹಾರಕ್ಕೆ ಆಹಾರವೇ ನಿಚ್ಚಣಿಗೆ;
ದೇಹಾರ ಮಾಡುತ್ತ ಆಹಾರವನಿಕ್ಕದಿರ್ದೊಡೆ
ಆಹಾರವಿಲ್ಲೆಂದ ಅಂಬಿಗರ ಚೌಡಯ್ಯ"

(ಅಂ. ಚೌ. ವಚನ-೫೦)

ಮಾನವನ ಶರೀರ ಅನ್ನವನ್ನೇ ಅವಲಂಬಿಸಿದೆ; ಅನ್ನ ನೀರು ಒದಗಿಸದೇ ಹೋದರೆ ಹೇಗೆ? ದೇಹವನ್ನು ದಂಡಿಸುವುದು ಸರ್ವಥಾ ಸಲ್ಲದು. ದೇಹಕ್ಕೆ ಆಹಾರವಿದ್ದರೇನೆ ಸರ್ವಕಾರ್ಯಗಳು ಸುರುಳಿತವಾಗಿ ಸಾಗಲು ಸಾಧ್ಯವಾಗುತ್ತದೆ. ಕಾರಣ ಸಮಸ್ತ ಚಟುವಟಿಕೆಗಳ ಕೇಂದ್ರ ಬಿಂದುವೇ ಶರೀರವಾಗಿದೆ. ಆ ಶರೀರಕ್ಕೆ ಆಹಾರ ನಿಚ್ಚಳಿಕೆಯಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಹೇಳಿರುವುದು ಆಹಾರ ಅವಶ್ಯಕತೆಯನ್ನು ಒತ್ತಿ ಹೇಳಿದಂತಾಗಿದೆ. ನಾವು ದಿನಂಪ್ರತಿ ಬಳಸುವ ಆಹಾರ ಪದಾರ್ಥಗಳಲ್ಲಿ ಪೂಜಾ ಸಾಮಗ್ರಿಗಳನ್ನು ಕಂಡುಕೊಂಡಿರುವುದು, ಚೌಡಯ್ಯ ಜೀವನ ಮತ್ತು ಜೀವನಾವಶ್ಯಕ ವಸ್ತುಗಳಿಗೆ ವಸ್ತುಗಳ ಪ್ರಾಮುಖ್ಯತೆಯ ದ್ಯೋತಕವಾಗಿದೆ. ನಿದರ್ಶನಕ್ಕೆ ನೋಡಿರಿ:

"ರೊಟ್ಟಿ ಎಂಬುದೇ ಜಾಗಟಿ
ಮೆಣಸಿನಕಾಯಿ ಎಂಬುದೇ ಗುಣಕ!
ಈರುಳ್ಳಿಯೆಂಬುದೇ ತೀರ್ಥಗಿಂಡಿ!
ಬದನೆಕಾಯಿಯೇ ಲಿಂಗ!
ಹರಕಾಗಲಿ ಮುರುಕಾಗಲಿ ಎಣ್ಣೆಹೋಳಿಗೆಯೇ ಲೇಸು
ಉದುರ ಅನ್ನ, ತುಪ್ಪ, ತಟ, ತಟಗು ಸಾರು
ತೃಷಾತುರಿಯೆಂದ ನಮ್ಮ ಅಂಬಿಗರ ಚೌಡಯ್ಯ" (ಅಂ. ಚೌ. ವ-೭೪)

ಇದೊಂದು ವಿನೂತವಾದ ಕಲ್ಪನೆ! ಊಟದ ವಸ್ತುಗಳು ಪೂಜಾಪರಿಕದ ಪಾವಿತ್ರ್ಯವನ್ನು ಸಂಪಾದಿಸಿವೆ. ಇದು ಅಂಬಿಗರ ಚೌಡಯ್ಯ ಜೀವನದಲ್ಲಿ ಇಟ್ಟಿರುವ ಅದಮ್ಯ ವಿಶ್ವಾಸಕ್ಕೆ ಮತ್ತೊಂದು ಉದಾಹರಣೆಯಾಗಿದೆ.

ಜಾತಿಗಳು ಹುಟ್ಟಿನಿಂದ ಬರದೆ, ಅವರವರ ನಡೆ-ನುಡಿ, ಆಚಾರ-ವಿಚಾರ, ಮಾಡುವ ಕಾಯಕ, ನೀಡುವ ದಾಸೋಹ ಮುತಾದವುಗಳಿಂದ ನಿರ್ಧರಿತವಾಗುತ್ತವೆ. ಹೊಲೆಯರು ಹುಟ್ಟಿನಿಂದ ಹೊಲೆಯರಲ್ಲ. ಅದಕ್ಕಾಗಿ ಚೌಡಯ್ಯನು-

"ಹೊಲೆಯ-ಹೊಲೆಯ ಎಂದೆಡೆ ಹೊಲೆಯರೆಂತಪ್ಪರಯ್ಯ
ಹೊಲೆಯ ಹೊರಕೇರಿಯಲ್ಲಿರುವವರು;
ಊರೊಳಗೆ ಇಲ್ಲವೇನಯ್ಯಾ ಹೊಲೆಯರು?

ತಾಯಿಗೆ ಬೈದವನೇ ಹೊಲೆಯ;
ತಂದೆಗೆ ಎದುರುತ್ತರ ಕೊಟ್ಟವನೆ ಹೊಲೆಯ!
ಕೊಡುವ ಹಣಕ್ಕೆ ಅಡ್ಡ ಬಂದವನೆ ಹೊಲೆಯ!
ದಾರಿಗೆ ಮುಳ್ಳು ಹಚ್ಚಿದವನೇ ಹೊಲೆಯ!
ಸಾತ್ವಿಕನ ಕುತ್ತಿಗೆ ಕೊಯ್ದವನೆ ಹೊಲೆಯ!
ಹತ್ತು ಆಡಿದರೆ ಒಂದೂ ನಿಜವ ನುಡಿಯದವನೇ ಹೊಲೆಯ!
ಅರ್ಥಕ್ಕೆ ಪ್ರಾಣಹತ್ಯೆ ಮಾಡುವಾತನೇ ಹೊಲೆಯ!
ನಿಂದೆಯ ಮಾಡುವಾತನೇ ಹೊಲೆಯ!
..........................................................
ಇಂತಪ್ಪ ಹೊಲೆಯರು ಊರತುಂಬ ಇರಲಾಗಿ
ಹೊರಕೇರಿಯವರಿಗೆ ಹೊಲೆಯರೆನಬಹುದೆ?"

(ಅಂ. ಚೇ. ವ-೮೫)

ಇದೊಂದು ಹೊಚ್ಚ ಹೊಸತಾದ ವ್ಯಾಖ್ಯಾನವಾಗಿದೆ. ಬಸವಣ್ಣವರು ಹೇಳಿದ 'ಕೆಲ್ಲುವವನೇ ಮಾದಿಗ, ಹೊಲಸು ತಿಂಬುವವನೆ ಹೊಲೆಯ' ಎಂಬುದಕ್ಕೆ ಈ ವಚನ ಸಂವಾದಿಯಾಗಿದೆ. ಈ ವಚನದಲ್ಲಿ ಚೌಡಯ್ಯ ಎತ್ತಿರುವ ಪ್ರಶ್ನೆ ಮೂಲಭೂತವಾದದ್ದು, ಪ್ರತಿಯೊಬ್ಬರು ತಮ್ಮನ್ನು ತಾವೇ ಆತ್ಮ ವಿಮರ್ಶೆಗೆ ಒಡ್ಡಿಕೊಂಡರೆ, ಒಂದಿಲ್ಲ ಒಂದು ರೀತಿಯಲ್ಲಿ ಎಲ್ಲರು ಹೊಲೆಯರೆ ಆಗುತ್ತಾರೆಂಬುದಲ್ಲಿ ಸಂದೇಹವೇ ಇಲ್ಲ. ಚೌಡಯ್ಯ ಶುದ್ಧಾಂಗ ಬದುಕಿಗೆ ಹಾತೊರೆದ ವ್ಯಕ್ತಿ. ಜನ-ಜನರ ನಡುವೆ ಎದ್ದಿರುವ ಜಾತಿ-ಮತದ ಗೋಡೆಗಳನ್ನು ಒಡೆಯ ಹೊರಟಿರುವ ವ್ಯಕ್ತಿ. ವ್ಯಕ್ತಿಯ ಬದುಕಿಗೆ ತೀವ್ರವಾಗಿ ಸ್ಪಂಧಿಸಿದವನೀತ. ಎಲ್ಲ ದೃಷ್ಟಿಯಿಂದಲೂ ಬದುಕು ಅಪ್ಯಾಯಮಾನವಾಗಿರಬೇಕೆಂದು ಬಯಸಿದಾತ. ಇಂಥ ವ್ಯಕ್ತಿಗಳು ಜಾತಿಗಳನ್ನೆಂದು ಪುರಸ್ಕರಿಸುರುದಿಲ್ಲ! ಸಮಾನತೆಗಾಗಿ ಪ್ರಯತ್ನಿಸುತ್ತಾರೆ.

ಸದ್ಗುಣಿಗಳು ದೇವರ ಪ್ರೀತಿಗೆ ಪಾತ್ರರಾಗುತ್ತಾರೆ. ದೇವರಿಗೆ ಜಾತಿ ಮುಖ್ಯವಲ್ಲ, ವ್ಯಕ್ತಿಯ ಕಾರ್ಯ ಮುಖ್ಯವಾದುದು "ಬೇಡಂಗೆ, ಜೇಡಂಗೆ, ಡೋಹರಂಗೆ, ಹೊಲೆಯರಿಗೆ ರೂಢೀಗೀಶ್ವರನೊಲಿದಾ ನೋಡಾ" (ವ-೬೧) ಎನ್ನುವುದರ ಹಿನ್ನೆಲೆಯುನ್ನು ಅರಿತುಕೊಳ್ಳಬೇಕು.

ಇಲ್ಲಿ ಹೊಲೆಯರೆಂದರೆ ಹೊಲೆಯರಲ್ಲ, ಇವರದು ದುಡಿಯುವ ವರ್ಗ, ಈ ಕಾರ್ಮಿಕರು ಯಾವುದೇ ಸಮಾಜದ ಆಧಾರಸ್ತಂಭಗಳಾಗಿರುತ್ತಾರೆ. ಇವರು ಇರದೇ ಹೋಗಿದ್ದರೆ, ಸಮಾಜದಲ್ಲಿ ಎಂಥ ಏರು-ಪೇರುಗಳಾಗುತ್ತಿದ್ದವು? ಯಾವ ಕಾಯಕಗಳೂ ಮೇಲಲ್ಲ. ಯಾವು ಕೀಳಲ್ಲ ಎಲ್ಲವೂ ಸರಿಸಮಾನವಾದವುಗಳಾಗಿವೆ. ಒಂದು ಸಮಾಜದ ಸರ್ವಾಂಗೀಣ ಪ್ರಗತಿಗೆ ಎಲ್ಲ ಕಾಯಕಗಳೂ ಅತ್ಯಾವಶ್ಯಕವಾಗಿವೆ. ತಮ್ಮ ಕುಲ ಹೆಚ್ಚು ತಮ್ಮ ಕುಲ ಮೇಲೆಂದು ಬಡಿದಾಡುವವರನ್ನು ಈತ ಖಂಡಿಸಿದ್ದಾನೆ.

"ನನ್ನ ಕುಲ ಹೆಚ್ಚು ನಿನ್ನ ಕುಲ ಕಡಿಮೆ ಎಂದು
ಬಡಿದಾಡುವ ಕುನ್ನಿ ನಾಯಿಗಳ ಮೋರೆಯ ಮೇಲೆ
ನಮ್ಮ ಪಡಿಹಾರಿ ಉತ್ತಣ್ಣಗಳ ವಾಮಪಾದುಕೆಯ ತಕ್ಕೊಂಡು

ಇವರ ಅಂಗುಳ ಮೆಟ್ಟಿ ಪಟ-ಪಟ ಹೊಡಿಯೆಂದಾತ
ನಮ್ಮ ದಿಟ್ಟ ಧೀರ ಅಂಬಿಗರ ಚೌಡಯ್ಯ ನಿಜ ಶರಣನು"

(ಅಂ. ಚೌ. ವ-೭೮)

ಕುಲ-ಕುಲವೆಂದು ಬಡಿದಾಡುವವರಿಗೆ ಈ ವಚನ ಚಾಟಿ ಏಟಾಗಿದೆ. ಎಲ್ಲ ಕಾಲದ, ಎಲ್ಲ ಸಮಾಜದ, ಬಹುಸಂಖ್ಯಾತರ ಆಶಯವನ್ನು ಈ ಕೆಳಗಿನ ವಚನದಲ್ಲಿ ಚೌಡಯ್ಯ ಸ್ವಾರಸ್ಯಕರವಾಗಿ ಪ್ರತಿಪಾದಿಸಿದ್ದಾನೆ.

"ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ,
ಉಡಲಾದರೆ ಇಡುವ ಚಿಂತೆ, ಇಡಲಾದರೆ ಹೆಂಡಿರ ಚಿಂತೆ,
ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ,
ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ,
ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು
ಶಿವನ ಚಿಂತೆಯಲ್ಲಿದ್ದವರೊಬ್ಬರನೂ ಕಾಣೆನಾಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣನು"

(ಅಂ. ಚೌ. ವ-೯೮)

ಇಡೀ ಮಾನವ ಜನಾಂಗಕ್ಕೆ ಬರೆದ ಭಾಷೆಯಿದು. ವಿಶ್ವದ ಎಲ್ಲ ಮಾನವರಿಗೂ ಇದು ಅನ್ವಯಿಸುತ್ತದೆ. ಸಾರ್ವಕಾಲೀಕ ಸತ್ಯವನ್ನು ಚೌಡಯ್ಯ ಈ ವಚನದಲ್ಲಿ ದಾಖಲಿಸಿರುವುದನ್ನು ಗುರುತಿಸಬಹುದಾಗಿದೆ. ಒಟ್ಟಿನಲ್ಲಿ "ಆದ್ಯ ವಚನಕಾರರ ಪರಂಪರೆಯನ್ನು ಒಪ್ಪಿಕೊಳ್ಳುತ್ತಲೇ ಸಂಪ್ರದಾಯವನ್ನು ಅಲ್ಲಗಳೆಯುವ ವೀರಶೈವ ಧರ್ಮದಲ್ಲಿದ್ದು ಕೊಂಡೇ ಅದರ ಶಾಸ್ತ್ರ ಗುಣಗಳನ್ನು ವಿಡಂಬಿಸುವ ಅಂಬಿಗರ ಚೌಡಯ್ಯ ನಿಜವಾದ ಬಂಡಾಯಗಾರನಾಗುತ್ತಾನೆ. ಉಳಿದ ವಚನಕಾರರಂತೆ ಚೌಡಯ್ಯ ವಚನ ಚಳುವಳಿಗೆ ಬದ್ಧನಾಗಿದ್ದರೂ ಅಲ್ಲಿಯ ಲೋಪ-ದೋಷಗಳನ್ನೂ ಎತ್ತಿ ಹೇಳುವುದರ ಮೂಲಕ ಭಿನ್ನವಾಗಿ ಕಾಣುತ್ತಾನೆ."[೨] ಎಂದಿರುವ ಡಾ॥ ಬಸವರಾಜ ಸಬರದರ ಮಾತುಗಳು ಸಮಂಜಸವಾಗಿವೆ.

❑

೨. ಅನ್ವೇಷಣೆ, ವಿಶೇಷ-ಸಂಚಿಕೆ-೧೯೮೬

# ಮಹಾಮೌಲ್ಯ 'ದಾಸೋಹ'

'ದಾಸೋಹ'ವು ಮೇಲುನೋಟಕ್ಕೆ 'ದಾನ'ದ ಸಮಾನಾರ್ಥಕ ಪದವೆಂದು ಕಂಡುಬಂದರೂ ಆಂತರ್ಯದಲ್ಲಿ ಹಾಗಿಲ್ಲ. ದಾನ ಮತ್ತು ದಾಸೋಹ ಎರಡು ಪದಗಳಲ್ಲಿ ಸಾಕಷ್ಟು ವ್ಯತ್ಯಾಸವಿದೆ. ದಾನಕ್ಕಿಂತಲೂ ವ್ಯಾಪಕ ಹಾಗೂ ವಿಶಿಷ್ಟ ಅರ್ಥವು 'ದಾಸೋಹ'ದಲ್ಲಿ ಹುದುಗಿದೆ."ನಾವು ದೇವರ ಭಕ್ತನೆಂಬ ಭಾವನೆ, ಈ ಭಾವನೆಯಿಂದ ನಡೆಸುವ ಅನ್ನಛತ್ರ, ಭಿಕ್ಷಾವೃತ್ತಿ ಸೇವಾವೃತ್ತಿ"[೧] ಮುಂತಾದ ಅರ್ಥಗಳು ನಿಘಂಟಿನಲ್ಲಿವೆ. ದಾಸೋಹದಲ್ಲಿ ವ್ಯಕ್ತಿ ಗಿಂತಲೂ ಸಮಾಜಕ್ಕೆ ಹೆಚ್ಚು ಪ್ರಾಶಸ್ತ್ಯವಿದೆ. ಒಂದು ವರ್ಗ ಒಂದು ಜನತೆಯ ಹಿತಾಸಕ್ತಿಗಳಿಗಿಂತಲೂ ಎಲ್ಲ ವರ್ಗದ ಎಲ್ಲ ಜನತೆಯ ಹಿತಾಸಕ್ತಿ ದಾಸೋಹದಲ್ಲಿಡಗಿದೆ. ಮಾಡುವ ಸೇವೆಯ ಬಹುಪಾಲು ಜನತೆಗೆ ತಲುಪಬೇಕು ಎನ್ನುವ ಕಳಕಳಿಯು ಇದರಲ್ಲಿದೆ. ಡಾ॥ ಎಂ.ಎಂ.ಕಲಬುರ್ಗಿಯವರು "ಶೋಷಣೆ ರೂಪದ ದಾನ ವ್ಯವಸ್ಥೆಯನ್ನು ಸದೆಬಡೆಯಲು ದಾಸೋಹತತ್ತ್ವವನ್ನು ಶರಣರು ಅನುಷ್ಠಾನಕ್ಕೆ ತಂದರು"[೨] ಎಂದು ಹೇಳಿದ್ದಾರೆ. ಮುಂದುವರಿದು ಐತಿಹಾಸಿಕ ಅಗತ್ಯದ ಸೃಷ್ಟಿಯಾಗಿ ದಾಸೋಹ ತತ್ತ್ವ ಹುಟ್ಟಿಕೊಂಡಿತೆಂದು ವಿವರಿಸುತ್ತ "ವರ್ಗ-ವರ್ಣ ರಹಿತವಾದ ಭಕ್ತ ಸಮಾಜ (ಜಂಗಮ)ದಲ್ಲಿ ಮುಕ್ತವಾಗಿ ನಡೆಯುವ ವಿನಿಮಯ ಕ್ರಿಯೆಯಾಗಿದೆ"[೩] ಎಂದು ವ್ಯಾಖ್ಯಾನಿಸಿದ್ದಾರೆ. ಶಿವಶರಣರು ಈ 'ದಾಸೋಹ' ವೆಂಬ ಪದವನ್ನು ಪ್ರಥಮಬಾರಿಗೆ ಪ್ರತಿಪಾದಿಸಿದರೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

'ದಾನ'ವು ಪ್ರತಿಷ್ಠಿತವಾದ ಮೇಲ್ವರ್ಗವು ಒಂದು ವಿಶಿಷ್ಟ ವರ್ಗದ ಜನತೆಗೆ ನೀಡುವುದಾಗಿದೆ. ಅಂದರೆ ಚಕ್ರವರ್ತಿಗಳು, ಮಹಾಮಂಡಳೇಶ್ವರರು, ಮಂಡಳೇಶ್ವರರು, ಸಾಮಂತರು ಮುಂತಾದ ಆಳುವ ವರ್ಗವು ಎಲ್ಲಾ ಜಾತಿಯಲ್ಲಿರುವ 'ಪುರೋಹಿತ' ವರ್ಗಕ್ಕೆ ಕೊಡುವ ಆರ್ಥಿಕ ನೆರವಾಗಿದೆ. ಅದು ಅಗ್ರಹಾರ ದತ್ತಿ, ಉಂಬಳಿ, ಜಹಗೀರಿ ಇತ್ಯಾದಿಯಾಗಿ ಬೇರೆ ಬೇರೆ ರೂಪದಲ್ಲಿ ಇರಬಹುದಾಗಿದೆ. ಇದರಿಂದ ಸ್ಪಷ್ಟವಾಗಿ ಕಂಡು ಬರುವ ಅಂಶವೆಂದರೆ 'ದಾನ'ದಲ್ಲಿ ಬಹುಸಂಖ್ಯಾತರ ಆಶೋತ್ತರಗಳಿರುವುದಿಲ್ಲ. ಅಷ್ಟೇ ಅಲ್ಲ. ಸಮಸ್ತ ಸಮಾಜದ ಏಳಿಗೆಯ ಕಡೆಗೆ ಇದರ ಲಕ್ಷ್ಯವಿರುವುದಿಲ್ಲ. ಪುರೋಹಿತವರ್ಗವನ್ನು ಸಂಪ್ರೀತಗೊಳಿಸುತ್ತ, ಇತರರನ್ನು ಶೋಷಣೆಗೆ ಒಳಪಡಿಸುವುದೇ ದಾನದ ಉದ್ದೇಶವಾಗಿದೆ. ಆದರೆ ದಾಸೋಹ ಒಂದು ಸಮಾಜದಲ್ಲಿಯ ಸಮಸ್ತ ಜನತೆಯ ಹೀತಾಸಕ್ತಿಯನ್ನು ಕಾಪಾಡುತ್ತದೆ. ಹಣ, ಹೆಸರು, ಕೀರ್ತಿ, ಪ್ರಚಾರ ಮೊದಲಾದ ಸ್ವಾರ್ಥ ಭಾವನೆಗಳಿಗಿಂತಲೂ ಸೇವಾಭಾವನೆಯೇ ಇದರಲ್ಲಿ ಮುಖ್ಯವಾಗಿರುತ್ತದೆಯೆಂಬುದು ಗಮನಿಸಬೇಕಾದ ಅಂಶವಾಗಿದೆ.

"ದಾನ" ಕ್ರಿಯೆಯೆಂಬುದು ಒಂದು ವಸ್ತುವಿನ ಮೇಲಿನ ತನ್ನ ಹಕ್ಕನ್ನು ಇನ್ನೊಬ್ಬರಿಗೆ ಬಿಟ್ಟು ಕೊಡುವುದಾಗಿದೆ. ಅಲ್ಲಿ ಆ ವಸ್ತು ಒಬ್ಬನ ಹಕ್ಕಿಗೆ ಹೊರಗಾಗಿ ಇನ್ನೊಬ್ಬನ ಹಕ್ಕಿಗೆ ಒಳಗಾಗುತ್ತದೆ. ಈಗ ನನ್ನ ಹಕ್ಕನ್ನೂ ಬಿಟ್ಟುಕೊಟ್ಟೆನೆಂಬ "ಅಹಂಭಾವ' ದಾತೃಗೆ, ನನಗೆ

---

೧. ಕಸ್ತೂರಿ ಕೋಶ (೪ನೆಯ ಮುದ್ರಣ೦೧೯೮೩) ಪುಟ-೪೯೬

೨. ಮಾರ್ಗ ಸಂ-೧ (೧೯೮೮) ಪುಟ-೨೯೯

ಹಕ್ಕು ಬಿಟ್ಟು ಕೊಟ್ಟನೆಂಬ 'ದಾಸ್ಯಭಾವ' ಯಾಚಕನಿಗೆ ಉಂಟಾಗಾವುದು ಸಹಜ. ಈ ಉಭಯ ಭಾವಸೂತಕಗಳಿಲ್ಲದೆ ಜರಗುವ ವಿನಿಮಯ ಕ್ರಿಯೆಯೇ ದಾಸೋಹ. ಇಲ್ಲಿ ಕೊಡುವ ವಸ್ತುವಿನ ಮೇಲೆ ನನ್ನ ಹಕ್ಕೂ ಇಲ್ಲ, ನಿನ್ನ ಹಕ್ಕೂ ಇಲ್ಲ. ಶಿವನ ಹಕ್ಕು ಇದೆಯೆಂಬ ಭಾವದಿಂದ ಕೊಡು-ಕೊಳ್ಳುವಿಕೆ ನಡೆಯುತ್ತದೆ. ಅಂದರೆ ಶಿವ ನಮಗೆ ನೀಡಿದುದು ದಾನ; ನಾವು ಪರಸ್ಪರ ವಿನಿಯೋಗಿಸುವುದು ದಾಸೋಹ"[೪] ಎಂದು ಡಾ|| ಎಂ. ಎಂ. ಕಲಬುರ್ಗಿಯವರು ದಾನ ಮತ್ತು ದಾಸೋಹಕ್ಕಿರುವ ನಿರ್ದಿಷ್ಟವಾದ ವ್ಯತ್ಯಾಸವನ್ನು ಬಹಳ ಅರ್ಥಪೂರ್ಣವಾಗಿ ಬಿಡಿಸಿದ್ದಾರೆ. ಮುಂದುವರೆದು 'ದಾನ'ಕ್ಕೆ ಎದುರಾಗಿ ಹುಟ್ಟಿಕೊಂಡ ಅನಿವಾರ್ಯ ತತ್ವ! 'ದಾಸೋಹ' ವೆಂದು ಪ್ರತಿಪಾದಿಸುತ್ತ "ಪುರೋಹಿತರಿಗೆ ಮಾತ್ರ ನೀಡುವುದರ ಮೂಲಕ ದೇವರನ್ನು ತೃಪ್ತಿ ಪಡಿಸಬೇಕೆಂಬ ಭಾವ ನಿಂತು, ಪ್ರಜೆಗಳಿಗೆ ನೀಡುವುದರ ಮೂಲಕ ದೇವರನ್ನು ತೃಪ್ತಿಪಡಿಸುವ ಹೊಸತತ್ವ ತೆರೆದುಕೊಂಡಿತು. ಲಿಂಗದ ಮುಖ 'ಜಂಗಮ' ವೆಂದರೆ 'ಪುರೋಹಿತವರ್ಗ' ವೆಂಬ ಪರಂಪರಾಗತವಾದ ಶೈವವಾದ ಅಳಿದು, ಲಿಂಗದ ಮುಖ 'ಜಂಗಮ' ವೆಂದರೆ 'ಸಮಾಜ' ವೆಂಬ ಪ್ರಗತಿಪರ ವೀರಶೈವವಾದ ಬೆಳೆಯಿತು"[೫] ಎಂದು ವಿವರಿಸಿದ್ದಾರೆ. ಈ ಮಾತು 'ದಾಸೋಹ'ದ ಮೇಲೆ ಹೊಸಬೆಳಕು ಚೆಲ್ಲುತ್ತದೆ. ಮೊದಲಿನ ಸೀಮಿತ ಅರ್ಥಕ್ಕೆ ಬದಲಾಗಿ ವ್ಯಾಪಕವಾದ ಅರ್ಥ ಲಭಿಸಿ, ಹಲವು ಒಳನೋಟಗಳು ಇದರಿಂದ ದೊರೆತಿವೆ.

**ವಚನಕಾರರು ಪ್ರತಿಪಾದಿಸಿದ ದಾಸೋಹ:**

ಸಮಾಜ ಸುಧಾರಣೆಗಾಗಿ ಬಹುಜನೋಪಯೋಗಿ ಕಾರ್ಯಗಳಿಗೆಂದು ಸಾರ್ವಜನಿಕ ಕೆಲಸಗಳಿಗೆ ಉದಾರವಾಗಿ ನೀಡಬೇಕೆಂಬುದು ವಚನಕಾರರ ಅಭಿಪ್ರಾಯವಾಗಿದೆ. ಹತ್ತನೆಯ ಶತಮಾನದಲ್ಲಂತೂ 'ವೀರ' ಮತ್ತು 'ದಾನ'ಗಳೆರಡೂ ಮಹಾಮೌಲ್ಯಗಳಾಗಿ ಪರಿಗಣಿಸಲ್ಪಟ್ಟಿದ್ದವು. ಅಂದಿನ ಪಂಪ ರನ್ನ ಮುಂತಾದವರ ಪ್ರಾಚೀನ ಕವಿಗಳ ಮಾರ್ಗಕಾವ್ಯದಲ್ಲಿ 'ಬೀರ-ಚಾಗ'ದ ಪ್ರಸ್ತಾಪ ಪದೇ ಪದೇ ಬಂದಿರುವುದನ್ನು ಗಮನಿಸಬಹುದಾಗಿದೆ. ಅದ್ಯ ವಚನಕಾರ 'ಜೇಡರ ದಾಸಿಮಯ್ಯ' ನಂತೂ ಪ್ರಕೃತಿಯ ವಸ್ತುಗಳೆಲ್ಲವೂ ದೇವರು ಕೊಟ್ಟ ದಾನವೇ ಆಗಿವೆಯೆಂದು ಹೇಳುತ್ತಾನೆ.

> **"ಇಳೆ ನಿಮ್ಮದಾನ ಬೆಳೆ ನಿಮ್ಮ ದಾನ**
> **ಸುಳಿದು ಬೀಸುವ ಗಾಳಿ ನಿಮ್ಮ ದಾನ[೬]**

ಎಂದು ಹೇಳಿ, ಅವುಗಳನ್ನು ಇತರರೊಡನೆ ಹಂಚಿಕೊಳ್ಳಬೇಕೆಂದು ಸೂಚಿಸುತ್ತಾನೆ. ಮಹಾನ್ ಕ್ರಾಂತಿಯ ರೂವಾರಿಗಳಾದ ಬಸವಣ್ಣನವರು-"ಸರ್ವದರಲ್ಲೂ ದಾಸೋಹವೇ ಬೇಕು. ಈ ದಾಸೋಹ ಅನುವ ಕೂಡಲಸಂಗಮಯ್ಯ ತಾನೇ ಬಲ್ಲ"[೭] ಎಂದು ಹೇಳಿರುವುದು ದಾಸೋಹಕ್ಕಾಗಿ ಕೊಟ್ಟ ಕರೆಯಾಗಿದೆ. ಸಮಾಜಸುಧಾರಕ ಸಮಾಜದ ವೈದ್ಯನೆಂದು ಪ್ರಸಿದ್ಧನಾದ ಸರ್ವಜ್ಞನೂ ಕೂಡ "ಕೊಟ್ಟದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ,

---

೪.ಮಾರ್ಗ ಸಂ:೧, ಪುಟ; ೩೦೧

೬. ಆದ್ಯ ವಚನಕಾರ ದೇವರ ದಾಸಿಮಯ್ಯ, ಪುಟ:೩೩

೭. ಬಸವಣ್ಣನವರ ಷಟ್‌ಸ್ಥಳ ವಚನಗಳು, ವ-೯೭೮; ಪುಟ-೨೫೯

ಕೊಟ್ಟದ್ದು ಕೆಟ್ಟಿತೆನಬೇಡ ಮುಂದೆ ಕಟ್ಟಿಹುದು ಬುತ್ತಿ"[೮] ಎಂದು ಹೇಳುವುದರ ಮೂಲಕ ದಾಸೋಹ ನೀಡಲು ಪ್ರೋತ್ಸಾಹಿಸಿದ್ದಾನೆ.

ಧನ-ದಾನ್ಯ, ಆಸ್ತಿ-ಅಂತಸ್ತು, ಸಂಪತ್ತು-ಅಧಿಕಾರಗಳು ಎಷ್ಟಿದ್ದರೇನು? ಇಲ್ಲಿಂದ ಹೋಗುವಾಗ ಅವು ನಮ್ಮೊಂದಿಗೆ ಬಿರುತ್ತವೆಯೇ? ಅಥವಾ ಅವೆಲ್ಲವುಗಳನ್ನು ಹೊತ್ತಕೊಂಡು ಹೋಗುವುದುಂಟೆ? ನಮ್ಮಲ್ಲಿ ಹೇರಳವಾಗಿರುವಾಗ ಅದನ್ನೂ ಹತ್ತಾರು ಜನರೊಂದಿಗೆ ಹರಿದು ಹಂಚಿಕೊಳ್ಳಬೇಕು. ಅದನ್ನು ಬಿಟ್ಟು-

**"ಆಯುಷ್ಯವುಂಟು, ಪ್ರಳಯವಿಲ್ಲವೆಂದು ಅರ್ಥವ ಮಡಗುವಿರಿ**
**ಆಯುಷ್ಯವು ತೀರಿ ಪ್ರಳಯವು ಬಂದರೆ ಅರ್ಥವ ನಂಬುವಿರಲ್ಲಾ!**
**ನೆಲನಗೆದು ಮಡಗದಿರಾ: ನೆಲ ನುಂಗಿದೊಡುಗುಳುವುದೇ?**
**ಕಣ್ಣಿನಲ್ಲಿ ನೋಡಿ, ಮಣ್ಣಿನಲ್ಲಿ ನೆರಡಿ, ಉಣ್ಣದೆ ಹೋಗದಿರಾ!**
**ನಿನ್ನ ಮಡದಿಗಿರಲೆಂದರೆ ಮಡದಿಯ ಕೃತ್ಯ ಬೇರೆ:**
**ನಿನ್ನೊಡಲು ಕೆಡೆಯಲು ಮತ್ತೊಬ್ಬನಲ್ಲಿ ಗಡಕದೆ ಮಾಣ್ಬಳೆ?**
**ಕೂಡಲ ಸಂಗನ ಶರಣರಿಗೆ ಸವಿಸುವುದು"[೯]**

ಬಸವಣ್ಣನವರ ಈ ವಚನವು ಭ್ರಮಾಲೋಕದಲ್ಲಿ ವಿಹರಿಸುವವರನ್ನು ತರಾಟೆಗೆ ತೆಗೆದುಕೊಂಡಿದೆ. ವಾಸ್ತವತೆಯನ್ನು ಅರಿಯಲು ಪ್ರೇರೆಪಿಸುತ್ತದೆ. ಕೂಡು-ಕೊಡಿಸಿಟ್ಟು ಬೇರೊಬ್ಬರಿಗೆ ಬಿಟ್ಟು ಹೋಗುವುದಕ್ಕಿಂತಲೂ ಸಂಗನ ಶರಣರಿಗೆ ಸಮರ್ಪಿಸುವುದು ಯೋಗ್ಯವೆಂದು ಬಸವಣ್ಣನವರು ಹೇಳಿದ್ದಾರೆ. ಇದು ದಾಸೋಹಗೈಯ್ಯಲು ಅವರು ಕೊಟ್ಟ ಸೂಚನೆಯೇ ಆಗಿದೆ.

**ತ್ರಿವಿಧ ದಾಸೋಹ:**

'ದಾಸೋಹ' ವು ಹನ್ನೆರಡನೆಯ ಶತಮಾನದಲ್ಲಿ ಶಿವಶರಣರಿಂದ ಬಳಕೆಗೆ ಬಂತು, ಹಾಗೆಯೇ ತ್ರಿವಿಧ ದಾಸೋಹವು ಸಹ ವಚನಕಾರಿರಂದಲೇ ಆವಿಷ್ಕಾರಗೊಂಡಿರುವ ಮತ್ತೊಂದು ಪಾರಿಭಾಷಿಕ ಪದವಾಗಿದೆ.

ವಚನಕಾರರು ತ್ರಿವಿಧ ದಾಸೋಹಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ. ತ್ರಿವಿಧ ದಾಸೋಹವೆಂದರೆ 'ತನು ಮನ ಧನ' ಗಳಿಂದ ನೀಡುವುದಾಗಿದೆ.

**ಅಕ್ಕ:**

**"ತನುವಿಡಿದು ದಾಸೋಹವ ಮಾಡಿ......**
**ಮನವಿಡಿದು ದಾಸೋಹವ ಮಾಡಿ.......**
**ಧನವಿಡಿದು ದಾಸೋಹವ ಮಾಡಿ....."[೧೦]**

**ಅಲ್ಲಮ:**

**"ತನುವ ದಾಸೋಹಕ್ಕೆ ಸವೆಸಿ**

---

೮. ಸರ್ವಜ್ಞನ ವಚನಗಳು, ವ-೩೩; ಪುಟ-೯

೯. ಬಸವಣ್ಣನವರ ಷಟ್‌ಸ್ಥಳ ವಚನಗಳು, ವ-೨೦೪; ಪುಟ-೫೨

೧೦. ಮಹಾದೇವಿಯಕ್ಕನ ವಚನಗಳು, ಸಂ: ಡಾ|| ಆರ್. ಸಿ. ಹಿರೇಮಠ, ವ-೨೦೭, ಪುಟ-೫೦೩

ಮನವ ಲಿಂಗಧ್ಯಾನದಲ್ಲಿ ಸವೆಸಿ
ಧನವ ಕೊಟ್ಟು ಜಂಗಮವನೊಲಿಸಬೇಕು"[೧೧]

ಬಸವಣ್ಣ:

"ತನುವ ಕೊಟ್ಟು ಗುರುವನೊಲಿಸಬೇಕು
ಮನವ ಕೊಟ್ಟು ಲಿಂಗವನೊಲಿಸಬೇಕು
ಧನವ ಕೊಟ್ಟು ಜಂಗಮವನೊಲಿಸಬೇಕು"[೧೨]

ಈ ಉದಾಹರಣೆಗಳಿಂದ ಕೇವಲ ತನುವಿನಿಂದಾಗಿ ಅಥವಾ ಕೇವಲ ಮನದಿಂದಾಗಲಿ,ಇಲ್ಲವೆ ಕೇವಲ ಧನದಿಂದಾಗಲಿ 'ದಾಸೋಹ'ದ ಕಾರ್ಯಕೈಗೊಂಡರೆ ಅದು ಪರಿಪೂರ್ಣವೆನಿಸುವುದಿಲ್ಲ. ಅದ್ದಕಾಗಿ ಏಕಕಾಲಕ್ಕೆ ತ್ರಿವಿಧ ದಾಸೋಹ ಕೈಗೊಳ್ಳಬೇಕೆಂದು ಹೇಳಿದ್ದಾರೆ. ಅದು ಅಲ್ಲದೆ, ತನುವನ್ನು ಗುರುವಿಗೆ, ಮನವನ್ನು ಲಿಂಗಕ್ಕೆ, ಧನವನ್ನು ಜಂಗಮಕ್ಕೆ ಕೊಡಬೇಕೆಂದು ಹೇಳುವಲ್ಲಿ ಯಾವುದನ್ನು ಯಾವುದಕ್ಕೆ ಸಲ್ಲಿಸಬೇಕೆನ್ನುವ ನಿರ್ದೇಶನವನ್ನು ನೀಡಿದ್ದಾರೆ. 'ಚೆನ್ನಬಸವಣ್ಣ'ನವರಂತೂ ಇನ್ನೂ ಮುಂದುವರೆದು ಹೇಳುತ್ತಾರೆ-

"ಧನವ ಕೊಟ್ಟೊಡೆ ದಾನಿಯಾದ
ತನುವ ಕೊಟ್ಟೊಡೆ ವೀರನಾದ
ಮನವ ಕೊಟ್ಟೊಡೆ ವಶಿಯಾದ
ತ್ರಿವಿಧದಿಂದ ಹೊರಗೆ ಕೊಡಬಲ್ಲಡೆ
ಕೂಡಲ ಚೆನ್ನಸಂಗಯ್ಯನಲ್ಲಿ ಲಿಂಗೈಕ್ಯವು"[೧೩]

ಈ ವಚನದಲ್ಲಿ ಚೆನ್ನಬಸವಣ್ಣನವರು- ತನು ಮನ ಧನಗಳಿಂದ ಅರ್ಪಿಸುವುದು ತ್ರಿವಿಧ ದಾಸೋಹವಾಗುತ್ತದೆ. ಈ ತ್ರಿವಿಧ ದಾಸೋಹದಿಂದ ಹೊರಗೆ ಕೊಡುವುದಾರೆ ಅದು ಎಲ್ಲಕ್ಕಿಂತಲೂ ಶ್ರೇಷ್ಠವೆಂಬುದಾಗಿ ಅಭಿಪ್ರಾಯಪಟ್ಟಿದ್ದಾರೆ. ಬಸವಣ್ಣನವರು ಸಹ "ತನು-ಮನ-ಧನವ ಮೀರಿ ಮಾತಾಡ ಬಲ್ಲಡೆ ಆತ ನಿಸ್ಸೀಮನು, ಆತ ನಿಜೈಕ್ಯನು ತನು-ಮನ-ಧನವನುವಾದರೆ ಕೂಡಲಸಂಗಮ ದೇವನೊಲಿವ"[೧೪] ಎಂದು ಹೇಳಿದುದುರ ತಾತ್ಪರ್ಯವೂ ಚೆನ್ನಬಸವಣ್ಣನ ಅಭಿಪ್ರಾಯಕ್ಕೆ ಪೂರಕವಾಗಿಯೇ ಇದೆ.

**ದಾಸೋಹದಲ್ಲಿ ಸಹಕಾರ:**

'ಮಾನವನು ಸಮಾಜಜೀವಿ' ಯೆಂಬುದು ಸಮಾಜಶಾಸ್ತ್ರಜ್ಞರ ಅಭಿಮತವಾಗಿದೆ. 'ಸಮಾಜಜೀವಿ' ಯೆಂದ ಮೇಲೆ ಸಂಘ-ಜೀವಿಯೊ ಅಂದಂತಾಯಿತಲ್ಲವೆ? ಸಂಘ ಜೀವಿಗೆ ಸಹಕಾರವೆನ್ನುವುದು ಅತ್ಯವಶ್ಯಕವಾದುದು, ಮತ್ತೊಬ್ಬರೊಡರೆ ಕೊಡುಕೊಳ್ಳುವ 'ವಿನಿಮಯಕ್ರಿಯೆ' ನಡೆಸಲೇ ಬೇಕಾಗುತ್ತದೆ.ನಮ್ಮ ನೆರೆ-ಹೊರೆಯವರೊಂದಿಗೆ ನಾವು

---

೧೧. ಅಲ್ಲಮನ ವಚನ ಚಂದ್ರಿಕೆ ಸಂ: ಡಾ|| ಎಲ್. ಬಸವರಾಜು, ವ-೧೦೨೬, ಪುಟ-೧೭೨

೧೨. ಬ.ಷ. ವಚನಗಳು, ಸಂ: ಶಿ.ಶಿ.ಬಸವನಾಳ ಏ-೨೦೯, ಪುಟ-೫೨

೧೩. ಚೆನ್ನಬಸವಣ್ಣನವರ ವಚನಗಳು, ಸಂ: ಡಾ|| ಆರ್. ಸಿ. ಹಿರೇಮಠ, ಏ-೧--೯, ಪುಟ-೫೦೨

ಪರಸ್ಪರ ಹೊಂದಿಕೊಂಡು ಸಹಕಾರದಿಂದ ಬಾಳಬೇಕು; ನಮ್ಮಬಳಿಯಲ್ಲಿ ಪಡಿ ಪದಾರ್ಥಗಳು ಧನ-ಧಾನ್ಯಗಳು ಅಪಾರವಾಗಿರುವಾಗ ನಮ್ಮ ನಿತ್ಯ ಜೀವನದ ಅವಶ್ಯಕತೆಗಿಂತಲೂ ಹೆಚ್ಚಿಂದು ಕಂಡು ಬಂದಾಗ ನಮ್ಮಿಂದ ಉಪಯೋಗಿಸದೆ, ವ್ಯರ್ಥವಾಗಿ ಹೋಗುವ ಹೊತ್ತಿನಲ್ಲಿ ಮತ್ತು ಇನ್ನಿತರ ಸಂದರ್ಭಗಳಲ್ಲಿ ಅವುಗಳನ್ನು ಉದಾರವಾಗಿ ನೀಡಬೇಕು. ಹಾಗೆ ಮಾಡುವುದರಿಂದ ಕಡು ಕಷ್ಟದಲ್ಲಿರುವವರಿಗೆ ತತ್ಕಾಲ ಸಹಾಯವಾಗಿ, ಅವರ ಗೋಳು ತಪ್ಪುತ್ತದೆ. ಕೊಟ್ಟವರಿಗೆ ಕೂಡ ಅದರಿಂದ ತೃಪ್ತಿಯಿರುತ್ತದೆ.

ಕಾಗಿ-ಕೋಳಿಗಳಂತಹ ಪಶು-ಪಕ್ಷಿಗಳು ಸಹ ತಮಗೆ ದೊರಕುವ ವಸ್ತುಗಳನ್ನು ತಮ್ಮಬಳಗದೊಂದಿಗೆ ಹರಿದು ಹಂಚಿಕೊಂಡು ತಿನ್ನುವುದಿಲ್ಲವೆ? ಅದರಂತೆ ಮಾನವನೂ ಸಹ ಪರಸ್ಪರ ಒಬ್ಬರಿಗೊಬ್ಬರು ಸಹಕಾರಯುತವಾದ ಬಾಳುವೆ ನಡೆಸಬೇಕೆಂಬುದು ಬಸವಣ್ಣನವರು ಸುಂದರವಾಗಿ ನಿರೂಪಿಸಿದ್ದಾರೆ.

**"ಕಾಗೆಯೊಂದಗಳ ಕಂಡರೆ ಕರೆಯದೆ ತನ್ನ ಬಳಗವನು**
**ಕೋಳಿಯೊಂದು ಗುಟುಕು ಕಂಡರೆ ಕೂಗಿ ಕರೆಯದೆ ತನ್ನ ಕುಲವೆಲ್ಲವ**
**ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದಡೆ ಕಾಗೆ-ಕೋಳಿಯಿಂದ**
**ಕರಕಷ್ಟ ಕೂಡಲಸಂಗಮದೇವಾ"**[೧೫]

ಮಾನವನು ತನ್ನಂಥ ಮತ್ತೊಬ್ಬ ಮಾನವನೊಡನೆ ಹಂಚಿಕೊಳ್ಳದೆ ಹೋದರೆ ಮತ್ತೆ ಯಾರೊಂದಿಗೆ ಹಂಚಿಕೊಳ್ಳುವುದು? ಶಿವಭಕ್ತನಾಗಿದ್ದು ದಾಸೋಹ ಮಾಡದೆ ಇದ್ದರೆ ಆ ಕೋಳಿ ಮತ್ತು ಕಾಗೆಗಳ ಜೀವನಕ್ಕಿಂತಲೂ ನಮ್ಮದು ಕೀಳು ಮಟ್ಟದ ಜೀವನವಾಗುತ್ತದೆಯೆಂದು ಎಚ್ಚರಿಸಿದ್ದಾರೆ. ತನ್ನನ್ನು ತಾನೇ ಬುದ್ಧಿವಂತ ವಿವೇಕಶಾಲಿ, ಸ್ಥಿತಪ್ರಜ್ಞ, ಎಲ್ಲ ಪ್ರಾಣಿಗಳಿಗಿಂತಲೂ ಮುಂದುವರೆದವನೆಂದು ಒಣಜಂಭಕೊಚ್ಚಿಕೊಳ್ಳುತ್ತ ಬೀಗುವುದಾದರೂ ಯಾಕೆ? ಇದು ಸುಸಂಸ್ಕೃತರ ನಡವಳಿಕೆಯೆ? " ಆಡಿದರೇನು ಹಾಡಿದರೇನು ಓದಿದರರೇನು ತ್ರಿವಿಧ ದಾಸೋಹವಿಲ್ಲದನ್ನಕ್ಕ, ಆಡದೆ ನವಿಲು? ಹಾಡದೆ ತಂತಿ? ಓದದೆ ಗಿಳಿ?" ಎಂದು ವಚನಕಾರರು ಪ್ರಶ್ನಿಸಿದ್ದು ಇದೇ ಅರ್ಥದಲ್ಲಿ ಆಡಿ-ಹಾಡಿ-ಓದಿ (ಮಂತ್ರ, ಪಠಿಸಿ) ದೇವರನ್ನು ಒಲಿಸಿಕೊಳ್ಳುವೆನೆಂಬುದು ಶುದ್ಧ ಸುಳ್ಳು ಕಾರಣ ನಲಿ-ನಲಿದು ನೃತ್ಯಾಗೈವ 'ನವಿಲು' ಸುಮಧುರ ಮತ್ತು ಸುಂದರವಾಗಿ ಮಾತನಾಡುವ ಗಿಳಿಗಳಿಗಿಂತ ಪಕ್ಷಿ ಸಂಕುಲಕ್ಕೂ ಹಾಗೂ ನುಡಿಸಿದಂತೆ ಸ್ವರ, ರಾಗಗಳನ್ನು ಹೊರಹೊಮ್ಮಿಸುವ 'ವೀಣೆ' ಯಂಥ ನಿರ್ಜೀವ ವಸ್ತುವಿಗೂ ಈ ಮಾನವನಿಗೂ ಯಾವುದೇ ವ್ಯತ್ಯಾಸವೇ ಇಲ್ಲವೆ? ಎಂದು ಪ್ರಶ್ನಿಸುವಂತಾಗುತ್ತದೆ. ವಚನಕಾರರು ಹೀಗೆ ಪ್ರಶ್ನಿಸಿರುವುದರ ಹಿನ್ನೆಲೆಯು ಪ್ರತಿಯೊಬ್ಬರು ತಮ್ಮತಮ್ಮ ಶಕ್ತ್ಯಾನೂಸಾರ ದಾಸೋಹ ಮಾಡಬೇಕೆಂಬುದೇ ಆಗಿದೆ.

**ಮಾನಮುಟ್ಟಿ ನೀಡುವುದು:**

ದಾಸೋಹ ಮಾಡುವಾಗ ಹಿಂದೆ-ಮುಂದೆ ನೋಡುವುದಾಗಲಿ,ಅವರಿವರ ಒತ್ತಾಯದಿಂದಾಗಿಲಿ, ಒಲ್ಲದ ಮನಸ್ಸಿನಿಂದಾಗಲಿ, ನೀಡದಿದ್ದರೆ ಇತರರು, ಏನು

೧೪. ಷಟ್‌ಸ್ಥಳ ವಚನಗಳು ಸಂ: ಪ್ರೊ. ಶಿ. ಶಿ. ಬಸವನಾಳ, ಏ-೨೦೯, ಪುಟ-೫೫
೧೫. ಅದೇ, ವ-೪೪೦, ಪುಟ-೧೧೨

ತಿಳಿದುಕೊಳ್ಳುವರೋ ಏನ್ನುವ ಕಾಟಾಚಾರಕ್ಕಾಗಲಿ, ದಾಸೋಹಗೈದರೆ ಸಲ್ಲುತ್ತದೆ. ಅದರ ಫಲ ದೊರೆಯುತ್ತದೆ. ಅದನ್ನು ಬಿಟ್ಟು ನೀಡುವುದಕ್ಕೆ ಹಿಂದೇಟು ಹಾಕಿ, ಒಲ್ಲದ ಮನಸ್ಸಿನಿಂದ ಗೊಣಗಿಕೊಂಡು ನೀಡಿದರೆ, ನೀಡಿದ್ದೂ ವ್ಯರ್ಥವಾಗುತ್ತದೆ. ಅದರ ಫಲವೂ ದೊರೆಯದೆ ಹೋಗುತ್ತದೆ.

**ತೆಲುಗೇಶ್ವರ ಮಸಣಯ್ಯ:**

"ವೀರನಾದಾಡೆ ವೈರಿಗಳು ಮೆಚ್ಚಬೇಕು
ದಾನ ಗುಣಾದ್ದೆಲ್ಲವ ಕವಿದೀವನಾದಡೆ
ಯಾಚಕ ಜನವೆಲ್ಲ ಮೆಚ್ಚಬೇಕು"[೧೬]

**ಬಸವಣ್ಣ:**

"ಮಾಡಿ ಮಾಡಿ ಕೆಟ್ಟರು ಮನವಿಲ್ಲದೆ
ನೀಡಿ ನೀಡಿ ಕೆಟ್ಟರು ನಿಜವಿಲ್ಲದೆ
ಮಾಡುವ ನೀಡುವ ನಿಜಗುಣವುಳ್ಳರೆ
ಕೂಡಿಕೊಂಬ ನಮ್ಮ ಕೂಡಲಸಂಗಮದೇವ"[೧೭]

**ಚೆನ್ನಬಸವಣ್ಣ:**

"ಮಾಡುವಲ್ಲಿ ಎನ್ನ ನಾನು ಅರೆಯಿತ್ತು ಮಾಡಿದೆನಾದೆಡೆ
ನೀಡುವಲ್ಲಿ ಎನ್ನ ನಾನು ಅರೆಯಿತ್ತು ನೀಡಿದೆನಾದೆಡೆ
ನೀಡುವಲ್ಲಿ ಎನ್ನ ನಾನು ರುಚಿಗೆ ಹಾರೈಸಿದೆನಾದೆಡೆ
ನಿಮಗಂದೆ ದ್ರೋಹಿಯಯ್ಯಾ................"[೧೮]

ಈ ವಚನಗಳು ನೀಡುವವರಿಗೆ ತನು ಮನಗಳಿಂದ ನೀಡುವುದರೊಂದಿಗೆ ಮನಸಾಕ್ಷಿಯಾಗಿ ನೀಡಬೇಕೆಂಬ ಅಂಶವನ್ನು ಎತ್ತಿ ಹೇಳುತ್ತವೆ. ಜನ ಮೆಚ್ಚುಗೆಗೆ, ಹೆಸರಿಗೆ-ಕೀರ್ತಿಗಾಗಿ, ಪೂಜೆ-ಉತ್ಸವಗಳನ್ನು ಮಾಡಿದರೆ ಇಲ್ಲವೆ ಅವುಗಳಿಗೋಸ್ಕರ ಹಣವನ್ನು ವೆಚ್ಚ ಮಾಡಿದರೆ ಅದು ಅಡಂಬರವಾಗಿ ಬಿಡುವುದರಿಂದ, ಅದರ ಉದ್ದೇಶ ಉದಾತ್ತವಾಗಿಲ್ಲದ್ದರಿಂದ ವ್ಯರ್ಥವಾಗಿ ಬಿಡುತ್ತದೆಯೆಂದು ಬಸವಣ್ಣನವರು ಹೇಳಿದ್ದಾರೆ.

ಕೊಡುವಾಗ ನಾವು ಸ್ವಸಂತೋಷದಿಂದಲೇ ಕೊಡುತ್ತಿರಬಹುದು. ಕೊಟ್ಟೆವೆನ್ನುವ ತೃಪ್ತಿಯೂ ನಮ್ಮಲ್ಲಿ ಇರಬಹುದು. ಆದರೆ ಅದಷ್ಟೇ ಸಾಲದು. ಸ್ವೀಕರಿಸುವವರು ಮೆಚ್ಚಿ ತಲೆದೂಗುವಂತೆ ಕೊಡುಗೈಯಾಗಿ ಕೊಡಬೇಕೆಂದು ತೆಲುಗೇಶ್ವರ ಮಸಣಯ್ಯ ಸೂಚಿಸುತ್ತಾನೆ. ಚೆನ್ನಬಸವಣ್ಣನು ತಮ್ಮನ್ನೇ ಅವು 'ದಿಬ್ಬ' ವಾಗಿರಿಸಿಕೊಂಡು ಮಾಡುವಲ್ಲಿ ನೀಡುವೆಲ್ಲಿ ಕೂಡೆ ಶುದ್ಧನಲ್ಲದಿದ್ದಡೆ ನೀನಂದೆ ಮೂಗಕೊಯ್ಯಾ" ಎಂದು ಕೂಡಲ ಚೆನ್ನಸಂಗಯ್ಯನಿಗೆ 'ಭಾಷೆ' ಕೊಡುತ್ತಿರುವುದು, ದಾಸೋಹ ಮಾಡುವಾಗ ಮನಃಪೂರ್ವಕವಾಗಿ ನೀಡಬೇಕೆನ್ನುವುದನ್ನ ಎತ್ತಿ ತೋರಿಸುತ್ತದೆ.

---

೧೬. ವಚನ ಮಂಜರಿ, ಸಂ: ಡಾ॥ ಚೆನ್ನಕ್ಕ ಎಲಿಗಾರ, ವ-೪, ಪುಟ-೧
೧೭. ಬ. ಷ. ವ. ಸಂ: ಪ್ರೊ. ಶಿ. ಶಿ. ಬಸವನಾಳ, ವ-೧೨೦, ಪುಟ-೬೦
೧೮. ಚೆನ್ನಬಸವಣ್ಣನ ವಚನಗಳು, ಸಂ: ಡಾ॥ ಆರ್. ಸಿ. ಹಿರೇಮಠ, ವ-೪೦೨, ಪುಟ-೧೮೧

**ಅಪಾತ್ರಕ್ಕೆ ಸಲ್ಲಿಸಬಾರದು:**

ನೀಡವ ಅವಸರದಲ್ಲಿ, ಅವರ ಪೂರ್ವಾಪರಗಳನ್ನು ಅರಿತುಕೊಳ್ಳದೆ, ಯಾರು-ಯಾರಿಗೋ ನೀಡಬಾರದು. ನಾವು ಕೊಡುವ ದುಡ್ಡು ಜೂಜು ಕುಡಿತ ಇತ್ಯಾದಿ ದುಶ್ಚಟಗಳಿಗೆ ಅಥವಾ ಅನ್ಯಾಯ ಅಕ್ರಮ ಕಾರ್ಯಗಳಿಗೆ ಅದು ಸಂದಾಯವಾಗುವಂತಿದ್ದರೆ ಕೊಡದಿರವುದೇ ಲೇಸು. ನಾವು ನೀಡುವ ಹಣವು ಸಮಾಜದ ಒಳಿತಿಗಾಗಿ ಜನತೆಯ ಉಪಯೋಗಕ್ಕಾಗಿ, ಪ್ರಗತಿಪರ ಕಾರ್ಯಗಳಾಗಿ ವಿನಿಯೋಗವಾಗಬೇಕು. ಅದನ್ನು ಬಿಟ್ಟು ಪುರಾಣ-ಪ್ರವಚನ, ಯಜ್ಞ, ಯಾಗ, ಹರಕೆ, ವ್ರತ ಇತ್ಯಾದಿಗಳಿಗೆ ಸಂಪತ್ತನ್ನು ಕೊಡುವುದಕ್ಕಾಗಿ ವಚನಕಾರರು ಸಮ್ಮತಿಸಿಲ್ಲ. "ಎನ್ನ ಕಾಲೇ ಕಂಬ, ದೇಹವೇ ದೇವಾಲಯ, ಶಿರವೇ ಹೊನ್ನ ಕಳಸವಯ್ಯಾ" ಎಂದು ನಂಬಿ, ನುಡಿದಂತೆ ನಡೆಯುವ, ನಡೆಯಲ್ಲಿ ನುಡಿಯ ಪೂರೈಸುವ ಶಿವಶರಣರು ಗುಡಿ-ಗುಡಾರಗಳನ್ನೂ ನಿರ್ಮಿಸಲು ಸಮ್ಮತಿಸುವುದೇ ಇಲ್ಲವೆಂಬುದು ಇದರಿಂದ ಸ್ಪಷ್ಟವಾಗತ್ತದೆ.

**ಅಲ್ಲಮಪ್ರಭು:**

> **"ಕಲ್ಲು ಮನೆಯ ಮಾಡಿ, ಕಲ್ಲ ದೇವರ ಮಾಡಿ**
> **ಆ ಕಲ್ಲು ಕಲ್ಲ ಮೇಲೆ ಕೆಡೆದರೆ ದೇವರೆತ್ತ ಹೋದರೋ?**
> **ಲಿಂಗಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ ಗುಹೇಶ್ವರ"[೧೯]**

ಎಂದು ಒಂದೆಡೆ ಹೇಳಿ, ಮತ್ತೊಂದೆಡೆಯಲ್ಲಿ ಹೀಗೆ ಹೇಳಿದ್ದಾರೆ.

> **"ದೇಹದೊಳಗೆ ದೇವಾಲಯವಿದ್ದು**
> **ಮತ್ತೆ ಬೇರೆ ದೇವಾಲಯವೇಕೆ?**
> **ಎರಡಕ್ಕೆ ಹೇಳಲಿಲ್ಲಯ್ಯ! ಗುಹೇಶ್ವರ**
> **ನೀನು ಕಲ್ಲಾದರೆ ನಾನೇಪ್ಪೆನು"[೨೦]**

> **ಶಿವಲೆಂಕ ಮಂಚಣ್ಣ:**
> **"ಕಾಯವ ದೇಗುಲವಾಗಿ**
> **ಕುರುಹಿಟ್ಟು ಕೊಟ್ಟು ಕುರುಹೆ ದೇವರೆಗಿ"[೨೧]**

ಈ ರೀತಿಯಾಗಿ ಬಸವಣ್ಣ, ಅಲ್ಲಮ, ಮಂಚಪ್ಪ ಮುಂತಾದವರು ಗುಡಿ ಗುಂಡಾರಗಳ ನಿರ್ಮಾಣವನ್ನು ಖಡಾ-ಖಂಡಿತವಾಗಿ ತಿರಸ್ಕರಿಸಿದ್ದಾರೆ. ಅಂದಮೇಲೆ ಕಳಸವಿಡುವುದನ್ನು ಒಪ್ಪುವರೆ? ಅದು ಸಾಧ್ಯವೇ ಇಲ್ಲ. ಅದಕ್ಕಾಗಿಯೇ ಬಸವಣ್ಣನವರು "ಕಾಗೆ ವಿಷ್ಟವಿಸುವ ಹೊನ್ನ ಕಳಸವಾಗುವುದಕ್ಕಿಂತಲೂ ಅಯ್ಯಾ ನಿಮ್ಮ ಶರಣರ ಪಾದಕ್ಕೆ ಚಮ್ಮಾವುಗಯ ಮಾಡಯ್ಯ" ಎಂದು ಸಂಗಮನಾಥನಲ್ಲಿ ನಿವೇದಿಸಿಕೊಂಡಿದ್ದಾರೆ.

ಕ್ರಾಂತಿಕಾರಿ ಶಿವಶರಣ 'ಅಂಬಿಗರ ಚೌಡಯ್ಯ' ನಂತೂ ತೀರ್ಥಯಾತ್ರೆ, ಜಾತ್ರೆ, ಉತ್ಸವ, ದಿಂಡಿ, ಮೆರವಣಿಗೆ ಮುಂತಾದವುಗಳನ್ನು ಪುರಸ್ಕರಿಸಿಲ್ಲ,ನೋಡ್ಕಿ

---

೧೯. ಅಲ್ಲಮನ ವಚನ ಚಂದ್ರಿಕೆ, ಸಂ: ಡಾ॥ ಎಲ್. ಬಸವರಾಜು, ವ-೨೧೨, ಪುಟ-೩೩

೨೦. ಅದೇ, ವ-೨೧೩, ಪುಟ-೩೩

೨೧. ಸಕಲ ಪುರಾತನರ ವಚನಗಳು, ಸಂಪುಟ-೧ ಸಂ: ಡಾ॥ ಆರ್. ಸಿ. ಹಿರೇಮಠ, ವ-೩೯೪

"ಕಟ್ಟಿದ ಲಿಂಗವ ಬಿಟ್ಟು
ಬೆಟ್ಟದ ಲಿಂಗಕ್ಕೆ ಹೋಗಿ
ಹೊಟ್ಟದಿ ಬೀಳುವ
ಲೊಟ್ಟ ಮೂಳರ ಕಂಡಡೆ
ಮೆಟ್ಟಿದ ಎಡಪಾದುಕೆಯ ತಗೊಂಡು
ಲಟ-ಲಟನೆ ಹೊಡೆಯೆಂದಾತ ನಮ್ಮ ಅಂಬಿಗರ ಚೌಡಯ್ಯ"[೨೨]

ಈ ವಚನದಲ್ಲಿ ಅಂಬಿಗರ ಚೌಡಯ್ಯನ ನಿಲುವು ಸುಸ್ಪಷ್ಟವಾಗಿದೆ. ತೀರ್ಥ ಯಾತ್ರೆಗಳ ನೆಪದಲ್ಲಿ ತಿರುಗಾಡುವವರನ್ನು ಕಟುವಾಗಿ ಟೀಕಿಸಿದ್ದಾನೆ. 'ಪರದೇಶಕ್ಕೆ ಹೋಗಿಬಳಲುದಿರು' ಎನ್ನುವ ವಚನದಲ್ಲಿ ಕಾಶಿಯಲ್ಲಿ ಕಾಯುವ ವಿನಾಶವ ಮಾಡಬೇಡ ಎಂದು ಬುದ್ಧಿ ಹೇಳಿದ್ದಾನೆ. 'ಕಾಶಿ'ಗೆ ಹೋದವರನ್ನು 'ವೇಶ್ಯೆ'ಗೆ ಸಮವೆಂದು ನುಡಿದು ಪರ್ವತಕ್ಕೆ ಹೋಗುವವರನ್ನು ಪಂಚಮಹಾಪಾತಕಿಗಳೆಂದು ಜರೆದಿದ್ದಾನೆ. ಈ ರೀತಿಯಾಗಿ ಯಾತ್ರೆಗೆ ಹೋಗುವವರಿಗೆ 'ಧನಸಹಾಯ' ಮಾಡುವುದನ್ನೂ ಸಮ್ಮತಿಸಿಲ್ಲ. ಹರಕೆ ಹೊತ್ತು ಅದನ್ನು ತೀರಿಸಿಲು, ಅಥವಾ ಅದಕ್ಕಾಗಿ ನೆರವು ಯಾಚಿಸುವುದನ್ನು ವಿರೋಧಿಸಿದ್ದಾರೆ. ಬಸವಣ್ಣನವರು 'ಹರಸಿ ಮಾಡುವುದು ಹರಕೆಯ ದಂಡ' ವೆಂದು ಘೋಷಿಸಿದ್ದಾರೆ. ಇಲ್ಲಿಯುವರೆಗಿನ ವಿವೇಚನೆಯ ಪ್ರಕಾರ ಪಾತ್ರವರಿದು ದಾಸೋಹಗೈಯ್ಯಬೇಕು ಎಂಬರ್ಥವೇ ಹೊರಡುತ್ತದೆ. ದುಡ್ಡಿನ ದುರುಪಯೋಗವಾಗುತ್ತಿದ್ದರೆ ವಚನಕಾರರು ಸಹಿಸುವುದಿಲ್ಲ. ಅದಕ್ಕಾಗಿಯೇ 'ಅಪಾತ್ರಕ್ಕೆ ದಾನವಂಗೆಯ್ಯದಿರಬೇಕು' ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

**ಸತ್ಪಾತ್ರಕ್ಕೆ ನೀಡುವುದು:**

ಅ-ಪಾತ್ರಕ್ಕೆ ನೀಡಬಾರದು ಎಂದಾಗ, ಯಾವುದು ನೀಡಬೇಕು? ಮತ್ತು ಯಾವ ಉದ್ದೇಶಕ್ಕಾಗಿ ನೀಡಬೇಕು? ಎನ್ನುವ ಪ್ರಶ್ನೆಗಳು ಏಳುವುದು ಸಹಜ. ಅದಕ್ಕುತ್ತರವೂ ಅಷ್ಟೇ ಸರಳವಾಗಿ ವಚನಕಾರರಲ್ಲಿ ಸಿಗುತ್ತದೆ. ದುಡ್ಡನ್ನು ಅ-ಪಾತ್ರಕ್ಕೆ ಸಲ್ಲಿಸದೆ, ಸತ್ಪಾತ್ರಕ್ಕೆ ಸಲ್ಲಿಸಬೇಕು, ದುಡ್ಡಿನ ಸದುಪಯೋಗವಾಗಬೇಕೆಬಂದುದೇ ವಚನಕಾರರ ಹಿರಿಯಾಸೆಯಾಗಿದೆ. ಪ್ರಯಾಣಿಕರ ಅನುಕೂಲಕ್ಕಾಗಿ 'ಅರವಟ್ಟಿಗೆ', ಗಳನ್ನು ಇಡುವುದು, ರಸ್ತೆಯ ಎರಡೂ ಬದಿಯಲ್ಲಿ ಸಾಲು-ಮರಗಳನ್ನೂ ನೆಡಿಸುವುದು, ಬೀದಿಯಲ್ಲಿ 'ದಾರಿದೀಪ'ದ ವ್ಯವಸ್ಥೆಗೊಳಿಸುವುದು, ಅಧ್ಯಯನಗೈವ ವಿದ್ಯಾರ್ಥಿಗಳಿಗೆ ಊಟ, ವಸತಿ, ಕಲ್ಪಿಸುವುದು, ವ್ಯಾಸಾಂಗಕ್ಕೆ ಬೇಕಾಗುವ ಸಕಲ ಸಲಕರಣೆಗಳನ್ನು ಪೂರೈಸುವುದು, ಗುರುಮನೆಯಲ್ಲಿ ವಿದ್ಯಾಭ್ಯಾಸ ನಡೆಯುತ್ತಿದ್ದರೆ ಉಪಾಧ್ಯಾಯರ ಮತ್ತು ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ ಸರ್ವಸೌಲಭ್ಯ ಕಲ್ಪಿಸುವುದು, ಜ್ಞಾನ ಪ್ರಸಾರ ಕೇಂದ್ರಗಳಿಗೆ ಉದಾರವಾಗಿ ಸಹಾಯ ಮಾಡುವುದು, ಬೇರೆಬೇರೆ ಊರಿನಿಂದ ಬರುವ ಅತಿಥಿಗಳಿಗೆ 'ದಾಸೋಹ' ಏರ್ಪಡಿಸುವುದು, ಊರ ಜನರಿಗೆ ನೀರಿನ ಸೌಕಾರ್ಯಕ್ಕಾಗಿ ಭಾವಿ ತೋಡಿಸುವುದು, ಕೆರೆ ಕಟ್ಟಿಸುವುದು, ಕಾಲುವೆ ತೆಗೆಸುವುದು, ಹೊಳೆ-ಹಳ್ಳಗಳಿಗೆ ಸೇತುವೆ ನಿರ್ಮಿಸುವುದು, ಅವುಗಳಿಗೆ ಆಣೆಕಟ್ಟು ಕಟ್ಟುವುದು ಮುಂತಾದ ಬಹುಜನರಿಗೆ ಉಪಯೋಗವಾಗುವಂತಹ

---

೨೨. ಅಂಬಿಗೇರ ಚೌಡಯ್ಯ ವಚನಗಳು, ವ-೨೩; ಪುಟ-೨೭

ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜದ ಸುಧಾರಣೆಗಾಗಿ, ಕಲ್ಯಾಣ ಕಾರ್ಯಗಳಿಗಾಗಿ ಕೊಡುಗೈಯಾಗಿ ಕೊಡಬೇಕೆಂಬುದೇ ವಚನಕಾರರ ಉದ್ದೇಶವಾಗಿದೆ.

**ಬಸವಣ್ಣ:**

> "ಮರಕ್ಕೆ ಬಾಯಿ ಬೇರೆಂದು ತಳಕ್ಕೆ ನೀರೆರೆದರೆ
> ಮೇಲೆ ಪಲ್ಲವಿಸಿತ್ತು ನೋಡಾ
> ಲಿಂಗದ ಬಾಯಿ ಜಂಗಮವೆಂದು ಪಡಿಪದಾರ್ಥ ನೀಡಿದರೆ
> ಮುಂದೆ ಸಕಲ ಪದಾರ್ಥವನೀವನು ಕೂಡಲಸಂಗಮದೇವ"[೨೩]

**ಅಲ್ಲಮ:**

> "ಅನ್ನವನ್ನಿಕ್ಕಿ ನನ್ನಿಯ ನುಡಿದು
> ಅರವಟ್ಟಗೆಯನ್ನಿಕ್ಕಿ ಕೆರೆಯ ಕಟ್ಟಿಸಿದರೆ
> ಮರಣದಿಂದ ಮೇಲೆ ಸ್ವರ್ಗವುಂಟು...."[೨೪]

**ಬಸವಣ್ಣ:**

> "ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು
> ಕ್ರೀಯೆಯ ಮಾಡೆನು;
> ನಿಮ್ಮ ಸೊಮ್ಮಿಂಗೆ ಸಲಿಸುವೆನು, ನಿಮ್ಮಾಣೆ
> ಕೂಡಲಸಂಗಮದೇವಾ"[೨೫].

ಈ ಮಾತುಗಳು ನಮ್ಮ ಸೇವೆಯು ಜನತೆಯ ಒಳತಿಗಾಗಿ ಬಳಕೆಯಾಗಬೇಕು, ನಾವು ನೀಡುವ ಸಂಪತ್ತು ಸಮಾಜೋಪಯೋಗಿ ಕಾರ್ಯಗಳಿಗೆ ವಿನಿಯೋಗವಾಗಬೇಕು ಎನ್ನುವುದಕ್ಕೆ ಹೆಚ್ಚು ಮಹತ್ವ ಕೊಟ್ಟಿವೆ. ಇಲ್ಲಿ ಜಂಗಮವೆಂದರೆ ಒಬ್ಬ ವ್ಯಕ್ತಿಯಲ್ಲ, ಒಂದು ಸಮಾಜವೆಂದು ಅರ್ಥೈಸಿಕೊಳ್ಳಬೇಕು, ಜಂಗಮರಿಗೆ ಪಡಿಪದಾರ್ಥಗಳನ್ನು ನೀಡಿದರೆ ಅದು ಸಮಾಜಕ್ಕೆ ಸಂದಂತೆಯೆಂದೂ ಬಸವಣ್ಣನವರು ಹೇಳಿರುವುದನ್ನು ಗಮನಿಸಬೇಕು. "ಭಕ್ತನೆಂದರೆ ವ್ಯಷ್ಟಿ (ವ್ಯಕ್ತಿ) ಜಂಗಮವೆಂದರೆ ಸಮಷ್ಟಿ (ಸಮಾಜ) ಎಂಬ ಒಂದು ಬಹುಮುಖ್ಯ ಅರ್ಥವನ್ನು ಧ್ವನಸುತ್ತದೆ. ಹೀಗಾಗಿ ಜಂಗಮ ದಾಸೋಹವು ಕೇವಲ ಜಂಗಮವರ್ಗದ ಸೇವೆಯನ್ನಲ್ಲ ಲೋಕದ ಸಕಲ ಸದ್ಭಕ್ತರ ಸೇವೆಯನ್ನು ಸೂಚಿಸುತ್ತದೆ"[೨೬] ಎನ್ನುವ ಡಾ|| ಎಂ. ಎಂ. ಕಲಬುರ್ಗಿಯವರ ಮಾತುಗಳು ಮನನೀಯವಾಗಿವೆ.

**ಹಣ ಸಂಗ್ರಹದಲ್ಲಿ ಎಚ್ಚರಿಕೆ:**

ಜನಪರ ಕಾರ್ಯಕ್ರಮಗಳನ್ನೋ, ಸಮಾಜೋಪಯೋಗಿ ಚಟುವಟಿಕೆಗಳನ್ನು ಹಮ್ಮಿಕೊಂಡಾಗ ಸಹಜವಾಗಿ ಸಾರ್ವಜನಿಕರಿಂದ ಹಣ ಸಂಗ್ರಹಿಸುವ ಪ್ರಸಂಗ ಬರುತ್ತದೆ. ಅಂತಹ ಸಂದರ್ಭದಲ್ಲಿ ಎಚ್ಚರಿಕೆ ವಹಿಸಬೇಕೆಂಬುದನ್ನು ವಚನಕಾರರು ತಿಳಿಸಿದ್ದಾರೆ. ಯಾರಾದರೂ ಧಾರಾಳವಾಗಿ ಕೊಡುತ್ತಾರೆಂದು ತಿಳಿದು, ಅವರಿಂದ ಸ್ವೀಕರಿಸಬಾರದು.

---

೨೩. ಬ.ಷ.ವ. ಸಂ: ಶಿ. ಶಿ. ಬಸವನಾಳ, ವ-೪೨೩; ಪುಟ-೧೦೬
೨೪. ಅಲ್ಲಮನ ವಚನ ಚಂದ್ರಿಕೆ, ಸಂ: ಡಾ|| ಎಲ್. ಬಸವರಾಜು, ವ-೯೫೯, ಪುಟ-೧೫೭
೨೫. ಬ. ಷ. ವ. ಸಂ: ಶಿ. ಶಿ. ಬಸವನಾಳ, ವ-೭೧೧, ಪುಟ-೧೮೯

ದಾನಿಗಳ ಹಿಂದು-ಮುಂದಿನ ಸ್ಥಿತಿ ಗತಿ ವಿಚಾರಿಸಿಕೊಳ್ಳಬೇಕು. ಕೆಲವರ ಆಸ್ತಿ-ಪಾಸ್ತಿ ನುಂಗಿಯೋ, ಯಾರನ್ನೋ ಕೊಲೆಮಾಡಿಯೋ ಇನ್ಯಾರನ್ನೋ ಸುಲಿಗೆ ಮಾಡಿಯೋ, ಮೋಸಮಾಡಿಯೋ ಕಳವು ಧರೋಡೆ, ಲೂಟಿ ಇತ್ಯಾದಿ ಕ್ರೂರ ಕೃತ್ಯಗಳಿಂದ ಸಂಪಾದಿಸಿದ ಕಾಸನ್ನು ಕೊಡುವ ಸಂಭವವಿರುತ್ತದೆ. ತಾವು ಮಾಡಿದ ಕರಾಳ ಕೃತ್ಯದ ಪಾಪದ ಪಿಂಡವನ್ನು ತೊಳೆದುಕೊಳ್ಳಲು ವಾಮಮಾರ್ಗದಿಂದ ಗಳಿಸಿದ ಹಣವನ್ನು ನೀಡುತ್ತಿರಬಹುದು. ಅದಕಾಗಿ ಸಾರಾ-ಸಾರವಾಗಿ ವಿಚಾರಿಸಬೇಕು ಅನ್ಯಾಯ-ಆಕ್ರಮವೆಂದು ಕಂಡು ಬಂದರೆ, ವಾಮಮಾರ್ಗದಿಂದ ಗಳಿಸಿದ್ದನ್ನು ದಾನವೆಂದು ನೀಡುತ್ತಿದ್ದರೆ ಅಂಥ ದುಡ್ಡನ್ನು ಸ್ವೀಕರಿಸಬಾರದು. ಏಕೆಂದರೆ-

**"ಎಲವದ ಮರ ಹೂತು ಫಲವಾದ ತೆರನಂತೆ**
**ಸಿರಿಯಾದರೇನು ಶಿವಭಕ್ತಿಯಿಲ್ಲದನ್ನಕ್ಕ?**
**ಫಲವಾಡೇನು ಹೇಳಾ, ಹಾವುಮೆಕ್ಕೆಯ ಕಾಯಿ?**
**ಕುಲವಿಲ್ಲದ ರೂಹು ಎಲ್ಲಿದ್ದಡೇನು?**
**ಬಚ್ಚಲ ನೀರು ತಿಳಿದೆಲ್ಲ ಫಲವೇನು?**
**ಅವಗುಣಿಗಳನು ಮೆಚ್ಚ ಕೂಡಲಸಂಗಮದೇವ"**[೨೭]

ಎಂದು ಒಂದು ವಚನದಲ್ಲಿ ಹೇಳಿ, ಮತ್ತೊಂದು ವಚನದಲ್ಲಿ ಇದೇ ವಿಷಯವನ್ನು ಪ್ರತಿಪಾದಿಸಿರುವುದು ಹೀಗೆ:

**೧. "ಬಚ್ಚಲ ನೀರು ತಿಳಿಯಾದರೇನು?**
**ಸಲ್ಲದ ಹೊನ್ನ ಮತ್ತೆಲ್ಲಿದ್ದರೇನು?"**[೨೮]

**೨. "ಪಾಪಿಯ ಧನ ಪ್ರಾಯಶ್ಚಿತಕ್ಕಲ್ಲದೆ ಸತ್ಪಾತ್ರಕ್ಕೆ ಸಲ್ಲದಯ್ಯಾ**
**ನಾಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯಯ್ಯಾ**
**ನಮ್ಮ ಕೂಡಲಸಂಗನ ಶರಣರಿಗಲ್ಲದೆ**
**ಮಾಡುವ ಅರ್ಥ ವ್ಯರ್ಥ ಕಂಡಯ್ಯ"**[೨೯]

ಬಸವಣ್ಣನವರು ಈ ವಚನಗಳಲ್ಲಿ ಪ್ರತಿಪಾದಿಸಿರುವ ಆಶಯವು ಸ್ಪಷ್ಟವಾಗಿದ್ದು, ಹಣ ಸಂಗ್ರಹಿಸುವವರಿಗೆ ಪರೋಕ್ಷವಾಗಿ ಎಚ್ಚರಿಕೆ ನೀಡುತ್ತಿರುವುದನ್ನು ಸಹಜವಾಗಿ ಗುರುತಿಸಬಹುದು.

ಯಾರು ಕಾಯಕವನ್ನು ಮಾಡಿ, ನಿಷ್ಠೆ ಪ್ರಾಮಾಣಿಕಕತೆಯಿಂದ ಹಣ ಸಂಪಾದಿಸಿರುತ್ತಾರೋ ಅಂತಹ ಸಜ್ಜನರಿಂದ ಮಾತ್ರ ಸಂಪತ್ತನ್ನು ಸ್ವೀಕರಿಸಬೇಕು, ಆದರೆ ಸಾಲ ವಸೂಲಿ ಮಾಡುವ ಸರಕಾರಿ ಸಾಹೇಬರಂತೆ ಕಾಡಿಸಿ- ಭೇಡಿಸಿ, ಎತ್ತು ಎಮ್ಮೆ ಆಡು-ಕುರಿಗಳನ್ನು ಮಾರಿಸಿ, ಭಾಂಡಗಳನ್ನು ಒತ್ತೆಯಿರಿಸಿ ಹಣವನ್ನು ಕಿತ್ತುಕೊಳ್ಳಬಾರದು. ಯಾರು ಸ್ವಸಂತೋಷದಿಂದ ಏನನ್ನು ಕೊಡುತ್ತಾರೋ ಅದನ್ನೇ ಸ್ವೀಕರಿಸಬೇಕು. ಎಷ್ಟು ನೀಡುತ್ತಾರೋ ಅಷ್ಟನ್ನೇ ಕೃತಜ್ಞತಾಪೂರ್ವಕವಾಗಿ ಸ್ವೀಕರಿಸಬೇಕೆಂಬುದು ವಚನಕಾರರ

೨೬. ಮಾರ್ಗ-೧, ಪುಟ: ೩೦೧-೩೦೨
೨೭. ಬ. ಷ. ವಚನಗಳು, ಸಂ: ಪ್ರೊ. ಶಿ. ಶಿ. ಬಸವನಾಳ, ವ-೧೨೫, ಪುಟ-೩೩
೨೮. ಬಸವಣ್ಣನವರ ಷಟ್‌ಸ್ಥಲ ವಚನಗಳು, ಸಂ: ಶಿ. ಶಿ. ಬಸವನಾಳ, ವ-೧೨೫
೨೯. ಅದೇ, ವ-೨೨೬, ಪುಟ-೫೭

ನಿಲುವಾಗಿದೆ. ಈ ಅಂಶಗಳು ಸಾರ್ವಜನಿಕ ಕಾರ್ಯಗಳಿಗಾಗಿ ಸಮಾಜದಲ್ಲಿ ಚಂದ ವಸೂಲಿ ಮಡುವವರಿಗೆ ಸೂಕ್ತ ಸೂಚನೆಗಳಾಗಿವೆ.

**ನೀಡುವಲ್ಲಿ ಗೌಪ್ಯತೆ:**

ದಾನ ನೀಡುವವರಿಗೆ, ದಾಸೋಹ ಮಾಡುವರಿಗೆ 'ಗೌಪ್ಯ' ವಿಧಾನ ಅನುಸರಿಸಬೇಕೆಂದು ಶರಣರು ಕಿವಿಮಾತು ಹೇಳಿದ್ದಾರೆ. ತುಂಬಿದ ಸಭೆಯೊಳಗೆ ತಮ್ಮ ಅಂತಸ್ತನ್ನು ಪ್ರದರ್ಶಿಸಲು ದಾನಗುಣವನ್ನು ತೋರಿಸಿಕೊಳ್ಳಲು, ಪ್ರಚಾರಕ್ಕೋಸ್ಕರವಾಗಿ ಪ್ರತಿಷ್ಠೆಯ ಬೆನ್ನು ಬಿದ್ದು ಕೊಡಬಾರದು. "ಬೀದಿಯಲ್ಲಿ ನಿಂತು ಬೀರದಿರಬೇಕು" ಎನ್ನುವುದರ ಹಿನ್ನೆಲೆಯನ್ನು ಅರ್ಥೈಸಿಕೊಳ್ಳಬೇಕು.

ಸಾರ್ವಜನಿಕ ಸಭೆಗಳಲ್ಲಿ ತಮ್ಮ ಸ್ವಾರ್ಥಕ್ಕಾಗಿ ನೀಡಿ ದಾರಿಯಲ್ಲಿ ಭೆಟ್ಟಿಯಾದ ವರಿಗೆಲ್ಲ ಅಷ್ಟು-ಕೊಟ್ಟೆ, ಇಷ್ಟು-ಕೊಟ್ಟೆ, ಅದಕ್ಕಾಗಿ ಕೊಟ್ಟೆ, ಇದಕ್ಕಾಗಿ ಕೊಟ್ಟೆ ಇತ್ಯಾದಿಯಾಗಿ ಬಿತ್ತರಿಸಬಾರದು. ಸಾರ್ವಜನಿಕರಿಗೆ ಉಪಯೋಗವಾಗಲು, ಸಾರ್ವಜನಿಕ ಸಭೆ-ಸಮಾರಂಭಗಳಲ್ಲಿ ಕೊಡುವುದೇ ಆಗಿದ್ದರೆ 'ಗೌಪ್ಯವಿಧಾನ' ವನ್ನು ಅನುಸರಿಸಬೇಕು. ನಾವು ಕೊಟ್ಟಿದ್ದು ಮತ್ತೊಬ್ಬರಿಗೆ ಗೊತ್ತಾಗಬಾರದು. ಅಷ್ಟೇ ಅಲ್ಲ, ನಮ್ಮ ಮನಸ್ಸಿನಲ್ಲಿಯೇ ಮತ್ತೆ-ಮತ್ತೆ ಕೊಟ್ಟೆವೆಂಬುವ ಭಾವನೆ ಕೂಡ ಸುಳಿಯಬಾರದು ಬಲಗೈಯಿಂದ ನೀಡಿರುವುದು ಎಡಗೈಗೆ ಗೊತ್ತಾಗದಿರಬೇಕು. 'ಬಲ್ಲೆಯೆ ಎಂದೆಡೆ ಬಲಗೈಯನರಿಯೆನಬೇಕು' ಎಂದು ಶಿವಶರಣರ ಗುಪ್ತ ದೇಣಿಗೆ ನೀಡಲೂ ಹೆಚ್ಚು ಪ್ರಾಶಸ್ತ್ಯ ನೀಡಿದರೆಂಬುದು ಇದರಿಂದ ಮನದಟ್ಟಾಗುತ್ತದೆ.

**ದಾಸೋಹದಲ್ಲಿ ಅಹಂಕಾರಕ್ಕೆ ಆಸ್ಪದವಿಲ್ಲ:**

ನೀಡುವಲ್ಲಿ ವಿನಯವಿರಬೇಕು. ಅಲ್ಲಿ ದರ್ಪ ಅಹಂಕಾರದ ಸೋಂಕೂ ಇರಬಾರದು. 'ಶಿವನ ಸೊಮ್ಮು ಶಿವನಿಗೆ ಸಲ್ಲಿತ್ತು' ಎಂಬುವ ವಿನಮ್ರತೆಯಿರಬೇಕು. ಮಾಡಿದೆನೆಂಬುದು ಮನದಲ್ಲಿ ಇಲ್ಲದಿರೆ ಬೇಡಿದ್ದನ್ನು ಆ ದೇವರು ಕರುಣಿಸುತ್ತಾನೆ ಎಂದು ಶಿವಶರವಣರು ಹೇಳುವಲ್ಲಿ ದಾಸೋಹ ಮಾಡುವಾಗ ಹೇಗಿರಬೇಕೆಂಬುದನ್ನು ನಿರ್ದೇಶನವಿದೆ.

ನೀಡಿದ್ದನ್ನು ಕಂಡ ಕಂಡವರ ಮುಂದೆಲ್ಲ ಪ್ರಸ್ತಾಪಿಸಿ, ತನ್ನ ದೊಡ್ಡಸ್ತಿಕೆಯ ಬಡಾಯಿ ಕೊಚ್ಚಿಕೊಂಡು, ಎಲ್ಲವೂ ತಮ್ಮಿಂದಲೇ ಆಯ್ತು, ಎಲ್ಲದಕ್ಕೂ ತಾವೇ ಕಾರಣೀ ಕರ್ತವೆಂದು ಗರ್ವಿಸಿದರೆ, ಅಂತಹವರ ಅಧಃ ಪತನವಾಗುವುದು ಶತಸಿದ್ಧ, ಎಲ್ಲಿ ಅತಿಯಾದ ಅಹಂಕಾರವಿರುತ್ತದೆಯೋ ಅಲ್ಲಿ ಸರ್ವನಾಶ ಕಟ್ಟಿಟ್ಟ ಬುತ್ತಿ ಎಂಬುದನ್ನು ತಿಳಿದುಕೊಳ್ಳುವುದು ಒಳಿತು. ಅದಕ್ಕಾಗಿಯೇ-

**ಬಸವಣ್ಣ:**

"ಮಾಡಿದೆನೆಂಬುದು ಮನದಲ್ಲಿ ಹೊಳೆದರೆ
ಏಡಿಸಿ ಕಾಡಿತ್ತು ಶಿವನ ಡಂಗುರ!
ಮಾಡಿದೆನ್ನನ್ನದಿರಾ ಲಿಂಗಕ್ಕೆ
ಮಾಡಿದೆನೆನ್ನದಿರಾ ಜಂಗಮಕ್ಕೆ

ಮಾಡಿದೆನೆಂಬುದೆ ಮನದಲಿಲ್ಲದಿದ್ದಡೆ
ಬೇಡಿತ್ತನೀವನು ಕೂಡಲಸಂಗಮದೇವ"[೩೦]

**ಚೆನ್ನಬಸವಣ್ಣ:**

"ನಿಮ್ಮ ಭಕ್ತರಿಗೆ ಮಾಡಿದೆನೆಂಬುದು
ಮನದಲ್ಲಿ ಮೂಡಿದರೆ ಐದನೆಯ ಪಾತಕ"[೩೧]

**ಅಲ್ಲಮ:**

"ಮಾಡಿಹೆ-ಮಾಡಿಹೆಯೆಂಬನ್ನವರ
ತನ್ನ ಅವಧಿಗೆ ಬಂದುದನರಿವ ಪರಿಯಿನೆಂತೋ
ಅಸಗ ನೀರಡಿಸಿ ಸತ್ತಂತಾಗಬೇಡ"[೩೨]

**ಬಸವಣ್ಣ:**

"ತನು ಮನ ಧನವೆಂಬ ಮೂರು ಕತ್ತಿಯಿವೆ
ಸಲೆ ಮೂಗಿನ ಮೇಲಯ್ಯಾ
ಲಿಂಗ ಜಂಗಮಕ್ಕೆ ಮಾಡಿಡೆನೆಂಬವಂಗೆ"[೩೩]

ಬಸವ-ಅಲ್ಲಮ-ಚೆನ್ನಬಸವರ-ಈ ವಚನಗಳಿಂದ ತಿಳಿಯುವ ಸಂಗತಿಯೇನೆಂದರೆ-ದಾಸೋಹ ಮಾಡುವುದನ್ನು ಅವರಿವರ ಮುಂದೆ ಹೇಳುವುದು ಒತ್ತಟ್ಟಿಗಿರಲಿ, ಕೊಟ್ಟವರ ಮನದಲ್ಲಿಯೂ ನಾವು ಕೊಟ್ಟದ್ದೆವೆಂಬುದು ಮೂಡಬಾರದು. ಅದರಲ್ಲಿಯೂ 'ಗುರು-ಲಿಂಗ-ಜಂಗಮ'ಕ್ಕೆ ಮಾಡಿದ ನೀಡಿದ ಸಂಗತಿಯ ಬಗ್ಗೆ ಪ್ರಸ್ತಾಪಿಸಬಾರದು. ಅಹಂಕಾರಿಯಾಗಿ 'ಜಂಭ' ಕೊಚ್ಚಿ ಕೊಂಡರೆ 'ಎಡಿಸಿ ಕಾಡಿತ್ತು ಶಿವನ ಢಂಗೂರ'ವೆಂದು ಬಸವಣ್ಣನವರು ಎಚ್ಚರಿಸಿದ್ದಾರೆ. ಚೆನ್ನಬಸವಣ್ಣನವರು ಶಿವ ಭಕ್ತರಿಗೆ ಸಲ್ಲಿಸಿದೆನೆಂದು ಗರ್ವಿಸಿದರೆ, ಅಂತಹವನು ಐದನೆಯ (ಪಂಚಮ) ನರಕದಲ್ಲಿ ಬೀಳುತ್ತಾನೆಂದು ಸ್ಪಷ್ಟಗೊಳಿಸಿದ್ದಾರೆ. ಅದೇ ರೀತಿ ಅಲ್ಲಮಪ್ರಭು ಅಗಸ ನೀರಲ್ಲಿಯೇ ಇದ್ದರೂ ನೀರಡಿಸಿ ಸತ್ತಂತಹ ಸ್ಥಿತಿಯಾಗುತ್ತದೆಯೆಂದು ಮುನ್ಸೂಚನೆ ಕೊಟ್ಟಿದ್ದಾರೆ. ಮಲಿನ ಬಟ್ಟೆಗಳನ್ನು ತೊಳೆ-ತೊಳೆದು ಇದ್ದ ನೀರೆಲ್ಲ ಕೊಳೆಯಾಗುತ್ತವೆ. ಆಗ ಬಾಯಾರಿಕೆಯಾದರೆ ಶುದ್ಧ ನೀರು ಸಿಕ್ಕುವುದೆಲ್ಲಿ? ಕೊಳೆ ನೀರನ್ನು ಕುಡಿಯುವುದೆಂತು? ಕುಡಿಯದೆ ಹೇಗಿರುವುದು? ಇಂಥದೊಂದು ರಿಕ್ತಾವಸ್ಥೆ ಅಗಸನಿಗುಂಟಾಗುತ್ತದೆ. ಹಾಗೆಯೇ ಮಾಡಿದೆನೆಂದುಕೊಂಡರೆ ತೊಂದರೆ ತಪ್ಪಿದಲ್ಲ. ಏಕೆಂದರೆ ಮಾಡಿದೆಂಬುದರಿಂದ ಅಹಂಕಾರ! ಅದು ಬಟ್ಟೆ ತೊಳೆದ ನೀರಿನಂತಾಗಿರುತ್ತದೆ. ಅದಕ್ಕಾಗಿ ಅದು ನಿರುಪಯುಕ್ತವಾಗಿ ಹೋಗುತ್ತದೆಯೆಂದು ಸುಂದರವಾದ ಉಪಮೆಯ ಮೂಲಕ ಅಲ್ಲಮಪ್ರಭುಗಳು ಸೊಗಸಾಗಿ ನಿರೂಪಿಸಿದ್ದಾರೆ.

---

೩೦. ಬ. ಷ. ವ. ಸಂ: ಶಿ. ಶಿ. ಬಸವನಾಳ, ವ-೨೩೩, ಪುಟ-೬೦

೩೧. ಚೆನ್ನಬಸವಣ್ಣನವರ ವಚನಗಳು, ಸಂ: ಡಾ|| ಆರ್. ಸಿ. ಹಿರೇಮಠ, ವ-೪೧೧, ಪು-೧೮೪

೩೨. ಅಲ್ಲಮನ ವಚನ ಚಂದ್ರಿಕೆ, ಸಂ: ಶಿ. ಶಿ. ಬಸವನಾಳ, ವ-೨೦೬, ಪು-೫೨

೩೩. ಬಸವಣ್ಣನವರ ಷಟ್‌ಸ್ಥಲ ವಚನಗಳು, ಸಂ: ಶಿ.ಶಿ. ಬಸವನಾಳ, ವ-೨೦೬, ಪು-೫೨

ನಾವು ಮಾಡಿದ ನೀಡಿದ ಸಂಗತಿಗಳು ನಮ್ಮನ್ನು ಕಾಡಬಾರದು. ಮನಸ್ಸಿನಲ್ಲಿಯೂ ಮೂಡಬಾರದು. ಕಾರಣ, ಅವೆಲ್ಲವುಗಳು ನಮ್ಮ ವಸ್ತುಗಳೇ ಅಲ್ಲ. ಅವುಗಳ ಮೇಲೆ ನಮ್ಮ ಹಕ್ಕು ಇರುವುದಿಲ್ಲ. ಎಲ್ಲದರ ಮೇಲೂ ಭಗವಂತನ ಹಕ್ಕಿದೆ ಚರಾಚರ ವಸ್ತುಗಳೆಲ್ಲ ಪರಮಾತ್ಮನಿಗೆ ಸೇರಿದವುಗಳೆಂದು ವಚನಕಾರರು ಬೋಧಿಸಿದ್ದಾರೆ.

> "ಇಳೆ ನಿಮ್ಮದಾನ, ಬೆಳೆ ನಿಮ್ಮ ದಾನ
> ಸುಳಿದು ಬೀಸುವ ಗಾಳಿ ನಿಮ್ಮ ದಾನ"
> ಎಂದು ಜೇಡರದಾಸಿಮಯ್ಯನವರು ಹೇಳಿ-
> "ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ
> ಸುತ್ತಿ ಹರಿವ ಸಾಗರ ನಿಮ್ಮ ದಾನ"[೩೪]

ಎನ್ನುವಲ್ಲಿ, ಈ ಸೃಷ್ಟಿಯಲ್ಲಿರುವ ಸಮಸ್ತ ವಸ್ತುಗಳೆಲ್ಲವೂ ಶಿವನಿಂದ ನಮಗೆ ದಾನರೂಪದಲ್ಲಿ ಬಂದಿವೆ. ಮಾನವ ನೆಪ ಮಾತ್ರ ದಯಾಮಯನಾದ ಆ ಮಹಾದೇವನು, ಮಾನವನಿಗೆ ಕರುಣಿಸಿ ನೀಡಿದ ಕೊಡುಗೆಗಳಾಗಿವೆಯೆಂಬುದನ್ನು ದಾಸಿಮಯ್ಯ ತಿಳಿಸಿದ್ದಾನೆ.

ಈ ರೀತಿಯಾಗಿ ಪರಮಾತ್ಮನು ಉದಾರವಾಗಿ ನೀಡಿದದ್ದನ್ನು ಇನ್ನೊಬ್ಬರಿಗೆ ಕೊಡಬೇಕು. ಗುರುಲಿಂಗ ಜಂಗಮಕ್ಕೆ ಅರ್ಪಿಸಬೇಕು. ಹೀಗೆ ಕೊಡುವಲ್ಲಿ ಹಾಗು ನೀಡುವಲ್ಲಿ ಅಹಂಕಾರ ಪಡಬಾರದು. "ಶಿವ ಲೋಕ ಸಂಪತ್ತನ್ನು ನಮಗೆ ನೀಡಿದ ದಾನಿ; ನಾವೆಲ್ಲ ಈ ಮಹಾದಾನದ ದಾಸೋಹಿಗಳು, ಹೀಗೆ ಸಂಪತ್ತಿನ ವಿನಿಮಯದ ವಿಷಯದಲ್ಲಿ 'ಹಕ್ಕು' ಪ್ರಶ್ನೆಯನ್ನೇ ಮುಖ್ಯವಾಗಿಟ್ಟು ಕೊಂಡು ಸಾಹಿತ್ಯದ ಮೂಲಕ ಅದರ ಅರ್ಥಸಮಸ್ಯೆಯನ್ನು ಬಿಡಿಸಲು ಶರಣರು ಪ್ರಯತ್ನಿಸಿದರು"[೩೫] ಎಂದಿರುವ ಡಾ|| ಎಂ. ಎಂ. ಕಲಬುರ್ಗಿಯವರ ಮಾತು ಸಮರ್ಥನೀಯವಾಗಿದೆ.

ಬಸವಣ್ಣನವರು ದಾಸೋಹಗೈವಲ್ಲಿ ಅಹಂಕಾರಕ್ಕೆ ಆಸ್ಪದವಿಲ್ಲದಿರಬೇಕೆಂದು ಈ ರೀತಿಯಾಗಿ ಸ್ಪಷ್ಟಪಡಿಸಿದ್ದಾರೆ.

> "ಹತ್ತು ಮತ್ತರ ಭೂಮಿ, ಬತ್ತೆದ ಹಯನು, ನಂದಾದೀವಿಗೆಯ
> ನಡೆಸಿದೆವೆಂಬವರ ಮುಖವ ನೋಡಲಾಗದು
> ಅವರ ನುಡಿಯ ಕೇಳಲಾಗದು
> ........................................
> ಎನ್ನಿಂದಲೇ ಆಯಿತ್ತು, ಎನ್ನಿಂದಲೇ ಹೋಯಿತ್ತು ಎಂಬುವನ ಬಾಯಲ್ಲಿ
> ಮೆಟ್ಟ ಹುಡಿಯ ಹೊಯ್ಯದೆ ಮಾಬನೆ
> ಕೂಡಲಸಂಗಮದೇವ"[೩೬]

ಈ ವಚನದಲ್ಲಿ ಅಹಂಕಾರಿಗಳಿಗೆ ಒದಗುವ ಶಿಕ್ಷೆಯನ್ನು ವಿವರಿಸಲಾಗಿದೆ. ವ್ಯಕ್ತಿ ನಿಗರ್ವಿಯಾಗಬೇಕು. ಕೆರೆಯ ನೀರನ್ನು ಕೆರೆಗೆ ಚೆಲ್ಲಿರುವೆನೆಂಬ ಧನ್ಯತಾಭಾವವಿರ ಬೇಕೆಂಬುದನ್ನು ಬಸವಣ್ಣನವರು ಅರ್ಥಪೂರ್ಣವಾಗಿ ವಿವರಿಸಿದ್ದಾರೆ.

❑

---

೩೪. ಆದ್ಯ ವಚನಕಾರ ಜೇಡರ ದಾಸಿಮಯ್ಯ, ವಚನ-೩೩,ಪುಟ-೮

೩೫. ಡಾ|| ಎಂ. ಎಂ. ಕಲಬುರ್ಗಿ, ಮಾರ್ಗ-೧ ಪುಟ-೩-೧

೩೬. ಬ. ಷ. ವ. ಸಂ: ಶಿ. ಶಿ. ಬಸವನಾಳ, ವ-೨೨೮, ಪುಟ-೫೮

# ತೆಲುಗು ಜೊಮ್ಮಯ್ಯನ ರಗಳೆ - ಒಂದು ಸಾಂಸ್ಕೃತಿಕ ಅಧ್ಯಯನ*

ಕನ್ನಡ ಸಾಹಿತ್ಯದಲ್ಲಿಯೇ 'ಹರಿಹರ'ನ ವ್ಯಕ್ತಿತ್ವ ವಿಶಿಷ್ಟವಾಗಿದೆ. ಕಥಾವಸ್ತು, ಭಾಷೆ, ಛಂದಸ್ಸು, ರಾಜಾಶ್ರಯ ಇತ್ಯಾದಿ ವಿಷಯಗಳಲ್ಲಿ ಕ್ರಾಂತಿಕಾರಿ ನಿಲುವನ್ನು ತಳೆದ ಧೀರಕವಿ ಈತ. ಸಂಸ್ಕೃತ ಸಾಹಿತ್ಯಕ್ಕೆ ವಾಲ್ಮೀಕಿ ಆದಿಕವಿಯಾದಂತೆ, ಕನ್ನಡ ಸಾಹಿತ್ಯಕ್ಕೆ ಪಂಪನು ಆದಿಕವಿಯಾದಂತೆ, ವೀರಶೈವ ಸಾಹಿತ್ಯಕ್ಕೆ ಮಹಾಕವಿ ಹರಿಹರನು ಆದಿಕವಿಯೆನಿಸಿದ್ದಾನೆ.

ಹರಿಹರನು ಹಂಪೆಯರಸ ವಿರೂಪಾಕ್ಷನ ಪರಮಭಕ್ತಶಿರೋಮಣಿ ವಿರೂಪಾಕ್ಷನ ಭಕ್ತಿಯೇ ಈತನಿಗೆ ಸರ್ವಸ್ವ. ಎಲ್ಲದಕ್ಕೂ ಸ್ಫೂರ್ತಿಯ ಸೆಲೆಯಾಗಿದೆ. 'ಪಂಪಾಪುರದ ವಿರೂಪಾಕ್ಷ' ಎಂದಾಕ್ಷಣ ಮೈಮರೆಯುವ ಹರಿಹರ, ಆತನ ವಿವಿಧ ನಾಮಸ್ಮರಣೆಯಲ್ಲಿ ತೊಡಗುತ್ತಾನೆ. 'ಮನುಜರ ಮೇಲೆ ಸಾವರ ಮೇಲೆ, ಕನಿಷ್ಠರ ಮೇಲೆ, ಕಾವ್ಯ ಕಟ್ಟುವುದಿಲ್ಲವೆಂದು ಪ್ರತಿಜ್ಞೆಗೈಯ್ದ ದಿಟ್ಟಕವಿ. ರಾಜಾಶ್ರಯದ ಹಂಗನ್ನು ಹರಿದೊಗೆದು ವಿರೂಪಾಕ್ಷನಿಗೆ ತನ್ನ ನಾಲಿಗೆಯನ್ನೇ ಮಾರಿಕೊಂಡನೆಂದು ಹೇಳಿದ ಭಾವುಕಜೀವಿ. ಚಂಪೂವೇ ಮಹಾಕಾವ್ಯದ ಮಾಧ್ಯಮವೆಂದು ಭಾವಿಸಿದ ಕಾಲದಲ್ಲಿ, ತನ್ನ ಅಪಾರ ಪ್ರತಿಭೆ, ಅಗಾಧ ಪಾಂಡಿತ್ಯಗಳಿಂದ 'ರಗಳೆ'ಯಲ್ಲಿ ಕೃಷಿಗೈದು ಮಹಾಕಾವ್ಯಗಳಿಗೆ ತಕ್ಕ ಮಾಧ್ಯಮವನ್ನಾಗಿ ರೂಪಿಸ್ಸಿದನು. ದೇಸಿಯ ಛಂದಸ್ಸಾದ ರಗಳೆಯಲ್ಲಿ ಲಲಿತ, ಉತ್ಸಾಹ,, ಮಂದಾನಿಲವೆಂಬ ಮೂರು ವಿಧದಲ್ಲಿ ವಿಂಗಡಿಸಿದನು. ರಗಳೆಯ ಸಾರಸರ್ವಸ್ವವನ್ನು ಹೀರಿ ಭಾಷೆಯನ್ನು ಸಮರ್ಥವಾಗಿ ದುಡಿಸಿಕೊಂಡು 'ನ ಭೂತೋ ನ ಭವಿಷ್ಯತಿಃ' ಎನ್ನುವಂತೆ ರಗಳೆಯಲ್ಲಿ ಅತ್ಯುತ್ಕೃಷ್ಟವಾದ ಕಾವ್ಯಗಳನ್ನು ರಚಿಸಿದ್ದಾನೆ.

'ಗಿರಿಜಾಕಲ್ಯಾಣ'ವು ಹರಿಹರನ ಚಂಪೂಕಾವ್ಯ. ಚಂಪೂಕಾವ್ಯವಾದರೂ ವಿನೂತನ ರೀತಿಯಲ್ಲಿ ಮೂಡಿ ಬಂದಿದೆ. 'ಪಂಪಾಶತಕ' ಹಾಗೂ 'ರಕ್ಷಾಶತಕ'ಗಳು ಕನ್ನಡ ಸಾಹಿತ್ಯದ ಶ್ರೇಷ್ಠ ಶತಕಗಳೆಂದು ವಿದ್ವಾಂಸರು ಮೆಚ್ಚುಗೆ ಪಡೆದಿವೆ. ನೂತನ ಹಾಗೂ ಪುರಾತನ ಶಿವಶರಣರ ಕುರಿತು ನೂರಾರು ರಗಳೆಗಳನ್ನು ಬಿಡಿಸಿ, ಯುಗಪ್ರವರ್ತಕರೆನೆನಿಸಿ ಕೊಂಡಿದ್ದಾನೆ. ಬಸವರಾಜ ದೇವರ ರಗಳೆ, ನಂಬಿಯಣ್ಣನ ರಗಳೆಗಳು ಮಹಾಕಾವ್ಯ ವ್ಯಾಪ್ತಿಯನ್ನು ಪಡೆದಿವೆ. ಮಲುಹಣನ ರಗಳೆಯಲ್ಲಿ ಶೃಂಗಾರ ರಸ ತನ್ನ ಉತ್ತುಂಗ ಶಿಖರ ತಲುಪಿದೆ. ಪುಷ್ಪರಗಳೆಯು ಕನ್ನಡದಲ್ಲಿಯೇ ವಿಶಿಷ್ಟಮಯವಾದ ಕೃತಿಯಾಗಿ ಅರಳಿ ನಿಂತಿದೆ. ಪರಂಪರಾಗತವಾದ ರಾಮಾಯಣ ಮತ್ತು ಮಹಾಭಾರತಗಳಿಂದ

---

* ಬಸವಪಥ, ಸಂ-೧೧, ಸಂ-೬ (೧೯೮೯)ರಲ್ಲಿ ಪ್ರಕಟವಾದ ಲೇಖನವಿದು. (ಪುಟ-೪೧ ರಿಂದ ೫೦)

ಕಥಾವಸ್ತುವನ್ನು ಆರಿಸಿಕೊಳ್ಳದೆ, ಶಿವಶರಣರ ಜೀವನವನ್ನೇ ತನ್ನ ಕಾವ್ಯಕ್ಕೆ ವಸ್ತುವಾಗಿ ಸ್ವೀಕರಿಸುವುದರ ಮೂಲಕ ಹೊಸಯುಗವೊಂದಕೆ ಹುಟ್ಟುಹಾಕಿದ ಮಹಾಕವಿಯೀತ.

ಮಹಾಕವಿ ಹರಿಹರನು ರಚಿಸಿರುವ ಅಸಂಖ್ಯ ರಗಳೆಗಳಲ್ಲಿ 'ತೆಲಗು ಜೊಮ್ಮಯ್ಯ'ನ ರಗಳೆಯೂ ಒಂದಾಗಿದೆ. ಈ ರಗಳೆಯನ್ನು ಸಾಂಸ್ಕೃತಿಕವಾಗಿ ಅಧ್ಯಾಯನಿಸುವುದು ಈ ಲೇಖನದ ಉದ್ದೇಶವಾಗಿದೆ.

**ಸಂಸ್ಕೃತಿ**

ಒಂದು ಪ್ರದೇಶದಲ್ಲಿ ವಾಸಿಸುತ್ತಿರುವ ಒಂದು ಜನಾಂಗದ ಜೀವನ ವಿಧಾನವೇ ಸಂಸ್ಕೃತಿಯೆಂದು ಸ್ಥೂಲವಾಗಿ ಹೇಳಬಹುದು. ಈ ಸಂಸ್ಕೃತಿ ಪದವು ಇಂಗ್ಲೀಷಿನ `Culture' ಎಂಬ ಪದದ ಸಮಾನಾರ್ಥಕ ರೂಪ. ಸಂಸ್ಕೃತಿಯು ಒಂದು ಜನಾಂಗದ ಸಮಸ್ತ ಚಟುವಟಿಕೆಗಳು, ಅವರ ಅಭಿರುಚಿ, ಆಚರಣೆ, ನಂಬಿಕೆ, ಸಂಪ್ರದಾಯಗಳು ಒಳಗೊಳ್ಳುತ್ತವೆ. ಅಂದರೆ ಆಯಾ ಜನಾಂಗದ ಕಲೆಗಳಲ್ಲಿ ಸಾಮಾಜಿಕ ವ್ಯವಸ್ಥೆಯಲ್ಲಿ, ಅವರ ನಡೆ-ನುಡಿಗಳಲ್ಲಿ, ಆಚಾರ-ವಿಚಾರಗಳಲ್ಲಿ, ವ್ಯವಹಾರಗಳಲ್ಲಿ, ಧಾರ್ಮಿಕ ಕ್ರಿಯೆಗಳಲ್ಲಿ ಈ ಸಂಸ್ಕೃತಿಯು ಗೋಚರಿಸುತ್ತದೆ.

ಡಾ. ಎಂ. ಚಿದಾನಂದಮೂರ್ತಿಯವರು ಎಲಿಯಟ್ (Eliot) ಮತ್ತು ಹೆನ್ರಿ ಪ್ರ್ಯಾಟ್ (Henry prat) ಅವರು ವಿವರಿಸಿದ 'ಸಂಸ್ಕೃತಿಯ ವ್ಯಾಖ್ಯೆಯನ್ನು ಸ್ವೀಕರಿಸಿ, ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. "ಮಾನವ ತನ್ನ ಪರಿಸರದಿಂದ ಸಂಸ್ಕೃತಿಯನ್ನು ಕಲಿತು ಉತ್ತಮಗೊಳ್ಳುತ್ತ ಹೋಗುತ್ತಾನೆ. ಹೀಗೆ ಹುಟ್ಟಿನಿಂದ ಬಾರದೆ, ಮಾನವ ತನ್ನ ಪರಿಸರದಿಂದ ಕಲಿತುಕೊಳ್ಳುವ ಭಾಷೆ ಉಪಕರಣಗಳ ತಯಾರಿಕೆ, ಕಲೆ, ವಿಜ್ಞಾನ, ಕಾನೂನು, ಆಡಳಿತ ನೀತಿ ಮತ್ತು ಧರ್ಮ ಇತ್ಯಾದಿಗಳನ್ನು ಒಳಗೊಳ್ಳುತ್ತದೆ 'ಸಂಸ್ಕೃತಿ'. ಆದ್ದರಿಂದ ಸಂಸ್ಕೃತಿಯೆಂದರೆ ಒಂದು ಸಮಾಜದ ಜೀವನ ವಿಧಾನ, ಅದರ ಆಚಾರ ವ್ಯವಹಾರಗಳು ಅದರ ಸಂಸ್ಥೆಗಳು ಆಲೋಚನಾ ವಿಧಾನಗಳು"[೧] ಡಾ. ಚಿದಾನಂದಮೂರ್ತಿಯವರ ಈ ಭಾಷ್ಯ ಸಮಂಜಸವಾಗಿದ್ದು, ಸಂಸ್ಕೃತಿಯನ್ನು ತಿಳಿದುಕೊಳ್ಳಲು ದಾರಿದೀಪವಾಗುತ್ತದೆ.

**ಸಾಂಸ್ಕೃತಿಕ ಅಧ್ಯಯನ**

ಒಂದು ಪಂಗಡ ಇಲ್ಲವೆ, ಒಂದು ಜನಾಂಗವು ಬದುಕನ್ನು ನಡೆಸಿದ ರೀತಿ, ಅವರು ಆಚರಿಸುತ್ತಿರುವ ಹಬ್ಬ ಹುಣ್ಣಿಮೆಗಳು, ನಂಬಿಕೆಗಳು, ಧರ್ಮ ಮತ್ತು ಧಾರ್ಮಿಕ ಚಟುವಟಿಕೆಗಳು, ಆಯಾ ಯುಗವನ್ನು ನಡೆಸುತ್ತ ಬಂದ ಆದರ್ಶಗಳು, ಅಂದಂದಿನ ಮೌಲ್ಯಗಳು, ಜಾತಿ - ಮತಗಳು, ಆರ್ಥಿಕ ವ್ಯವಸ್ಥೆ, ಅವರ ವ್ಯವಹಾರ, ರಾಜಕೀಯ

---

೧. ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ. ಪುಟ - ೨೧

ವ್ಯವಸ್ಥೆ ಇತ್ಯಾದಿಗಳು ಒಟ್ಟಾಗಿ ಅವರು ಬದುಕಿ ಜೀವನ ನಡೆಸಿದ ಕ್ರಮ ಇವೆಲ್ಲವನ್ನು ತಿಳಿದುಕೊಳ್ಳುವ ಅಧ್ಯಯನವೇ 'ಸಾಂಸ್ಕೃತಿಕ ಅಧ್ಯಯನ'ವೆಂದು ಸ್ಥೂಲವಾಗಿ ಹೇಳಬಹುದಾಗಿದೆ.

ಪಂಪಭಾರತ, ಪಂಚತಂತ್ರ, ಧರ್ಮಾಮೃತ ಮುಂತಾದ ಗ್ರಂಥಗಳಲ್ಲಿ ಸಾಂಸ್ಕೃತಿಕ ಅಂಶಗಳು ಹೆಪ್ಪುಗಟ್ಟಿವೆ. ಶಿವಶರಣರ ವಚನಗಳಂತೂ ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳುವವರಿಗೆ ಬೃಹತ್ ಗಣಿಗಳಾಗಿವೆ. ಹಾಗೆ ಮಹಾಕವಿ ಹರಿಹರನ ಎಲ್ಲ ರಗಳೆಗಳನ್ನೂ ಒಗ್ಗೂಡಿಸಿ, ಆಮೂಲಾಗ್ರವಾಗಿ ಅಧ್ಯಯನಕ್ಕೊಳಪಡಿಸಿದರೆ, ಅಂದಿನ ಯುಗವನ್ನು ಸಮಗ್ರವಾಗಿ ಪುನಃ ಕಟ್ಟಿಕೊಡಬಹುದಾಗಿದೆ. ಸದ್ಯ ಇಲ್ಲಿ 'ತೆಲುಗು ಜೊಮ್ಮಯ್ಯನ ರಗಳೆ'ಯೊಂದನ್ನೇ ಸಾಂಸ್ಕೃತಿಕ ಅಧ್ಯಯನಕ್ಕೆಂದು ಆರಿಸಿಕೊಳ್ಳಲಾಗಿದೆ.

ತೆಲುಗು ಜೊಮ್ಮಯ್ಯನ ರಗಳೆಯು ಧಾರ್ಮಿಕ ಸಂಘರ್ಷವನ್ನೊಳಗೊಂಡ ಒಂದು ಕಿರುಕಾವ್ಯ. 'ಏಕಾಂಕ ರಾಮಯ್ಯನ ರಗಳೆ'ಯಲ್ಲಿ ಶೈವರಿಗೂ ಜೈನರಿಗೂ ಧಾರ್ಮಿಕ ಸಂಘರ್ಷ ಜರುಗಿದ್ದರೆ; ಪ್ರಸ್ತುತ ರಗಳೆಯಲ್ಲಿ ವೈದಿಕರಿಗೂ ಶೈವರಿಗೂ ಪರಸ್ಪರ ನಡೆದಿರುವ ಘರ್ಷಣೆಯನ್ನು ಕಾಣಬಹುದು.

ಇದು 'ಧರ್ಮಕಲಹ'ದ ವಸ್ತುವಾಗಿರುವುದರಿಂದ ಸಮಾಜದ ಎಲ್ಲ ಸ್ತರಗಳನ್ನು, ಜನಾಂಗದ ಸರ್ವಾಂಗಗಳನ್ನು ಕಾಣುವುದೂ ಸಾಧ್ಯವಿಲ್ಲ. ಯಾವುದೇ ಒಂದು ಕಾವ್ಯದಲ್ಲಿಯೇ ಎಲ್ಲ ಅಂಶಗಳನ್ನು ಕಾಣುವುದು ಸಾಧ್ಯವಿಲ್ಲ. ತೆಲುಗು ಜೊಮ್ಮಯ್ಯನ ರಗಳೆ ಮೂರೇ ಮೂರು ಸ್ಥಲದಲ್ಲಿ ನಿರೂಪಣೆಯಾಗಿದ್ದು, ಕಾವ್ಯ ವಸ್ತು ಸೀಮಿತವಾಗಿದೆ. ಆದ್ದರಿಂದ ಧಾರ್ಮಿಕ ಅಂಶಗಳನ್ನು ಧಾರಾಳವಾಗಿಯೂ ರಾಜಕೀಯ ಅಂಶಗಳನ್ನು ವಿರಳವಾಗಿಯೂ, ಸಾಮಾಜಿಕ ಅಂಶಗಳನ್ನು ತೆಳುವಾಗಿಯೂ ಗುರುತಿಸಬಹುದು.

## ಧಾರ್ಮಿಕ ಅಂಶಗಳು

ಈ ರಗಳೆಯಲ್ಲಿ ಕಂಡುಬರುವ ಧಾರ್ಮಿಕ ಅಂಶಗಳನ್ನು ಅಧ್ಯಯನಕ್ಕೆ ಅನುಕೂಲವಾಗುವಂತೆ (ಅ) ಪೂಜಾವಸ್ತುಗಳು (ಬ) ಅರ್ಚಕ (ಕ) ಪುರಾಣ (ಡ) ಧಾರ್ಮಿಕ ಸಂಘರ್ಷೆ (ಗು) ಸಾರ್ವಜನಿಕ ಸಲ್ಲಿಸುವ ಗೌರವ (ಇ) ಧಾರ್ಮಿಕ ವ್ಯಕ್ತಿಗಳು ಒಡ್ಡೋಲಗಕ್ಕೆ ಬರುವ ಚಿತ್ರ ಈ ರೀತಿಯಾಗಿ ವಿಂಗಡಿಸಬಹುದು.

### (ಅ) ಪೂಜಾವಸ್ತುಗಳು

ಹರಿಹರನು ತನ್ನ ಕಾಲದಲ್ಲಿ ಪೂಜೆಗೆ ಬಳಸುತ್ತಿದ್ದ ಸಾಮಗ್ರಿಗಳನ್ನು ಒಂದೆಡೆಯಲ್ಲಿ ಹೀಗೆ ಸಂಗ್ರಹಿಸಿ ಹೇಳಿದ್ದಾನೆ.

> "ಸಂತೋಷದಿಂ ಪರಮ ಹರುಷಗಳಂ
> ತಾಳ್ದು ಹೊಸ ಹೊಸಪರಿಯ ವಸ್ತು ಸಂತತಿಗಳಂ
> ಚಂದನಂ ಕರ್ಪೂರವಗರು ಧೂಪಗಳಂ

ಮುಂದೈಸಿ ಕಂಪಿಡುವ ಸಾಧು ಕತ್ತುರಿಗಳಂ
ಅಂದಂದು ಬಂದೆಸೆವ ಪೊಚ್ಚ ಪೊಸ ಪೂಗಳಂ
. . . . . . . . . . . . . . . . . . . . . . . . . . . . .
ಪುಳುಕುಸುತೆ ಪೊಡೆವಮೊಡುತೆ ಶಿವಭಕ್ತಿಗೊಲ್ದೆಯಿಂ
ಶಿವನನರ್ಚಿಸುತೆ. . . . . . . . . . . . . . . ."[೩]

ಈ ಪದ್ಯದಲ್ಲಿ ಹೊಸ ಬಟ್ಟೆ, ಚಂದನ, ಕರ್ಪೂರ, ಅಗರು, ಧೂಪ-ದೀಪ, ಕಸ್ತೂರಿ ಮತ್ತಿತರ ಸುಗಂಧ, ದ್ರವ್ಯಗಳು, ಅದೇ ತಾನೇ ಅರಳಿದ ಹೂಗಳು ಇತ್ಯಾದಿ ಪೂಜಾ ಸಲಕರಣೆಗಳೆಂದು ತಿಳಿದುಬರುತ್ತದೆ. ಇದೇ ಕವಿಯ 'ಬಸವರಾಜದೇವರ ರಗಳೆ' ಮಹಾದೇವಿಯಕ್ಕನ ರಗಳೆ'ಯಲ್ಲಿ ಪೂಜೆಯ ವಿವರಗಳನ್ನು ಸೊಗಸಾಗಿ ಚಿತ್ರಿಸಿದ್ದಾನೆ. ಕವಿ ಹರಿಹರನ ದಿನಚರಿ ಹಾಗೂ ಆತ್ಮಚರಿತ್ರೆಯಂತಿರುವ 'ಪುಷ್ಪರಗಳೆ'ಯಲ್ಲಿ ಸವಿವರವಾಗಿ ಮೂಡಿಬಂದಿವೆ. ಇವೆಲ್ಲ ಅಂಶಗಳು ಹರಿಹರನ ಕಾಲದ ಪೂಜೆಯ ಆಚರಣೆ, ಸಂಪ್ರದಾಯ ನಂಬಿಕೆಗಳು, ವಿಧಿ-ವಿಧಾನಗಳು, ಪೂಜಾಸಾಮಗ್ರಿಗಳು, ಪೂಜಿಸುವ ಕ್ರಮ ಮಂತಾದುವುಗಳನ್ನು ಪರಿಚಯಿಸುತ್ತವೆ.

(ಬ) ಅರ್ಚಕ

"…. ದಿನ ಉದಯದೊಳ್
ಸಾರ್ದು ಮೊಗಪ್ರಕ್ಷಾಲನಂ ಮಾಡಿ ಹರುಷದೊಳ್
ಆಗಮಸ್ಥಾನದೊಳ್ ಭಸಿತಮಂ ತೀವಿಟ್ಟು
ರಾಗದಿಂ ರುದ್ರಾಕ್ಷಿಗಳನಳವಡಲ್ತೊಟ್ಟು
ಸಜ್ಜೆಯರಮನೆಯೊಳೊಪ್ಪುವ ಭೀಮನಾಥನಂ"[೩]

ಇದರಲ್ಲಿ - ಪ್ರತಿನಿತ್ಯ ಸೂರ್ಯೋದಯಕ್ಕೆ ಮೊದಲು ಎದ್ದು ಸ್ನಾನಮಾಡಿ ಶುಭ್ರ ಮಡಿ ಉಡುಗೆಯುನ್ನುಟ್ಟು, ರುದ್ರಾಕ್ಷಿ ಮಾಲೆ ಧರಿಸಿ, ಹಣೆಯಲ್ಲಿ ಪವಿತ್ರ ವಿಭೂತಿಧರಿಸುವುದು ಪದ್ಧತಿ. ಇದರಿಂದ ಪೂಜಾರಿಯ (ಅರ್ಚಕನ) ಉಡುಗೆ-ತೊಡುಗೆಗಳ ಪರಿಚಯವಾಗುತ್ತದೆ. "ಚಂದದಿಂ ಪಾಡುತಂ" ಎಂಬ ಮಾತನ್ನು ಗಮನಿಸಬೇಕು. ಪೂಜೆಯು ನಡೆಯುವಾಗ 'ಹಾಡು' ಹಾಡುತ್ತಿದ್ದರೋ ಅಥವಾ 'ಮಂತ್ರಪಠಣ'ವನ್ನೇ ಹರಿಹರನು 'ಚಂದದಿ ಪಾಡುತ' ಎಂದಿರುವನೋ ವಿಚಾರಿಸಬೇಕಿದೆ. ಪೂಜಿಸುವಾಗ ವೈದಿಕರು ಪರಂಪರಾಗತವಾಗಿ ಮಂತ್ರವನ್ನು ಉಚ್ಚರಿಸುತ್ತಾರೆ. ಅದನ್ನು ಈಗಲೂ ಕಾಣುತ್ತೇವೆ. ಆದರೆ ಶಿವಶರಣರು ವೈದಿಕ ಸಂಪ್ರದಾಯಗಳನ್ನು ಮೆಟ್ಟಿನಿಂತವರು. ಅದಕ್ಕೆ ಪರ್ಯಾಯವಾಗಿ ತಮ್ಮದ್ದೇ ಆದ ಆಚರಣೆಗಳನ್ನು ಜಾರಿಯಲ್ಲಿ ತಂದವರು. ಹೀಗಾಗಿ ಇಲ್ಲಿ ಹಾಡಿರುವ ಸಾಧ್ಯತೆಯೇ ಹೆಚ್ಚಿದೆ. ಹರಿಹರನು ವಚನಕಾರರಿಗೆ ತೀರ ಸಮೀಪದವನಾಗಿರುವುದರಿಂದ ಅಂದಿನ ಸತ್ಯಸಂಗತಿಗಳನ್ನೇ ದಾಖಲಿಸಿರುವ ಸಾಧ್ಯತೆಯಿದೆ.

---

೨. ತೆಲುಗು ಜೊಮ್ಮಯ್ಯನ ರಗಳೆ, ಪುಟ-೩೮೩

೩. ತೆಲುಗು ಜೊಮ್ಮಯ್ಯನ ರಗಳೆ, ಪುಟ-೩೮೩

ಹೀಗಾಗಿ ವಚನಗಳನ್ನೇ ಪೂಜೆಯ ಕಾಲಕ್ಕೆ ಹಾಡುವ ರೂಢಿ ಬಳಕೆಯಲ್ಲಿ ಆ ಕಾಲಕ್ಕೆ ಬಂದಿರುವುದನ್ನು ಮಹಾಕವಿ ಹರಿಹರ ದಾಖಲಿಸಿದ್ದಾನೆಂದು ತಿಳಿಯಬಹುದಾಗಿದೆ. "ತಾವು ರಚಿಸಿದ ವಚನಗಳನ್ನೇ ಪೂಜೆಯ ಕಾಲದಲ್ಲಿ ಹಾಡುವ ಸಾಧ್ಯತೆಯೆ ಹೆಚ್ಚಾಗಿದೆ"[೪] ಎಂದಿರುವ ಡಾ. ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವನ್ನು ಈ ಹಿನ್ನೆಲೆಯಲ್ಲಿ ನೋಡಿದರೆ ಸಮಂಜಸವೆನಿಸುತ್ತದೆ.

### (ಕ) ಪುರಾಣಗಳು

ಈ ರಗಳೆಯಲ್ಲಿ ಸಾಂದರ್ಭಿಕವಾಗಿ ಶಿವಪುರಾಣ, ವಿಷ್ಣುಪುರಾಣ, ಕಟ್ಟುಕ ಪುರಾಣಗಳ ಪ್ರಸ್ತಾಪ ಬರುತ್ತದೆ. ಜೊತೆಗೆ ಅಂದಿನ ಕಾಲದಲ್ಲಿ ಸಮಾಜದ ಜನತೆಗೆ ತಿಳಿಯಪಡಿಸಲೆಂದು ಪುರಾಣಗಳನ್ನು ಓದುವ ಹಾಗೂ ಓದಿಸುವ ಪರಿಪಾಠವಿತ್ತೆಂಬುದು ಸ್ಪಷ್ಟವಾಗುತ್ತದೆ.

> "......... ಓರ್ವ ಪುರಾಣಿಕನಲ್ಲಿ
> ಸಂದಣಿಸಿ ವೈಷ್ಣವ ಪುರಾಣ ಓದುತ್ತಲ್ಲಿ"[೫]

ಎಂದು ಬಂದಿರುವುದರಿಂದ ಪುರಾಣ, ಪ್ರವಚನಗಳು ಜರುಗುತ್ತಿದ್ದವೆಂದು ಹೇಳಲು ಖಚಿತವಾದ ಆಧಾರಗಳು ದೊರೆಯುತ್ತವೆ. "ಪುರಾತನರ ಗೀತಗೋಷ್ಠಿಯೊಳ್ ಕುಳ್ಳಿರ್ದು" ಎನ್ನುವ ಮಾತಿನಿಂದ ಅಂದಿನ ಕಾಲಕ್ಕೆ ಗೀತಗೋಷ್ಠಿಗಳು ಜರುಗುತ್ತಿರುವ ಸಂಗತಿಗಳು ದಾಖಲಾಗಿವೆ. ದೈವ, ಧರ್ಮ, ಪುರಾಣ, ಪ್ರವಚನ, ಗೀತ-ಗೋಷ್ಠಿ ಇತ್ಯಾದಿಗಳು ನಡೆಯುವ ಸಂಗತಿಯ ಜೊತೆಗೆ ಅಂದಿನ ಕಾಲದಲ್ಲಿ ಜನರಿಗೆ ಪಾರಲೋಕದ ಬಗ್ಗೆ ಆಸಕ್ತಿಯಿದ್ದು ದೇವರಲ್ಲಿ ಭಕ್ತಿ-ಗೌರವಗಳಿರುವುದನ್ನು ತಿಳಿಬಹುದಾಗಿದೆ. ಶ್ರದ್ಧೆಯಿಂದ ಅಂದಿನ ಜನಾಂಗ ಪುರಾಣ ಕೇಳುವುದು, ಆಸಕ್ತಿಯಿಂದ ಗೀತಗೋಷ್ಠಿಗಳಲ್ಲಿ ಭಾಗವಹಿಸುತ್ತಿದ್ದ ಅಂಶವು ಸ್ಪಷ್ಟವಾಗುತ್ತದೆ.

ಅನ್ಯಮತಗಳನ್ನು ಖಂಡಿಸಿ, ಸ್ವಮತದ ಶ್ರೇಷ್ಠತೆಯನ್ನು ಎತ್ತಿಹೇಳುವ ಸಂಗತಿಗಳು ಅಲ್ಲಲ್ಲಿ ಗೋಚರಿಸುತ್ತವೆ. ಉದಾಹರಣೆಗೆ ವೈಷ್ಣವ ಪುರಾಣವನ್ನು ಓದುವಾಗ 'ಪಂಚಮುಖನಿಂದೆಯಂ ಮಾಡುತ್ತಿರುವಲ್ಲಿ' ಎಂಬ ಮಾತು ಇದಕ್ಕೆ ಆಧಾರವೊದಗಿಸುತ್ತದೆ. ಸ್ವಲ್ಪ ಹೆಚ್ಚು ಕಡಿಮೆ ಇದೇ ಶತಮಾನದಲ್ಲಿ ಬಾಳಿದ ನಯಸೇನ, ಬ್ರಹ್ಮಶಿವ, ವೃತ್ತವಿಲಾಸರ ಕೃತಿಗಳನ್ನು ಅವಲೋಕಿಸಿದಾಗ - ಅನ್ಯಮತದ ವಿಡಂಬನೆ, ಸ್ವಮತದ ಮಂಡನೆಯು ಸರ್ವೇಸಾಮಾನ್ಯವಾಗಿತ್ತೆಂಬ ಅಂಶ ಬೆಳಕಿಗೆ ಬರುತ್ತದೆ.

### (ಡ) ಧಾರ್ಮಿಕ ಸಂಘರ್ಷ

ಹೊಸ ಧರ್ಮವೊಂದು ಆವಿಷ್ಕಾರಗೊಂಡಾಗ ಅಂದಂದಿನ ಸಮಾಜದಲ್ಲಿ

---

೪. ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ, ಬೆಂ.ವಿ.ವಿ.ಬೆಂ. ಪುಟ-೩೪

೫. ತೆಲುಗು ಜೊಮ್ಮಯ್ಯನ ರಗಳೆ, ಪುಟ-೩೮೪

ಧಾರ್ಮಿಕ ಕಲಹವುಂಟಾಗುವುದು ತೀರಾ ಸ್ವಾಭಾವಿಕವಾಗಿದೆ. ಇದಕ್ಕೆ ಭಾರತೀಯ ಇತಿಹಾಸವೇ ಸಾಕ್ಷಿಯಾಗಿ ನಮ್ಮೆದುರಿಗಿದೆ. ಭಾಗವಾನ ಬುದ್ಧನು ಬೌದ್ಧ ಧರ್ಮ ಸ್ಥಾಪಿಸಿ, ಮಹಾವೀರನು ಜೈನಧರ್ಮಕ್ಕೆ ಹೊಸನಾಂದಿ ಹಾಡಿದಾಗ ಹಿಂದೂ ಧರ್ಮದಲ್ಲಿ ಭಯಂಕರ ಕೋಲಾಹಲವಾದುದನ್ನಿಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ. ಹಾಗೆಯೇ ಹನ್ನೆರಡನೆಯ ಶತಮಾನದಲ್ಲಿ ಪಾಶುಪತ, ಲಕುಲೀಶ, ಕಾಳಾಮುಖ, ಶೈವ ಮುಂತಾದ ಶಾಖೆಗಳಲ್ಲಿ ಹರಿದು ಹಂಚಿಹೋಗಿತ್ತು. ಈ ರೀತಿಯಾಗಿ ಚೆಲ್ಲಾ ಪಿಲ್ಲಿಯಾಗಿ ತಮ್ಮ-ತಮ್ಮಲ್ಲಿ ಕಚ್ಚಾಡುತ್ತಿರುವವರನ್ನು ಒಗ್ಗೂಡಿಸಲು ಮಹಾಮನವತಾವಾದಿ, ಸಮಾಜ ಸುಧಾರಕ ಅಣ್ಣ ಬಸವಣ್ಣನವರು 'ವೀರಶೈವ'ವೆಂಬ ಹೊಸನಾಮಕರಣ ಮಾಡಿ, ಪುನರುಜ್ಜೀವ ಗೊಳಿಸಿದರು. ಬಸವಣ್ಣನವರ ಸಮರ್ಥ ನಾಯಕತ್ವ, ಮಹಾನ್ ಸಂಘಟನಾ ಚಾತುರ್ಯ, ಹೊಸ ಹೊಸ ಮೌಲ್ಯಗಳ ಪ್ರತಿಪಾದನೆಯಿಂದಾಗಿ ವೀರಶೈವ ಧರ್ಮವು ಶೀಘ್ರವಾಗಿ ಪಸರಿಸಿತು. ವ್ಯಾಪಕವಾಗಿ ತನ್ನ ಪ್ರಭಾವವನ್ನು ಬೀರಿತು. ಆ ಸಂದಿಗ್ಧ ಮತ್ತು ಸಂಕ್ರಮಣಾವಸ್ಥೆ ಯಲ್ಲಿ ಧಾರ್ಮಿಕ ಕಲಹಗಳು ನಡೆದಿರುವುದು ಅಸಹಜವೇನಲ್ಲ. ಏಕಾಂತರಾಮಯ್ಯನ ಬದುಕೇ ಇದಕ್ಕೊಂದು ಉಜ್ವಲ ಉದಾಹರಣೆಯಾಗಿದೆ. ಪ್ರಸ್ತುತ ತೆಲುಗು ಜೊಮ್ಮಯ್ಯನ ರಗಳೆಯಲ್ಲಿಯೂ ಧಾರ್ಮಿಕ ಸಂಘರ್ಷವುಂಟಾಗಿ, ರಕ್ತಪಾತವಾಗಿದೆ. ಈ ಪ್ರಸಂಗ ಸಮಕಾಲೀನ ಸಮಾಜದ ಮನೋಧರ್ಮವನ್ನು ಪ್ರತಿಬಿಂಬಿಸುತ್ತದೆಯೆಂದು ಹೇಳಬಹುದು. ಉದಾಗೆ ನೋಡಿರಿ:

> "ಎಲೆಲೆಲೆ ಶಿವದ್ರೋಹಿ ಇಂತು ಪುಸಿನುಡಿವವರೇ
> ಎಲೆ ಪಾಪಿ ಪಾಪಿ ಪಾತಕ ಇಂತು ಬೋಗಳ್ವರೇ
> ಎನುತ ಅಲಗಿಂ ದೊಪ್ಪನಿರಿದನಾ ದ್ರೋಹಿಯಂ
> ತನುವರ್ಮಿರ್ಮ್ಯೆಗಾಣೆ ನರಕರಂ ಬಾಹಿಯಂ"[೬]

> "ಇರಿದು ಭೋಂಕನೆ ಸೆಳೆಯೆ ಬಿಳ್ದನಾ ವಿದ್ರೂಪಿ
> ಒರಗಿ ನೆತ್ತರ ಕಾರುತಿರ್ದ ಕಡುಪಾಪಿ"[೭]

ಈ ರುದ್ರಭಯಂಕರ ಚಿತ್ರಣವು ಅಂದಿನ ದ್ವೇಷ-ಅಸೂಯೆ, ಧಾರ್ಮಿಕ ಸಂಘರ್ಷ ಯಾವ ಮಟ್ಟಕ್ಕೆ ಹೋಗಿತ್ತೆಂಬುದಕ್ಕೆ ಸಾಕ್ಷಿಯಾಗಿದೆ.

## (ಗ) ಧಾರ್ಮಿಕರಿಗೆ ಸಾರ್ವಜನಿಕರಿಂದ ಸಲ್ಲುವ ಗೌರವ

ಧಾರ್ಮಿಕ ಮುಖಂಡರಿಗೆ, ಧರ್ಮಗುರುಗಳಿಗೆ ಸಮಕಾಲೀನ ಸಮಾಜದಲ್ಲಿ ಜನತೆ ಅಪಾರವಾಗಿ ಗೌರವಿಸುತ್ತಿದ್ದರು. ಸಾಕ್ಷಾತ್ ಸಾಮ್ರಾಟನೂ ಕೂಡ ಅಗಾಧ ಭಕ್ತಿ ಗೌರವಾದರಗಳಿಂದ ಕಾಣುತ್ತಿದ್ದನು. ಉದಾಹರಣೆಗೆಂದು ಈ ಕೆಳಗಿನ ಎರಡು ಚಿತ್ರಗಳನ್ನು ಅವಲೋಕಿಸಬಹುದು.

---

೬. ತೆ.ಜೊ.ಪು. ಪುಟ-೩೮೫

೭. ತೆಲುಗು ಜೊಮ್ಮಯ್ಯನ ರಗಳೆ, ಪುಟ-೩೮೫

"..... ನಿಸ್ಸೀಮನಂ ಕಂಡರಸನೇಳ್ದು ಕೈಮುಗಿದು ದೇವ ದೇವ
ಮುನ್ನರಿಯದೋಲೈಸಿಕೊಂಡ ತಪ್ಪಂ ಮನ್ನಿಸಿ ಕರುಣದಿಂ ನೋಳ್ಪುದೆಂದು
ಬಿನ್ನೈಸಿ......."[೮]

"ಜೊಮ್ಮಣ್ಣನ ಪದದಳಕ್ಕೆರಗಿ ನಿಮ್ಮಂ ಪರೀಕ್ಷಿಸಿದ ಕರ್ಮಿಗೆ
ಕರುಣಿಪುದೆಂದು ನಿಂದು ಕೈಮುಗಿದು ನಿಶ್ಚಿತೆ

ಭಕ್ತನಂ ಭದ್ರಾಸನದ ಮೇಲಕ್ಕೆ ಬಿಜಯಂಗೈಸಿ ಚರಣಯುಗಳಕ್ಕೆ
ಇರ್ಚ್ಛಾಸಿರ ಪೂಗಳಂ ಕಾಣ್ಕೆಯಿತ್ತು ಕೊಂಡಾಡುತ್ತಿರ್ಪ ಸಮಯದೊಳ್"[೯]

ಇವೆರಡೂ ಚಿತ್ರಣಗಳನ್ನು ವೀಕ್ಷಿಸಿದಾಗ ಅಂದು ಯುಗಪುರುಷನಾದ 'ಆರನೆಯ ವಿಕ್ರಮಾದಿತ್ಯ'ನೇ ಇಷ್ಟು ವಿನೀತನಾಗಿ ನಡೆದುಕೊಳ್ಳುವುದನ್ನು ನೋಡಿದರೆ, ಅಂದಿನ ಸಮಾಜದಲ್ಲಿ ಧರ್ಮಗುರುಗಳ ಪ್ರಭಾವ ಎಷ್ಟಿತ್ತೆಂಬುದನ್ನು ಊಹಿಸಿಕೊಳ್ಳಬೇಕಾಗುತ್ತದೆ. ಇದರಲ್ಲಿ ಅಲ್ಪಸ್ವಲ್ಪ ಅತಿಶಯೋಕ್ತಿ, ಉತ್ಪ್ರೇಕ್ಷೆಗಳು ಇರಬಹುದು. ಆದರೆ ಅರಸನು ಧಾರ್ಮಿಕ ಮುಖಂಡರಿಗೆ ಗೌರವ ಸಲ್ಲಿಸುತ್ತಿರುವ ಅಂಶವಂತೂ ಇದರಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

## (ಇ) ಆಸ್ಥಾನಕ್ಕೆ ಆಗಮಿಸುವ ಚಿತ್ರ

ಧಾರ್ಮಿಕ ಮುಖಂಡರು, ಧರ್ಮಗುರುಗಳು ಕೆಲಸಲ ರಾಜರ ಆಸ್ಥಾನಕ್ಕೆ ಬರುವ ಪ್ರಸಂಗ ಒದಗುತ್ತಲಿತ್ತು. ಅಂದಿನ ಧರ್ಮಗುರುಗಳಿಗೆ ರಾಜರ ಮನ್ನಣೆ - ಗೌರವಗಳು ಸಲ್ಲುತ್ತಿದ್ದವು. ಅರಸರು ಅತ್ಯಂತ ಗೌರವಯುತವಾಗಿಯೇ ನಡೆದುಕೊಳ್ಳುತ್ತಿದ್ದರು. ಜನರು ಕೂಡ ಭಯ-ಭಕ್ತಿಗಳಿಂದಲೇ ಆರಾಧಿಸುತ್ತಿದ್ದರು. ಹರಿಹರನು ತೆಲುಗು ಜೊಮ್ಮಯ್ಯನ ರಗಳೆಯಲ್ಲಿ ಕೊಟ್ಟ ಚಿತ್ರಣ ಆತನ ಸಮಕಾಲೀನದೇ ಆಗಿದೆ.

ಉದಾ: ಗೆ ನೋಡಿ: - "ಇತ್ತಲ್ಮುಂದೆ ಬರ್ಪರಸಾಳ್ಗಳಿಂ ಹಿಂದೆ ಬರ್ಪ ಪುರಜನದಿಂ ಕೆಲಬಲದೊಳ್ ಬರುತ್ತಿರ್ಪ ಭಕ್ತನಿಕರದ ನಡುವೆ ವಿಭೂತಿಯ ಕಾಂತಿ ನಳನಳಿಸೆ......ನಡೆತಂದು"[೧೦] ಮಹಾಕವಿ ಹರಿಹರನು ಅಂದಿನ ಸಮಾಜದಲ್ಲಿ ನಡೆಯುವ ಎಲ್ಲ ಚಟುವಟಿಕೆಗಳನ್ನು ತನ್ನ ರಗಳೆಯ ಪಾತ್ರಗಳ ಜೊತೆಗೆ ಮೇಳೈಸಿಕೊಂಡು ಸಾಗಿದ್ದಾನೆ. ಚಾರಿತ್ರಿಕ ವಿಷಯಕ್ಕೆ ಹಲವಾರು ಸಾಕ್ಷೀಭೂತ ಪ್ರಮಾಣಬದ್ಧವಾದ ಆಧಾರಗಳನ್ನು ಒದಗಿಸಿದ್ದಾನೆ.

## ರಾಜಕೀಯ ಅಂಶಗಳು

ಕಲ್ಯಾಣ ಚಾಳುಕ್ಯ ಚಕ್ರವರ್ತಿ ಶಕಪುರುಷ ಪೆರ್ಮಾಡಿರಾಯ ತ್ರಿಭುವನಮಲ್ಲ 'ಆರನೆಯ ವಿಕ್ರಮಾದಿತ್ಯ' (ಕ್ರಿ.ಶ. ೧೦೭೬-೧೧೨೬)ನು ತೆಲುಗು ಜೊಮ್ಮಯ್ಯನ

---

೮. ಅದೇ, ಪುಟ-೩೯೦

೯. ಅದೇ, ಪುಟ-೩೮೯

೧೦. ಅದೇ, ಪು - ೩೮೮

ರಗಳೆಯಲ್ಲಿ ನೇರವಾಗಿ ಭಾಗವಹಿಸಿದ್ದಾನೆ. ಜೊತೆಗೆ ಬಸವಪೂರ್ವ ಯುಗದ ಶಿವಶರಣರ ವಿಕ್ರಮಾದಿತ್ಯನ ದಣ್ಣಾಯಕ 'ಕೊಂಡಗುಳಿ ಕೇಶಿರಾಜ'ನು ಇದರಲ್ಲಿ ಒಂದು ಪಾತ್ರವಾಗಿ ಮೂಡಿ ಬಂದಿದ್ದಾನೆ. ಕೇಶಿರಾಜನ ಕುರಿತಾದ ಶಾಸನ ಕೊಂಡಗುಳಿಯಲ್ಲಿ ದೊರೆತಿದ್ದು ಪುರಾಣ-ಚಾರಿತ್ರಿಕ ಸಂಗತಿಗೆ ಐತಿಹಾಸಿಕ ಆಧಾರವನ್ನು ಒದಗಿಸಿದೆ.[೧೧]

## (ಅ) ಆಸ್ಥಾನ

ಮಹಾಕವಿ ಹರಿಹರನು ಪೆರ್ಮಾಡಿರಾಯನ ಆಸ್ಥಾನ, ಅಧಿಕಾರಿ ವರ್ಗ, ಒಡ್ಡೋಲಗದ ಕಾರ್ಯವೈಖರಿ, ಅಲ್ಲಿ ಸೇರಿದ ಜನ, ಇನ್ನಿತರ ಕಲಾಪಗಳನ್ನು ವಿವರವಾಗಿ ನಿರೂಪಿಸಿದ್ದಾನೆ. ಈ ಚಿತ್ರ ಕಣ್ಣಿಗೆ ಕಟ್ಟುವಂತೆ ಆಕರ್ಷಕವಾಗಿ ಮೂಡಿಬಂದಿದೆ. ನೋಡಿರಿ: "...... ಸಿಂಹಾಸನಾರೂಢಮಾಗಿ ಶೋಭಿತ ಮುಕುಟವರ್ಧನನುಂ ಪರಿವೃತ ರಾಜಪುತ್ರನುಂ ಪರಿವೇಷ್ಟಿತ ಮಂತ್ರಿವರ್ಗನುಂ ಆಶೀರ್ವಾದ ವಿಪ್ರನಿಕಾಯನುಂ ಪ್ರಣುತ ಪರಿಜನನುಂ ಸಚಿವ ಸಾಮಂತ ಮಂಡಳೀಕರಂ ಕರಣಿಕರಂ, ಕವಿಗಮಕಿ ವಾದಿವಾಗ್ಮಿಕವಾಹಕ ಗಜಾರೋಹಕ ಸರಸಗಾಯಕ ಭಾವಚಿತ್ರಕ ಪುಣ್ಯಪಾಠಕ ನವ್ಯನರ್ತಕ ನರ್ತರೇ ಪ್ರಯಾತಂ"[೧೨] ಈ ಸನ್ನಿವೇಶ ಅರಸನ ಇಡೀ ಆಸ್ಥಾನವನ್ನು ಸಾದ್ಯಂತವಾಗಿ ಪರಿಚಯಿಸುವಲ್ಲಿ ಯಶಸ್ವಿಯಾಗಿದೆ. ಹರಿಹರನು 'ದ್ವಾರಸಮುದ್ರದ ಹೊಯಿಸಳ'ರಲ್ಲಿ ಕರಣಿಕನಾಗಿ ಸೇವೆ ಸಲ್ಲಿಸುತ್ತಿದ್ದ ಸಂಗತಿಯು ಸರ್ವವಿಧಿತವಾಗಿದೆ. ಬಹುಶಃ ತಾನು ಕಂಡ ಆಸ್ಥಾನವನ್ನೇ ಇಲ್ಲಿವರ್ಣಿಸಿರಬಹುದು.

ಅಪರಾಧಿಗಳ ತನಿಖೆ ನಡೆಯುತ್ತಲಿತ್ತು. ವಿಚಾರಣೆಯ ಸಂದರ್ಭದಲ್ಲಿ ಅಪರಾಧಿ ಎಷ್ಟೇ ಉನ್ನತ ಸ್ಥಾನದಲ್ಲಿದ್ದರೂ, ಕೂಡ ಅದನ್ನು ಪರಿಗಣಿಸದೆ ಸಾಮಾನ್ಯ ಪ್ರಜೆಯಂತೆಯೇ ನೋಡಲಾಗುತ್ತಿತ್ತು. ತಪ್ಪಿತಸ್ಥರಿಗೆ ಕಠಿಣವಾದ ಶಿಕ್ಷೆಯನ್ನು ನಿರ್ದಾಕ್ಷಿಣ್ಯವಾಗಿ ನೀಡಲಾಗುತ್ತಿತ್ತು.

ನ್ಯಾಯಾಲಯದಲ್ಲಿ ವಿಚಾರಣೆಗೆ ನಡೆದಾಗ ಈ ಮೇಲೆ ಉಲ್ಲೇಖಿಸಿದವರೆಲ್ಲರೂ ಒಡ್ಡೋಲಗದಲ್ಲಿ ಉಪಸ್ಥಿತರಾಗಿರುತ್ತಿದ್ದರು. ಕಲೆ, ಸಾಹಿತ್ಯ, ಸಂಗೀತ, ನೃತ್ಯ, ಕವಿ, ಕೋವಿದರು, ಗಾಯಕರು, ಚಿತ್ರಗಾರರು, ಶಿಲ್ಪಿಗಳು ಮುಂತಾದವರು ಇರುತ್ತಿದ್ದರು. ಅಂದಿನ ಅರಸರು ಸಕಲಕಲಾರಾಧಕರಾಗಿದ್ದರು. ಎಲ್ಲ ರೀತಿಯ ಕಲಾವಿಧರಿಗೆ ಆಶ್ರಯ ದೊರೆಯುತ್ತಲಿತ್ತು. ಇದು ವಿಕ್ರಮನ ಆಸ್ಥಾನದಲ್ಲಿಯೂ ಇತ್ತೆಂಬುದು ಈ ರಗಳೆಯಿಂದ ತಿಳಿಯುತ್ತದೆ. ಕಾಶ್ಮೀರದ ಕವಿ ವಿದ್ವಾಂಸ 'ಬಿಲ್ಹಣ'ನೇ ಇದಕ್ಕೊಂದು ಶ್ರೇಷ್ಠ ನಿದರ್ಶನ ವಾಗಿದ್ದಾನೆ. ಆತನು ರಚಿಸಿರುವ 'ವಿಕ್ರಮಾಂಕದೇವ ಚರಿತೆ'ಯ ಉತ್ತಮ ಉದಾಹರಣೆ ಯಾಗಿದೆ.

---

೧೧. ವಿವರಕ್ಕೆ ನೋಡಿ - S.S.I. XX, Page No. 169

೧೨. ತೆ. ಜೊ. ರಗಳೆ, ಪುಟ-೩೮೭ ಹಾಗೂ ೩೮೮

## (ಬ) ರಕ್ಷಣಾ ಪಡೆ

ಈ ರಗಳೆಯಲ್ಲಿ ಹರಿಹರನು 'ಆನೆ ಕುದುರೆ ಸೇನೆ ಪದಾತಿಬಲಂ'[೧೩] ಎಂದಿದ್ದಾನೆ. ಈ ಉಲ್ಲೇಖದಿಂದ ಒಂದು ಸಾಮ್ರಾಜ್ಯದ ಆಧಾರಸ್ತಂಭವಾದ 'ಸೈನ್ಯ'ದ ಸಂಗತಿಯನ್ನು ತಿಳಿಸುತ್ತದೆ. ಸೈನ್ಯವೆಂದರೆ 'ಚತುರಂಗಬಲ'ವೆಂದೇ ಥಟ್ಟನೆ ನೆನಪಾಗುತ್ತದೆ. ಆದರೆ ಹರಿಹರನು ಚತುರಂಗಬಲವನ್ನು ಇಲ್ಲಿ ಪ್ರಸ್ತಾಪಿಸಿಲ್ಲ. ಗಜದಳ, ಅಶ್ವದಳ, ಪದಾತಿದಳ ಈ ಮೂರನ್ನು ಮಾತ್ರ ದಾಖಲಿಸಿದ್ದಾನೆ. 'ಚತುರಂಗ ಬಲ'ದ ಅವಿಭಾಜ್ಯ ಅಂಗವೆನಿಸಿದ 'ರಥದಳ'ವನ್ನು ಯುದ್ಧದಲ್ಲಿ ಬಳಸುವ ಪದ್ಧತಿ ಕ್ರಿ.ಶ. ಪೂರ್ವದಲ್ಲಿಯೇ ನಿಂತು ಹೋಗಿತ್ತೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ಅಭಿಪ್ರಾಯವನ್ನು ಗಮನಕ್ಕೆ ತಂದುಕೊಂಡರೆ ಹರಿಹರನನ್ನು ಎಷ್ಟು ವಾಸ್ತವವಾದಿಯಾಗಿದ್ದಾನೆ. ಸತ್ಯಪಕ್ಷಪಾತಿ ಯಾಗಿದ್ದನು ಎನ್ನುವುದು ಮನದಟ್ಟಾಗುತ್ತದೆ. ಈ ಕೃತಿಯಲ್ಲಿ ಹರಿಹರನು ರಥದಳವನ್ನು ಪ್ರಸ್ತಾಪಿಸದಿರುವುದು ರಥದ ಬಳಕೆ ನಿಂತು ಹೋಗಿರುವುದನ್ನು ದೃಢೀಕರಿಸುತ್ತದೆ.

## (ಕ) ಆಯುಧಗಳು

ಹರಿಹರನು ಖಡ್ಗ, ಅಂಬು, ಕಣೆ, ಬಾಣ, ಈಟಿ, ಕೊಂತ ಮೊದಲಾದ ಕೆಲವು ಆಯುಧಗಳನ್ನು ಉಲ್ಲೇಖಿಸಿದ್ದಾನೆ. ಈ ಕಾವ್ಯದಲ್ಲಿ ಯುದ್ಧದ ಸಂಗತಿಯಿಲ್ಲ. ಹೀಗಾಗಿ ಯುದ್ಧದ ಎಲ್ಲ ಸಲಕರಣೆಗಳು, ಯುದ್ಧದ ಸಾಮಗ್ರಿಗಳು ದಾಖಲುಗೊಂಡಿಲ್ಲ. ಪ್ರಮುಖ ವಾಗಿ ಇದೊಂದು ಧಾರ್ಮಿಕ ಕಾವ್ಯವಾಗಿರುವುದರಿಂದ ಶಸ್ತ್ರಾಸ್ತ್ರಗಳಿಗೆ ಸಂಬಂಧಿಸಿದ ವಿವರಗಳನ್ನು ಸಹಜವಾಗಿ ಗೌಣವಾಗಿವೆ. ಅದಕ್ಕಾಗಿ ವಿವಿಧ ಸಂಗತಿಗಳು ಈ ಕಿರುಕೃತಿಯಲ್ಲಿ ದಾಖಲುಗೊಂಡಿಲ್ಲ.

## (ಡ) ಐತಿಹಾಸಿಕ ಸಂಗತಿಗಳು

ಈ ರಗಳೆಯಲ್ಲಿ ಪ್ರಾಸಂಗಿಕವಾಗಿ ಐತಿಹಾಸಿಕ ಅಂಶಗಳು ಅಲ್ಲಲ್ಲಿ ಬಂದಿವೆ. 'ತ್ರಿಭುವನಮಲ್ಲ' ಕರ್ನಾಟಕ ಕಂಡ ಮಹಾನ್ ಸಾಮ್ರಾಟರಲ್ಲಿ ಎದ್ದು ಕಾಣುವ ವ್ಯಕ್ತಿ. ಆತ ನೇರವಾಗಿ ಈ ಕಾವ್ಯದಲ್ಲಿ ಬರುತ್ತಾನೆ. ಹರಿಹರ ರಚಿಸಿರುವ 'ಕೊಂಡಗುಳಿ ಕೇಶಿರಾಜನ ರಗಳೆ'ಯೊಂದಿಗೆ, ಕೇಶಿರಾಜ ದಣ್ಣಾಯಕನ ಶಾಸನವನ್ನು ಹೋಲಿಸಬೇಕು. 'ಏಕಾಂತ ರಾಮಯ್ಯನ ರಗಳೆ'ಯೊಂದಿಗೆ, ಅಬ್ಬಲೂರಿನ 'ಏಕಾಂತ ರಾಮಯ್ಯನ ಶಾಸನ'ವನ್ನು ಹೋಲಿಸಿ ತೌಲನಿಕವಾಗಿ ಅಧ್ಯಾಯನಿಸಕಬೇಕು. ಆಗ ಹರಿಹರನು ಚಿತ್ರಿಸಿರುವ ವಾಸ್ತವಿಕ ಅಂಶಗಳು ಎಷ್ಟು ವಾಸ್ತವಿಕವಾಗಿವೆ, ಪ್ರಾಮಾಣಿಕವಾಗಿವೆಯೆಂಬುದು ತಿಳಿದುಬರುತ್ತದೆ. ಐತಿಹಾಸಿಕ ಸಂಗತಿಗಳನ್ನು ಚಾರಿತ್ರಿಕ ದಾಖಲೆಗಳನ್ನು ಕೂಡಿಸಬಯಸುವವರಿಗೆ ಈತ ವಿಶ್ವಾಸನೀಯವಾದ ಆಧಾರ ಸಾಮಗ್ರಿ ಒದಗಿಸುತ್ತಾನೆ. ಹರಿಹರನ ರಗಳೆಗಳು ಹೊಸ ಇತಿಹಾಸ ರಚಿಸುವವರಿಗೆ ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ.

---

೧೩. ತೆ.ಜೊ. ರಗಳೆ, ಪುಟ-೩೯೦

## ೩. ಸಾಮಾಜಿಕ ಅಂಶಗಳು

ಈ ಸಾಮಾಜಿಕ ಅಂಶಗಳಲ್ಲಿ ಮತ್ತೆ ಆಚರಣೆಗಳು, ತಿಂಡಿ-ತಿನಿಸುಗಳು, ನ್ಯಾಯ ಪದ್ಧತಿ, ಸಮಕಾಲೀನ ಮೌಲ್ಯಗಳು ಇತ್ಯಾದಿಯಾಗಿ ಅಧ್ಯಯನಕ್ಕೆ ಅನುಕೂಲವಾಗುವಂತೆ ವಿಭಜಿಸಿಕೊಳ್ಳಬಹುದು.

### ಅ) ಆಚರಣೆಗಳು

ಪ್ರಸ್ತುತ 'ತೆಲುಗು ಜೊಮ್ಮಯ್ಯನ ರಗಳೆ'ಯಲ್ಲಿ ಶಿವರಾತ್ರಿಯನ್ನು ಆಚರಿಸುವ ಸಂಗತಿಯಿದೆ. ಶಿವರಾತ್ರಿಯ ದಿವಸ ಉಪವಾಸ ವ್ರತ, ರಾತ್ರಿಯೆಲ್ಲ ಜಾಗರಣೆ ಮಾಡುವುದು ಶಿವರಾತ್ರಿಯೆಲ್ಲ ಶಿವಪುರಾಣ, ಶಿವನ ಲೀಲೆಗಳನ್ನು ಆಲಿಸುತ್ತ, ಶಿವನ ಧ್ಯಾನದಲ್ಲಿ ಕಳೆಯುತ್ತಿದ್ದ ಸಂಗತಿ ಬರುತ್ತದೆ. ಇವು ಹರಿಹರನ ಕಾಲದ 'ಶಿವರಾತ್ರಿ'ಯ ಆಚರಣೆಗಳೆಂದು ಹೇಳಬಹುದಾಗಿದೆ.

### (ಬ) ತಿಂಡಿ – ತಿನಿಸುಗಳು

ಹರಿಹರನು ತನ್ನ ಕಾಲದ ತಿಂಡಿ-ತಿನಿಸುಗಳ ಒಂದು ಪಟ್ಟಿಯನ್ನೇ ನೀಡುತ್ತಾನೆ:

**"ಪಲವಂ ಪಕ್ವಾನ್ನ ತತಿಗಳಂ ಮಾಡಿಂತೆ**
**ಎನಲಲ್ಲಿ ಬೀಸುಹೊರಿಗೆ ಗಾರಿಗೆಗಳಾಗೆ**
**ತನಿವಾರ ಸಣ್ಣಸೇವಗೆಯ ಪಾಯಸವಾಗೆ**
**ತೊಳಗುವಿಡ್ಡಾಲಿಗೆ ಮಂಡಿಗೆಗಳಾಗುತ್ತಮಿರೆ**
**ಕೆಳವೆಯೋಗರ ಪತ್ರಫಳಾಶಾಕವಾಗುತಿರೆ"**[೧೪]

ಇವು ಹರಿಹರನ ಕಾಲದ ತಿಂಡಿ-ತಿನಿಸುಗಳು. ಪಕ್ವಾನ್ನ, ಬೀಸು ಹೋಳಿಗೆ, ಗಾರಿಗೆಗಳು, ಸಣ್ಣ ಸೇವಗೆ, ಪಾಯಸ, ತೊಳಗು, ಇಡ್ಡಾಲಿಗೆ, ಮಂಡಿಗೆಗಳು, ಕಳವೆಯೋಗರ, ಪತ್ರ ಫಳಾಶಾಕ ಮುಂತಾದವುಗಳನ್ನು ಹರಿಹರ ಹೆಸರಿಸಿದ್ದಾರೆ. ಇದಕ್ಕಿಂತಲೂ ಬಸವರಾಜ ದೇವರ ರಗಳೆಯಲ್ಲಿ ವಿಸ್ತೃತವಾಗಿ ಅಡುಗೆಯನ್ನು ವಿವರಿಸಿದ್ದಾನೆ. ಹತ್ತು, ಹಲವಾರು ತಿಂಡಿ-ತಿನಿಸು, ಊಟದ ಪದಾರ್ಥಗಳನ್ನು ಪ್ರಸ್ತಾಪಿಸಿರುವುದನ್ನು ಕಾಣುತ್ತೇವೆ.

### (ಕ) ನ್ಯಾಯ ಪದ್ಧತಿ

ನ್ಯಾಯಾಲಯದ ಸಮ್ಮುಖದಲ್ಲಿ ಸರ್ವರೂ ಸರಿಸಮಾನರು. ಎಲ್ಲರೂ ನ್ಯಾಯಾಧೀಶನ ನಿರ್ಣಯವನ್ನು ಗೌರವಿಸಿ ಒಪ್ಪಿಕೊಳ್ಳುತ್ತಿದ್ದರು. ಅಪರಾಧಿಯು ಎಷ್ಟೇ ದೊಡ್ಡ ವ್ಯಕ್ತಿಯಾಗಿದ್ದರೂ, ಎಷ್ಟೇ ಪ್ರಭಾವಶಾಲಿಯಾಗಿದ್ದರೂ, ಆತ ಒಡ್ಡೋಲಗದಲ್ಲಿ ಕಿಕ್ಕಿರಿದ ಸಭೆಯಲ್ಲಿ ನಿಲ್ಲಬೇಕಿತ್ತು. ತುಂಬಿದ ಸಭೆಯಲ್ಲಿ ವಿಚಾರಣೆ ನಡೆಯುತ್ತಿತ್ತು.

---

೧೪. ತೆಲುಗು ಜೊಮ್ಮಯ್ಯನ ರಗಳೆ, ಪುಟ-೩೯೭

ಒಡ್ಡೋಲಗದ ಸಿಬ್ಬಂದಿಯೆಲ್ಲ ಅಲ್ಲಿ ಉಪಸ್ಥಿತರಾಗಿರಬೇಕು. ನ್ಯಾಯಾಧೀಶನು ಅಪರಾಧಿಯ ಸಾರಾ-ಸಾರ ವಿಚಾರಣೆಗೊಳಪಡಿಸುತ್ತಿದ್ದು, ಎಲ್ಲವನ್ನೂ ಕುಲಂಕಶವಾಗಿ ಪರಿಶೀಲಿಸಿದ ತರುವಾಯವೇ ತೀರ್ಪನ್ನೀಯುವ ಪದ್ಧತಿಯಿತ್ತು.

## (ಡ) ಮೌಲ್ಯಗಳು

ಕ್ಷಾತ್ರಯುಗವಾದ ಹತ್ತನೆಯ ಶತಮಾನದ ಮಹಾಮೌಲ್ಯಗಳೆಂದರೆ 'ಜೋಳವಾಳಿ' ಹಾಗೂ ವೇಳೆವಾಳಿ'ಗಳು. ಇವು ರಗಳೆಯಲ್ಲಿಯೂ ಪ್ರಚುರಗೊಂಡಿವೆ.

> "ಜೋಳವಾಳಿಯೊಳೆರ್ಪನಾ ಧರನಾಥಂಗೆ
> ವೇಳೆವಾಳಿಯೊಳೆರ್ಪನಾ ಭೀಮನಾಥಂಗೆ"[೧೫]

ಇದರಿಂದ ಈ ಮೌಲ್ಯಗಳು ವಿಕ್ರಮಾದಿತ್ಯನ ಕಾಲದಲ್ಲಿಯೂ ಪ್ರಚಾರದಲ್ಲಿರುವುದು ತಿಳಿದುಬರುತ್ತದೆ. ಬಹುಶಃ ಈ ಮೌಲ್ಯಗಳು ತೆಲುಗು ಜೊಮ್ಮಯ್ಯನ ಕಾಲದ ಮೌಲ್ಯಗಳಾಗಿರಬಹುದು. ಹರಿಹರನ ಸಮಕಾಲೀನ ಮೌಲ್ಯಗಳಲ್ಲ. ಏಕೆಂದರೆ ಹನ್ನೆರಡನೆಯ ಶತಮಾನದಲ್ಲಿ "ಬಸವಣ್ಣನವರ ಧಾರ್ಮಿಕ, ರಾಜಕೀಯ, ಸಾಮಾಜಿಕ, ಸಾಹಿತ್ಯಕ, ಸಾಂಸ್ಕೃತಿಕ ಕ್ರಾಂತಿಯ ಪರಿಣಾಮವಾಗಿ ಈ ಮೌಲ್ಯಗಳು ತಮ್ಮ ಅರ್ಥವನ್ನು ಕಳೆದುಕೊಳ್ಳಲಾರಂಭಿಸಿದ್ದವು. ಹರಿಹರನ ಕಾಲಕ್ಕಿವು 'ಜಂಗಮವೇಳೆ'ಯಾಗಿ ಪರಿವರ್ತನೆಗೊಂಡಿದ್ದವು."[೧೬] ಎಂಬ ಡಾ. ಎಂ.ಎಂ. ಕಲಬುರ್ಗಿಯವರ ಮಾತನ್ನಿಲ್ಲಿ ನೆನಪಿಸಿಕೊಳ್ಳಬಹುದು.

ಒಟ್ಟಿನಲ್ಲಿ ಆಗಾಗ ಧಾರ್ಮಿಕ ಕಲಹಗಳು ನಡೆದರೂ, ಆ ಯುಗದಲ್ಲಿ ದಾನಧರ್ಮ ಮುಂತಾದವುಗಳು ಸಾಂಗೋಪಾಂಗವಾಗಿ ಸಾಗಿದ್ದವು. ಅರಸನ ಆಳ್ವಿಕೆ ಸಮರ್ಥನೀಯ ವಾಗಿದ್ದು, ಸಮಾಜವು ಸ್ವಾಸ್ಥ್ಯದಿಂದ ಕೂಡಿತ್ತು. ಜನರು ನೆಮ್ಮದಿಯಿಂದ ಬಾಳುವೆ ನಡೆಸಿದ್ದರೆಂದು ಧಾರಾಳವಾಗಿ ಹೇಳಬಹುದು.

ಮಹಾಕವಿ ಹರಿಹರನ ರಗಳೆಗಳು ಸಾಹಿತ್ಯಕ್ಕೆ ಸಾಹಿತ್ಯವಾಗಿ, ಧರ್ಮಕ್ಕೆ - ಧರ್ಮ ವಾಗಿ, ಸಂಸ್ಕೃತಿಗೆ - ಸಂಸ್ಕೃತಿಯಾಗಿ, ಇತಿಹಾಸಕ್ಕೆ - ಇತಿಹಾಸವಾಗಿ ಸರ್ವಾಂಶಗಳನ್ನು ಮೈಗೂಡಿಸಿಕೊಂಡು ತುಂಬಿ ತುಳುಕಾಡುತ್ತಿವೆ.

* ಮಹಾಕವಿ ಹಂಪೆಯ ಹರಿಹರದೇವಕೃತ ನೂತನ ಪುರಾತನರ ರಗಳೆ ಡಾ. ಎಂ.ಎಸ್. ಸುಂಕಾಪುರ ಅವರು ಸಂಪಾದಿಸಿರುವ ಕೃತಿಯಲ್ಲಿರುವ 'ತೆಲುಗು ಜೊಮ್ಮಯ್ಯನ ರಗಳೆ'ಯನ್ನು ಅಧ್ಯಯನಕ್ಕೆತ್ತಿಕೊಳ್ಳಲಾಗಿದೆ. ಪುಟ ಸಂಖ್ಯೆ ಅದನ್ನೇ ಅನುಸರಿಸ ಲಾಗಿದೆ.

❑

---

೧೫. ತೆ.ಜೊ. ರಗಳೆ, ಪುಟ-೩೮೨

೧೬. ಮಾರ್ಗ - ೧, ಪುಟ - ೩೦೨

# 'ಹರಿಶ್ಚಂದ್ರಕಾವ್ಯ'ದಲ್ಲಿ ಬಂಡಾಯದ ಅಂಶಗಳು

ಹರಿಹರನಂತೆಯೇ ರಾಘವಾಂಕನೂ ಕೂಡ ಕನ್ನಡ ಸಾಹಿತ್ಯದಲ್ಲಿ ಕ್ರಾಂತಿಗೈದ ಕವಿಯೆಂದು ಗುರುತಿಸಲ್ಪಡುತ್ತಾನೆ. ರಾಜಾಶ್ರಯ, ಕಾವ್ಯವಸ್ತು , ಭಾಷೆ, ಛಂದಸ್ಸು, ರಚನಾ ವಿಧಾನ, ನಾಟಕೀಯ ಶೈಲಿ ಮುಂತಾದವುಗಳಿಂದಾಗಿ ರಾಘವಾಂಕನಿಗೆ ಕನ್ನಡದಲ್ಲಿ ವಿಶಿಷ್ಟವಾದ ಸ್ಥಾನ ಲಭಿಸಿದೆ.

ಮಹಾಕವಿ ಹರಿಹರನು ರಗಳೆಯಲ್ಲಿ ಕೃಷಿಗೈದ ಅದರ ವೈವಿಧ್ಯತೆಯನ್ನು ಗುರುತಿಸಿ, ಲಲಿತ, ಮಂದಾನಿಲ, ಉತ್ಸಾಹಗಳೆಂದು ವಿಂಗಡಿಸಿ ಸಮರ್ಥವಾಗಿ ಬಳಸಿಕೊಂಡನು. ರಾಘವಾಂಕನು ತನ್ನ ಗುರು ಹರಿಹರನ ದಾರಿತುಳಿಯದೆ, ತನ್ನದೇ ಆದ ಮಾರ್ಗಹಿಡಿದು 'ಷಟ್ಪದಿ' ಯನ್ನು ಮಹಾಕಾವ್ಯದ ಮಾಧ್ಯಮಕ್ಕೆ ಒಗ್ಗಿಸಿಕೊಂಡದ್ದು ಆತನ ಸ್ವಂತಿಕೆಗೆ ಸಾಕ್ಷಿಯಾಗಿದೆ. ಅಂಶಗಣಾನ್ವಿತವಾದ ಮೂಲ ಷಟ್ಪದಿಯನ್ನು ಮಾತ್ರಾಗಣಾನ್ವಿತವಾಗಿ ಪರಿವರ್ತಿಸಿಕೊಂಡದ್ದು ರಾಘವಾಂಕನ ಬಹುದೊಡ್ಡ ಸಾಧನೆಯೆನಿಸುತ್ತದೆ. ಹರಿಯುವ ಹೊಳೆಯ ದಿಕ್ಕನ್ನೇ ಮತ್ತೊಂದೆಡೆಗೆ ತಿರುಗಿಸಿದ ಅಪೂರ್ವ ಸಾಹಸಕ್ಕೆ ಇದನ್ನು ಹೋಲಿಸಬಹುದಾಗಿದೆ. ದೇಶಿಯ ಅಂಶಗಳನ್ನು ತನ್ನ ಕಾವ್ಯದಲ್ಲಿ ಬಳಸಿಕೊಂಡು, ಹೊಸ ಕಸುವು, ಅಪಾರ ವೈವಿಧ್ಯತೆಯನ್ನು ಸಾಧಿಸಿದನು. ಕವಿ ಚಕ್ರವರ್ತಿ ರನ್ನನಂತೆ ನಾಟಕೀಯ ಅಂಶಗಳನ್ನು ತನ್ನ ಕಾವ್ಯದಲ್ಲಿ ಲೀಲಾಜಾಲವಾಗಿ ಅಳವಡಿಸಿದನು. ಹರಿಶ್ಚಂದ್ರಕಾವ್ಯದಲ್ಲಿ ನಾಟ್ಯಗುಣ ತಂತಾನೆ ಎಲ್ಲೆಡೆಗೂ ಕಂಗೊಳಿಸುತ್ತಿರುವುದಕ್ಕೆ ಕವಿಯ ಪ್ರತಿಭೆಯೆ ಮೂಲ ಕಾರಣವೆಂಬುದು ಸರ್ವರಿಗೂ ವಿಧಿತವಾದ ಸಂಗತಿ. ರಗಳೆಯು ಹರಿಹರನ ಕೈಯಲ್ಲಿ ಉತ್ತುಂಗ ಶಿಖರವನ್ನು ಮುಟ್ಟಿತು. ಆದರೆ ಮುಂದೆ ಬಂದ ಕವಿಗಳು ಅದನ್ನು ಕೃಷಿಮಾಡದೆ ಹೋದರು. ಆದರೆ ಷಟ್ಪದಿಯು ಮಾತ್ರ ನಿರಂತರವಾಗಿ ಪ್ರವಹಿಸಿತು. ಭೀಮ ಕವಿ, ಕುಮಾದೇಂದ್ರು ಚಾಮರಸ, ಕುಮಾರವ್ಯಾಸ, ಲಕ್ಕಣ ದಂಡೇಶ ಕುಮಾರವಾಲ್ಮಿಕಿ, ಲಕ್ಷ್ಮೀಶ, ವಿರೂಪಾಕ್ಷ ಪಂಡಿತ ಕನಕದಾಸ ಮೊದಲ್ಗೊಂಡು ಎಲ್ಲ ಧರ್ಮದ ಎಲ್ಲ ಮತದ ಕವಿಗಳು ಷಟ್ಪದಿಯನ್ನು ಬಳಸಿ ಕಾವ್ಯಗಳನ್ನು ಕಟ್ಟಿದರು.

ಹರಿಹರ ರಾಘವಾಂಕರಿಗಿಂತ ಮೊದಲು ಕಾವ್ಯವೆಂದರೆ ರಾಜ ಮಹಾರಾಜರ ಚರಿತ್ರೆ, ಅವರ ಬಿರುದಾವಳಿಗಳೂ, ಅವರು ಮಾಡಿದ ಯುದ್ಧ ಬೇಟೆ ಇತ್ಯಾದಿ ಕೇವಲ ಅರಸರಿಗೆ ಮತ್ತು ಅವರ ಪರಿವಾರಕೆ ಸಂಬಂಧಿಸದವುಗಳಾಗಿದ್ದವು. ಜನಸಾಮಾನ್ಯರಿಗೆ ತಪ್ಪಿಯೂ ಕೂಡ ಅಂತಹ ಕಾವ್ಯಗಳಲ್ಲಿ ಸ್ಥಾನಲಭಿಸಿರಲಿಲ್ಲ. ಆದರೆ ರಾಘವಾಂಕ "ಜನ ಬದುಕಬೇಕು" ಎಂಬ ಉದಾತ್ತ ಉದ್ದೇಶದಿಂದ ಕಾವ್ಯ ರಚಿಸುವುದಾಗಿ ಹೇಳಿಕೊಂಡಿದ್ದಾನೆ. ಜನಾಂಗದ ಒಳಿತಿಗಾಗಿ ಸಮಾಜದ ಏಳಿಗೆಗಾಗಿ ಕಾವ್ಯ ಕಟ್ಟುತ್ತಿರುವ ಕಲ್ಪನೆಯೇ ಒಂದು ರೋಮಾಂಚನಕಾರಿ ಸಂಗತಿಯೆನಿಸುತ್ತದೆ. ಇದು ಸಮಕಾಲೀನ ಸಾಹಿತ್ಯದ ಆಶಯ 'ಜನಪರನೀತಿ'ಗೆ ಪೂರಕವಾಗಿದೆ. "ಜನರಿಗೆ ತಿಳಿಯುವ ಹಾಗೆ, ಜನರಾಡುವ ಭಾಷೆಯನ್ನೇ ಬಳಸಬೇಕು. ಜನತೆಯನ್ನು ಗಮನದಲ್ಲಿಟ್ಟುಕೊಂಡು ಬರೆದುದರಿಂದ ಈ

ಕವಿಗಳಿಗೆ ಪೋಷಕರು ಜನಾಂಗದಸಮಸ್ತರು ಅವರ ಋಣವನ್ನು ತೀರಿಸುವ ಭಾವದಿಂದಲೇ ಕವಿ ಭಾವವಿಡಿದವರು ಈ ಅರ್ಥದಲ್ಲಿ ಮಾತ್ರ ಕವಿ ಜನಾಂಗದ ಪ್ರತಿನಿಧಿ, ಜನಾಂಗದ ಸಾವು, ನೋವು, ನಲಿವು, ಹಸಿವು, ನೀರಡಿಕೆ ಇವೇ ಇವರಿಗೆ ಪ್ರಥಮ. ಇವರ ಅಭ್ಯುದಯವೇ ನಾಡಿನ ಅಭ್ಯುದಯವೆಂದು ಭಾವಿಸಿ, ಅಂತಹವನ್ನೇ ಮಹಿಮರೆಂದು ಭಾವಿಸಿ ಅವರ ಚರಿತ್ರೆಗಳನ್ನು ಸರಳವಾದ ಹಾಡುಗಳ ರೂಪಗಳಲ್ಲಿ ದೇಶಿ ಛಂದಸ್ಸಿನಲ್ಲಿ ಹೇಳಿದ ಕೀರ್ತಿ ಈ ಕವಿಗಳದಾಗಿದೆ"[೧] ಎಂದಿರುವ ಡಾ|| ಬಿ. ಸಿ. ಜವಳಿ ಅವರ ಮಾತುಗಳು ಅರ್ಥಪೂರ್ಣವಾಗಿವೆ.

ಓದುಗರನ್ನೇ ದೃಷ್ಟಿಯಲ್ಲಿಟ್ಟುಕೊಂಡು ಸಹೃದಯಿಗಳೆ ಕವಿಗೆ ಮುಖ್ಯವೆಂಬುದನ್ನು ಅರಿತುಕೊಂಡು ಕವಿ ರಾಘವಾಂಕ ಕಾವ್ಯ ರಚಿಸುತ್ತ:

**"ಕವಿಯಧಿಕನಿರ್ದೊಡೇಂ ಕೇಳ್ವರಿಲ್ಲದೊಡೆ?**
**ಗಾನ ವಿನೋದಯಿರ್ದೊಡೇಂ ಜಾಣರಿಲ್ಲದೊಡೆ?"**

ಎಂದು ಪ್ರಶ್ನಿಸಿರುವುದು ಮಹತ್ವದ್ದಾಗಿದೆ. ಸಂವಹನಕ್ಕೆ ಗಮನವಿತ್ತು, ಜನರಾಡುವ ಭಾಷೆಯನ್ನು ಎತ್ತಿಕೊಂಡನು. ಆಡುನುಡಿ, ಜಾಣ್ನುಡಿ, ಜೋಡು ನುಡಿ, ಗಾದೆಮಾತು, ಪ್ರಾದೇಶಿಕ ಪದಗಳು ಮುಂತಾದವುಗಳನ್ನು ಯಥೇಚ್ಚವಾಗಿ ಬಳಸಿದನು. ಇವುಗಳಿಗೆ ಉದಾಹರಣೆ ನೀಡುವುದಾದರೆ-

"ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು' ಹಾಗೂ 'ನಡೆವರೆಡಹದೆ ಕುಳಿತವರೆಡುವರೆ' ಜಾಣ್ನುಡಿಗಳು, 'ಸುಟ್ಟು ಬೊಟ್ಟಿಡು' 'ಕೆಡಹಿ ಹುಡುಕು ನೀರದ್ದು' ಮುಂತಾದ ಆಡುಮಾತುಗಳು, ಮೃತ್ಯು-ಗಿತ್ಯು, ಸತ್ಯ-ಗಿತ್ಯ, ಇತ್ಯಾದಿ ಜೋಡಿನುಡಿಗಳು ಕಪ್ಪ-ಕಪ್ಪನೆ, ತೆಳ್ಳ-ತೆಳ್ಳನೆ, ಬೆಚ್ಚ-ಬೆಚ್ಚನೆ ಮೊದಲಾದ ವಿಶೇಷಗಳು ದೀಡ, ಹಾಗ, ಹುಡಿ ಮೊದಲಾದ ಅಚ್ಚಗನ್ನಡ ಬಿಚ್ಚುನುಡಿಗಳು, ಜೊತೆಗೆ ಕವಿ ಮಾಡಿಕೊಂಡಿರುವ ರೂಪಾಂತರಗಳು ಗಮನಾರ್ಹವಾಗಿವೆ. 'ಸಹಸ್ರಾಕ್ಷ' ಎಂಬುದಕ್ಕೆ ಹಲವು ಕಣ್ಣಾದವಂ, 'ಶಿವ'ನಿಗೆ ಗರಳಗೊರವ, 'ಮನ್ಮಥ'ನಿಗೆ ಅರಳಸರಳ ಇತ್ಯಾದಿ ಕಾರಣಗಳಿಂದ ತನ್ನ ಕೃತಿಗಳಿಂದ ತನ್ನ ಕೃತಿಗಳನ್ನು ರಾಘವಾಂಕ ಸತ್ವಶಾಲಿಯಾಗಿ ಕಟ್ಟಿಕೊಡುವುದರ ಜೊತೆಗೆ ಜನ ಸಾಮಾನ್ಯರಿಗೆ ಮನ ಮುಟ್ಟುವಂತೆ ಮಾಡುವಲ್ಲಿ ಸಫಲನಾಗಿದ್ದಾನೆ.

"ಕಥಾವಸ್ತುವಿನ ಆಯ್ಕೆ, ಸುಸಂಬದ್ಧವಾದ ಸನ್ನಿವೇಶ ನಿರೂಪಣೆ, ಮಾನವೀಯತೆಯ ಮೌಲ್ಯಗಳನ್ನು ತೂಗಿದಂತಿರುವ ಪಾತ್ರ ಚಿತ್ರಣ, ಔಚಿತ್ಯಪೂರ್ಣವಾಗಿ ಮೂಡಿಬಂದಿರುವ ವರ್ಣನೆಗಳು ಅಲಂಕಾರ, ಛಂದಸ್ಸು, ದೇಶೀಯತೆಯ ಸತ್ವದೊಂದಿಗೆ ಮೇಳೈಸಿ ಬಂದ ಭಾಷ್ಯಾ ವೈಶಿಷ್ಟ್ಯ ಇವುಗಳಲ್ಲದೆ ರಾಘವಾಂಕನ ಅಪೂರ್ವಕಲ್ಪನಾ ಶಕ್ತಿ ಉಜ್ವಲ ಪ್ರತಿಭೆ ಹಾಗೂ ಅನುಭವ ಪೂರ್ಣ ಬದುಕಿನ ನಿದರ್ಶನಗಳು, ಜೀವಂತವೆನಿಸುವ

---

೧. ವೀರಶೈವ ಸಾಹಿತ್ಯ ಸಮೀಕ್ಷೆ, 'ಹದಿಮೂರನೆಯ ಶತಮಾನ, ಪುಟ-೧೦೭

ನಾಟಕೀಯ ಅಭಿವ್ಯಕ್ತಿ, ಸಂದರ್ಭೋಚಿತವೆನಿಸುವ ರಸಪ್ರತಿಪಾದನಾಯುಕ್ತ ಇದೇ ಮೊದಲಾದ ಕಾವ್ಯಕ್ಕಿರಬೇಕಾದ ವಿಶೇಷ ಗುಣಗಳಿಂದ ಅವನ ಕೃತಿಗಳು ಮೇಲ್ಪಂಕ್ತಿಯ ಕಾವ್ಯಗಳ ಸಾಲಿನಲ್ಲಿ ತಲೆಯೆತ್ತಿ ನಿಂತು ಅವನೊಬ್ಬ ಕನ್ನಡದ ಮಹಾಕವಿ ಎಂಬುದನ್ನು ಮನಗಾಣಿಸಿಕೊಡುತ್ತವೆ. ಕವಿ ರಾಘವಾಂಕನ ಸಮಕಾಲೀನ ಯುಗಧರ್ಮದ ಪ್ರತಿನಿಧಿಯಾಗಿರುವಂತೆ ಪರಂಪರೆಯ ನಿರ್ಮಾತೃವೂ ನಂತರದ ಕವಿಗಳಿಗೆ ಮಾರ್ಗ ದರ್ಶಕನೂ ಆಗಿ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ನಿರಂತರವಾಗಿ ಪ್ರಕಾಶಿಸುವ ಸ್ವಯಂ ಪ್ರಕಾಶಿತ ನಕ್ಷತ್ರವೆನಿಸಿದ್ದಾನೆ"[೨] ಡಾ॥ ಎಸ್. ಎಂ. ಹರದಗಟ್ಟಿಯವರ ಈ ಮಾತುಗಳು ರಾಘವಾಂಕನ ಕಾವ್ಯ ಸಾಮರ್ಥ್ಯಕ್ಕೆ ಕನ್ನಡಿ ಹಿಡಿದಿವೆ.

ಹರಿಶ್ಚಂದ್ರ ಕಾವ್ಯದ ಕುರಿತಾಗಿ ರಾಷ್ಟ್ರಕವಿ ಕುವೆಂಪುರವರು 'ಕಾವ್ಯವಿಹಾರ', ಪ್ರೊ. ಎಸ್. ವ್ಹಿ. ರಂಗಣ್ಣನವರ 'ಶೈಲಿ' ಡಾ॥ ರಂ. ಶ್ರೀ ಮುಗಳಿಯವರು ಕನ್ನಡ ಸಾಹಿತ್ಯ ಚರಿತ್ರೆ' ಮತ್ತು ಡಾ॥ ಆರ್. ಸಿ. ಹಿರೇಮಠರು 'ಮಹಾಕವಿ ರಾಘವಾಂಕ' ಕೃತಿಗಳಲ್ಲಿ ಶೈಲಿ; ರಸ, ರೀತಿ, ಅಲಂಕಾರ, ಧ್ವನಿ ಅಷ್ಟದಶ ವರ್ಣನೆಗಳು, ನಾಟಕೀಯ ಗುಣ ಕಾವ್ಯ ಸೌಂದರ್ಯ, ಕವಿ ಸಮಯಗಳ ಕುರಿತಾಗಿ ಚಿಂತನ-ಮಂಥನಗೈದಿದ್ದಾರೆ. ಆ ಕಾಲಕ್ಕೆ ಅವು ಸರಿ, ಆದರೆ ಇದೀಗ ನಮ್ಮ ಕಾವ್ಯಗಳನ್ನು ಸಮಾಜಿಕ ಅಧ್ಯಯನ, ಸಾಂಸ್ಕೃತಿಕ ಅಧ್ಯಯನ, ಜನಾಂಗಿಕ ಅಧ್ಯಯನ ಕೈಕೊಳ್ಳಬೇಕಿದೆ. ಈ ಲೇಖನದಲ್ಲಿ ಹೊಸಗನ್ನಡ ಸಾಹಿತ್ಯದ ಪ್ರಮುಖ ಘಟ್ಟವಾದ 'ಬಂಡಾಯ ಸಾಹಿತ್ಯ' ದ ಬೆಳಕಿನಲ್ಲಿ ಹರಿಶ್ಚಂದ್ರಕಾವ್ಯವನ್ನು ಅಧ್ಯಯನಿಸಲು ಪ್ರಯತ್ನಿಸಿರುವೆನು.

ಬೇಟೆಯಿಂದ ಬಸವಳಿದ ಹರಿಶ್ಚಂದ್ರ ಮಹಾರಾಜನ ಮುಂದೆ 'ಗಾನನಾಯಕಿ' ಯರು 'ದಂಡಿಗೆವಿಡಿದು' ಹಾಡುತ್ತಾರೆ. ಆ ಹಾಡನ್ನು ಆಲಿಸಿ ಸಂತಸಗೊಂಡ ಅರಸನು ಗಾನನಾಯಕಿರಿಗೆ ಸರ್ವಾಭರಣ ನೀಡಲು ಹೋಗುತ್ತಾನೆ. ಅದಕ್ಕವರು; "ಬಡತನದ ಹೊತ್ತಾನೆ ದೊರಕಿ ಫಲವೇನು? ನೀರಡಸಿರ್ದ ಹೊತ್ತಾಜ್ಯ ದೊರಕಿ ಫಲವೇನು?. ಕಡಲೊಳಾಳ್ವಂಗೆ ತೆಪ್ಪವನು ದಾರಿದ್ರಂಗೆ ಕೆಡವನತಿ ರೋಗಿಗೆ ಮೃತವಮಂ ಕೊಟ್ಟಡೆವರಡಿಗಡಿಗದಾವ ಹರುಷವನಯ್ದುತಿಪ್ಪರ್ "[೩] ಎಂದು ಉತ್ತರ ಕೊಡುತ್ತಾರೆ. ಇಲ್ಲಿ ಬಡತನ, ಹಸಿವು, ನೀರಡಕೆ, ರೋಗ, ಔಷಧ ಮುಂತಾದ ಪದಪ್ರಯೋಗಗಳಿವೆ. ಇವು ಜೀವನಾವಶ್ಯಕವಾದ ವಸ್ತುಗಳ. ಹೊಟ್ಟೆತುಂಬಿದ ಬಳಿಕವೆ ಅಲ್ಲವೆ-ಅಲಂಕಾರ, ವಸ್ತು; ಉಡುಗೆ-ತೊಡುಗೆಗಳು? ಅರಸ-ಆಭರಣ ನೀಡಲು ಹೋದಾಗ ತಿರಸ್ಕರಿಸಿ, ಜೀವನಾವಶ್ಯಕ ವಸ್ತುಗಳನ್ನು ಹೊಲತಿಯರು ಪ್ರಸ್ತಾಪಿಸಿದ ಸಂಗತಿ ಗಮನಾರ್ಹವೆನಿಸುತ್ತದೆ.

'ಕುಲ'ದ ಮಾತು ಬಂದಾಗ ರಾಘವಾಂಕನು ಹರಿಶ್ಚಂದ್ರನಿಗೆ ಹೇಳುವುದು ಹೀಗೆ: "ಲಲಿತ ವಸುಮತಿ ಹುಟ್ಟುವಂದು ಹುಟ್ಟಿದ ಸೂರ್ಯ ಕುಲದ ರಾಯರ್ಗೆ ವಂಶದೊಳು

---

೨. ಹರನೆಂಬುದೇ ಸತ್ಯ. ಪ್ರಸ್ತಾವನೆ, ಪುಟ-೩೧

೩. ಹರನೆಂಬುದೇ ಸತ್ಯಾ, ಪದ್ಯ ೨೦-೨೧

ಕೀರ್ತಿಯೊಳು ಭುಜಬಲದೊಳೊರೆಯೆನಿಸಿ ಕನ್ನಿಕೆಯರು ಕೊಡುವ ಭೂಪರಿಲ್ಲೆಂದುತನಕ ಹೊಲತಿಯರು ಬಂದಾವು ಸತಿಯರಾದಪ್ಪಂಬುಲಿಹವೆಂಬುದು ಬಂದ ಕಾಲಗುಣವೋ ನಿಂದ ನೆಲದ ಗುಣವೋ ನೋಡು ನೋಡೆಂದು ಕಡು ಮುಳಿದು ಕೋಪಿಸಿದವನೀಶನು"[೪] ಭರತಖಂಡವನ್ನು ಸೂರ್ಯವಂಶದ ಅರಸರು ಆಳುತ್ತ ಬಂದಾಗಿನಿಂದಲೂ ಇದುವರೆಗೆ ಶೌರ್ಯ-ಸಾಹಸ ಪ್ರಸಿದ್ಧತೆಗಳಲ್ಲಿ ಅವರಿಗೆ ಸರಿಸಾಟಿಯಾಗಿ ನಿಲ್ಲಬಲ್ಲ ಅರಸು ಮನೆತನಗಳಿಲ್ಲ. ಅಂತಹ ಶ್ರೇಷ್ಠವಂಶಕ್ಕೆ ತಮ್ಮ 'ಕನ್ಯೆ' ಕೊಡಲು ಹೊಲತಿ (ಅನಾಮಿಕ ಸ್ತ್ರೀ) ಯರಾದ ನೀವು ಬಂದು ಮದುವೆಯಾಗೆಂದು ಕೇಳುವುದು ಎಂತಹ ಮೂರ್ಖತನ. ಇದು ಬಂದ ಕಾಲಗುಣವೋ, ನಿಂತ ನೆಲದ ಗುಣವೋ ಎಂದು ಅರಸ ಹೊಲತಿಯರನ್ನು ಹೀಯಾಳಿಸುತ್ತಾನೆ. ಆ ಮಾತಿಗೆ ಹೊಲತಿಯರು ನೀಡಿದ ಉತ್ತರ ಮಾರ್ಮಿಕವಾಗಿದೆ.

"ಪಾವನಕ್ಷೀರಮಂ ಕೊಡುವ ಕೆಚ್ಚಲಮಾಂಸ
ವಾವಲೇಸಿನಿದುಳ್ಳ ಮಧುವಂ ನೊಸೆದೀವನೊಳ
ವಾವಲೇಸಧಿಕ ಕಸ್ತೂರಿಯಂ ಕೊಡುವ ಮೃಗನಾಭಿತಾನಾವ ಲೇಸು
ದೇವರಿಗೆ ಸಲ್ಲವೇ ಉತ್ತಮಗುಣಂಗಳಿ
ರ್ದಾವ ಕುಂದಂ ಕಳೆಯಲಾಜಿವವನೀಶ ಕೇಳ್
ಭಾವಿಸುವೊಡಿಂದೆಮ್ಮ ರೂಪು ಜವ್ವನವಿರಲು ಕುಲದ ಮಾತೇಕೆಂದರು"[೫]

ಇಲ್ಲಿ ಹೊಲಿತಯರೆತ್ತಿದ ಪ್ರಶ್ನೆ ಎಷ್ಟು, ಮೂಲಭೂತವಾಗಿದೆಯೆಂಬುದನ್ನು ಪ್ರಾಜ್ಞರೆ ವಿಚಾರಿಸಿಕೊಳ್ಳಬೇಕು. ವ್ಯಕ್ತಿಗೆ ಕುಲ ಮುಖ್ಯವಲ್ಲ ಅವನ ಕಾರ್ಯ ಮುಖ್ಯವಾಗುತ್ತದೆ. ಯಾವುದೇ ಒಬ್ಬ ವ್ಯಕ್ತಿ ತನ್ನ ಹುಟ್ಟಿನಿಂದ ದೊಡ್ಡವನೆನಿಸಿಕೊಳ್ಳುವುದಿಲ್ಲ. ಆತನ ಕಾಯಕ, ನಡೆಸಿದ ಬದುಕುಗಳಿಂದ ದೊಡ್ಡವನಾಗುತ್ತಾನೆಂದಿರುವುದು ರಾಘವಾಂಕನ ಗುಣಗ್ರಾಹಿತ್ವಕ್ಕೆ ನಿದರ್ಶನವಾಗಿದೆ. ಜಾತಿ-ಜಾತಿಯೆಂದು ಕಿತ್ತಾಡುವ ಜನರಿಗೆ ರಾಘವಾಂಕ ಈ ಕಾವ್ಯದಲ್ಲಿ ಸಮರ್ಥವಾಗಿ ಉತ್ತರಿಸಿದ್ದಾನೆ. ಕುಲಕ್ಕೆ ಹೊಸರೀತಿಯಲ್ಲಿ ವ್ಯಾಖ್ಯಾನ ಬರೆದಿದ್ದಾನೆ. ಮಹಾಕವಿ ಪಂಪನ ಕರ್ಣನು "ಕುಲಂ ಕುಲಮಲ್ತು , ಚಲಂ ಕುಲಂ, ಗುಣಂ ಕುಲಂ, ಅಣ್ಮಿಂ ಕುಲಂ, ಅಭಿಮಾನವೊಂದೇ ಕುಲಂ" ಎಂದು ದ್ರೋಣನಿಗೆ ನೀಡಿದ ಉತ್ತರದ ನೆನಪಾಗುತ್ತದೆ. ಮಹಾಕವಿ ಪಂಪನ ಈ ಮಾತು ಥಟ್ಟನೆ ನೆನಪಾಗುವಂತೆ ರಾಘವಾಂಕ ಸಶಕ್ತವಾಗಿ ಕಟ್ಟಿಕೊಟ್ಟಿದ್ದಾನೆ.

ಉಚ್ಚವರ್ಗದ ಸವರ್ಣೀಯರ ಅಭಿಪ್ರಾಯವನ್ನು ಹರಿಶ್ಚಂದ್ರ ಮಂಡಿಸಿರುತ್ತಾನೆ; "ಅಕ್ಕಕ್ಕು ಬಚ್ಚಲುದಕಂ ತೀಳಿದಾರ ಮೀರಕ್ಕೆ ಯೋಗ್ಯಂನಾಯ್ಗೆ ಹಾಲುಳ್ಳೊಡಾವನೊಟಕ್ಕೆ ಯೋಗ್ಯಂ.... ಮಿಕ್ಕ ಹೊಲತಿಯರು ನೀವೆನೆ... ಏತಕ್ಕೆ ಯೋಗ್ಯಂ ರಮಿಸದವರುಂಟೇ ಶಿವ ಶಿವಾ ಈ ಮಾತು ತಾ ಹೊಲೆಯೆಂದನು"[೬] ಹೇಳಿ ಕೇಳಿ ನೀವು ಹೊಲತಿಯರು ನಿಮ್ಮಲ್ಲಿ ಕುಲವೇ ಇಲ್ಲ. ಅಂದರೆ ಅನಾಮಿಕರಲ್ಲಿ ರೂಪ-ಯೌವನ, ವಿದ್ಯೆ, ಸದ್ಗುಣಗಳು

೪. ಹರನೆಂಬುದೇ ಸತ್ಯ, ಪದ್ಯ-೨೬, ಪುಟ-೨೨
೫. ಅದೇ, ಪದ್ಯ-೨೭, ಪುಟ-೨೨
೬. ಅದೇ, ಪದ್ಯ-೨೮, ಪುಟ-೨೨

ಎಷ್ಟಿದ್ದರೂ ವ್ಯರ್ಥವೆಂದು ಅರಸ ಉಪಮಗಳ ಮೂಲಕ ಹೇಳುತ್ತಾನೆ. ಹೊಲತಿಯರನ್ನು ಮದುವೆ ಮಾಡಿಕೊಳ್ಳಬೇಕೆಂದು ಯೋಚಿಸುವುದೇ ಬಹುದೊಡ್ಡ ಪಾಪವಾಗುತ್ತದೆ, ಅವರನ್ನು ಲಗ್ನವಾದರೆ ಎಂತಹ ಪಾಪ ತಟ್ಟೀತು. ಎಂದೂ ಪ್ರಶ್ನಿಸುತ್ತಾನೆ. ಇದು ಆ ಕಾಲದ ನಂಬಿಗೆ. ಯುಗದ ಪ್ರತಿನಿಧಿಯಾದ ರಾಘವಾಂಕ ಅದನ್ನು ದಾಖಲಿಸಿದ್ದಾನೆ.

ಅರಸನೆತ್ತಿದ ಆಕ್ಷೇಪಕ್ಕೆ ಅನಾಮಿಕ ಸ್ತ್ರೀಯರು ನೀಡುವ ಉತ್ತರ ಓದುಗರನ್ನು ದಂಗುಬಡಿಸುವಂತಿದೆ. "ಹಾಡನೊಲಿದಾಲಿಸಿದ ಕಿವಿಗೆ ಹೊಲೆಯಿಲ್ಲ ಮಾತಾಡಿ ಹೊಗಳಿದ ಬಾಯ್ಗೆ ಹೊಲೆಯಿಲ್ಲ ರೂಪನೇಱೆ ನೋಡಿದ ವಿಲೋಚನಕೆ ಹೊಲೆಯಿಲ್ಲ ಮೇಯ್ ಮುಡಿಗಳಿಂ ಸುಳಿವ ತಂಗಾಳಿಯಿಂದ ತೀಡುವ ಸುಗಂಧಮಂ ವಾಸಿಸಿದ ನಾಶಿಕಕೆ ನಾಡೆ ಹೊಲೆಯಿಲ್ಲ ಸೋಂಕಿಗೆ ಹೊಲೆಯುಂಟಾಯ್ತು ಕೂಡಿರ್ದಪಂಚೇಂದ್ರಿಯಂಗಳೊಳು ನಾಲ್ಕಧಮವೆವೊಂದಧಿಕವೆಂದರು"[೭] ಈ ಪ್ರಶ್ನೆಗಳು ವಾಸ್ತವಿಕ ಸತ್ಯದಿಂದ ಕೂಡಿವೆ, ಇವುಗಳನ್ನು ಅಲ್ಲಗಳೆಯಲು ಸಾಧ್ಯವೇ? ಅರಸ ಒಂದು ಕ್ಷಣ ಕಕ್ಕಾಮಿಕ್ಕಿಯಾಗಿ ಹೋಗುತ್ತಾನೆ. ಮಾರುತ್ತರಗೊಡಲು ತತ್ತರಿಸಿ ಹೋಗಿ "ದೂರದಿಂದಲ್ಲದೆ ಅವು ಮುಟ್ಟಲಿಲ್ಲ" ವೆಂದು ಜಾರಿಕೊಳ್ಳಬಯುಸುತ್ತಾನೆ. ಸತ್ಯದ ಎದುರು ಸತ್ಯ ಹರಿಶ್ಚಂದ್ರನೆ ಪಲಾಯನಗೈಯ್ಯಬೇಕಾಗಿ ಬಂದ ಸಂಗತಿ ವಿಚಿತ್ರವಲ್ಲವೆ? ಅರಸ ಹೊಲತಿಯರಿಗೆ ನಿಮ್ಮ ವರ್ತನೆ 'ಬಂಢತನ'ವೆಂದು ಜರಿಯುತ್ತಾನೆ. ಇಲ್ಲಿ ಅರಸ ಬಂಢರೋ ಹೊಲತಿಯರು ಬಂಢವೋ ಓದುಗರೆ ಯೋಚಿಸಬೇಕು.

ಹೊಲತಿಯರು "ಶಾಫದಿಂದೆಮಗಾದ ದುಷ್ಕುಲಂ ಸತ್ಕುಲಜ ಭೂಪ ನಿನ್ನಯ ಸಂಗದಿಂ ಶುದ್ಧವಪ್ಪುದೆಂಬಾಪೇಕ್ಷೆಯಿಂ ಬಂದೆವು"[೮] ಎನ್ನುವಲ್ಲಿ 'ಕೀಳು ಕುಲ' ಜನಿಸುವುದೆಂದರೆ ಶಾಪವೆಂದು ಜನರು ನಂಬಿದ್ದಾರೆ. ಹಿಂದಿನ ಜನುಮದಲ್ಲಿ ತಾವು ಮಾಡಿದ ಕರ್ಮದ ಫಲವಾಗಿ ಈ ಜನ್ಮದಲ್ಲಿ ಕೀಳು ಕುಲದಲ್ಲಿ ಹುಟ್ಟಿರುತ್ತಾರೆ. ದಲಿತರು, ಶೂದ್ರರು ತಮ್ಮ ಪಾಪದ ವಿಮೋಚನೆಯಾಗಿ ಮುಂದನ ಜನ್ಮದಲ್ಲಿ ಉಚ್ಚ ಕುಲದಲ್ಲಿ ಜನಸಬೇಕಾದರೆ ಈ ಜನ್ಮದಲ್ಲಿ ಮೇಲ್ವರ್ಗದವರ ಸೇವೆ ಮಾಡಬೇಕು ಇತ್ಯಾದಿ ಮೂಢನಂಬಿಕೆಗಳನ್ನು ಹಬ್ಬಿಸಿದವರು ಪುರೋಹಿತಶಾಹಿಗಳು. ಈ ಪೈಶಾಚಿಕ ಪದ್ಧತಿಯನ್ನು ಕಿತ್ತೊಗೆಯಲು ಹನ್ನೆರಡನೆಯ ಶತಮಾನದಲ್ಲಿಯೇ ಬಸವಣ್ಣನವರು ಅವಿರತವಾಗಿ ಹೋರಾಡಿದರು. ಕೀಳಿಂಗಲ್ಲದೆ ಹಯನು ಕರೆಯದು' ಎಂದು ಸಾರಿ ಹೇಳಿದಳು. ಈ ಶತಮಾನದಲ್ಲಿ ಅಂಬೇಡ್ಕರ್, ಗಾಂಧಿ, ಜೇಪಿ, ಲೋಹಿಯಾ, ಪೆರಿಯಾರ್ ಮುಂತಾದ ಸಮಾಜ ಸುಧಾರಕರು ಅಪಾರವಾಗಿ ಶ್ರಮಿಸಿದರು. ಇಷ್ಟಾದರು ಇನ್ನು ಸಂಪೂರ್ಣವಾಗಿ ಜಾಗೃತಿಯಾಗಿಲ್ಲ. ಹೀಗಿರುವಾಗ ಹದಿಮೂರನೆಯ ಶತಮಾನಗಳಲ್ಲಿ ದಲಿತರ ಸ್ಥಿತಿ-ಗತಿ ಹೇಗಿರಬೇಕು? ವೈಚಾರಿಕ ಮಟ್ಟ ಎಷ್ಟಿರಬೇಕು? ಬಹುಶಃ 'ಶಾಪ' ವೆಂಬ ನಂಬಿಗೆ ಅವರಲ್ಲಿ ಬೀಡುಬಿಟ್ಟಿರಬಹುದು. ಅದಕ್ಕಾಗಿಯೇ ಅಷ್ಟೇ ಸಹಜವಾಗಿ ಹೊಲತಿಯರು

---

೭. ಅದೇ, ಪದ್ಯ-೨೯, ಪುಟ-೨೩

೮. ಅದೇ, ಪದ್ಯ-೩೧, ಪುಟ-೨೩

ಶಾಪದಿಂದೆಮಗಾದ ದುಷ್ಕುಲಂ ಕಳೆ ಭೂತನಾಥ ಎಂದು ಮೊರೆಯಿಡುತ್ತಿದ್ದಾರೆ. ಅರಸ ನಿಮಗಾಗಿ ನನ್ನ ಕುಲಕ್ಕೆ ಕಲಂಕ ತಂದುಕೊಳ್ಳಲೆ? ಎಂದು ನಿರಾಕರಿಸುತ್ತಾನೆ.

ಸಂಘರ್ಷಪೂರ್ಣವಾದ ಈ ಸಂಭಾಷಣೆ ಹರಿಗಡಿಯದೆ, ಹಾಗೆಯೇ ಮುಂದುವರಿಯುತ್ತದೆ. ಗಾನನಾಯಕಿಯರು "ಪಾಪಿಗಳ ಪಾಪಮಂ ತೊಳೆವ ಗಂಗಗೆ ಪಾಪಲೇಪವುಂಟಾಯ್ತೆ?" ಎಂದು ಪ್ರಶ್ನಿಸುವುದು ಸಮಸ್ತ ಸವರ್ಣಿಯರ ಅಭಿಮಾನಕ್ಕೆ, ಅಹಂಕಾರಕ್ಕೆ 'ಚಾಟಿಯೇಟು' ಕೊಟ್ಟಂತಿದೆ. ಪರಂಪರಾಗತವಾದ ನಂಬಿಕೆ 'ಗಂಗೆ' ಯೆಂದರೆ ಪವಿತ್ರಳು. ಗಂಗೆಯ ಒಂದೇ ಒಂದು ಹನಿ ನೀರು ಸೋಂಕಿದರೆ ಏಳು ಜನ್ಮದ ಪಾಪಗಳು ಪರಿಹಾರಗೊಳ್ಳುತ್ತವೆ. ಹಾಗೆಯೇ ಅರಸ ನಿನ್ನ ಕುಲವೆಂದರೆ 'ಗಂಗೆ'ಯಂತೆ ಗಂಗೆಗೆ ಎಲ್ಲಿಯ ಪಾಪ? ಎಂದು ಪ್ರಶ್ನಿಸುತ್ತಾರೆ. ನಾವಿಲ್ಲಿ ತುಸು ನಿಂತು ಕೊಂಡು ಇಂದು ಮಲೀನಗೊಂಡಿರುವ ಗಂಗಾನದಿಯನ್ನು ಶುಚಿಗೊಳಿಸಲು ರೂಪಿಸಿರುವ ಬೃಹತ್ ಯೋಜನೆ "ಗಂಗಾ ಶುದ್ಧಾಕರಣ" ವನ್ನು ಸ್ಮರಿಸಿಕೊಳ್ಳಬೇಕು. ಸರ್ವರ ಕೊಳೆಯನ್ನು ತೊಳೆಯುವ ಪವಿತ್ರ ಜಲವೆಂದು ಎದೆತಟ್ಟಿ ಹೇಳುವ ನದಿಯಿಂದು ಕಲುಷಿತಗೊಂಡಿದೆ. ಅದನ್ನು ನಿರ್ಮಲಗೊಳಿಸಲೆಂದು ಹಾಕಿಕೊಂಡಿರುವ ಕ್ರಮಗಳು ಪರಂಪರಾಗತ ನಂಬಿಕೆಗೆ ಬಹುದೊಡ್ಡ ವಿಡಂಬನೆಯಾಗಿದೆ.

ಹರಿಶ್ಚಂದ್ರನು "ಕುಲಧರ್ಮವೀ ಪಂಥವಲ್ಲ, ಕೊಡವಾಲ ಕೆಡಿಸುವೊಡೆ ಆವ್ಮುವೆನಿತಾಗಬೇಕೆಂದನು" ಅರಸನ ಈ ಅಸಂಬದ್ಧ ಉತ್ತರಕ್ಕೆ ರೋಸಿಹೋದ ಅನಾಮಿಕರು " ಇನ್ನೊಲಿದಂತೆ ಮಾಡು ನಿನ್ನಯ ಬೆನ್ನ ಬಿಡೆವೆಂದರು" ಅದಕ್ಕೆ ಅರಸ ಮುಳಿದು "ಘುಡು-ಘುಡಿಸುವ ಕೋಪಾಟೋಪದಿಂ ಹಲ್ಲೆ-ಕಳೆ ಬಾಯ ಹಱಿಯೆ ಹೊಯ್ ಹೊಡೆ"ಯಲು ಮುಂದಾದನು[೧೦] ಹರಿಶ್ಚಂದ್ರನ ಈ ವರ್ತನೆ ಇಂದಿನ ಅಧಿಕಾರಿಗಳು, ಪುರೋಹಿತಶಾಹಿಗಳು, ಬಂಡವಾಳಶಾಹಿಗಳು, ಪಟ್ಟಭದ್ರಹಿತಾಸಕ್ತಿಗಳು, ರಾಜಕಾರಣಿಗಳು ದೀನ-ದಲಿತರ ಮೇಲೆ ಮಾಡುವ 'ಹಲ್ಲೆ' ನಡೆಸುವ ದೌರ್ಜನ್ಯಗಳನ್ನು ನೆನಪಿಸುತ್ತವೆ.

ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ (೧) ಹರಿಶ್ಚಂದ್ರನು ಮುಂದೊಡ್ಡುವ 'ಕುಲ'ದ ಪ್ರಶ್ನೆಯನ್ನು ರಾಘವಾಂಕನು ಹೊಲತಿಯರ ಮಾತಿನ ಮೂಲಕವಾಗಿ, ಪ್ರಗತಿಪರ ಮತ್ತು ವೈಚಾರಿಕತೆಯ ಬೆಳಕಿನಲ್ಲಿ ನೋಡಬಯಸಿದ್ದು, (೨) ಇಂದಿನ ದಲಿತ-ಬಂಡಾಯದ ಸಾಹಿತಿಗಳು ಇಂಥದೇ ವಸ್ತುವನ್ನು ಆಯ್ದುಕೊಂಡು ಕೃತಿಗಳನ್ನು ರಚಿಸುತ್ತಿದ್ದಾರೆ. ಆದರೆ ಬರಿ ಆವೇಶ-ಆಕ್ರೋಶ, ಆರ್ಭಟ, ಭಾಷಣ ಬಿಗಿಯುವ ಶೈಲಿ ಎಂಬ ಆಪಾದನೆಯಿದೆ. ಕಾವ್ಯಾಂಶ ಕಡಿಮೆಯಾಗಿ ಕಲೆ, ಕೃತಿಯ ಶಿಲ್ಪ ಸೊರಗುವ ಸಾಧ್ಯತೆಯಿದೆ. ಇವರಲ್ಲಿ ಸ್ವಾನುಭವವಿದೆ. ಅದಕ್ಕೆ ಎರಡು ಮಾತಿಲ್ಲ. ರಾಘವಾಂಕ ಆವೇಶರಹಿತನಾಗಿ ಯಾವುದೇ

---

೯. ಅದೇ, ಪದ್ಯ-೩೨, ಪುಟ-೨೩

೧೦. ಅದೇ, ಪದ್ಯ-೩೩, ಪುಟ-೨೪

ಪಾತ್ರದ ವಕಾಲತ್ತನ್ನು ನಿರ್ವಹಿಸದೆ, ವ್ಯವಸ್ಥಿತವಾದ 'ಮಾನಸಿಕ ದೂರ' ವನ್ನು ಕಲ್ಪಿಸಿಕೊಂಡಿದ್ದಾನೆ. ಒಂದು ಸನ್ನಿವೇಶವನ್ನು ಎಷ್ಟು ಸಂಯಮದಿಂದ ನಿಯಂತ್ರಿಸಿ, ಕಾವ್ಯ ಕಟ್ಟಬಹುದೆಂಬುದಕ್ಕೆ ಈ ಸಂಭಾಷಣೆಯ ಸನ್ನಿವೇಶ ಶ್ರೇಷ್ಠ ನಿದರ್ಶನವಾಗಿ ನಿಲ್ಲುತ್ತದೆ. ಇಂಥ ಅಂಶಗಳನ್ನು ಬಂಡಾಯ ಸಾಹಿತ್ಯ ಸಂಘಟನೆಯ ಸ್ನೇಹಿತರು ಅವಲೋಕಿಸಬೇಕು.

'ಹೊಲೆ'ಗೆ ರಾಘವಾಂಕನು ಕೊಡುವ ವ್ಯಾಖ್ಯೆ ಹೀಗಿದೆ: "ಮುನಿಗೆ ಹೊಲೆಯಾವುದತ್ತಿ ಕೋಪ ಬದ್ಧದ್ವೇಷವನಿಮಿತ್ತ ವೈರ"[೧೧] ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ವರ್ಣ ಮತ್ತು ವರ್ಗ ವ್ಯವಸ್ಥೆಯನ್ನು ಸಮಾಜದಿಂದ ಹೊಡೆದೋಡಿಸಲು ಶತಪ್ರಯತ್ನಗೈದರು. ಆ 'ಜಾತಿ'ವ್ಯವಸ್ಥೆಯನ್ನು ಕವಿ ಮತ್ತಿಲ್ಲಿ ಎತ್ತಿಕೊಂಡಿದ್ದಾನೆ. ಪರಂಪರಾಗತವಾದ ನಂಬಿಕೆಗಳನ್ನು ಕಲುಕುವ ಇಚ್ಛೆಯಿಂದಲ್ಲ, ಬದಲಾಗಿ ತನ್ನ ಯುಗಧರ್ಮಕ್ಕೆ ಅನುಗುಣವಾಗಿ ತಾನು ಕಟ್ಟಿದ ಕಾವ್ಯದ ಚೌಕಟ್ಟಿನಲ್ಲಿಯೇ ಹೊಸದೊಂದು ವ್ಯಾಖ್ಯಾನ ನೀಡಲು ಹೊರಟಂತಿದೆ. ಕುಲಗಳು ನಾವು ಮಾಡುವ ಕೃತ್ಯಗಳಿಂದ ನಿರ್ಧರಿಸಬೇಕೇ ವಿನಃ ಹುಟ್ಟಿನಿಂದಲ್ಲವೆಂದು ಸ್ಪಷ್ಟಪಡಿಸುತ್ತಾನೆ. ಬಹುಶಃ ಮಹಾನ್ ಸಮಾಜ ಸುಧಾರಕ ಅಣ್ಣ ಬಸವಣ್ಣನವರ "ಕೊಲ್ಲುವವನೇ ಮಾದಿಗ ಹೊಲಸು ತಿಂಬುವವನೇ ಹೊಲೆಯ" ಎನ್ನುವ ವಚನವು ರಾಘವಾಂಕನ ಮೇಲೆ ಪ್ರಭಾವ ಬೀರಿರಬಹುದು. ಮತ್ತೆ ಬೇರೊಂದೆಡೆ "ಅತಿ ಹಸಿವ ಯತಿ ಹೊಲೆಯ; ಹುಸಿಯದಿಹ ಹೊಲೆಯನುನ್ನತ ಯತಿವರನು" ಎಂಬುದಾಗಿ ಪ್ರತಿಪಾದಿಸಿದ್ದು ಅರ್ಥಪೂರ್ಣವಾಗಿದೆ. ಇದು ಮಾನವೀಯ ಮೌಲ್ಯಗಳನ್ನು ತೂಗಿದ ವಿಶಾಲ ತಳಹದಿಯ ಮೇಲೆ ಮೂಡಿಬಂದಿರುವ ಮಾತಿದು. ಈ ಪದ್ಯ ಗಮನಿಸಿರಿ:

**"ವರವಾರಣಾಸಿ ಮಧ್ಯವೆ ತಾಳದೇಶವ**
**ಚ್ಚರಿಯ ಕಾಶೀಪುರವೆ ಅಯೋಧ್ಯೆ ಸ್ಮಶಾನ ಧರೆ**
**ಯರಮನೆ ಪ್ರೇತಗಾಹಿನ ತಮಗಮಣಪೀಠಪರಿಣಾಮವಾರೋಗಣೆ**
**ಪರಮಧೃತಿ ಚತುರಂಗಸೇನೆ ಸಂಬಳಿಗೋಲು**
**ಕರವಾಳು ಸತ್ಯ ಭಂಡಾರ ಪ್ರತಿಯಾಜ್ಞೆ ಭಾ**
**ಸುರತರ ಕ್ಷೇತ್ರಧರ್ಮಂಗಳೆಂದೇ ಕಾಣುತಿರ್ದನು ಹರಿಶ್ಚಂದ್ರನು"**[೧೨]

ಈ ಪದ್ಯದ ಅರ್ಥದ ವ್ಯಾಪ್ತಿ ಬಹಳ ದೊಡ್ಡದಾಗಿದೆ. ಬಿಡಿಸಿದಷ್ಟು ಅರ್ಥವನ್ನು ಹೊರಡಿಸುತ್ತದೆ. ಸುಡುಗಾಡ ಕಾಯುವ ಕಾಯಕಕ್ಕೆ ರಾಘವಾಂಕನು ಮಹಾಘನತೆಯನ್ನು ತಂದಿತ್ತಿದ್ದಾನೆ. ಸಾಮ್ರಾಟನ ಪಟ್ಟಕ್ಕಿರುವ ಘನತೆಯೇ 'ಸ್ಮಶಾನ' ಕ್ಕಿದೆಯೆಂದು ತಾನು ಆಳಿದ ತುಳುದೇಶ. ವಿಸ್ಮಯವನ್ನುಂಟು ಮಾಡಿಸುವ 'ಕಾಶಿಪಟ್ಟಣ'ವೇ ತನ್ನ ಹಿಂದಿನ ರಾಜಧಾನಿಯಾಗಿದ್ದ ಅಯೋಧ್ಯೆ ಸ್ಮಶಾನವೇ ತನ್ನರಮನೆ. ಶವ ಕಾಯುವ ಗುಡಿಸಲು ಹಿಂದಿನ ರತ್ನ ಖಚಿತವಾದ ಸಿಂಹಾಸನ. ಪರಿಣಾಮವೇ (ಸುಡುಗಾಡು ಕಾಯುವಲ್ಲಿ

---

೧೧. ಹರನೆಂಬುದೇ ಸತ್ಯ ಪದ್ಯ-೧೪, ಪುಟ-೬೮
೧೨. ಅದೇ, ಪದ್ಯ-೨೮, ಪುಟ-೪೯

ದೊರೆತ ಸಂತಸವೇ) ತೃಪ್ತಿ. ಸದಾ ಬೆಂಗಾವಲಾಗಿ ಕಾಯುವ ಧೈರ್ಯವೇ ಹಿಂದಿನ ಚತುಹಗಬಲ. ಕೈಯಲ್ಲಿರುವ ಸಂಬಳಿಗೋಲು ಹಿಂದಿನ ರಾಜಖಡ್ಗ, ಸತ್ಯವೇ ಆತನ ಬೊಕ್ಕಸ, ಸ್ಮಶಾನದೊಡೆಯ ವೀರಬಾಹುಕನ ಆಜ್ಞೆಯು ಹಿಂದಿನ ಕ್ಷಾತ್ರಧರ್ಮವೆಂದು ಭಾವಿಸಿದ ಅರಸ ಸ್ಮಶಾನದಲ್ಲಿ ಸಂಯಮದಿಂದ ಕಾಲಕಳೆಯುತ್ತಿದ್ದನು.

> "ಘನಸತ್ಯವೇ ಜೀವವೆಂದಿರ್ದ ನಿನ್ನ ಹೊಲೆ
> ಯನಸೇವೆ ಗುರುಸೇವೆ ಹೊತ್ತ ಹೊಲೆ ವೇಷ ಪಾ
> ವನ ಪುಣ್ಯವೇಷ ಸುಡುಗಾಡು ರಕ್ಷಿಸಿದಿರವು ತಾಯಜ್ಞ ರಕ್ಷೆಯಿರುವು
> ಅನುದಿನಂ ಭುಂಜಿಸಿದ ಶವದ ಶಿರದಕ್ಕಿಯ
> ಲ್ಲನಪೇಯ ಚಾಂದ್ರಾಯಣಂ ಪುತ್ರನಳಿವು ಜ
> ನ್ಮನಿಕಾಯದಳಿವಂಗ ನಾಹನನ ಮಾಯಾಹನನವಂಜ ಬೇಡೆಂದನು"[೧೩]

ಸತ್ಯವೇ ಜೀವವೆಂದು ತಿಳಿದು ಕಡೆಯವರೆಗೂ ಬಿಡದೆ ಆಚರಿಸಿದ ನೀನು ಮಾಡಿದ, ಹೊಲೆಯನ ಸೇವೆಯೆ ಗುರುಸೇವೆ, ನೀನು ತೊಟ್ಟ ಹೊಲೆವೇಷ ಪವಿತ್ರ ಪುಣ್ಯವೇಷ, ಸುಡುಗಾಡನ್ನು ಸಂರಕ್ಷಿಸಿದ ಪ್ರಾಮಾಣಿಕ ಕಾರ್ಯಯಜ್ಞರಕ್ಷಣೆಯ ಪುಣ್ಯ ವಿಶೇಷ, ನೀನು ದಿನಂಪ್ರತಿ ಉಣ್ಣುವ ಶವಶಿರದ ಅಕ್ಕಿ ಪುತ್ರ ಲೋಹಿತಾಶ್ವನ ಸಾವು-ನೀನು ಹುಟ್ಟು-ಸಾವುಗಳಿಂದ ಮುಕ್ತನಾಗಿರುವುದರ ಸಂಕೇತ. ನೀನು ಮಾಡಲು ಹೊರಟ ಹೆಣ್ಣಿನ ಕೊಲೆ, ಜಗತ್ತನ್ನು ಮುತ್ತಿದ ಮಾಯೆಯ ನಾಶ, ಅದಕ್ಕಾಗಿ ನೀನು ಅಂಜಬೇಡ, ಅಳುಕಬೇಡ, ಅಸಹ್ಯ ಪಟ್ಟು ಕೊಳ್ಳಬೇಡ, ಇತ್ಯಾದಿಯಾಗಿ ಶಿವನು ಹರಿಶ್ಚಂದ್ರನಿಗೆ ವಿವರಿಸಿದ್ದು 'ಕಾಯಕವೇ ಕೈಲಾಸ' ಎಂಬುದನ್ನು ಎತ್ತಿ ಹಿಡಿಯುವ ಉದ್ದೇಶವೆಂಬುದು ಸ್ಪಷ್ಟವಾಗುತ್ತವೆ, ಅವಗಳಲ್ಲಿ ಮೇಲು-ಕೀಳೆಂಬ ಬೇಧ-ಭಾವವಿಲ್ಲವೆಂದು ಸ್ಪಷ್ಟಪಡಿಸುವುದರ ಜೊತೆಗೆ 'ಕಸಬಿ'ಗೆ ಹೊಸ ಭಾಷ್ಯವನ್ನೇ ಬರೆದಿರವುದನ್ನು ಗುರುತಿಸಬಹುದು.

ನಮ್ಮ ಸಮಾಜದ ಅವಿಭಾಜ್ಯ ಅಂಗವಾದ 'ಸ್ತ್ರೀಯರನ್ನು' ಕವಿ ರಾಘವಾಂಕ ತುಂಬ ಗೌರವದಿಂದ ಕಂಡಿದ್ದಾನೆ ಹಾಗೂ ಕಂಡರಿಸಿದ್ದಾನೆ. ನಮ್ಮ ರಾಷ್ಟ್ರೀಯ ಮಹಾಕಾವ್ಯಗಳೆನಿಸಿದ ರಾಮಾಯಣ-ಮಹಾಭಾರತಗಳಲ್ಲಿ ಹೆಣ್ಣಿಗೆ ಸರಿಯಾದ ಸ್ಥಾನಮಾನಗಳು ದೊರೆತಿಲ್ಲ. ಸೀತೆ ಹಾಗೂ ದ್ರೌಪದಿಯರು ಪುರುಷರ ನೆರಳಾಗಿ ಬಾಳಿದರು. ಪತಿಯ ಹೆಜ್ಜೆಗಳಲ್ಲಿ ಹೆಜ್ಜೆಗಳನ್ನಿಡುವ ಸ್ತ್ರೀಯರು ಮುಖ್ಯವಾದ ತೀರ್ಮಾನ ಕೈಗೊಳ್ಳುವಾಗ ಹೊಸಯೋಜನೆಗಳನ್ನು ರೂಪಿಸುವಾಗ ತಮ್ಮ ಸ್ತ್ರೀಯರೊಡನೆ ಸಮಾಲೋಚಿಸುವುದಿಲ್ಲ. ಸೀತೆಯ ಪಾತ್ರವಂತೂ ಅತೀ ಆದರ್ಶದ ಪರಾಕಾಷ್ಠತೆ. ಅವಳು ಲಕ್ಷ್ಮಣರೇಖೆಯೊಳಗೆ ಕೊಳೆಯಬೇಕು. ರಾವಣನಿಂದ ಅಪಹೃತಳಾಗಿ ಅಶೋಕವನದ ಜೈಲಿನಲ್ಲಿರಬೇಕು. ರಾಮನ ಅಗ್ನಿಪರೀಕ್ಷೆಗೆ ಒಳಗಾಗಿಯೂ ಯಾವನೋ ತಲೆತಿರುಕನ ಮಾತಿಗೆ ಅಡವಿ ಪಾಲಾಗಬೇಕು ಇನ್ನು ದ್ರೌಪದಿ ಮೇಲುನೋಟಕ್ಕೆ ದಿಟ್ಟಸ್ತ್ರೀ ಹೌದು. ತಾನು ಹಿಡಿದ ಛಲವನ್ನು ಬಿಡದೆ ಪೂರೈಸಿಕೊಳ್ಳವ ಹೆಣ್ಣು, ಆದರೆ 'ಪತಿ' ಗಳೈವರಿಗೆ

---

೧೩. ಹರಿಶ್ಚಂದ್ರ ಕಾವ್ಯ. ಪದ್ಯ-೧೨, ಪುಟ-೯೭

ಧರ್ಮಪತ್ನಿಯಾಗಿಯೂ ಅವರು ಆಲೋಚನೆ ತೊಡಗಿದಾಗ, ತೀರ್ಮಾನಕ್ಕೆಗೊಳ್ಳುವಾಗ ಇವಳಿಗೆ ಭಾಗವಹಿಸುವ ಭಾಗ್ಯವಿದೆಯೇ? ಅವಕಾಶವಿದ್ಯಾಗಲೂ ಅವಳಿಗೆ ಅವಕಾಶನ್ನು ನೀಡಲಿಲ್ಲ. ಉಳಿದ ಸಂದರ್ಭದಲ್ಲಿ ಹೋಗಲಿ, ವನವಾಸಮುಗಿಸಿ, ಅಜ್ಞಾತವಾಸ ತೀರಿಸಿದ ತರುವಾಯ ಪಾಂಡವರು ತಮ್ಮ ಮುಂದಿನ ಕಾರ್ಯಕೈಗೊಳ್ಳಲು ಸಭೆಗೂಡುತ್ತಾರೆ. ಕೃಷ್ಣ ಮತ್ತು ಪಾಂಡವರು ಮಾತ್ರ ಅಲ್ಲಿದ್ದು, ದ್ರೌಪದಿಯೇ ಅಲ್ಲಿರುವುದಿಲ್ಲ. ಪಂಪನು ತನ್ನ ಕಾಲದ ಮೌಲ್ಯಗಳನ್ನು ಆಯಾಪಾತ್ರಗಳಲ್ಲಿ ತುಂಬಿ, ಕೊನೆಗೆ ಲೋಕಪೂಜ್ಯರಾದ ವ್ಯಕ್ತಿಗಳ ಪಟ್ಟಿಕೊಡುತ್ತಾನೆ. ಆತ- ಹೆಸರಿಸಿದ ಎಂಟು ಜನರು ಪುರುಷರೇ ಆಗಿದ್ದಾರೆ. ಅಲ್ಲಿ ದ್ರೌಪದಿಗೆ ಸ್ಥಾನವೇ ಇಲ್ಲ.

ಸೀತೆ ದ್ರೌಪದಿಯರ ಪಾಡು ಹೀಗಾದರೆ, ಶಕುಂತಲೆ, ಅಹಲ್ಯೆ, ದಮಯಂತಿ, ತಾರಾ, ಮಂಡೋದರಿಯರ ವ್ಯಥೆ ಇದಕ್ಕಿಂತಲೂ ದುರ್ಭರವಾಗಿದೆ. ಆದರೆ ರಾಘವಾಂಕನ 'ಚಂದ್ರಮತಿ'ಯು ಈ ಮೇಲೆ ಪ್ರಸ್ತಾಪಿಸಿದ ಸ್ತ್ರೀಯರಿಗಿಂತಲೂ ಭಿನ್ನಳಾಗಿ ನಿಲ್ಲುತ್ತಾಳೆ.

ಚಂದ್ರಮತಿಯು ಪತಿ ಹರಿಶ್ಚಂದ್ರನ ಜೊತೆಗೆ ಸಮ-ಸಮನಾಗಿ, ಆತನಿಗೆ ಆತು ಕೊಂಡು, ಕೈಗೆ-ಕೈಹಿಡಿದು ನಡೆಯುತ್ತಾಳೆ. ಪತಿ ಹರಿಶ್ಚಂದ್ರ ಜೋಲಿ ಹೊಡೆಯುವಾಗ, ತೂಕ ತಪ್ಪುವ ಹೊತ್ತಿನಲ್ಲಿ ಹಿಡಿದು ನಿಲ್ಲಿಸಿ, ಸರಿದಾರಿಯಲ್ಲಿ ನಡೆಸಿದ ಹೆಣ್ಣುಮಗಳು, ಹಲವಾರು ಪ್ರಮುಖ ಸಂದರ್ಭಗಳಲ್ಲಿ ಸಂಕಟದ ಸ್ಥಿತಿಯಲ್ಲಿ ಹರಿಶ್ಚಂದ್ರ ಚಂದ್ರಮತಿ ಯೊಡನೆ ಸಮಾಲೋಚನೆ ಮಾಡುವುದನ್ನು ಕಾಣುತ್ತೇವೆ. ಮಂತ್ರಿಯಂತೆ ಸೂಕ್ತ ಸಲಹೆಯನ್ನು ನೀಡಿದ ಜಾಣೆಯಿವಳು.

ಪ್ರಜೆಗಳಿಗೆ ಕಾಡುಹಂದಿಗಳ ಹಾವಳಿಯಿಂದ ಉಪಟಳಿವಾದಾಗ, ಅದರ ನಿವಾರಣೆಗೆಂದು ಹರಿಶ್ಚಂದ್ರ ಬೇಟೆಗೆ ಹೊರಡುತ್ತಾನೆ. ಬೇಟೆ ಮುಗಿಸಿ, ಒಂದೆಡೆ ತಂಗಿದಾಗ, ದುಃಸ್ವಪ್ನ ಕಂಡು ಬೆಚ್ಚಿ ಬೀಳುತ್ತಾನೆ. ನಡೆದು ಹೋದ ಸಂಗತಿಯನ್ನು ಹೆಂಡತಿಯೊಂದಿಗೆ ಅರಸಿ ಹಂಚಿಕೊಳ್ಳುತ್ತಾನೆ. ಆಗ ಚಂದ್ರಮತಿಯ "ಬಗೆವಡೀ ಕನಸು ಗುರುವಾಜ್ಞೆಯ ಮೀರುತಕ್ಕೊಗೆವ ಕೇಡಿಂಗೆ ಸೂಚನೆಯಿದು ಮುನಿಯಬೇಡ"[೧೪] ಎಂದು ಸಂತೈಯಿಸುತ್ತಾಳೆ. ಕನಸಿನ ಅರ್ಥವನ್ನು ಬಿಡಿಸಿ ಹೇಳಿ, ಮುಂದೇನು ಮಾಡಬೇಕೆಂಬುದನ್ನು ಸೂಚಿಸಿದ್ದು ಅವಳ ವಿಚಕ್ಷಣಮತಿಗೆ ಸಾಕ್ಷಿಯಾಗಿದೆ. ಹರಿಶ್ಚಂದ್ರ ಸತ್ಯ ಹರೀಶ್ಚಂದ್ರನಾದದ್ದು-ಚಂದ್ರಮತಿಯಿಂದಲೇ ಎಂಬ ಸಂಗತಿ ಈ ಕಾವ್ಯದುದ್ದಕ್ಕೂ ನಿರೂಪಿಸಲ್ಪಟ್ಟಿದೆ. ಹರಿಶ್ಚಂದ್ರನ ಬದುಕಿಗೆ ಮಹತ್ವದ ತಿರುವನ್ನು ನೀಡಿದ ಸಂದರ್ಭದಲ್ಲಿ ಸತ್ಯಕ್ಕೆ ಅಂಟಿಕೊಳ್ಳಲು ಸತ್ಯವ್ರತ ಸ್ವೀಕರಿಸಿ ಅದನ್ನು ನಡೆಸಿಕೊಡಲು ಚಂದ್ರಮತಿಯೇ ಪ್ರೇರಣೆಯಾಗಿದ್ದಾಳೆ. "ಪ್ರತಿಯೊಬ್ಬ ಮಹಾಪುರುಷನ ಹಿಂದೆ ಒಂದು ಹೆಣ್ಣಿನ ತ್ಯಾಗವಿರುತ್ತದೆ" ಎಂಬ ಮಾತಿಗೆ ಉತ್ತಮ ಉದಾಹರಣೆಯಾಗಿ ಚಂದ್ರಮತಿ ಮೂಡಿಬಂದಿದ್ದಾಳೆ. ಅತೀ ಇಕ್ಕಟ್ಟಿನಲ್ಲಿ ಹರಿಶ್ಚಂದ್ರ ಸಿಲುಕಿದಾಗ ಅವಳು ಹೇಳಿದ್ದು-

---

೧೪. ಹರನೆಂಬುದೇ ಸತ್ಯ, ಪದ್ಯ-೧೩; ಪುಟ-೧೯

"ಮಗಂಗೆ, ಮಂತ್ರಿಗೆನಗೆ ರಾಜ್ಯಕ್ಕೆ, ಚತುರಂಗ ಸೇನೆಗೆ, ಸಕಲ ಭಂಡಾರಕೆ, ನಗರಕ್ಕೆ ಸರ್ವ ಪರಿಹಾಸಕ್ಕೆ, ತೇಜದೇಳ್ಗಿಗೆ, ನಿನ್ನ ಹರಣಕ್ಕೆ ಕೇಡು ಬಂದಡೆ ಬರಲಿಮಿಗೆ ಸತ್ಯಮಂ ಬಿಟ್ಟು ಕೆಡದಿರ್ ಅವನೀಶ ಕೈ ಮುಗಿದು ಬೇಡಿದನೆಂದಳು"[೧೫] ಇದು ಹರಿಶ್ಚಂದ್ರನ ಮನೋಬಲ ಹೆಚ್ಚಳಕ್ಕೆ ಕಾರಣೀಭೂತವಾಗಿ, ಆತ ಸತ್ಯದ ದಾರಿಯಲ್ಲಿ ನಡೆವಂತಾಗುತ್ತದೆಯೆಂಬುದನ್ನು ಮರೆಯಬಾರದು.

'ಬಹುಸುವರ್ಣಯಾಗ'ದ ಸಂಪತ್ತನ್ನು ವಿಶ್ವಾಮಿತ್ರನಿಗೆ ಅರಸ ಕೊಡಬೇಕಾಗಿದೆ. ನಕ್ಷತ್ರಿಕ ಶನಿಯಾಗಿ ಕಾಡುತ್ತಿದ್ದಾನೆ. ಹರಿಶ್ಚಂದ್ರನ ಎಲ್ಲ ಪ್ರಯತ್ನಗಳೂ ನಿರರ್ಥಕವಾಗಿವೆ. ಹಣಕೊಡಲೇಬೇಕಾಗಿದೆ. ಇಂಥ ರಿಕ್ತಾವಸ್ಥೆಯಲ್ಲಿ ಚಂದ್ರಮತಿಯೇ ದಾರಿತೋರಿಸುತ್ತಾಳೆ. ಗಂಡನಿಗೆ ಧೈರ್ಯ ತುಂಬುತ್ತಾಳೆ. "ಸಾಲುದೊಳ ಪೋದನಿತು ಪೋಗಲೆಮ್ಮಿಬ್ಬರಂ ಮಾಱು"[೧೬] ಎನ್ನುತ್ತಾಳೆ. ಹರಿಶ್ಚಂದ್ರನು ಉಭಯ ಸಂಕಟದಲ್ಲಿರುವಾಗ, ಮತ್ತೂ ಮುಂದುವರೆದ ಚಂದ್ರಮತಿ ಅರಸನ ಚಿಂತೆಯನ್ನು ಹೋಗಲಾಡಿಸಿ, ಸಂದೇಹ ನಿವಾರಿಸುವುದು ಹೇಗೆ: "ಸರ್ವಕ್ಕೆ ಮೊದಲು ಸತಿಸುತರು ತನ್ನ ಒಡಲು ಕಡೆ, ಸತ್ಯಕ್ಕೆ ನೇಮಕ್ಕೆ ಬಂಧನಕ್ಕೆಡೆಯಲಳುಪಲು ಶಿವ ಮನಂನೋಳ್ಪನೈ ಲಜ್ಜೆಗೆಡೆದೆಮ್ಮನು ಮಾರು ಮತ್ತಾದಂತಾಗಲಿ"[೧೬] ಅವಳಿತ್ತ ಸಲಹೆ ಎಂತಹ ಸಂದರ್ಭೋಚಿತವಾಗಿದೆ! ಹರಿಶ್ಚಂದ್ರನ ಭವ್ಯ ವ್ಯಕ್ತಿತ್ವ ರೂಪುಗೊಳ್ಳಲು ಚಂದ್ರಮತಿ ಕಾಲ-ಕಾಲಕ್ಕೆ ನೀಡಿದ ಸೂಚನೆಗಳೆ ಕಾರಣವಾಗಿವೆ ಎನ್ನುವುದರಲ್ಲಿ ಸಂದೇಹವಿಲ್ಲ.

ಈ ರೀತಿಯಾಗಿ ರಾಘವಾಂಕನು ಸ್ತ್ರೀಯರಿಗೆ, ಪುರುಷರಷ್ಟೇ ಸರಿಸಮಾನವಾದ 'ಸ್ಥಾನ-ಮಾನ'ವನ್ನು ಕಲ್ಪಿಸಿದ್ದಾನೆ. ಪುರುಷನಂತೆಯೇ ಅವಳೂ ಕೂಡ ಎಲ್ಲ ರಂಗಗಳಲ್ಲಿಯೂ ಸಮರ್ಪಕವಾಗಿ ಕಾರ್ಯ ನಿಭಾಯಿಸಬಲ್ಲಳೆಂಬುದನ್ನು ಅರ್ಥಪೂರ್ಣವಾಗಿ ನಿರೂಪಿಸಿದ್ದಾನೆ. ವಚನಕಾರರ ಆಶಯವಾದ "ಹೆಣ್ಣು ಮಾಯೆಯಲ್ಲ" (ಪ್ರಭು), "ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ" (ಸಿದ್ಧರಾಮ) ಎಂಬುದನ್ನು ಮೌನವಾಗಿ ಸಾಧಿಸಿ ತೋರಿಸಿದ್ದಾನೆ.

ಬರಗೂರು ರಾಮಚಂದ್ರಪ್ಪನವರು 'ಹರಿಶ್ಚಂದ್ರ ಕಾವ್ಯ'ದ ಕುರಿತಾಗಿ ಆಡಿದ ಮಾತುಗಳು ಹೀಗಿವೆ: "ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ 'ರಾಜತ್ವ' ಲಯವಾಗಿ 'ಮನುಷ್ಯತ್ವ' ಮಾತ್ರ ಮುಖ್ಯವಾಗುವ ಶೋಧನಾತ್ಮಕ ಕ್ರಿಯೆ ಇದೆ. ಹರಿಶ್ಚಂದ್ರನಿಗೆ ರಾಜತ್ವದ ಕಾರಣಕ್ಕಾಗಿ ದಕ್ಕಿದ ಸಂಪತ್ತು ಕೈತಪ್ಪುವುದರ ಜೊತೆಗೆ ಸಾಮಾಜಿಕ ಹಮ್ಮು-ಬಿಮ್ಮುಗಳು ದಿನ-ದಿನವೂ ನಾಶವಾಗುವ ಅನಿವಾರ್ಯ ಪ್ರಕ್ರಿಯೆಯೆಂಬುದು ಹರಿಶ್ಚಂದ್ರನಿಗೆ ಕಾವ್ಯದಲ್ಲಿದೆ. 'ಹರನೆಂಬುದೇ ಸತ್ಯ ಸತ್ಯವೆಂಬುದೇ ಹರನು' ಎಂಬ ತಾತ್ವಿಕ ಸಮೀಕರಣ ಮಾಡುವ ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರನಿಗೆ ಆಗುವ ಶಿವ ಸಾಕ್ಷಾತ್ಕಾರದ

---

೧೫. ಅದೇ, ಪದ್ಯ-೨, ಪುಟ-೪೨

೧೬. ಅದೇ, ಪದ್ಯ-೩, ಪುಟ-೪೩

ಸತ್ಯ ಸಾಕ್ಷಾತ್ಕಾರವಾಗುತ್ತದೆ. ಈ ಸಾಕ್ಷಾತ್ಕಾರವಾಗುವ ವೇಳೆಗೆ ಹರಿಶ್ಚಂದ್ರ ಕಾವ್ಯದಲ್ಲಿ ಹರಿಶ್ಚಂದ್ರನಿಗೆ ಆಗುವ ಶಿವ ಸಾಕ್ಷಾತ್ಕಾರವಾಗುವ ವೇಳೆಗೆ ಹರಿಶ್ಚಂದ್ರ 'ಪ್ರಭು' ವಾಗಿರುವುದಿಲ್ಲ. ಹೊಲತಿಯರನ್ನು ನಿರಾಕರಿಸುವುದಕ್ಕೆ ಕಾರಣವಾದ ವರ್ಣವ್ಯವಸ್ಥೆಯ ವಾಸನೆಯಿರುವುದಿಲ್ಲ. ಇದರ ಬದಲು ಸ್ವಾಮಾಜಿಕ ಮತ್ತು ಆರ್ಥಿಕ ಔನತ್ಯವನ್ನು ತಂದುಕೊಟ್ಟು ವ್ಯವಸ್ಥೆಯ ವಿಷಮಾಂಸಗಳನ್ನು ಕೊಡವಿಕೊಂಡು ದಟ್ಟ ಜೀವನಾಭವದಲ್ಲಿ ಮನುಷ್ಯ ಮಾತ್ರನಾದ ಹರಿಶ್ಚಂದ್ರನನ್ನು ನಾವು ಕಾಣುತ್ತೇವೆ. ಆದ್ದರಿಂದ ಸಿಂಹಾಸನದಿಂದ ಇಳಿದು ಕಾಡು- ಮೇಡುಗಳನ್ನು ಅಲೆದು 'ಅಂತ್ಯಜ' ನಲ್ಲಿ ಮುಟ್ಟುವ ಬೆಳವಣಿಗೆಯ ಬದುಕಿನ ಶೋಧನೆಯಲ್ಲಿ ಒದಗಿದ 'ಕೇವಲ ಮನುಷ್ಯ'ನ ನೆಲೆಯಾಗಿದೆ"[೧೭] ಡಾ. ಬರಗೂರು ರಾಮಚಂದ್ರಪ್ಪನವರು ವ್ಯಕ್ತಪಡಿಸಿದ ಅಭಿಪ್ರಾಯ ಔಚಿತ್ಯಪೂರ್ಣವಾಗಿದೆ.

ಈ ಅಧ್ಯಯನದಿಂದ ತಿಳಿದು ಬರುವುದೇನೆಂದರೆ 'ಬಂಡಾಯ ಸಾಹಿತ್ಯ'ಕ್ಕೆ ಒಂದು ಮಹಾನ್ ಪರಂಪರೆಯಿದೆ. ಅದರ ಬೇರುಗಳನ್ನು ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಕಂಡು ಕೊಳ್ಳಬಹುದಾಗಿದೆ. ಬಂಡಾಯವು ಎಂದೋ ಒಂದು ದಿನ ಇದ್ದಕ್ಕಿದ್ದಂತೆ ಉದ್ಭವಿಸಿದ್ದಲ್ಲ. ಅಲ್ಲಲ್ಲಿ ಗುಪ್ತ ಗಾಮಿನಿಯಾಗಿ ಹರಿದು ಕೆಲವಡೆ ಮುಖದೋರಿ, ಮತ್ತೆ ಕೆಲವಡೆ ಮೈದೋರಿ ಇಂದು ಇಡಿಯಾಗಿ ಆವಿಷ್ಕಾರಗೊಂಡಿದೆ. ಪಂಪ-ರನ್ನರಲ್ಲಿ ಬಂಡಾಯದ ನೆಲೆಗಳನ್ನು ಗುರುತಿಸಬಹುದಾಗಿದೆ. ವಚನಕಾರರಂತೂ ಶುದ್ಧ ಪ್ರಗತಿಪರರು, ಅಖಂಡ ಬಂಡಾಯಗಾರರೆನಿಸುತ್ತಾರೆ. ಹರಿಹರ-ರಾಘವಾಂಕ, ಕುಮಾರವ್ಯಾಸ, ಪುರಂದರದಾಸ, ಕನಕದಾಸ, ಸರ್ವಜ್ಞ, ಸಂಚಿಹೊನ್ನಮ್ಮ ಮೊದಲಾದವರಲ್ಲಿಯೂ ಬಂಡಾಯದ ಅಂಶಗಳನ್ನು ಗುರುತಿಸಬಹುದಾಗಿದೆ. ಇವರು 'ಬಂಡಾಯ' ವೆಂದು ಬೆರಳಿಟ್ಟು ಕರೆದಿಲ್ಲ. ಈ ಪದ ಇತ್ತೀಚೆಗೆ ಚಲಾವಣೆಗೊಂಡಿದೆ. ನಮ್ಮ ಸಾಹಿತ್ಯವನ್ನು ಬಂಡಾಯದ ಬೆಳಕಿನಲ್ಲಿ ಅಧ್ಯಾಯನಿಸಬೇಕಿದೆ. ಆ ನಿಟ್ಟಿನಲ್ಲಿ ಇದೊಂದು ಪುಟ್ಟ-ಹೆಜ್ಜೆ, ಹರಿಶ್ಚಂದ್ರಕಾವ್ಯವನ್ನು ಬಂಡಾಯದ ಧೋರಣೆಗಳನ್ನು ಅಳವಡಿಸಿಕೊಂಡು ಅರ್ಥೈಸಿಕೊಳ್ಳಲು ಮಾಡಿರುವ ಕಿರು ಪ್ರಯತ್ನವಾಗಿದೆ.

❑

---

೧೭. ಸಂಸ್ಕೃತಿ ಮತ್ತು ಸೃಜನಶೀಲತೆ, ಪುಟ:೪೨-೪೩

# "ಕೃಷಿ ಜ್ಞಾನ ಪ್ರದೀಪಿಕೆ" - ಒಂದು ಅವಲೋಕನ

'ಕೃಷಿ ಜ್ಞಾನ ಪ್ರದೀಪಿಕೆ'ಯು ಕನ್ನಡ ಸಾಹಿತ್ಯದ ಅಪೂರ್ವ ಕೃತಿಯಾಗಿದೆ. ಶ್ರೀ ಘನಮಠದ ನಾಗಭೂಷಣ ಶಿವಯೋಗಿಗಳು ಇದನ್ನು ರಚಿಸಿದ್ದಾರೆ. ಅರಮನೆ ಮತ್ತು ಗುರುಮನೆಗಳಲ್ಲಿ ಬೆಳೆದು ಬಂದ ಕನ್ನಡ ಸಾಹಿತ್ಯ ಆಗಮಿಕ ಲೌಕಿಕ ಕೃತಿಗಳನ್ನು ಹೇರಳವಾಗಿ ನೀಡಿದೆ. ಅಂದಂದಿನ ಜನಾಂಗದ ಚಿತ್ರಣವಿದ್ದರೂ ಸಹ ಅದು ಆಳರಸರ ಕುರಿತಾಗಿಯೇ ಇರುವುದನ್ನು ಕಾಣುತ್ತೇವೆ. ಈ ದೇಶದ ಜೀವನಾಡಿ ಕೃಷಿ. ರೈತರು ಸಮಾಜದ ಬೆನ್ನೆಲುಬು. ಅಂಥ ಕೃಷಿ ಚಟುವಟಿಕೆಗಳ ಕುರಿತಾದ ಗ್ರಂಥ ಈ ಕೃಷಿ ಜ್ಞಾನ ಪ್ರದೀಪಿಕೆಯಾಗಿದೆ. ಹದಿನೆಂಟನೆಯ ಶತಮಾನದ ಕೊನೆಯಲ್ಲಿ ರಚನೆಗೊಂಡಿರುವ ಸಂಗತಿಯು ಗಮನಾರ್ಹವಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ ಭೀಕರ ಬರಗಾಲ ಬಿದ್ದಾಗ, ರೈತರು ತಮ್ಮ ದನ-ಕರುಗಳನ್ನು ಹೊಡೆದುಕೊಂಡು ಗುಳೆಯೆದ್ದು ಹೋಗುವುದನ್ನು ಶ್ರೀ ಘನಮಠರು ಕಣ್ಣಾರೆ ಕಂಡು ಮಮ್ಮಲ ಮರುಗಿದರು. "ದೇಶದ ಬಡತನ ಹೋಗಲಾಡಿಸುವುದಕ್ಕಾಗಿ ಶ್ರೀಗಳನ್ನು ನಾಡನ್ನಿಡಿಯಾಗಿ ಅಖಂಡ ಮೂವತ್ತೈದು ವರುಷಗಳ ನಿಡುಗಾಲ ಪಾದಯಾತ್ರೆ ಕೈಗೊಂಡು ಬಸವಣ್ಣನವರ ವಚನಶಾಸ್ತ್ರ ಪ್ರತಿ ಹಳ್ಳಿ, ಪಟ್ಟಣಗಳಲ್ಲಿ ಬೋಧಿಸುತ್ತ, ಆಯಾ ಭೂಮಿಯ ಗುಣಧರ್ಮವನ್ನರಿತು ಅನುಭವಪೂರ್ಣವಾದ 'ಕೃಷಿ ಜ್ಞಾನ ಪ್ರದೀಪಿಕೆ' ಬರಯೆಲು ನಿರ್ಧರಿಸಿದರು" (ಪ್ರಕಾಶಕರ ನುಡಿ) ಈ ಮಾತುಗಳು ಕೃತಿ ರಚನೆಯ ಹಿನ್ನೆಲೆಯನ್ನು ವಿವರಿಸುತ್ತವೆ. ದೇಶದ ಬಡತನ ಹೋಗಲಾಡಿಸಲು, ರೈತಾಪಿ ಜನಾಂಗದ ಭವಣೆ ನೀಗಿಸಲು ಕೃತಿ ರಚನೆಗೊಂಡ ಸಂಗತಿಯು ಶ್ರೀಗಳಿಗಿರುವ ಕಳಕಳಿಯ ದ್ಯೋತಕವಾಗಿದೆ. ಜನಪರ ಧೋರಣೆಗೆ ಸಮ್ಯಕ್ ಸಾಕ್ಷಿಯಾಗಿದೆ.

ಈ ಅಪರೂಪದ ಕೃತಿಯನ್ನು ಕನ್ನಡ ನಾಡಿನ ಶಿವಾನುಭವ ಚರವರ್ಯರಾದ ಮರುಕುಂಬಿ ಜಂಗಮಕ್ಷೇತ್ರದ ಶ್ರೀಗುರು ರುದ್ರೇಶ್ವರ ಬೃಹಚ್ಛಿಲಾ ಮಠಾಧೀಶರಾದ ಪೂಜ್ಯ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಸಂಪಾದಿಸಿ ಪ್ರಕಟಿಸಿದ್ದಾರೆ. "ಶ್ರೀ ಘನಮಠಾರ್ಯರ ಜ್ಞಾನದೀಕ್ಷೆ ಪಡೆದವರು ಚಿಕ್ಕ ಕೊಡಗಲಿ ಶ್ರೀ ಮಹಾಲಿಂಗ ಯತಿಗಳು. ಶ್ರೀ ಮಹಾಲಿಂಗಮೂರ್ತಿಗಳ ಸೇವೆ ಮಾಡಿ, ಅವರ ಕೃಪೆಗೆ ಪಾತ್ರರಾದವರು ಗಂಗಾವತಿಯ ಲಿಂ॥ ಶ್ರೀ ಚನ್ನಬಸವ ತಾತನವರು. ಶ್ರೀ ತಾತನವರ ವಿದ್ಯಾನುಗ್ರಹಕ್ಕೆ ಪಾತ್ರರಾದವರು ನಮ್ಮ ಶ್ರೀ ಗುರು ರುದ್ರೇಶ ತಾತನವರು. ಹೀಗೆ ಜ್ಞಾನದೀಕ್ಷೆಯ ಪರಂಪರೆ ಬೆಳೆದು ಬಂದದ್ದು ಸರ್ವಕೃತವಿದೆ" ಎಂದಿರುವ ಚನ್ನಬಸವ ಬಳ್ಳಾರಿಯವರ ಮಾತುಗಳಲ್ಲಿ ಗ್ರಂಥ ಪರಂಪರೆಯಲ್ಲಿ ಸಾಗಿ ಬಂದ ಇತಿಹಾಸ ದಾಖಲಾಗಿದೆ.

ಮಹತ್ತರ ಕೃತಿಯಾಗಿರುವ 'ಕೃಷಿ ಜ್ಞಾನ ಪ್ರದೀಪಿಕೆ'ಯನ್ನು ಪ್ರಪ್ರಥಮಬಾರಿಗೆ ಪ್ರಕಟಿಸಿದ ಶ್ರೇಯಸ್ಸು ರಾ.ರಾ.ಪಿ.ಎಮ್. ದಾನಯ್ಯ ಬಿಜಾಪುರ ಮಾಸ್ತರ ಜೇಗುಂಟಿ ಇವರಿಗೆ ಸಲ್ಲುತ್ತದೆ. ಕ್ರಿ.ಶ. ೧೯೧೭ರಲ್ಲಿ ಶ್ರೀಯುತರು ಸಂಪಾದಿಸಿ ಪ್ರಕಟಿಸಿದರು. ವಚನ ಪಿತಾಮಹ ಫ.ಗು. ಹಳಕಟ್ಟಿಯವರು ಕ್ರಿ.ಶ. ೧೯೩೬ರಲ್ಲಿ ಎರಡನೆಯ ಬಾರಿಗೆ ಶಾಸ್ತ್ರೋಕ್ತ ವಾಗಿ ಸಂಪಾದಿಸಿ, ಅಚ್ಚುಕಟ್ಟಾಗಿ ಪ್ರಕಟಿಸಿದರು. ಕ್ರಿ.ಶ. ೧೯೬೯ರಲ್ಲಿ ಸಂತೆಕೆಲೂರದ ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿಗಳು ಮುದ್ರಣಗೊಳಿಸಿದರು.

೧೯೬೯ ರಿಂದ ೧೯೯೫ ವರೆಗೆ ಮಲ್ಲಿಕಾರ್ಜುನ ಮಹಾಸ್ವಾಮಿಗಳವರ ಸಮರ್ಥ ಸಂಪಾದಕತ್ವದಲ್ಲಿ ಪ್ರಸ್ತುತ ಕೃತಿಯು ಆರುಬಾರಿ ಮರುಮುದ್ರಣಗೊಂಡಿದೆ. ಈ ಕೃತಿಯು ಇಲ್ಲಿಯವರೆಗೆ ಒಟ್ಟು ಎಂಟುಬಾರಿ ಪ್ರಿಂಟ್ ಆಗಿದೆ. ಕೃಷಿ ಚಟುವಟಿಕೆಗಳಿಗೆ ಸಂಬಂಧಿಸಿದ ಗ್ರಂಥವೊಂದು ಎಂಟುಬಾರಿ ಪ್ರಕಟಗೊಂಡಿರುವುದು ಅದರ ಜನಪ್ರಿಯತೆ ಮತ್ತು ಉಪಯುಕ್ತತೆಗೆ ಸಾಕ್ಷಿಯಾಗಿದೆ.

"ಘನಮಠದಾರ್ಯರು ಎಷ್ಟೇ ಉಗ್ರವಾಗಿ ತಮ್ಮ ಪ್ರಚಾರ ಪ್ರಸಿದ್ಧಿಯನ್ನು ವಿರೋಧಿಸಿದರೂ ಶಿವನಿಷ್ಠೆಯು ಸದ್ಭಕ್ತರ, ಮಹಾಸ್ವಾಮಿಗಳ ಮನದಲ್ಲಿ ಅಂಕುರವೊಡೆದು ಘನಮಠದಾರ್ಯರ ಕೀರ್ತಿಪ್ರಭೆ ಸುತ್ತ ಹರಡತೊಡಗಿತು. ಘನಮಠದ ಶ್ರೀ ನಾಗಭೂಷಣ ಶಿವಯೋಗಿಗಳ ತತ್ವಪದಗಳು ಅವರ ಜೀವಿತ ಕಾಲದಲ್ಲಿಯೇ ಜನರ ನಾಲಿಗೆಯ ಮೇಲಾಡತೊಡಗಿದವು. ಕಿವಿಯಿಂದ ಕಿವಿಗೆ ಸಾಗಿ, ಬಾಯಲ್ಲಿ ಮೂಡುತ್ತ ಶಾಶ್ವತ ಜೀವಂತಿಕೆಯನ್ನು ಪಡೆದು ಸಾಗಿದವು. ಘನಮಠಾದಾರ್ಯರು ಲಿಂಗೈಕ್ಯರಾಗಿ ಹತ್ತಿಪ್ಪತ್ತು ವರ್ಷಗಳು ಕಳೆಯುವುದರಲ್ಲಿಯೇ ಗ್ರಂಥರೂಪದಲ್ಲಿ ಬಂದುವು. ಅವರ ತತ್ವ ಪದಗಳು ೧೯೧೦ರಲ್ಲಿ ಅಚ್ಚಾಗಿ ಅಸಂಖ್ಯ ಭಕ್ತರ ಕೈಸೇರಿದವು. ೧೯೧೭ರ ವೇಳೆಗೆ ಕೃಷಿಜ್ಞಾನ ಪ್ರದೀಪಿಕೆಯೂ ಅಚ್ಚಾಗಿ ಹೊರಬಂದಿತು" ಎಂದು ಡಾ. ಸಂಗಮೇಶ ಸವದತ್ತಿಮಠರು ವಿವರಿಸಿದ್ದಾರೆ. ಈ ಕೃಷಿಜ್ಞಾನ ಪ್ರದೀಪಿಕೆಯ ಮಹತ್ತತೆಯ ಕುರಿತಾಗಿ ವಿವಿಧ ವಿದ್ವಾಂಸರ ಅಭಿಪ್ರಾಯಗಳನ್ನು ಈ ಸಂದರ್ಭದಲ್ಲಿ ಅವಲೋಕಿಸಬಹುದು.

**ಮುಂಡರಗಿಯು ಅನ್ನದಾನೀಶ್ವರ ಮಹಾಸ್ವಾಮಿಗಳು**

"ಕೃಷಿ ಪ್ರಧಾನರಾದ ಭಾರತೀಯರಿಗೆ ಕೃಷಿಜ್ಞಾನವನ್ನು ನೀಡುವಲ್ಲಿ ಪೂಜ್ಯಶ್ರೀ ಘನಮಠ ನಾಗಭೂಷಣ ಶಿವಯೋಗಿಗಳ ಕೊಡುಗೆ ಅಪಾರವಾದುದು. ವೈಚಾರಿಕ ಯುಗದಲ್ಲಿ ಕೃತ್ರಿಮ ಗೊಬ್ಬರ ಔಷಧಿಗಳಿಗಿಂತ ನೈಸರ್ಗಿಕವಾಗಿ ಉತ್ತಮ ಕೃಷಿ ಪ್ರಗತಿ ಸಾಧಿಸುವುದಕ್ಕೆ ಕೃಷಿ ಜ್ಞಾನ ಪ್ರದೀಪಿಕೆ ಅತ್ಯಂತ ಉಪಯುಕ್ತ ಕೈಪಿಡಿ" - *ಆಶೀರ್ವಾಣಿಯಲ್ಲಿ*

**ಮುಗಳಖೋಡ ಜಡಗಾದ ಶ್ರೀ ಷಡಕ್ಷರಿ ಸಿದ್ಧರಾಮ ಶಿವಯೋಗಿಗಳು**

"ಬಸವಾದಿ ಪ್ರಮಥಾಚಾರ್ಯರ ಬಳಿವಿಡಿದು ಬಂದಿರುವ ಶ್ರೀ ಘನಮಠ ನಾಗಭೂಷಣ ಶಿವಯೋಗಿಗಳು ವಿರಚಿತ ಕೃಷಿಜ್ಞಾನ ಪ್ರದೀಪಿಕೆಯು ರೈತರಸಜ್ಜ್ಞ ರಾಜಕಾರಣೆಗಳಿಗೂ ಬ್ರಹ್ಮಾಂಡ ಪಿಂಡಾಂಡ ಕೃಷಿಗಳ ಮನವರಿಕೆ ಮಾಡಿಕೊಡುವ ಕಾಮಧೇನು ಕಲ್ಪವೃಕ್ಷವಾಗಿದೆ. ಮೂಲ ಉದ್ಯೋಗವೇ ಕೃಷಿಯಾಗಿರುವ ನಮ್ಮ ರೈತರಿಗೆ ಭದ್ರವಾದ ಆರ್ಥಿಕ ಬೆಳವಣಿಗೆಗೆ ಈ ಅಮೂಲ್ಯ ಕೃತಿರತ್ನವು ದಿಕ್‌ಸೂಚಿಯಾಗಿ ನಿಲ್ಲುವಲ್ಲಿ ಅನುಮಾನವೇ ಇಲ್ಲ. ಈ ಗ್ರಂಥದ ಅನುಷ್ಠಾನಕ್ಕೆ ಇಳಿದು ಅದೆಷ್ಟೋ ಚಿಕ್ಕಪುಟ್ಟ ಒಕ್ಕಲಿಗರು ಬಾದಶಹರಾದ ಸುಪ್ರಸಂಗವನ್ನು ನಾವು ಪ್ರತ್ಯಕ್ಷ ಮನಗಂಡಿದ್ದೇವೆ."

- *ಸಂಪಾದನೆಯ ಸೊಂಪುದಲ್ಲಿ.*

**ಮರುಕುಂಬಿಯ ಮಲ್ಲಿಕಾರ್ಜುನ ಸ್ವಾಮಿಗಳು**

"ಕೃಷಿ ಋಷಿಗಳಾದ ಘನಮಠನಾಗಭೂಷಣ ಶಿವಯೋಗಿಗಳಿಗೆ ಒಂದು ಕಣ್ಣು ಆಧ್ಯಾತ್ಮವಾಗಿದ್ದರೆ, ಇನ್ನೊಂದು ಕಣ್ಣು ಕೃಷಿ ಆಗಿತ್ತು. ಅಂತೆಯೇ ಕೃಷಿಗೆ ಅವರು ಕೊಟ್ಟಷ್ಟು ಮಹತ್ವವನ್ನು ಜಗತ್ತಿನಲ್ಲಿ ಇನ್ನ್ಯಾವ ಮಠಾಧಿಪತಿಯಾಗಲೀ- ಆಧ್ಯಾತ್ಮಜೀವಿಯಾಗಲೀ

ನೀಡಿಲ್ಲ! ಅಂತೆಯೇ ಜಗತ್ತಿನ ಆಧ್ಯಾತ್ಮ ಜೀವಿಗಳ ಇತಿಹಾಸದಲ್ಲಿ ಶ್ರೀ ಘನಮಠ ನಾಗಭೂಷಣರದೇ ಆದ ಒಂದು ವಿಶಿಷ್ಟ ಸ್ಥಾನವಿದೆ. ಬಸವಾದಿ ಪ್ರಮಥರು ಕಾಯಕದ ಕವಚದಲ್ಲಿ ವಚನ ಸಾಹಿತ್ಯದ ಆಧ್ಯಾತ್ಮವನ್ನು ಅಳವಡಿಸಿಕೊಂಡಿದ್ದರೆ, ನಾಗಭೂಷಣರು, ಆಧ್ಯಾತ್ಮದ ಕವಚದಲ್ಲಿ ಕೃಷಿಯನ್ನು ಅಳವಡಿಸಿಕೊಂಡಿದ್ದರು"

*- ಆಶೀರ್ವಚನದಲ್ಲಿ*

### ಶ್ರೀ ಸಿದ್ಧರಾಮಯ್ಯ ಸ್ವಾಮಿಗಳು

"ಪ್ರತಿಯೊಬ್ಬ ರೈತನೂ ಕಾಯ್ದಿರಿಸಿಕೊಳ್ಳಬೇಕಾದ ಅನರ್ಘ್ಯ ರತ್ನವೆಂದರೆ 'ಕೃಷಿ ಜ್ಞಾನ ಪ್ರದೀಪಿಕೆ'ಯಾಗಿದೆ. ಲೋಕಾನುಭವ ಪಾರಮಾರ್ಥ ವಿಚಾರಗಳನ್ನೊಳಗೊಂಡ ರಾಮಾಯಣ-ಮಹಾಭಾರತದಂತಹ ಬೃಹದ್ಗ್ರಂಥಕ್ಕಿಂತಲೂ ಹೊಟ್ಟೆ, ಬಟ್ಟೆ, ಅರಿವು, ಆಚಾರ, ಭೂಮಿಯ ಸದುಪಯೋಗದ ಸ್ಥಿತಿಯನ್ನೊಳಗೊಂಡ ಕೃಷಿರತ್ನ ಸಂಗ್ರಹಿಸುವುದು ಅಗತ್ಯವಲ್ಲವೆ? ಸಾಮವೇದದ ಆಧಾರದಂತೆ ಅನ್ನಬ್ರಹ್ಮವೆಂದು ತಿಳಿದು ಗ್ರಂಥ ಬರೆಸಿಟ್ಟಿದ್ದಾರೆ. ಇಂತಹ ಪಾವನವಾದ ಪುಸ್ತಿಕೆ ಕೃಷಿಕರಿಗೆ ಕೃಷಿಗೀತವೆಂದು ಹೇಳಲು ಸಂತೋಷವೆನಿಸುತ್ತದೆ.

*- 'ಪ್ರಕಾಶಕರನುಡಿ'ಯಲ್ಲಿ*

### ಶ್ರೀ ಶಂಕರಣ್ಣ ಸಂಗನಬಸಪ್ಪ ನಾಗರಾಳ

"ಶ್ರೀ ನಾಗಭೂಷಣ ಘನಮಠದಾರ್ಯರ ಕೃಷಿಜ್ಞಾನ ಪ್ರದೀಪಿಕೆಯಲ್ಲಿ ಎರಡು ಭಾಗಗಳಿವೆ. ಒಂದನೆಯ ಭಾಗದಲ್ಲಿ ಜಿರಾಯತ ಕೃಷಿ ಅನುಭವ, ಎರಡನೆಯದರಲ್ಲಿ ಭಾಗಯತ ಕೃಷಿ ಅನುಭವವು ಹೇಳಲ್ಪಟ್ಟಿದೆ. ಈ ಗ್ರಂಥದಲ್ಲಿ ಪ್ರಪಂಚ ಪಾರಮಾರ್ಥಗಳೆರಡೂ ಅನುಭವದಿಂದ ಬರೆದ ಶಿವಯೋಗಿಗಳು ಲೋಕಕಲ್ಯಾಣ ಮಾಡಿದ್ದಾರೆ. ಶಿವಯೋಗಿಗಳು ಬರೆದ ಕೃಷಿ ಅನುಭವದಂತೆ ಮಾಡಿದರೆ, ರೈತ ಬಾದಶಹನಾಗುವುದರಲ್ಲಿ ಯಾವ ಸಂದೇಹವೂ ಇಲ್ಲ."

*- ಕೃಷಿ ಜ್ಞಾನ ಪ್ರದೀಪಿಕೆ ಅನುಸರಣೆ - ಅನುಭವದಲ್ಲಿ*

### ಬೆನ್ನುಡಿಯಲ್ಲಿ

ಈ ಬೃಹದ್ ಗ್ರಂಥದಲ್ಲಿ ಬ್ರಹ್ಮಾಂಡ - ಪಿಂಡಾಂಡ ಕೃಷಿ ಹೇಳಿದುದಲ್ಲದೆ ಅಸಿ, ಮಸಿ, ಕೃಷಿ, ವಾಣಿಜ್ಯ, ಗೋಪಾಲನೆ, ಯಾಚನೆ ಇನ್ನೂ ಮೊದಲಾದ ನೀತಿ-ಧರ್ಮಗಳನ್ನು ತಿಳಿಸಿದುದು ಅಚ್ಚರಿ ಎನಿಸಿದೆ. ಕಾಮಧೇನು, ಕಲ್ಪವೃಕ್ಷ ಚಿಂತಾಮಣಿಗೆ ಸಮಾನವೆನಿಸಿದೆ. ನಿಜಗುಣರು ತಮ್ಮ ಕೃತಿಯಲ್ಲಿ ಕೇವಲ ನೆತ್ತಿ ತುಂಬುವ ಶಾಸ್ತ್ರವನ್ನು ಹೇಳಿದರೆ ಘನಮಠರು ಮೊದಲು ಹೊಟ್ಟೆ ತುಂಬುವ ಕೃಷಿಶಾಸ್ತ್ರವನ್ನು ಬರೆದು ನೆತ್ತಿ ತುಂಬುವ ಜ್ಞಾನದ ಪರಿಪೂರ್ಣತೆಯನ್ನು ಸಾರಿದರು."

*- ಕೃಷಿ ಲೋಕದ ಕೊಡುಗೆಯಲ್ಲಿ*

ಮೇಲಿನ ಹತ್ತು ಹಲವು ಅಭಿಪ್ರಾಯಗಳನ್ನು ನೋಡಿದಾಗ ಪ್ರಸ್ತುತ ಕೃತಿ ಎಷ್ಟೊಂದು ಮೌಲಿಕವೆಂಬುದು ಮನದಟ್ಟಾಗುತ್ತದೆ. ಗ್ರಂಥದ ಕುರಿತಾಗಿ ಕುತೂಹಲ ಹೆಚ್ಚುತ್ತದೆ.

ಗ್ರಂಥ ರಚನೆ ಮಾಡುತ್ತಿರುವುದು ಪಂಡಿತ - ಮಂಡಲಿಯನ್ನು ಮೆಚ್ಚಿಸಲಿಕ್ಕಲ್ಲ

ವೆಂಬುದು ಸ್ಪಷ್ಟವಾಗಿದೆ. ಜನಸಾಮಾನ್ಯರಿಗೆ ಅದರಲ್ಲೂ ರೈತಾಪಿ ವರ್ಗಕ್ಕೆ ತಿಳಿಯ ಪಡಿಸಬೇಕೆಂಬ ಎಚ್ಚರ ಸದಾ ಜಾಗೃತವಾಗಿರುವುದನ್ನು ಗುರುತಿಸಬಹುದಾಗಿದೆ. ಅದಕ್ಕಾಗಿಯೇ "ಸಂಕ್ಷೇಪವಾಗಿ ಹೇಳಿದರೆ ಕೃಷಿಕರಿಗೆ ಉಪಯೋಗವಾಗದು. ಒಂದೊಂದು ಮಾತನ್ನು ಹತ್ತು-ಹತ್ತು ವೇಳೆ ತಿಳಿಸಿದರೂ ನಿದರ್ಶನಕ್ಕೆ ನಿಲ್ಲುವುದು ದುರ್ಲಭವಾಗುತ್ತದೆ. ಅದು ಕಾರಣ ಇವರಿಗೆ ತಿಳಿಯುವಂತೆ ಹೇಳಲು ಯತ್ನಿಸಲಾಗಿದೆ" ಎಂದಿರುವ ಮಾತುಗಳು ಶ್ರೀಗಳು ಸಂವಹನ ಸುಗಮವಾಗಲೆಂದು ಎಚ್ಚರ ವಹಿಸಿದ್ದರ ಕುರುಹು ದೊರೆಯುತ್ತದೆ.

ಕೃಷಿಜ್ಞಾನ ಪ್ರದೀಪಿಕೆಯು ಮೂರು ಮಹತ್ವದ ಭಾಗಗಳನ್ನು, ಹಲವಾರು ಉಪ-ವಿಭಾಗಗಳನ್ನು ಒಳಗೊಂಡಿರುವ ಬೃಹತ್ ಕೃತಿ. ಮೊದಲನೆಯದರಲ್ಲಿ 'ಜಿರಾಯತ', ಎರಡನೆಯದರಲ್ಲಿ 'ಭಾಗಾಯತ' ಮತ್ತು ಮೂರನೆಯದರಲ್ಲಿ 'ಪಾರಮಾರ್ಥ' ಕೃಷಿಯ ಬಗ್ಗೆ ವಿಸ್ತೃತವಾಗಿ ವಿವರಿಸಲಾಗಿದೆ. ಈ ಗ್ರಂಥದ ಪರಿವಿಡಿ ನೋಡಿದರೆ ಸಾಕು ವೈವಿಧ್ಯಮಯ ಸಂಗತಿ, ವಿಷಯ ವ್ಯಾಪ್ತಿ, ಕೃಷಿಗೆ ಸಂಬಂಧಿಸಿದ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳು ಗೋಚರಿಸುತ್ತವೆ.

ಈ ಗ್ರಂಥದ ಆಕೃತಿ ನೋಡಿ ಇಷ್ಟು ದೊಡ್ಡದಾದ ಕೃತಿಯನ್ನು ಓದುವುದೆಂತು? ಎಂಬ ಸಂದೇಹ ಸುಳಿದುಹೋಗುತ್ತದೆ. ಅದಕ್ಕಾಗಿಯೇ ಆರಂಭದಲ್ಲಿಯೇ "ಈ ಗ್ರಂಥದ ಓದುಗರಿಗೆ ವಿಜ್ಞಾಪನೆ ಏನೆಂದರೆ ಪ್ರಾಜ್ಞರಾದವರು ಈ ಗ್ರಂಥವನ್ನು ನೋಡಿ ಬಾಹುಲ್ಯವಿದೆ ಎಂದು ಬೇಸರಪಡಬಾರದು. ಬೇಸರವೆಂಬುದು ಆಲಸ್ಯದ ಮನೆಯು. ಆಲಸಿಕೆಯು ದಾರಿದ್ರ್ಯದ ಬೀಜ" (ಪುಟ-೨) ಎಂದು ಪೀಠಿಕೆ ಹಾಕಿ ಮುಂದುವರೆದು ಹೀಗೆ ಹೇಳುತ್ತಾರೆ. "ಮೊದಲಲ್ಲಿ ತಪಸ್ಸು ಗೈಯಲು ಬೇಸತ್ತರೆ ಸಕಲ ಸಿದ್ಧಿಗಳು ನಡೆಯುವುದೆಂತು? ಶಾಸ್ತ್ರಕ್ಕೆ ಗ್ರಂಥ ದೊಡ್ಡದಾಗಿದೆ ಎಂದು ಅಂಜಿ ಪಾಠಕರು ಬೇಸತ್ತರೆ ಪಂಡಿತರಾಗುವ ಬಗೆಯೆಂತು? ದೇಹದಂಡನೆ, ಇಂದ್ರಿಯ ನಿಗ್ರಹಕ್ಕೂ ಬೇಸತ್ತರೆ ತಪಸ್ಥಿತಿಯಾಗುವುದೆಂತು? ಕೃಷಿ ಮೊದಲಾದ ಸಕಲ ವ್ಯಾಪಾರಂಗಳಿಗೆ ಬೇಸತ್ತರೆ ಸಂಸಾರಿಗಳು ಸುಖಪಡುವುದೆಂತು? ಸತ್ಕರ್ಮಗಳಿಗೆ ಬೇಸತ್ತರೆ ಪುಣ್ಯಸಂಪಾದನವಾಗುವುದೆಂತು" ಈ ರೀತಿಯಾಗಿ ಪ್ರಶ್ನೆಗಳನ್ನು ಎತ್ತುತ್ತ ಎರಡು ಪುಟಗಳವರೆಗೆ ದೃಷ್ಟಾಂತ ನೀಡಿದ್ದಾರೆ. ಕೊನೆಯಲ್ಲಿ "ಸಕಲಜನ ಹಿತೋಪದೇಶವಾಗಿರುವುದರಿಂದ ಓದುವುದಕ್ಕೆ ಬೇಸರಗೊಳ್ಳದೇ ಆದಿಯಿಂದ ಅಂತ್ಯದವರೆಗೂ ಚೆನ್ನಾಗಿ ನೋಡಿ ತಿಳಿಯಬೇಕು. ದೊಡ್ಡದಾಗಿದೆಯೆಂದು ಭಯಪಡಬಾರದು" (ಪುಟ-೩) ಎಂದು ಧೈರ್ಯ ತುಂಬಿದ್ದಾರೆ. ಓದಿಸಿಕೊಳ್ಳುವ ಪ್ರಾಸಾದಿತಗುಣವನ್ನು ಈ ಗ್ರಂಥ ಹೊಂದಿದೆ.

ಒಂದನೆಯ ಅಧ್ಯಾಯದಲ್ಲಿ 'ಪೀಠಿಕೆ' ಸುದೀರ್ಘವಾಗಿದ್ದು ಹದಿನಾರು ಪುಟಗಳ ವ್ಯಾಪ್ತಿ ಪಡೆದಿದೆ. ಕೃಷಿಕರು ಕಷ್ಟಗಳಿಂದ ಪಾರಾಗಿ; ಸುಖ ಸಮೃದ್ಧ ಜೀವನ ನಡೆಸಬೇಕೆಂಬುವ ಸಧೀಚ್ಛೆ ಎದ್ದುಕಾಣುತ್ತದೆ. ಮೊದಲ ಪ್ರಕರಣದಲ್ಲಿ ಕೃಷಿಕರಾದ ಯಜಮಾನರಿಗೆ ಹೇಳುವ ನೀತಿ" ಎಂಬ ಶೀರ್ಷಿಕೆಯಡಿಯಲ್ಲಿ ಈ ಭೂಮಿಯು ಕಲ್ಪವೃಕ್ಷಕ್ಕೂ ಕಾಮಧೇನುವಿಗೂ ಚಿಂತಾಮಣಿಗೂ ಪರುಷಮಣಿಗೂ ಸಮಾನವಾಗಿದೆ. ಇಂಥ ಭೂಮಿ ಇದ್ದುದರಿಂದ ಮನುಷ್ಯರುಗಳು ಕಾಯಶಕ್ತಿಯಿಂದಲೂ ಬುದ್ಧಿಶಕ್ತಿಯಿಂದಲೂ ಮೆಹನತುಮಾಡಿ ಪರಿಶ್ರಮಪಟ್ಟು ಸಕಲ ಸಂಪತ್ತನ್ನು ದೊರಕಿಸಿಕೊಳ್ಳಬೇಕು, ಮೈಗಳ್ಳರಾಗಿ

ದರಿದ್ರರಾಗಬಾರದು". (ಪುಟ-೧೭) ಭೂಮಿಯ ಪ್ರಾಮುಖ್ಯತೆ ದುಡಿಮೆಯ ಮಹತ್ವವನ್ನು ವಿವರಿಸಲಾಗಿದೆ.

ಎತ್ತುಗಳ ಆರೈಕೆ, ಒಕ್ಕಲುತನ ಸಾಮಗ್ರಿಗಳು, ಹೊಲಗಳ ಆರೈಕೆ, ಸೇವಕರ ವ್ಯವಸ್ಥೆ ಮುಂತಾದ ಇನ್ನಿತರ ಉಪಶೀರ್ಷಿಕೆಗಳನ್ನೊಳಗೊಂಡ ಭಾಗಗಳಿವೆ. ಪ್ರತಿಯೊಂದು ಮಾಹಿತಿ ರೈತರಿಗೆ ಉಪಯುಕ್ತವಾಗುವುದರಲ್ಲಿ ಸಂದೇಹವಿಲ್ಲ.

ಪ್ರಕರಣ ಎರಡರಲ್ಲಿ 'ನಟ್ಟು ಕಡಿಸುವುದು' ಹೇಗೆಂಬುದನ್ನು ನಿರೂಪಿಸಲಾಗಿದೆ. ಅಲ್ಲದೆ "ಕೃಷಿಕರಾದವರು ಸಾಲಮಾಡಿ ಹಬ್ಬ ಮಾಡಬಾರದು, ಮನೆ ಕಟ್ಟಿಸಬಾರದು, ಲಗ್ನ, ಶೋಭನ, ಮುಂಜಿ ಆಭರಣ ಮಾಡಿಸುವುದು ಇತ್ಯಾದಿಗಳನ್ನು ಮಾಡಿಸಬಾರದು" (ಪುಟ-೨೪೨) ಇಂತು ಹಿತವಚನ ರೈತಾಪಿವರ್ಗಕ್ಕೆ ಸೂಕ್ತ ಮಾರ್ಗದರ್ಶನ ನೀಡುತ್ತವೆ.

ಮೂರನೆಯ ಪ್ರಕರಣಧಲ್ಲಿ "ಹೊಲಗಳಲ್ಲಿ ಒಡ್ಡು ಬಲಿಸುವ ಪ್ರಯೋಜನ'ವನ್ನು ಚಿತ್ರ ಸಹಿತವಾಗಿ ಬಿಡಿಸಿಡಲಾಗಿದೆ. ಈ ಭಾಗದಲ್ಲಿ ಒಡ್ಡನ್ನು ಹಾಕುವುದು, ಒಡ್ಡಿನ ಮಹತ್ವ, ಜಮೀನಿನ ಭೌಗೋಳಿಕ ಲಕ್ಷಣಕ್ಕೆ ತಕ್ಕಂತಹ ಒಡ್ಡು ನಿರ್ಮಿಸುವ ಬಗೆ, ಬದುವಿನ ಬದಿಗೆ ಗಿಡ-ಮರಗಳ ಬೀಜ ಹಾಕುವುದು, ಸಸಿ ನೆಡೆಸುವುದರ ವಿವರಗಳಿವೆ. ಅವಶ್ಯಕವೆನಿಸುವ ಸಲಹೆ - ಸೂಚನೆಗಳಿವೆ..

ನಾಲ್ಕನೆಯ ಪ್ರಕರಣದಲ್ಲಿ 'ಗೊಬ್ಬರ ಹಾಕುವ' ಪ್ರಸ್ತಾಪವಿದೆ. ಎಂಥ ಭೂಮಿಗೆ ಎಂತಹ ಗೊಬ್ಬರ ಹಾಕಬೇಕು, ಯಾವ ಬೆಳೆಗೆ ಯಾವ ಗೊಬ್ಬರ ಕೊಡಬೇಕು, ಹೆಂಡಿ ಹುಳು ಗೊನ್ನಿಹುಳು ಆಗದಂತೆ ತಡೆಯುವ ಉಪಾಯ, ಇಂಥ ಹುಳುಗಳಿಗೆ ಪ್ರತಿಬಂಧಕ ಉಪಾಯಗಳಾವುವು ಇತ್ಯಾದಿ ವಿವರಗಳಿವೆ. ಗೊಬ್ಬರ ಸಲುವಾಗಿ ಆಡು-ಕುರಿ ತರುಬುವು, ಮಡಿಕೆ ಹೊಡೆಯುವ ಕ್ರಮಗಳನ್ನು ನಿರೂಪಿಸಲಾಗಿದೆ.

ಪ್ರಕರಣ ಐದರಲ್ಲಿ 'ಹೊಲ ಹರಗುವ' ಪ್ರಕ್ರಿಯೆಯನ್ನು ಅದರಿಂದಾಗುವ ಪ್ರಯೋಜನವನ್ನೂ ಚಿತ್ರಿಸಲಾಗಿದೆ. ಮುಂಗಾರಿ ಬೆಳೆಗಾಗಿ ಹರಗುವ ಪದ್ಧತಿ, ಹಿಂಗಾರಿ ಬೆಳೆ ಮಾಡಲು ಹರಗಬೇಕಾದ ಪದ್ಧತಿ, ತೀವ್ರ ಹಸಿಯಾಗದ ಕರ್ಲುಭೂಮಿ, ಪಡಭೂಮಿ ಯಾದರೆ ಹೆರಗುವ ಬಗೆ ಹೇಗೆಂಬುದನ್ನು ನಿದರ್ಶನಗಳೊಂದಿಗೆ ಚಿತ್ರಿಸಲಾಗಿದೆ.

ಪ್ರಕರಣ ಆರು "ನೆಲ್ಲು ಬಿತ್ತುವುದು" ಆಗಿದೆ. ಎಂಥ ಹೊಲದಲ್ಲಿ ಬತ್ತ ಬಿತ್ತಬೇಕು, ಮಡಿಕೆ ಹೊಡೆಯುವುದು, ಗೊಬ್ಬರ ಹಾಕುವುದು, ಹದವಾಗಿ ಹರಗುವುದು, ಬಿತ್ತನೆಯ ಬೀಜ, ಬಿತ್ತುವ ಪದ್ಧತಿ, ನೀರಿನ ಸಂಗ್ರಹ, ಬಿತ್ತುವ ತಥಿ, ಸಸಿಯ ಪೋಷಣೆ, ಆಗಿ ತಯಾರಿಸಿ ಬೇರೆಡೆ ಹಚ್ಚುವುದು, ಕಳೆ ತೆಗೆಯುವುದು, ರಾಶಿ ಮಾಡುವುದು, ಕೆಡದಂತೆ ಕಣಜದಲ್ಲಿ ತುಂಬುವುದು ಇತ್ಯಾದಿ ಅಂಶಗಳನ್ನು ಸರಳ ಸುಂದರವಾಗಿ ಪ್ರತಿಪಾದಿಸಲಾಗಿದೆ.

ಏಳನೆಯ ಪ್ರಕರಣ "ಮುಂಗಾರಿ ಧಾನ್ಯಗಳ" ಕುರಿತಾಗಿದೆ. ನೆಲ್ಲು, ಸೆಜ್ಜೆ, ನವಣೆ, ರಾಗಿ, ಸಾವಿ, ಬರಗು, ಡಾರಕ, ಎಳ್ಳು, ಶೇಂಗಾ ತೊಗರೆ, ಹೆಸರು, ಹುರುಳಿ, ಅಲಸಂದಿ, ಅವರಿ, ಬಳ್ಳೊಳ್ಳಿ, ಮೆಣಸು, ಹವೀಜ, ಜೀರಿಗಿ, ಪುಂಡಿ, ಮಡಕಿ, ಉದ್ದು, ತಿಂಗಳವರಿ,

ಸೆಣಬು ಮೊದಲಾದ ಹದಿನೆಂಟು ಧಾನ್ಯಗಳನ್ನು ಮುಂಗಾರಿಯಲ್ಲಿ ಬಿತ್ತುವುದಾಗಿದೆ. ಯಾವ ಭೂಮಿಯಲ್ಲಿ ಯಾವ ಬೆಳೆ ಮಾಡಬೇಕು, ಯಾವ ಬೆಳೆಯನ್ನು ಎಂಥ ನೆಲದಲ್ಲಿ ಬಿತ್ತಬೇಕೆಂಬುದನ್ನು ತಿಳಿಸಲಾಗಿದೆ.

ಎಂಟನೆಯ ಪ್ರಕರಣ 'ಹತ್ತಿ' ಬೆಳೆ ಕುರಿತಾಗಿದೆ. ಇದೇ ಪ್ರಕರಣದಲ್ಲಿ ಸೆಣಬು ಬಿತ್ತುವುದು, ಸಿರಂಜಿ ಬಿತ್ತುವುದು, ನೀಲಿಯ ಬೀಜ ಬಿತ್ತುವ ಕ್ರಮ, ಅದರ ಉಪಯೋಗ ವಿವರಿಸಲಾಗಿದೆ. ಈ ರೀತಿಯಾಗಿ ಒಂದರಿಂದ ಎಂಟನೆಯ ಅಧ್ಯಾಯದವರೆಗೆ ಒಣಬೇಸಾಯ ಪದ್ಧತಿಯನ್ನು ಸ್ವಾರಸ್ಯಪೂರ್ಣವಾಗಿ ನಿರೂಪಿಸಲಾಗಿದೆ. ನಡು-ನಡುವೆ ಉಪಕತೆ - ಅಡಗಲೆಗಳು ಬಂದಿರುವುದರಿಂದ ಕೃತಿ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ.

ಭಾಗ ಎರಡರಲ್ಲಿ 'ತೋಟ'ದ ವಿಷಯಕ್ಕೆ ಸಂಬಂಧಿಸಿದ ಸಂಗತಿಗಳನ್ನು ಸುದೀರ್ಘವಾಗಿ ಚರ್ಚೆಗೆತ್ತಿಕೊಳ್ಳಲಾಗಿದೆ. ಭೂಮಿತಿದ್ದುವುದು, ಭಾವಿ ಕಡಿಸುವುದು ಪ್ರಮುಖ ಅಂಶಗಳಾಗಿವೆ. "ತೋಟ ಕೃಷಿಕರಿಗೆ ಸಕಲ ಸಂಪತ್ತನ್ನು ನೀಡುತ್ತದೆ. ಕೃಷಿಕರು ಜಗತ್ತಿನಲ್ಲೆಲ್ಲ ಸಂಪತ್ತನ್ನು ಹೊಂದಲೆಂದು ಈ ಗ್ರಂಥ ನಿರ್ಮಿಸಿ, ಇದರಲ್ಲಿ ತೋಟ ಮಾಡುವ ಯುಕ್ತಿ - ಅದರಿಂದಾಗುವ ಪ್ರಯೋಜನಗಳನ್ನು ವಿಸ್ತಾರವಾಗಿ ಬರೆದಿರುವನು" (ಪುಟ-೮೯) ಎನ್ನುವಲ್ಲಿ ಕೃಷಿಕರ ಲೇಸ ಬಯಸಿದ ಪರೋಪಕಾರ ದೃಷ್ಟಿ ನಿಚ್ಚಳವಾಗಿ ಗೋಚರಿಸುತ್ತದೆ.

ನೀರಿನ ಮೂಲ ಶೋಧಿಸುವುದು, ಸಹಜವಾಗಿ ಗುರುತಿಸುವ ಉಪಾಯಗಳು, ಬಾವಿ ತೋಡಿಸುವುದು, ಬಾರಿ ನಿರ್ಮಿಸುವುದು, ಕಾವಲಿ ಕಟ್ಟುವುದು ಇತ್ಯಾದಿಗಳನ್ನು ಸಾದ್ಯಂತವಾಗಿ ಬಿಡಿಸಿಟ್ಟಿದ್ದಾರೆ. ಹಳ್ಳ, ಹಳ್ಳದ ದಂಡೆ, ತಗ್ಗುಭೂಮಿ, ಇಳಿಜಾರು ಪ್ರದೇಶ, ಗುಡ್ಡ-ಬೆಟ್ಟ ಇತ್ಯಾದಿಗಳಲ್ಲಿ ಬಾವಿಯನ್ನು ಕಡಿಸುವ ಕ್ರಿಯೆಯನ್ನು ನಿರೂಪಿಸಲಾಗಿದೆ. ನೆಲದ ಮೇಲ್ಮೈ ಲಕ್ಷಣಗಳನ್ನು ವಿವರಿಸಿ, ಎಂಥ ನೆಲದಲ್ಲಿ ಎಂತಹ ನೀರು ಬರುವುದು. ಬೆಳೆಗಳಿಗೆ ಯಾವ ನೀರು ಉಪಯುಕ್ತವೆಂಬುದು ಈ ಭಾಗದಲ್ಲಿ ವಿವರಿಸಲಾಗಿದೆ. ಹತ್ತು ರೇಖಾಚಿತ್ರಗಳನ್ನು ನೀಡಿರುವುದರಿಂದ ತುಂಬ ಉಪಯೋಗವಾಗುತ್ತದೆ.

ಹತ್ತನೆಯ ಪ್ರಕರಣದಲ್ಲಿ 'ಕೃಷಿ ಕಾರ್ಯಗಳನ್ನು ವಿಶ್ವಾಸ ಪೂರ್ವಕವಾಗಿ ಮಾಡುವ' ಬಗೆಯನ್ನು ಮನವರಿಕೆ ಮಾಡಿಕೊಡಲಾಗಿದೆ. "ಸ್ವಂತ ಭೂಮಿ ಹೊಂದಿದವರು ತೋಟಗಳನ್ನು ಮಾಡಿ, ಸರಿಯಾಗಿ ಶ್ರಮಿಸುತ್ತಿದ್ದರೆ ಕ್ಷಾಮದಲ್ಲಿಯೂ ಸೌಖ್ಯವಾಗಿ ಕಾಲಕಳೆಯಬಹುದು" ಅದು ಹೇಗೆಂಬುದನ್ನು ಈ ಭಾಗದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ನೀಡಿದ ಸೂಚನೆಗಳು ಸಕಾಲಿಕವಾಗಿವೆ. ದುಡಿಯದವನಿಗೆ ಉಣ್ಣುವ ಹಕ್ಕಿಲ್ಲವೆಂಬುದು ಶರಣರ ಸುಳ್ನುಡಿಯ ಅನುಗುಣವಾಗಿಯೇ ಘನಮಠೇಶರು, ವಿಚಾರ ಪ್ರತಿಪಾದನೆ ಮಾಡಿದ್ದಾರೆ.

ಪ್ರಕರಣ ಹನ್ನೊಂದರಲ್ಲಿ "ತೋಟದ ಪೈರನ್ನು ಮಾಡುವ ಪದ್ಧತಿ"ಯನ್ನು ನಿರೂಪಿಸಲಾಗಿದೆ. ಬೇಲಿ, ಅದರ ಮಹತ್ವ, ನಿರ್ಮಿಸುವ ರೀತಿಗಳನ್ನು ಪ್ರಸ್ತಾಪಿಸಿ, ಮಾವಿನ ತೋಪು, ಉದ್ಯಾನವನದ ನಿರ್ಮಾಣ, ತೆಂಗು, ಅಡಿಕೆ, ಬಾಳೆ ಮುಂತಾದ ಬೆಳೆಗಳ ತೋಟಮಾಡುವುದನ್ನು ಹೇಳಲಾಗಿದೆ. ಜೊತೆಗೆ ಎಲೆಬಳ್ಳಿ, ಅಂಜೀರು, ದ್ರಾಕ್ಷಿ,

ಸೀತಾಫಲ, ರಾಂಫಲ, ಪೇರಲ, ಪಪ್ಪಾಯಿ ಮೊದಲಾದ ಹಲವಾರು ಹಣ್ಣು ಹಂಪಲದ ಗಿಡ ನೆಡುವುದನ್ನು ಸೊಗಸಾಗಿ ವಿವರಿಸಲಾಗಿದೆ. ಕಬ್ಬು, ನೆಲ್ಲು, ಕಾಯಿಪಲ್ಲೆ, ಅರಿಷಿಣ, ಅಲ್ಲ ಜೀರಿಗೆ, ಮೆಂತೆ, ಕಸಕಸಿ, ಉಳ್ಳಿ, ಬಳ್ಳೊಳ್ಳಿ, ಗಜ್ಜರಿ - ಗೆಣಸು ಮುಂತಾದ ಇತರ ಬೆಳೆಗಳನ್ನು; ಜವೆಗೋದಿ, ಗೋವಿನ ಜೋಳ, ರಾಗಿ - ನವಣೆ ಇತ್ಯಾದಿ ದವಸ - ಧಾನ್ಯಗಳನ್ನು ಬಿತ್ತಿ ಬೆಳೆಯುವ ಪದ್ಧತಿಯನ್ನು ಸೂಚಿಸಲಾಗಿದೆ. ಆಡು ನುಡಿ, ಜಾಣ್ನುಡಿ, ಗಾದೆ ಮಾತುಗಳನ್ನು ವಿಪುಲವಾಗಿ ಬಳಸಿಕೊಂಡು ವಿಷಯ ಸ್ವಾರಸ್ಯಕರವಾಗಿ ಮಂಡಿಸಲಾಗಿದೆ.

ಹನ್ನೆರಡನೆಯ ಪ್ರಕರಣ 'ಕಬ್ಬಿನ ಕೃಷಿ'ಗೆ ಸಂಬಂಧಿಸಿದೆ. ಹದಿಮೂರನೆಯದರಲ್ಲಿ 'ಅರಿಷಿಣ-ಮೆಣಸು' ಬೆಳೆಗಳ ಬೇಸಾಯಕ್ರಮವಿದೆ. ಹದಿನಾಲ್ಕನೆಯ ಪ್ರಕರಣದಲ್ಲಿ ಗೋಡಂಬಿ ವನ, ಯಾಲಕ್ಕಿ ಗಿಡ, ಮೆಣಸಿನ ಬಳ್ಳಿ, ಅಲ್ಲ, ಕಸಕಸಿ, ಜೀರಿಗೆ, ಶಾಜೀರಿಗೆ, ಸೋಪ, ಚಹಾದ ಸೊಪ್ಪು, ಬೂಂದಿನ ರಾಣಿ, ಪುಷ್ಪಲತೆಗಳು, ಪುಷ್ಪಗಳಲ್ಲಿ ವೃಕ್ಷ ಜಾತಿ, ವಿವಿಧ ಪ್ರಭೇದ, ಉದ್ಯಾನವನಗಳಲ್ಲಿ ನೆಡೆಸುವ ವೃಕ್ಷಗಳು, ತೋಟದ ನೆಲ್ಲು ಇವೇ ಮೊದಲಾದ ವಿಷಯಗಳ ಕುರಿತಾಗಿ ಚರ್ಚಿಸಲಾಗಿದೆ. ಈ ಮೇಲೆ ಪ್ರಸ್ತಾಪಿಸಿದ ಒಂದೊಂದು ಕೃಷಿಯ ಕುರಿತು ಎರಡು ಪುಟದ ವಿವರವಾದ ಮಾಹಿತಿ ನೀಡಲಾಗಿದೆ. ಹದಿನೈದನೆಯ ಪ್ರಕರಣವು "ತೋಟದ ಶೃಂಗಾರ ಮತ್ತು ಸಂಭ್ರಮದ ವರ್ಣನೆ"ಗೆ ಮೀಸಲಾಗಿದೆ.

ಪ್ರಕರಣ ಹದಿನಾರು 'ಯತ್ನಾಧಿಕ್ಯ'ವಾಗಿದೆ. ಅಂದರೆ 'ಉದ್ಯೋಗಂ ಪುರುಷ ಲಕ್ಷಣಂ' ಎಂಬುದನ್ನು ಬಲವಾಗಿ ಪ್ರತಿಪಾದಿಸಲಾಗಿದೆ. ಕಾಯಕ ಸಿದ್ಧಾಂತದ ಕುರಿತಾಗಿ ಅಪಾರ ಕಾಳಜಿ ವ್ಯಕ್ತವಾಗಿದೆ. ಶ್ರಮ ಸಿದ್ಧಾಂತವನ್ನು ಹಲವಾರು ದೃಷ್ಟಾಂತಗಳ ಮೂಲಕ ಸೊಗಸಾಗಿ ಚಿತ್ರಿಸಲಾಗಿದೆ. ಹಣೆಬರಹ ಪ್ರಾರಬ್ಧ ಕರ್ಮ ಇತ್ಯಾದಿಗಳನ್ನು ಟೀಕಿಸಿ, ಮನುಷ್ಯ ಪ್ರಯತ್ನಕ್ಕಿಲ್ಲಿ ಪ್ರಾಶಸ್ತ್ಯ ಒದಗಿಸಲಾಗಿದೆ. ಇಂತಹ ಪ್ರಗತಿಪರವಾದ ವೈಚಾರಿಕವಾದ ವಸ್ತು ನಿಷ್ಟವಾಗಿರುವ ದೃಷ್ಟಿಕೋನ ಘನಮಠೇಶರಿಂದ ಪ್ರತಿಪಾದನೆಗೊಂಡಿರುವುದು ವಿಶೇಷ ಅಂಶವಾಗಿದೆ. ಈ ಸಂಗತಿಯೇ ಘನಮಠ ಶಿವಯೋಗಿಗಳು ಉಳಿದ ಮಠಾಧೀಶರಿಗಿಂತ ಎಷ್ಟೊಂದು ವಿಭಿನ್ನವೆಂಬುದನ್ನು ಎತ್ತಿತೋರಿಸುತ್ತದೆ.

ಪ್ರಕರಣ ಹದಿನೇಳರಲ್ಲಿ 'ಜೀವಜಲ'ವೆನಿಸಿದ ನೀರಿನ ಅವಶ್ಯಕತೆಯನ್ನು ಪ್ರತಿಪಾದಿಸಲಾಗಿದೆ. ಮಳೆಯ ನಕ್ಷತ್ರಗಳು, ವರ್ಷಕಾಲ, ನೀರಿನ ಮೂಲ ತಾಣವೆನಿಸಿದ ಹೊಳೆ, ಹಳ್ಳ, ಕೆರೆ, ಬಾವಿ, ಸರೋವರ ಮತ್ತು ಅಂತರ್ ಜಲದ ಶೆಲೆಗಳ ಕುರಿತಾಗಿ ನಿರೂಪಿಸಲಾಗಿದೆ. ಹದಿನೆಂಟನೆಯ ಪ್ರಕರಣದಲ್ಲಿ 'ಧರ್ಮನೀತಿ ಮತ್ತು ಕರ್ಮ ನಿವೃತಿ' ಕುರಿತು ಸಹಜ ಸುಂದರವಾಗಿ ನಿರೂಪಿಸಲಾಗಿದೆ. ಹೀಗೆ ಒಂಬತ್ತನೆಯ ಪ್ರಕರಣದಿಂದ ಮೊದಲ್ಗೊಂಡು ಹದಿನೆಂಟನೆಯ ಪ್ರಕರಣದವರೆಗೆ ಎರಡನೆಯ ಅಧ್ಯಾಯ ಹರಡಿದೆ. ಇದರಲ್ಲಿ ತೋಟದ ಬೆಳೆಗಳನ್ನು ವಿವರವಾಗಿ ಚಿತ್ರಿಸಲಾಗಿದೆ. ಕೃಷಿ ತಜ್ಞರಾದ ಡಾ. ಎನ್.ಪಿ. ಪಾಟೀಲ ಅವರು "ಶಿವಯೋಗಿಗಳು ಕೃಷಿಜ್ಞಾನ ಪ್ರದೀಪಿಕೆಯೆಂಬ ಅಮೂಲ್ಯ ಗ್ರಂಥ ಬರೆದು, ಕೃಷಿಲೋಕವನ್ನೇ ಕೃತಾರ್ಥವನ್ನಾಗಿ ಮಾಡಿದ್ದಾರೆ. ಕೃಷಿವಿಜ್ಞಾನದ ಬಗ್ಗೆ ಯಾರ ಯೋಚನೆಯೂ ಇಲ್ಲದೆ ಇದ್ದ ಸಮಯದಲ್ಲಿ ಕೃಷಿಯ ಬಗ್ಗೆ ಕೂಲಂಕಷವಾಗಿ

ವಿವೇಚಿಸಿದ್ದಾರೆ. ಅವರ ಈ ವಿಚಾರಗಳನ್ನು ಬಸವವಚನಾಮೃತ ಸವಿದಂತೆ ಕೃಷಿಕರು ಪ್ರತಿದಿನ ಪಾರಾಯಣ ಮಾಡುವುದು ಅತೀ ಅವಶ್ಯಕ"ವಾಗಿದೆಯೆಂದು ಹೇಳಿರುವುದು ಈ ಕೃತಿಯು ಆಧುನಿಕ ಯುಗದಲ್ಲಿಯೂ ಪ್ರಸ್ತುತವಾಗಿದೆಯಂಬುದಕ್ಕೆ ಸಾಕ್ಷಿಯಾಗಿದೆ.

ಮೂರನೆಯ ಭಾಗ 'ಪಾರಮಾರ್ಥಿಕ' ಕೃಷಿಗೆ ಮೀಸಲಾಗಿದೆ. ಪ್ರಕರಣ ಹತ್ತೊಂಬತ್ತರಲ್ಲಿ ನಿರ್ಮಲತ್ವ, ಇಪ್ಪತ್ತರಲ್ಲಿ ಸದಾಚಾರ, ಇಪ್ಪತ್ತೊಂದರಲ್ಲಿ ಸುಜ್ಞಾನಸಾರ, ಸುಜ್ಞಾನ ಸಂಪಾದನೆ, ಇಪ್ಪತ್ತೆರಡರಲ್ಲಿ ಸದ್ಭಕ್ತಿ, ಇಪ್ಪತ್ಮೂರರಲ್ಲಿ ನಿಜನಿರ್ಮಲತ್ವ, ಮಲತ್ರಯ, ದಿಕ್ಷಾತ್ರಯ, ವೇಧಾದಿಕ್ಷೆಯಲ್ಲಿ ಮೊದಲಿನ ಮಲನಿರಸನ, ವೇಧಾದಿಕ್ಷಾಶ್ರಮ, ಮಾಯಾಮಲ, ಕಾರ್ಮಿಕಮಲ, ಮಂತ್ರದಿಕ್ಷೆ, ಕ್ರಿಯಾದಿಕ್ಷೆ ಮತ್ತು ಪರಮಾರ್ಥ ಕೃಷಿಕಾಯಕದ ವಚನಗಳು ಇತ್ಯಾದಿಯಾಗಿ ಹಲವು ಉಪ ಅಧ್ಯಾಯಗಳಲ್ಲಿ ಒಂದೊಂದು ವಿಷಯದ ಕುರಿತಾಗಿ ವಿವರವಿದೆ. ಕೊನೆಯಲ್ಲಿ ಭಾರತೀಯ ಪರಂಪರೆಯಂತೆ 'ಗ್ರಂಥ ಸತ್‌ಫಲ'ವನ್ನು ಬೋಧಿಸಲಾಗಿದೆ.

"ಈ ಮಹಾನ್ ಗ್ರಂಥವು ಯಾವ ಕೋಮಿನವರಿಗೂ ಸಂಬಂಧಿಸಿಲ್ಲ. ಪ್ರತಿಯೊಬ್ಬ ರೈತರ ಪ್ರಗತಿಯಾಗಲಿಕ್ಕೆ ಮಾರ್ಗದರ್ಶಿ ಸಚಿತ್ರಗಳಿವೆ. ಈ ಗ್ರಂಥದ ತತ್ವವನ್ನು ಅಳವಡಿಸಿಕೊಂಡರೆ ಸಾಕು, ಅವನ ಬಾಳು ಬಂಗಾರವಾಗುತ್ತದೆ" ಎಂದಿರುವ ಪ್ರಕಾಶಕರ ಮಾತುಗಳು ಸಮಂಜಸವಾಗಿದೆ.

ಕೃಷಿಯಿಂದಲೇ ಸಕಲಜೀವಿಗಳ ತೃಪ್ತಿ ಎಂದು ತಿಳಿದು, ನೂರೆಪ್ಪತ್ತು ವರುಷಗಳ ಮುಂಚೆಯೇ ಕೃಷಿಜ್ಞಾನ ಪ್ರದೀಪಿಕೆ ಬರೆದು ಮಹದುಪಕಾರ ಮಾಡಿದ್ದಾರೆ. ಕೃಷಿ ವಿಶ್ವವಿದ್ಯಾಲಯಗಳು ಮಾಡುವ ಕಾರ್ಯವನ್ನು ಅಂದು ಏಕಾಂಗಿಯಾಗಿ ಮಾಡಿರುವ ಘನಕೀರ್ತಿ ಶ್ರೀ ನಾಗಭೂಷಣ ಶಿವಯೋಗಿಗಳಿಗೆ ಸಲ್ಲುತ್ತದೆ. ಭಾರತದ ಕೃಷಿಯ ಅಭಿವೃದ್ಧಿಗಾಗಿ, ಕೃಷಿ ಋಷಿ ಜೀವನ ನಡೆಸಿ ತಮ್ಮ ತಪಃ ಸಿದ್ಧಿಯಿಂದ ವಿಶ್ವಪ್ರಪಂಚದ ಜನತೆಗೆ ಅನುಗ್ರಹಿಸಿದರು.

ಶತಮಾನದ ಹಿಂದೆಯೇ 'ರೈತನೇ ಭೂಲೋಕ ಬಾದಶಹ'ನು ಒಕ್ಕಲಿಗನೇ ರಾಷ್ಟ್ರದ ಬೆನ್ನೆಲುಬು ಎಂದು ಘನಮಠದಾರ್ಯರು ಸಾರಿ ಹೇಳಿದ್ದಾರೆ. "ಇಂದಿನ ಕೃಷಿ ತಜ್ಞರೂ ಕೂಡ ಈ ಕೃಷಿ ಗ್ರಂಥದ ಮಹತ್ವಕ್ಕೆ ಶರಣಾಗಿದ್ದಾರೆ. ಕೈಮುಗಿದು ಧನ್ಯರಾಗಿದ್ದಾರೆ" ಎಂದು ಸಂಪಾದಕೀಯದಲ್ಲಿ ಹೇಳಿರುವ ಪೂಜ್ಯರಾದ ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿಗಳವರ ಮಾತುಗಳು ಸತ್ಯಸ್ಯ ಸತ್ಯವಾಗಿದೆ.

ಇಂಥ ಅಪರೂಪ ಮತ್ತು ಕೃಷಿಕರಿಗೆ ಅತ್ಯುಪಯುಕ್ತವಾದ ಪ್ರಸ್ತುತ ಗ್ರಂಥವನ್ನು ಸಂಪಾದಿಸಿ, ಪದೇ ಪದೇ ಪ್ರಕಟಿಸಿ ನಾಡಿಗೆ ನೀಡುತ್ತ ಬಂದಿರುವ ಪೂಜ್ಯ ಮಲ್ಲಿಕಾರ್ಜುನ ಸ್ವಾಮಿಗಳವರ ಕಾರ್ಯ ಅವಿಸ್ಮರಣೀಯವಾಗಿದೆ. ಈ ಘನ ಕಾರ್ಯಕ್ಕಾಗಿ ರೈತಾಪಿ ಜನಾಂಗದ ಕೃತಜ್ಞತೆಗೆ ಶ್ರೀಗಳು ಪಾತ್ರರಾಗಿದ್ದಾರೆ. ಏಕತಾನತೆಯಿಂದ ಕೂಡಿದ್ದ ಕನ್ನಡ ಸಾಹಿತ್ಯಕ್ಕೆ ಘನಮಠಾರ್ಯರು ಈ ಗ್ರಂಥದ ಮೂಲಕವಾಗಿ ನೀಡಿದ ಕೊಡುಗೆ ಅಪೂರ್ವವಾಗಿದೆ.

❑

# ತ್ರಿಷಷ್ಟಿ ಪುರಾತನರ ಪುರಾಣ ಸಮೀಕ್ಷೆ*

'ತ್ರಿಷಷ್ಟಿ ಪುರಾತನರ ಪುರಾಣ'ವು ಪಂ. ಪುಟ್ಟರಾಜ ಗವಾಯಿಗಳಿಂದ ರಚಿತವಾದ ಕೃತಿ. ಪ್ರಸ್ತುತ ಪುರಾಣದಲ್ಲಿ 'ಮಂಗಲಾಚರಣ ಸಂಧಿ'ಯನ್ನು ಒಳಗೊಂಡು ಅರವತ್ನಾಲ್ಕು ಸಂಧಿಗಳಿವೆ.

ಮಹಾಕವಿ 'ಹರಿಹರ'ನ - ನೂತನ ಪುರಾತನರ ರಗಳೆಗಳು, ಲಕ್ಕಣ್ಣ ದಂಡೇಶನ - 'ಶಿವತತ್ವ ಚಿಂತಾಮಣಿ', ಸುರಂಗ ಕವಿಯ 'ತ್ರಿಷಷ್ಟಿ ಪುರಾತನರ ವಿಲಾಸ', ಭೀಮಕವಿಯ 'ಬಸವ ಪುರಾಣ', ನಿಜಗುಣ ಶಿವಯೋಗಿಗಳ 'ತ್ರಿಷಷ್ಟಿ ಪುರಾತನರ ತ್ರಿವಿಧಿ' ಮೊದಲಾದ ಕೃತಿಗಳಿಂದ ವಸ್ತುವನ್ನು ಪಡೆಯಲಾಗಿದೆ. ಈ ಕೃತಿಗಳಿಂದ ಹಾಗೂ ಶಿವಶರಣರ ವಚನಗಳಿಂದ ಸನ್ನಿವೇಶ, ಪಾತ್ರ ಪ್ರೇರಣೆ - ಪೋಷಣೆ ಪಡೆದುಕೊಂಡಿದೆ. ಅನ್ಯರಿಂದ ಪ್ರಭಾವಗೊಂಡು ರಚನೆಗೊಂಡಿದ್ದರೂ ಈ ಕೃತಿ ತನ್ನತನವನ್ನು ಕಾಯ್ದುಕೊಂಡಿದೆ. ಪುಟ್ಟರಾಜ ಗವಾಯಿಗಳು ಕಾಲ, ಪರಿಸರ, ಸಮಾಜಗಳಿಗೆ ಅನುಸಾರವಾಗಿ ಅಲ್ಲಲ್ಲಿ ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ.

ಇದೊಂದು ಪುರಾಣ, ಇದರ ಪ್ರಮುಖ ಉದ್ದೇಶ ಧರ್ಮ ಪ್ರಚಾರ. ಜನರಿಗೆ ಸತ್ಯ, ಶಾಂತಿ, ನಡೆ-ನುಡಿ ತಿಳಿಸುವುದು. ಭಕ್ತಿಯನ್ನು ಸ್ಥಾಪಿಸುವುದಾಗಿದೆ. ಪ್ರಸ್ತುತ ಪುರಾಣವು ಒಂದು ಶ್ರೇಷ್ಠ ಪುರಾಣದ ಎಲ್ಲ ಅಂಶಗಳನ್ನು ಮೈಗೂಡಿಸಿಕೊಂಡಿರುವುದನ್ನು ಗುರುತಿಸಬಹುದಾಗಿದೆ. ಭಕ್ತಿಯೇ ಈ ಕೃತಿಯ ಜೀವ-ಜೀವಾಳವಾಗಿದೆ. ಶಾಂತರಸವು ತಾನೇ ತಾನಾಗಿದೆ. ಭಕ್ತಿಯ ಹಲವು ವಿಧಗಳು, ಭಕ್ತರ ಸಾಧನಾ ಮಾರ್ಗಗಳು ಇದರಲ್ಲಿವೆ.

ಕಥಾವಸ್ತು ತೀರಾ ಹಳೆಯದಾಗಿದ್ದರೂ ನಿರೂಪಣಾಶೈಲಿ ಹೊಸ-ಹೊಸದಾಗಿದೆ. ನವ-ನವೀನವಾದ ಸನ್ನಿವೇಶಗಳನ್ನು ಸೊಗಸಾಗಿ ಚಿತ್ರಿಸಿರುವುದರಿಂದ ಕುತೂಹಲ ಕೆರಳಿಸಿಕೊಂಡು, ಇಲ್ಲಿಯ ಕೆಲ ಕಥೆಗಳು ಓದಿಸಿಕೊಳ್ಳುತ್ತವೆ. ತಾವು ಬರೆಯುತ್ತಿರುವುದು ಪಂಡಿತ ಮಂಡಲಿಯನ್ನು ಮೆಚ್ಚಿಸುವುದಕ್ಕಾಗಿರದೆ: ಜನಸಾಮಾನ್ಯರಿಗಾಗಿ ಎಂಬ ಎಚ್ಚರ ಕವಿಯಲ್ಲಿ ಸದಾ ಜಾಗೃತವಾಗಿರುವುದರಿಂದ ಸರಳ-ಸುಂದರವಾದ ಶೈಲಿಯಿದೆ.

"ಮಂಗಲಾಚರಣ" ಸಂಧಿಯಲ್ಲಿ ಪರಂಪರಾಗತವಾದ ಗುರುಸ್ತುತಿ, ಪೂರ್ವಕವಿಗಳ ಸ್ಮರಣೆಯಿದೆ. ಬಸವಾದಿ ಪ್ರಥಮರನ್ನು ಭಕ್ತಿ ಗೌರವಗಳಿಂದ ನೆನೆಯಲಾಗಿದೆ.

**"ಬಸವನನಸಮ ಚನ್ನಬಸವ**
**ನೆಸೆವ ಪ್ರಭುವಲ್ಲಮನ ನುತಿಸುತೆ**
**ಸಸಿನದಿಂ ಮಡಿವಾಳ ಮಾಚಯನನುರ ಕೇತಯನಂ**
**ಪ್ರಸಿತ ಮಾರಯ್ಯನಂ ಮಧುವರಸ**
**ನಸವಸೆದೆ ಶ್ರೀ ಸಿದ್ಧರಾಮನ**
**ನೊಸೆದು ವಂದಿಸಿ ಸಂಸ್ಕೃತಿಯ ತಾಪವ ಕಳೆದುಕೊಳುವೇಂ"**

(ಪದ್ಯ -೫, ಪುಟ-೨)

* 'ಜ್ಞಾನದೇಗುಲ' ಪಂ. ಪುಟ್ಟರಾಜ ಗವಾಯಿಗಳ ಅಭಿನಂದ ಗ್ರಂಥದಲ್ಲಿ ಪ್ರಕಟವಾದ ಲೇಖನ

ಪಂಚಾಕ್ಷರಾರ್ಯರಲ್ಲಿ ಲಘುಸಂಗೀತ, ಶಾಸ್ತ್ರೀಯ ಸಂಗೀತ ಕಲಿತದ್ದು, ತ್ರಿಭಾಷೆಯಲ್ಲಿ ಸಾಹಿತ್ಯ ರಚನೆ ಮಾಡಿದ್ದು, ಬಿದರಿಯ ಪ್ರಭುಕುಮಾರರಿಂದ ದೀಕ್ಷೆಯನ್ನು ಪಡೆದುಕೊಂಡು, ಗುರು ಕೃಪೆಯಿಂದ ಬೆಳೆದ ವಿಷಯವನ್ನು ಏಳನೆಯ ಪದ್ಯದಲ್ಲಿ ವಿವರಿಸಿದ್ದಾರೆ. ಮುಂದೆ ಎಂಟನೆಯ ಪದ್ಯದಲ್ಲಿ-

**"ಪುಟ್ಟರಾಜಾಹ್ವಯ ನಿರುವೆನಾಂ**
**ದಿಟ್ಟವೆಂಕಟಪುರ ಮಠದವಂ**
**ಹುಟ್ಟಿದೇಂ ಹಾನಗಲ್ಲ ಹೊಸಪೇಟೆಯೊಳಿ ಬೆಳೆದಿಹೆನು**
**ದಿಟ್ಟಿಯಿರದಾಂ ದೇವಗಿರಿಯೊಳೆ**
**ಮುಟ್ಟಿ ಪೊರೆದಂ ಜನನಿಯಣ್ಣಂ**
**ಬಿಟ್ಟರಾ ತಾಯ್-ತಂದೆಗಳ್ ಸಿದ್ಧಮ್ಮ - ರೇವಣರು"**

**(ಪದ್ಯ -೮; ಪುಟ-೩)**

ಇದರಲ್ಲಿ ತಾವು ಜನಿಸಿದ ಸ್ಥಳ, ಬೆಳೆದ ಪರಿಸರ, ತಂದೆ-ತಾಯಿಗಳು, ದೃಷ್ಟಿಯಿಲ್ಲದಿರುವುದು, ಸೋದರಮಾವ ಸಲುಡಿದ್ದು, ಮಠಕ್ಕೆ ಸೇರಿದ ಸಂಗತಿಗಳು ಈ ಪದ್ಯದಲ್ಲಿ ದಾಖಲುಗೊಂಡಿವೆ. ಪುಟ್ಟರಾಜ ಗವಾಯಿಗಳ ಬದುಕನ್ನು ವಿವರಿಸುವ ಈ ಷಟ್ಪದಿಗೆ ಐತಿಹಾಸಿಕ ಮಹತ್ವವಿದೆ.

ತಮಗಿಂತಲೂ ಮೊದಲು ಇದೇ ವಸ್ತುವನ್ನುಳ್ಳ ಕೃತಿ ರಚಿಸಿದವರನ್ನು ಸ್ಮರಿಸುತ್ತ, ಈ ರಚನೆಯು 'ಮಹಾಕವಿಗೆ ಸಾಧ್ಯಂ ಯತ್ನಮನೆಸಗುವೇಂ" ಎಂದು ಹೇಳಿರುವಲ್ಲಿ ಕವಿಯ ವಿನಯುವನ್ನು ಕಾಣಬಹುದು. "ಶಿವ ಸಮಾನ ಗುರೂತ್ತಮರನಾಂ ಶಿವಮುಖೋದ್ಭವರಂ ನುತಿಸುತಂ ಭವ ಸಮುದ್ರವ ದಾಂಟುವೇಂ ಪ್ರಾರ್ಥಿಸುತೆ ವಂದಿಸುತೆ" ಎಂಬುವ ಪದ್ಯ, ಮಹಾಕವಿ ಪಂಪನ "ವ್ಯಾಸಮುನೀಂದ್ರ ರುಂದ್ರವಚನಾಮೃತ ವಾರ್ಧಿಯಮೀಸುವೆಂ ಕವಿವ್ಯಾಸನೆಂಬ ಗರ್ವಮೆನಗಿಲ್ಲಂ" ಮಾತುಗಳನ್ನೂ ನೆನಪಿಸುವಷ್ಟು ಪರಿಣಾಮಕಾರಿಯಾಗಿದೆ.

ತ್ರಿಷಷ್ಟಿ ಪುರಾತನರ ಪುರಾಣಕ್ಕೆ 'ದೇವನಿರ್ಪಂ ತ್ರಿನೇತ್ರಂ" ಎಂದು ತಿಳಿಸಿ, "ತ್ರಿಷಷ್ಟಿ ಪುರಾತನರಿದಕೆ ನಾಯಕರ್" ಎಂದು ಕಾವ್ಯನಾಯಕರನ್ನು ಸ್ಪಷ್ಟಗೊಳಿಸುತ್ತಾರೆ. ಆಯಾ ಸಂಧಿಗೆ, ಅಂದರೆ ಒಂದೊಂದು ಕಥೆಗೆ ಒಬ್ಬೊಬ್ಬ ಶರಣ ನಾಯಕನಾದರೆ, ಇಡಿಯಾದ ಕೃತಿಗೆ ಶಿವನೆ ನಾಯಕನಾಗಿದ್ದಾನೆ.

ಈ ಕೃತಿಗೆ ಮೊದಲೆ ಸಿದ್ಧಪಡಿಸಿದ ಒಂದು ಚೌಕಟ್ಟಿದೆ. ಆರಂಭದಲ್ಲಿ ಒಂದು ಸೂಚನಾ ಪದ್ಯವಿದ್ದು, ಆಯಾ ಕಥೆಯ ತಿರುಳನ್ನು ತಿಳಿಸುತ್ತದೆ. ನಂತರ ಕವಿಯ ಆತ್ಮನಿವೇದನಾ ಪದ್ಯ ಬರುತ್ತದೆ. ಶರಣರ ಮಾತುಗಳಿಲ್ಲಿ ಷಟ್ಪದಿಗಳಾಗಿ ಅರಳಿವೆ. ಆಮೇಲೆ ಪುರಾತನ ಕಾಲದ ಪ್ರಸ್ತಾಪ ಬರುತ್ತದೆ. ಸರಿಸುಮಾರಾಗಿ ಕ್ರಿ.ಶ. ೪೦೦ ರಿಂದ ೮೦೦ರ ಅವಧಿಯನ್ನು ಸೂಚಿಸಲಾಗಿದೆ. ಈ ನಿರ್ಧಾರಕ್ಕೆ ಕೃತಿಯಲ್ಲಿ ಯಾವ ಆಧಾರ ಒದಗಿಸಿಲ್ಲ. ಉದಾ: "ಕ್ರಿಸ್ತಶಕದಾರ್ ನೂರರಿಂದ ವನಸ್ತಮಾಗದ ಬಾಳ್ನಡಿಸಿದಂ" (ಪುಟ

ಒದಗಿಸಿಲ್ಲ. ಉದಾ: "ಕ್ರಿಸ್ತಶಕದಾರ್ ನೂರರಿಂದ ವನಸ್ತಮಾಗದ ಬಾಳ್ನಡಿಸಿದಂ" (ಪುಟ - ೨೬೯)

ಕೊನೆಯ ಪದ್ಯವಂತೂ ಪ್ರತಿಸಂಧಿಯ ಅಂತ್ಯಕ್ಕೆ ತಪ್ಪದೇ ಬಂದೇ ಬರುತ್ತದೆ. ಪುನರಾವರ್ತನೆಗೊಳ್ಳುವ ಈ ಪದ್ಯದಿಂದ ಚೌಕಟ್ಟನ್ನು ಗುರುತಿಸಲು ಸಹಾಯವಾಗುತ್ತದೆ.

ಈ ಕೃತಿಯ ವಿಶೇಷವೆಂದರೆ :- ಲೇಖಕರು ಆಯಾ ಸಂಧಿಯಲ್ಲಿಯ ಒಟ್ಟು ಬಳಸಿದ ಪದ್ಯಗಳ ಸಂಖ್ಯೆಯನ್ನು ತಿಳಿಸಿದ್ದಾರೆ. ಇದರಿಂದಾಗಿ ಬೇರೆಯವರು ತಾವು ಹೊಸೆದ ಪದ್ಯಗಳನ್ನು ಸೇರಿಸುವುದಾಗಲೀ, ತಮಗೆ ಬೇಡಾದ ಪದ್ಯಗಳನ್ನು ಕೈಬಿಡುವುದಕ್ಕಾಗಲೀ ಸಾಧ್ಯವಾಗುವುದಿಲ್ಲ. ಅಂದರೆ 'ಪ್ರಕ್ಷಿಪ್ತ'ಕ್ಕೆ ಇಲ್ಲಿ ಅವಕಾಶವಿಲ್ಲ. ಚಾಮರಸನು ತನ್ನ 'ಪ್ರಭುಲಿಂಗಲೀಲೆ'ಯಲ್ಲಿ ಈ ತಂತ್ರವನ್ನು ಅಳವಡಿಸಿದ್ದಾನೆ. ಆದರ ಪ್ರಭಾವದಿಂದ ಪುಟ್ಟರಾಜರು ಈ ಕ್ರಮವನ್ನು ಸ್ವೀಕರಿಸಿರಬಹುದು.

ಕೊಟ್ಟ ಕೊನೆಗೆ ಪ್ರತಿಸಂಧಿಯ ಮುಕ್ತಾಯಕ್ಕೆ ಆಯಾ ಸಂಧಿಯನ್ನು ಅಚ್ಚಿಸಲು ಹಣಕಾಸಿನ ನೆರವಿತ್ತು ದಾಸೋಹಿಗಳ ಹೆಸರನ್ನು ನಮೂದಿಸಲಾಗಿದೆ. ಇದು ಈ ಕೃತಿಯಲ್ಲಿ ಕಂಡುಬರುವ ಸಾಮಾನ್ಯ ಸಂಗತಿಗಳು. ಎಲ್ಲ ಪುರಾತನರ ಕಥೆಗಳಲ್ಲಿ ಈ ಅಂಶಗಳು ತಪ್ಪದೇ ಬರುತ್ತವೆ.

ಪ್ರತಿಸಂಧಿಯಲ್ಲಿ ಸರಿಸುಮಾರು ೨೫, ೨೬ ಅಥವಾ ೨೭ ಷಟ್ಪದಿಗಳಿವೆ. ಇಷ್ಟರಲ್ಲಿಯೇ ಕಥೆಯನ್ನು ನಿರೂಪಿಸಲಾಗಿದೆ. ಇದು ಕವಿಯ ಸೂಕ್ಷ್ಮತೆ ಹಾಗೂ ಸಂಗ್ರಹ ಶಕ್ತಿಗೊಂದು ನಿದರ್ಶನವಾಗಿದೆ. ಇದರಲ್ಲಿ ಆರಂಭದ ಸ್ತುತಿ ಪದ್ಯ ಕೊನೆಯೆರಡು ಪದ್ಯಗಳು (ಒಂದು - ಕಾಲ, ಇನ್ನೊಂದು - ಗದುಗಿನ ಪ್ರಸ್ತಾಪ) ಹೀಗೆ ಮೂರನ್ನು ತೆಗೆದರೆ ಇಪ್ಪತ್ತು - ಇಪ್ಪತ್ತೆರಡು ಪದ್ಯಗಳು ಉಳಿಯುತ್ತವೆ. ೨೦-೨೨ ಭಾಮಿನಿ ಷಟ್ಪದಿಗಳಲ್ಲಿ ಕಥೆಯನ್ನು ಹಿಡಿದಿಡಲಾಗಿದೆ.

ಪುರಾಣವೆಂದಾಕ್ಷಣ ಮೂಗು ಮುರಿಯುವುದು ಸಾಮಾನ್ಯ ಸಂಗತಿಯಾಗಿದೆ. ಆದರೆ ಈ ಕೃತಿಯನ್ನೊಮ್ಮೆ ಓದಿದರೆ ಅಖಂಡತವಾಗಿ ಅಂಥವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುತ್ತಾರೆನಿಸುತ್ತದೆ. ಸರಳ ಹಾಗೂ ಸುಂದರ ಭಾಷೆಯಲ್ಲಿ ಪುರಾಣ ರಚನೆಯಾಗಿದೆ. ಕಾವ್ಯಾಂಶಗಳು ಅಲ್ಲಲ್ಲಿ ಮಿರುಗುವ ಕಿರುತಾರೆಗಳಂತೆ ಮನಸೆಳೆಯುತ್ತವೆ. ಅಲಂಕಾರಗಳು ಹೊಸದಾಗಿವೆ. ನಿರೂಪಣಾ ಶೈಲಿ ಪರಿಣಾಮಕಾರಿಯಾಗಿದೆ. ಆದಿಪ್ರಾಸ ಪಾಲನೆಯಾಗಿದ್ದು, ಕಿವಿಗೆ ಹಿತವೆನಿಸುತ್ತದೆ.

ಜಾನಪದ ಅಂಶಗಳಾದ ಒಗಟು, ಒಡಪು, ಗಾದೆ ಮಾತು, ನಾಣ್ಣುಡಿ, ಜೋಗುಳ ಮುಂತಾದ ದೇಸಿಯತೆಯನ್ನು ಹದವರಿತು ಬಳಸಿಕೊಂಡಿದ್ದಾರೆ.

**ಗಾದೆಮಾತು: "ಬಡತನ ಬಂದಾಗ ಕುಗ್ಗುತೆ**
**ಕಡುಸಿರಿ ಬಂದಗ ಹಿಗ್ಗುತೆ"**

ನಾಣ್ನುಡಿ: "ಮೇಟ ವಿದ್ಯೆಗೆ ಸಮನೆನಿಸದಾ
ಕೋಟ ವಿದ್ಯೆಯೆನಿಪ್ಪ ನಾಡನುಡಿ"

ಜೋಗುಳ: "ಕಂದ ಜೋ ಶಿವಕಂದ ಜೋ ಮಾ
ಕಂದ ಜೋ ವರಕಂದ ಜೋ ಸತ್
ಕಂದ ಜೋ ಚಿತ್‌ಕಂದ ಜೋ ಮುತ್‌ಕಂದ ಜೋ ಜೋ ಜೋ"

ಇಂತಹ ದೇಸಿಯ ಅಂಶಗಳನ್ನು ಬಳಸಿರುವುದರಿಂದ ಕಾವ್ಯಕ್ಕೆ ಹೊಸ ಕಸುವು ಮೂಡಿ ಬಂದಿದೆ. ಸೊಗಸು ಹೆಚ್ಚಾಗಿದೆ. ಇದರಿಂದಾಗಿ ಪುರಾಣವು ಸತ್ವಯುತವಾಗಿಯೂ ಆಡುನುಡಿಗೆ ಹತ್ತಿರವಾಗಿದೆ.

ಧರ್ಮ ಮತ್ತು ದೇವಾಲಯಗಳು ಹೇಗಿರಬೇಕೆಂಬುದನ್ನು ಕಥೆಯ ಅಂಶಕ್ಕೆ ಪೂರಕವಾಗಿ ಸುಂದರವಾಗಿ ನಿರೂಪಿಸಿರುವುದು ಹೀಗೆ:

"ಎಲ್ಲ ಧರ್ಮಗಳೆಲ್ಲ ದೈವಗ
ಳೆಲ್ಲ ಭಕ್ತರುಮೆಲ್ಲ ಕಸುಬಗ
ಳೆಲ್ಲ ಕಲೆಗಳು ಮೆಲ್ಲ ಜಾತಿಗಳಿರ್ದಯೀ ಕತೆಯೊಳ್
ಎಲ್ಲ ವಿದ್ಯೆಗಳೆಲ್ಲ ಸುಗುಣಗ
ಳೆಲ್ಲ ಶಾಸ್ತ್ರಗಳೆಲ್ಲ ವೃತ್ತಿಗ
ಳೆಲ್ಲ ಸದ್ಗುಣ ಕೃತಿಗಳಾಗಿಯೇ ಜನರೊಳೆಸದಿಡವು" (ಸಂಧಿ-೩; ಪದ್ಯ-೫)

ಮಹಾಕವಿ ಹರಿಹರನಂತೆ ಶಿವನನ್ನು ಸ್ತುತಿಸುವಾಗ ಕವಿ ಮೈಮರೆಯುತ್ತಾನೆ. ಶಿವನ ನಾಮಸ್ಮರಣೆ ಮಾಡುತ್ತ, ಆತನ ಬೇರೆ ಬೇರೆ ಹೆಸರುಗಳನ್ನು ಕರೆದುಕೊಂಡಾಡುತ್ತಾನೆ. ಭಕ್ತಿಯೇ ಎಲ್ಲದಕ್ಕೂ ಮೂಲ. ಸರ್ವವ್ಯಾಪಿಯಾದ ಭಕ್ತಿಯಿಂದಲೇ ಸರ್ವಸ್ವವೂ ಸಿದ್ಧಿಯಾಗುತ್ತದೆ ಎಂಬುದು ಕವಿಯ ಅಂಬೋಣವಾಗಿದೆ. ಪುಟ್ಟರಾಜರ ಕೈಯಲ್ಲಿ ಭಕ್ತಿಯು ತನ್ನ ಪರಾಕಾಷ್ಠತೆಯನ್ನು ಮುಟ್ಟಿದೆ.

"ಭಕ್ತಿಯಿಂ ಮಳೆ ಭಕ್ತಿಯಿಂ ಬೆಳೆ
ಭಕ್ತಿಯಿಂ ಕಳೆ ಭಕ್ತಿಯಿಂ ಕಲೆ
ಭಕ್ತಿಯಿಂ ಶ್ರೀ ಭಕ್ತಿಯಿಂ ಸ್ತ್ರೀ ಭಕ್ತಿಯಿಂ ಸುತರು
ಭಕ್ತಿಯಿಂ ಶ್ರುತಿ ಭಕ್ತಿಯಿಂ ಸ್ಮೃತಿ
ಭಕ್ತಿಯಿಂ ರತಿ ಭಕ್ತಿಯಿಂ ಕೃತಿ
ಭಕ್ತಿಯಿಂ ಮತಿ ಭಕ್ತಿಯಿಲ್ಲದೊಡೇನುಮಿಲ್ಲವುದು" (ಸಂಧಿ-೫೭, ಪದ್ಯ-೭)

ಈ ಪದ್ಯದಲ್ಲಿ ಭಕ್ತಿಯ ಕೊಂಡಾಟವನ್ನು ಕಾಣುತ್ತೇವೆ. ಭಕ್ತಿಯೆಂಬ ಒಂದೇ ಒಂದು ಪದ ಹದಿಮೂರು ಬಾರಿ ಬಳಕೆಗೊಂಡಿದೆ. ಪ್ರತಿಬಾರಿಗೂ ಪದ ಪ್ರಯೋಗವಾಗುವಾಗ ಹೊಸ ಅರ್ಥವನ್ನೇ ಸ್ಫುರಿಸುತ್ತದೆ. ಇದು ಕವಿಯ ಕಾವ್ಯರಚನಾ ಕೌಶಲ್ಯಕ್ಕೆ ಸಾಕ್ಷಿಯೊದಗಿಸುತ್ತದೆ.

ಕವಿಗೆ ಸಮಕಾಲೀನ ಪ್ರಜ್ಞೆಯಿದೆ. 'ಕಾಡು' ನಾಶವಾಗುತ್ತಿದೆ. ಕಾಡನ್ನು

ಉಳಿಸಬೇಕು, ಬೆಳೆಸಬೇಕೆಂದು ಸರಕಾರ ಹಲವಾರು ಯೋಜನೆಗಳನ್ನು ರೂಪಿಸಿ, ಪ್ರಚಾರಗೊಳಿಸುತ್ತಿದೆ. ಸಾರ್ವಜನಿಕ ಸಂಘ - ಸಂಸ್ಥೆಗಳು, ಪರಿಸರದ ಕಾಳಜಿಯುಳ್ಳ ವ್ಯಕ್ತಿಗಳು ವನ್ಯಸಂಪತ್ತಿನ ರಕ್ಷಣೆಗಾಗಿ ಹೋರಾಟ ಮಾಡುತ್ತಿದ್ದಾರೆ. ಹೀಗಿರುವಾಗ ಕವಿ ಸುಮ್ಮನಿರಲು ಸಾಧ್ಯವೆ? ಅರಣ್ಯದ ಉಪಯೋಗ ಹಾಗೂ ಅದರ ಅವಶ್ಯಕತೆಗಳನ್ನು 'ಕಣ್ಣಪ್ಪ'ನ ಕಥೆಯಲ್ಲಿ ವಿವರಿಸಿದ್ದಾರೆ.

**"ಕಾಡಿನ ಸಿರಿಯಾನಾಡಿನ ಸಿರಿಯು**
**ಕಾಡಿರದ ಧರೆ ಬರಗಳಾಸರೆ**
**ಕಾಡಿನ ಸೆಲೆಯೆ ತಾಪಸಕಲೆಯು ಸಿದ್ಧಿಗಳತಾಣಂ**
**ಕಾಡಿನ ಚೆಲುವು ಮಳೆಗುರೆ ಬಲವು**
**ಕಾಡಿನೊಗರು ಗಿಡಂಗಳ ತವರು**
**ಕಾಡು ಬೇಡೆಂಬುವನೆ ನಾಡಿನ ವೈರಿಯಿದುವೆ ದಿಟಂ"**

**(ಸಂಧಿ - ೨೬, ಪದ್ಯ - ೨)**

ಮುಂದಿನ ಪದ್ಯದಲ್ಲಿ ಕಾಡೇ ಸರ್ವಸ್ವವೆಂಬುದನ್ನು ಪ್ರತಿಪಾದಿಸುತ್ತಾರೆ.

"ಅಡವಿಯೊಳಿರುವ ಋಷಿಗಳಿಂದಲೇ ಪಡೆಯಿತು ಜಗ ಜ್ಞಾನಂ ವಿಭವವ ಸಡಗರದ ವಿಜ್ಞಾನದ ಸಿರಿಯ ಕಲೆಯ ವೈಭವಮಂ ತಡೆಯಿರದಸದ್ಯೋಗ ವಿಧಿಯಂ ಬಡತನವ ಕಳೆವುಜ್ಜುಗಂಗಳನೊಡನೆ ಭೋಗದ ಮೋಹದುರು ಸಾಧನವನೊಲವಿಂದೆ" ಎನ್ನುತ್ತಾರೆ. ಮತ್ತೊಂದು ಪದ್ಯದಲ್ಲಿ ಕಾಡು ಕಾಡಲ್ಲ. ಅದು ಮಾನವನ ಜೀವನಾಡಿಯೆಂದೂ ವಿವರಿಸಿ 'ಕಾಡು ಕಾಡಲ್ಲ ಸ್ವರ್ಗಮಿದು' ಎಂದು ಘೋಷಿಸಿದ್ದಾರೆ. ಈ ರೀತಿಯಾಗಿ ಕಾಡಿನ ಕುರಿತಾಗಿ ನಾಲ್ಕು ಭಾಮಿನಿ ಷಟ್ಪದಿಗಳಿವೆ. ಇದು ಕವಿಯ ಕಾಲ - ಪರಿಸರ ಜನಾಂಗದ ಆಶೋತ್ತರಗಳಿಗೆ ಸ್ಪಂದಿಸಿರುವುದಕ್ಕೆ ನಿದರ್ಶನವಾಗಿದೆ.

ಕನ್ನಡ ನಾಡಿನ ಹೊಲಗದ್ದೆ ಬೆಳೆಗಳ ಬಗ್ಗೆ ತುಂಬ ಅಭಿಮಾನ. ಕೃತಿಯಲ್ಲಿ ಸಂದರ್ಭವೊಂದನ್ನು ಸೃಷ್ಟಿಸಿಕೊಂಡು ಹೀಗೆ ವರ್ಣಿಸುತ್ತಾರೆ.

**"ಬತ್ತದ ಬೆಳೆಯು ಕಬ್ಬಿನ ಬೆಳೆಯು**
**ಬತ್ತದಡಕಿಯ ತೆಂಗಿನ ಬೆಳೆಯು**
**ಬತ್ತದೆಸೆಯುವ ರಾಗಿಯ ಬೆಳೆಯ ಬಾಳಿಯು ಬೆಳೆಯದು**
**ಚಿತ್ತ ಮುಟ್ಟುವ ಬೆಳೆಯ ವಿಭವಂ**
**ಚಿತ್ತರದ ಪೋಲ್ ಕಣ್ಸೆಸೆದಿಹುದು**
**ಚಿತ್ತಯಿಸಿ ಚೋಳ ನೃಪರೆಸೆಗುವ ಭಕ್ತಿಫಲಮೆನೆಲು" (ಸಂಧಿ-೧; ಪದ್ಯ-೮)**

ಬತ್ತ, ಕಬ್ಬು, ಅಡಕೆ, ತೆಂಗು, ಬಾಳೆ, ರಾಗಿ ಮುಂತಾದವುಗಳನ್ನು ನಯನಮನೋಹರವಾಗಿ ವಿವರಿಸಿದ್ದಾರೆ. ವ್ಯವಸಾಯಕ್ಕೆ ನೀರೇ ಮೂಲಾಧಾರ. ಅದಕ್ಕಾಗಿ ನೀರಿನಾಗರಗಳನ್ನು ಕವಿ ಹೀಗೆ ಹೇಳಿದ್ದಾರೆ. "ನದಿಗಳಾ ಭಾವಿಗಳ ಕೆರೆಗಳ ಸದಮಲದ ನೀರಿನುರೆಕಾಲ್ಗಳ್ ಪುದಿದ ಯೋಜನೆಯಿಂ ಬೆಳೆಯನಲ್ಲಿಯ ಜನರ್ಪಡೆದು ಪದುಳ್ದುಮಣೆ

ಮೌಕ್ತಿಕ ಕನಕವಿಭವದ ಸೊಗವ ಪಡೆವರ್ ವಿನಿತಾಕಾರಮಯದ ಪದಪಿನೀ ವ್ಯವಹಾರದಿಂದ ಸುವಿಲಾಸಿಗಳೆನಿಸುತೆ" ಎಂದು ವಿವರಿಸಿದ್ದಾರೆ.

ಮಹಾಕವಿ ಹರಿಹರನಂತೆ ಹೂಗಳೆಂದರೆ ಪುಟ್ಟರಾಜರಿಗೆ ಅಪಾರ ಪ್ರೀತಿ. ಅದಕ್ಕಾಗಿಯೇ ಷಟ್ಪದಿಯೊಂದನ್ನು ಮೀಸಲಾಗಿರಿಸಿದ್ದಾರೆ. ಅದರಲ್ಲಿ

"ಸಂಪಿಗೆಯ ಸೇವಂತಿಗೆಯ ಸಲೆ
ಸೊಂಪೆಸೆವ ಮಲ್ಲಿಗೆಯ ಜ್ಯಾಜಿಯ
ಸೊಂಪೆಸೆವ ದವನದ ಸುಗಂಧಿಯ ಹೂಗಳ ಬನಗಳು
ಪೆಂಪೆಸೆಯುತಿರೆ ಗ್ರಾಮಪುರಗಳ
ಲಂಪಿನಿಂ ನಾಡೆಸೆಯುತಿಹುದದು
ಸೊಂಪಿನಸಿರಿಗೆ ಜನರ ಸಧರ್ಮವೆ ಫಲಿತಮಹುದು" (ಸಂ-೧, ಪದ್ಯ-೧೦)

ಹೂಬನವನ್ನು ಕಣ್ಣಿಗೆ ಕಟ್ಟುವಂತೆ, ಪರಿಣಾಮಕಾರಿಯಾಗಿ ಚಿತ್ರಿಸಿದ್ದಾರೆ. ಬೇರೆ ಬೇರೆ ಕಥೆಗಳಲ್ಲಿ ಆಯಾ ಕಥೆಗೆ ಸಂಬಂಧಿಸಿದಂತೆ ನಾಡು, ಜನ, ಕಾಡು, ಹೊಲ, ಗದ್ದೆಗಳನ್ನೂ ವರ್ಣಿಸುತ್ತಾರೆ. ವಸ್ತು ಬೇರೆ ಬೇರೆಯಾಗಿದ್ದರೂ ಸಹ ಅದರಲ್ಲಿ ಬರುವ ಸಂಗತಿಗಳು ಕನ್ನಡ ನಾಡಿನವುಗಳೆಂಬುದು ಹೆಮ್ಮೆಯ ಸಂಗತಿಯಾಗಿದೆ. ನಾಡು-ನುಡಿಯ ಕುರಿತಾಗಿರುವ ಕವಿಯ ಅಭಿಮಾನಕ್ಕಿದು ಸಾಕ್ಷಿಯಾಗಿದೆ.

ನಾಡು ಸಮೃದ್ಧವಾಗಿದೆ. ಜನರು ಸುಖಿಗಳಾಗಿದ್ದಾರೆ. ಆ ಸಮಾಜದಲ್ಲಿ ಯಾವುದೇ ಕೊರತೆಯಿಲ್ಲ ಎನ್ನುವುದನ್ನು ನಿರೂಪಿಸಿರುವುದು ಹೀಗೆ:

"ರೋಗಮಿಲ್ಲಿಯ ಜನತೆಗಿಲ್ಲಂ
ಲೋಗರೀಂಟುವ ಸಲಿಲಮಮೃತಂ
ರಾಗದಿ ಮೆಲುವಾಫಲಂ ಸಲೆಕಲ್ಪವೃಕ್ಷ ಫಲಂ
ವೇಗದಿಂ ಬರುವಾಮೃತಿಯು ನೆನೆ
ದಾಗ ಬರ್ಪುದು ಮಿಕ್ಕಲೋಕದ
ಭೋಗಮಂತೋರ್ಪಾಸೆಯಿಂದೆನೆ ಶಿವನಪುರಮದುವೆ" (ಸಂಧಿ-೨೩, ಪದ್ಯ-೫)

ಕವಿಯ ಚಿತ್ರಿಕಶಕ್ತಿಯು ಆಕರ್ಷಕವಾಗಿದೆ. ಒಂದೊಂದು ಸನ್ನಿವೇಶವನ್ನು ಶಿಲ್ಪಿಯಂತೆ ಶಬ್ದಗಳಲ್ಲಿ ಕೆತ್ತಿ ನಿಲ್ಲಿಸಿರುವುದನ್ನು ಕಾಣಬಹುದು. ಕವಿಯ ಕಲ್ಪನಾಶಕ್ತಿಗೆ ಈ ಕೆಳಗಿನ ಒಂದೇ ಪದ್ಯ ಸಾಕಾಗುತ್ತದೆ.

"ಸನಿಹದೊಳ್ ನೆರೆದಿರ್ಪ ನೆಲ್ಲಿನ
ತೆನೆಗಳೋಳ್ ಕುಳ್ಳಿರುವ ಗಿಳಿಗಳ
ದನಿಗೆ ತಮ್ಮಯ ಧ್ವನಿಯ ಕೂಡಿಸಿ ಬೆದರಿಸುತ್ತಿರಲು
ಇನಿರಸವ ಕೇಳುತೆ ಶುಕಗಂಳ್
ತಿನುವದಂತೊರೆದಚ್ಚರಿಸುತಂ
ಬನದದಿಂದಲ್ಲಿಯೆ ನಿಂದಿಹವು ಸ್ತ್ರೀಯರಿಗಳುಕದೆ"

ಬತ್ತದ ಗದ್ದೆಗಳು, ಎಳೆಬೆಳಸಿ ತಿನ್ನ ಬರುವ ಗಿಳಿಗಳ ಬಳಗ, ಅವುಗಳನ್ನು ಓಡಿಸುವ ಪ್ರಕ್ರಿಯೆ, ಸುಂದರ ಸ್ತ್ರೀಯರು, ಗಿಳಿಗಳ ಮಾತುಗಳ ಮಧುರತೆ ಅಲ್ಲಿಯುಂಟಾದ ವಿನೋದ ಇತ್ಯಾದಿಗಳು ಸುಂದರವಾಗಿ ಮೂಡಿವೆ.

ಹುಟ್ಟು ನಾಟಕಕಾರರೆನಿಸಿದ ರನ್ನ-ರಾಘವಾಂಕರಂತೆ ನಾಟಕೀಯ ಅಂಶ ಎಲ್ಲೆಡೆಗೆ ಚೆಲ್ಲುವರಿದಿಲ್ಲ. ಆದರೆ ಅಲ್ಲಲ್ಲಿ ಪಾತ್ರದ ಸಂಭಾಷಣೆಗಳಲ್ಲಿ, ಕಾವ್ಯಕ್ಕೆ ಪೋಷಕವಾಗಿ ನಾಟಕೀಯ ಅಂಶಗಳು ಬಂದಿವೆ.

ಉದಾ:-

**"ನಿನ್ನ ಮಗನಂ ಕೆರೆಯೆನಲ್ ಚರ**
**ಸನ್ನತನ ವಚನಕ್ಕೆ ನುಡಿದಂ**
**ಸನ್ನತನಿಗೆಂತೆನಲ್ಕೆ ಗುರುವೇ ಸಲ್ಲಿಹಂ ಪದಕೆ**
**ಇನ್ನೆದೇತಕೆ ಬಯಿಪುದಾತನ**
**ನೆನ್ನುತಿಗೆ ಚರನೆಂದನಾತಂ**
**ಗೆನ್ನಯಾಜ್ಞೆಯನಡಿಸವೇಳ್ಕೆನಲೊಲ್ಲೆನೆಂದನವಂ"** **(ಸಂ: ೮, ಪದ್ಯ-೨೦)**

ಈ ಪದ್ಯವು-

ಪುಟ್ಟರಾಜ ಗವಾಯಿಗಳು ಸಮರ್ಥ ನಾಟಕ ಕಾರರೆಂಬುದನ್ನು ಸಾರಿ ಹೇಳುತ್ತದೆ.

ಕಥೆಯನ್ನು ನಿರೂಪಿಸುವಾಗ ಸನ್ನಿವೇಶಗಳನ್ನು ವ್ಯರ್ಥವಾಗಿ ಹಿಗ್ಗಿಸಿ, ಜಾಳು-ಜಾಳಾಗಿಸದೆ, ಹದವರಿತು ಅರ್ಥಪೂರ್ಣವಾಗಿ ಸಂಗ್ರಹಿಸಿದ್ದಾರೆ. ಕಥೆಯ ಅಂಶಗಳು ಬಿಟ್ಟು ಹೋಗದಂತೆ ಜಾಗರೂಕತೆಯನ್ನು ವಹಿಸಿರುವುದು ಗಮನಾರ್ಹ ಅಂಶವಾಗಿದೆ.

ಕೊನೆಯದಾಗಿ ಕೃತಿಯಲ್ಲಿರುವ ಕೊರತೆಗಳನ್ನು ಪ್ರಸ್ತಾಪಿಸುವುದಾದರೆ - ಕಥೆ ನಿರೂಪಣೆಯಲ್ಲಿ, ವರ್ಣನೆಗಳಲ್ಲಿ ವೈವಿಧ್ಯತೆಯಿಲ್ಲ. ಏಕತಾನತೆಯಿಂದಾಗಿ ಬೇಸರವುಂಟಾಗುತ್ತದೆ. ಕೆಲ ಪಾತ್ರಗಳನ್ನು ಬಿಟ್ಟರೆ ಬಹುಪಾಲು ಪಾತ್ರಗಳು ಸಜೀವವೆನಿಸುವುದಿಲ್ಲ. ಕಥೆಗಾಗಿ ಕಥೆಯನ್ನು ಹೊಸೆಯಲಾಗಿದೆ. ತನ್ನ ಅನುಭವವನ್ನು ತೋಡಿಕೊಳ್ಳಲು, ಸಂದೇಶವನ್ನು ಮುಟ್ಟಿಸುವಲ್ಲಿ ಸಾಧ್ಯವಾಗಿಲ್ಲದಿರುವುದು ಕೊರತೆಯೆನಿಸುತ್ತದೆ. ಕೃತಿಗೆ ಪ್ರವೇಶಿಸಲು 'ಪರಿವಿಡಿ' ಅತ್ಯವಶ್ಯಕವಾದದ್ದು. ಆದರೆ ಇದರಲ್ಲಿ ಪರಿವಿಡಿಯೇ ಇಲ್ಲ. ಅಚ್ಚಿನ ದೋಷಗಳು ಅತಿಯಾಗಿವೆ. ಇದರಿಂದ ಅರ್ಥವೇ ಕೆಟ್ಟು ಹೋಗುವ ಅಪಾಯವಿರುತ್ತದೆ. ಪರಿಹರಿಸಲು 'ಒಪ್ಪೋಲೆ'ಯನ್ನು ಕೊಡಬಹುದಾಗಿತ್ತು. ಎರಡನೆಯ ಸಂಧಿಯಲ್ಲಿ ೨೫ ರಿಂದ ೨೮ರವರೆಗೆ ನಾಲ್ಕು ಪುಟಗಳು ಪುಸ್ತಕವನ್ನು ಬಿಟ್ಟು ಹೋಗಿರುವುದು ಕವಿ ಮತ್ತು ಕೃತಿಗೆ ಅಪಚಾರವಾದಂತೆಯೇ ಸರಿ.

ಮೇಲೆ ಪ್ರಸ್ತಾಪಿಸಿದ ಕೆಲ ನ್ಯೂನತೆಗಳನ್ನು ಬದಿಗಿರಿಸಿ, ನೋಡಿದಾಗ ಪುರಾಣ 'ಪರವಾಗಿಲ್ಲ'ವೆನಿಸುತ್ತದೆ. ಜನಸಾಮಾನ್ಯರಿಗೂ ತಿಳಿಯುವಂತೆ ರಚನೆಯಾಗಿದೆ. ಕೊನೆಗೆ ಸರಳಗನ್ನಡದಲ್ಲಿ ಭಾವಾನುವಾದವಿರುವುದರಿಂದ ಓದು-ಬರಹ ಬಲ್ಲವರೆಲ್ಲರಿಗೂ ಅರ್ಥೈಸಿಕೊಳ್ಳಬಹುದಾಗಿದೆ.

'ಪೈಗಳೊಡನೆ ಪ್ರಾಸ ನಿಂತಿತು. ಹೊಸಗನ್ನಡ ಸಾಹಿತ್ಯದ ಆವಿಷ್ಕಾರದೊಂದಿಗೆ ಪರಂಪರಾಗತ ಕಾವ್ಯ ರೂಪಗಳು ಕಣ್ಮರೆಯಾದವು' ಎನ್ನುವುದನ್ನು ಈ ಕೃತಿ ಹುಸಿಗೊಳಿಸಿದೆ. ಈ ಪುರಾಣ ಇಡಿಯಾಗಿ ಭಾಮಿನಿಷ್ಪಟದಿಯಲ್ಲಿ ಬರೆಯಲ್ಪಟ್ಟಿದೆ. ಕನ್ನಡದ ಪ್ರಾಣಪದಕವೆನಿಸಿದ 'ಆದಿಪ್ರಾಸ' ಎಲ್ಲೆಡೆಗೂ ಪಾಲಿಸಲ್ಪಟ್ಟಿದೆ. ಹಳೆಯ ರೂಪುಗಳಲ್ಲಿ ಕವಿಗಿರುವ ಪ್ರೀತಿ, ಪರಂಪರೆಯಲ್ಲಿರುವ ನಂಬಿಗೆಗಳು ಇದರಿಂದ ಸ್ಪಷ್ಟವಾಗುತ್ತದೆ. ಹೊಸಗನ್ನಡದ ಕಾಲದಲ್ಲಿ ರಚನೆಗೊಂಡಿರುವ ಪಂಡಿತ ಪುಟ್ಟರಾಜ ಗವಾಯಿಗಳ 'ತ್ರಿಷಷ್ಟಿ ಪುರಾತನ ಪುರಾಣ'ವು ಒಂದು ಶ್ರೇಷ್ಠ ಪುರಾಣ ಪರಂಪರೆಯ ಪ್ರತಿನಿಧಿಯಾಗಿ ಮೂಡಿಬಂದಿದೆ.

ಒಟ್ಟಿನಲ್ಲಿ 'ಇಪ್ಪತ್ತನೆಯ ಶತಮಾನದ ಕೊನೆಗೆ ಭಕ್ತಿ, ಜ್ಞಾನ, ವೈರಾಗ್ಯ ಸದಾಚಾರಗಳು ನಶಿಸುತ್ತಿರುವ ಈ ಕಾಲದಲ್ಲಿ ಸರಳವಾದ ಸರಣಿಯಲ್ಲಿ ಎಲ್ಲರಿಗೂ ತಿಳಿಯುವಂತೆ ಕನ್ನಡದಲ್ಲಿ ಅವಶ್ಯಕವಾಗಿ ಪ್ರಚಾರವಾಗಬೇಕಾಗಿತ್ತು. ಆ ಮಹಾಕಾರ್ಯವನ್ನು ಸನ್ಮಾನ್ಯರಾದ ಪುಟ್ಟರಾಜ ಮಹಾಕವಿಗಳು ಪೂರೈಸಿಕೊಟ್ಟು ಕನ್ನಡ ನಾಡಿಗೆ ಮಹೋಪಕಾರ ಮಾಡಿದ್ದಾರೆ. ಮಹಾಕಾವ್ಯದ ಲಕ್ಷಣಗಳೆಲ್ಲವೂ ಈ ಪುರಾಣದಲ್ಲಿ ತುಂಬಿತುಳುಕುತ್ತಿವೆ" ಎಂದು ಶ್ರೀಶೈಲದ ಜಗದ್ಗುರುಗಳು ಪ್ರಸ್ತಾವನೆಯಲ್ಲಿ ಹೇಳಿದ್ದಾರೆ. ಶ್ರೀಗಳ ಈ ಮಾತುಗಳು ಕೃತಿಯನ್ನು ಶ್ರದ್ಧೆಯಿಂದ ಓದಿಸುವಲ್ಲಿ ಸಫಲವಾಗಿವೆಯೆಂದು ಹೇಳಬಹುದು.

❑